
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 2, 2011 ಪುಟ 20 ರೂ. 14/-

ಕೋರ್ಟು ಕಾರ್ಪೋರೇಟು ಭಾಯ್ ಭಾಯ್






ಸವರಾಜನ್ ವಿರುದ್ಧ ರಣರ FIR

ಬುರುಡೆ ಯಾತ್ರೆ



BBMP ಆಸ್ತಿ ಕಬಳಿಸಿದ RSS



ದುರ್ಗದ ಸಂಸದ

ಕಳ್ಳ ಮಳ್ಳ ಸುಳ್ಳ

ಕಳ್ಳ ಖೇಣಿ ರೈತನ ಹೆಣ ಕೆಡವಿದ



"ಇಲ್ಲಿ ಕರ್ನಾಟಕದಲ್ಲಿ ಲೋಕಾಯುಕ್ತ ಕೋರ್ಟು ಯದಿಯೂರಪ್ಪನವರಿಗೆ ಯಾವುದೇ ರಿಯಾಯಿತಿ ತೋರದೆ ಜೈಲಿಗೆ ಅಟ್ಟಿದೆ. ಅಲ್ಲಿ ಸುಪ್ರೀಂ ಕೋರ್ಟು ಸಹ ಭ್ರಷ್ಟಾಚಾರದ ಪ್ರಕರಣದಲ್ಲಿ ಯಾವುದೇ ರಿಯಾಯಿತಿ ತೋರದೆ ದೊಡ್ಡ ದೊಡ್ಡ ರಾಜಕಾರಣಿಗಳನ್ನು ಜೈಲಿಗಟ್ಟಿದೆ. ಇವೆಲ್ಲವೂ ಕಾರ್ಯಾಂಗ, ಶಾಸಕಾಂಗಗಳಲ್ಲಿ ಬೇರುಬಿಟ್ಟಿರುವ ಭ್ರಷ್ಟಾಚಾರದಿಂದ ರೋಸತ್ತಿದ್ದ ಜನರಿಗೆ ನ್ಯಾಯಾಂಗದ ಬಗ್ಗೆ ಮತ್ತೆ ಭರವಸೆ ಹುಟ್ಟುವಂತೆ ಮಾಡಿವೆ.

ಇಂದು ದೇಶದಾದ್ಯಂತ ರೀಮುಗಟ್ಟಲೆ ಮತ್ತು ಟಿವಿಗಳಲ್ಲಿ ಗಂಟೆಗಟ್ಟಲೆ ಭ್ರಷ್ಟಾಚಾರದ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ ಈ ಚರ್ಚೆ ಭ್ರಷ್ಟಾಚಾರದ ಬಹಳ ಮುಖ್ಯವಾದ ಅಂಶವೊಂದನ್ನು ಮರೆಮಾಚುತ್ತಿದೆ. ಭ್ರಷ್ಟಾಚಾರವೆಂದರೆ ಸರ್ಕಾರಿ ಅಧಿಕಾರಿಗಳು ಅಥವಾ ಮಂತ್ರಿಗಳು ತಾವು ಮಾಡುವ ಕೆಲಸಕ್ಕೆ ಮತ್ತು ಮಾಡಬಾರದ ಕೆಲಸಕ್ಕೆ ಲಂಚ ತೆಗೆದುಕೊಳ್ಳುವುದು ಎಂದು ಮಾತ್ರ ಚರ್ಚೆಯನ್ನು ಸೀಮಿತಗೊಳಿಸಲಾಗುತ್ತಿದೆ. ಆದರೆ ಇದು ಭ್ರಷ್ಟಾಚಾರದ ಫಲಾನುಭವಿಗಳಾಗುವ ಒಂದು ವಿಧಾನವೇ ವಿನಃ ಅದೇ ಭ್ರಷ್ಟಾಚಾರವಲ್ಲ. ಭ್ರಷ್ಟಾಚಾರವೆಂದರೆ ಸಾಂವಿಧಾನಿಕವಾಗಿ ಈ ದೇಶದ ಸಾರ್ವಜನಿಕರಿಗೆ ಸೇರಿರುವ ಸಂಪತ್ತು ಖಾಸಗಿ ಶ್ರೀಮಂತರಿಗೆ, ಭೂಗಳ್ಳರಿಗೆ, ಮಾಫಿಯಾಗಳಿಗೆ, ಕಾರ್ಪೊರೇಟ್ ಉದ್ಯಮಿಗಳಿಗೆ ಪರಭಾರೆಯಾಗುವುದು ಎಂದರ್ಥ. ಸಾರ್ವಜನಿಕರ ಆಸ್ತಿಯನ್ನು ಆಳುವ ಸರ್ಕಾರಗಳು ಆರ್ಥಿಕ ನೀತಿಗಳ ಹೆಸರಲ್ಲಿ ಕಾನೂನು ಬದ್ಧವಾಗಿ ಪರಭಾರೆ ಮಾಡಿದರೂ ಅದು ಸಂವಿಧಾನದ ದೃಷ್ಟಿಯಿಂದ ಭ್ರಷ್ಟಾಚಾರವೇ..ಅಥವಾ...ಕಾನೂನು ಬಾಹಿರವಾಗಿ ಪರಭಾರೆ ಮಾಡಿದರೂ ಆದು ಭ್ರಷ್ಟಾಚಾರವೇ!

ಆದ್ದರಿಂದಲೇ ಈ ಭ್ರಷ್ಟಾಚಾರದಲ್ಲಿ ಕಾನೂನು ಮುರಿಯುವ ಅಥವಾ ಅದಕ್ಕೆ ಪೂರಕವಾದ ಕಾನೂನು ಮಾಡುವ ಎಲ್ಲಾ ರಾಜಕಾರಣಿಗಳು ಹಾಗೂ ಅದನ್ನು ಆಗಮಾಡಿಸುವ ಅಧಿಕಾರಿಗಳು ಪ್ರತ್ಯಕ್ಷ ಅಥವಾ ಪರೋಕ್ಷ ಭ್ರಷ್ಟಾಚಾರಿಗಳೇ. ಅದೇರೀತಿ ಈ ಭ್ರಷ್ಟಾಚಾರದಿಂದ ಪ್ರಮುಖವಾಗಿ ಫಲಾನುಭವಿಗಳಾಗುವ ಖಾಸಗೀ ಕಾರ್ಪೊರೇಟ್ ಉದ್ಯಮಿಗಳೂ ಭ್ರಷ್ಟಾಚಾರಿಗಳೇ. ಏಕೆಂದರೆ ನಮ್ಮ ಸಂವಿಧಾನದ ಪ್ರಕಾರ ಸಾರ್ವಜನಿಕ ಸಂಪತ್ತನ್ನು ಕೆಲವರ ಬಳಿ ಕೇಂದ್ರೀಕರಣವಾಗುವಂತೆ ಮಾಡುವುದೇ ಸಾಂವಿಧಾನಿಕ ಮೌಲ್ಯಗಳಿಗೆ ಬಗೆದ ದ್ರೋಹ. ಹೀಗಾಗಿ ಭ್ರಷ್ಟಾಚಾರದ ವ್ಯಾಖ್ಯಾನ ಮತ್ತು ಅದರ ಕುರಿತಾದ ಚರ್ಚೆಯನ್ನು ಕೇವಲ ಕಾನೂನಿನ ವ್ಯಾಖ್ಯಾನದಿಂದ ಸಾಂವಿಧಾನಿಕ ನೆಲಗಟ್ಟಿನಲ್ಲಿ ಮಾಡುವ ಆಗತ್ಯವಿದೆ.

ಕೇಂದ್ರದಲ್ಲಿ ನಡೆದ 2ಜಿ, ಸಿಎಜಿ, ಆಹಾರ ಇಲಾಖೆ, ಇನ್ನಿತ್ಯಾದಿ ಲಕ್ಷ ಕೋಟಿ ಹಗರಣಗಳಲ್ಲಿ ರಾಜಕಾರಣಿಗಳು ದೇಶದ ಜನಕ್ಕೆ ಸೇರಬೇಕಿದ್ದ ಸಂಪತ್ತನ್ನು ಮಾರಿ ಹತ್ತಾರು ಕೋಟಿ ಲಾಭ ಮಾಡಿದರೆ, ರಿಲೈಯನ್ಸ್, ಏರ್‌ಟೆಲ್, ಟಾಟಾ, ಬಿರ್ಲಾ, ಯುನಿನಾರ್ ನಂಥ ಸ್ವದೇಶಿ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಲಕ್ಷಾಂತರ ಕೋಟಿ ಲಾಭ ಪಡೆದುಕೊಂಡವು. ಹತ್ತು ತಿಂದ ರಾಜಕಾರಣಿಗಳನ್ನು ಹಿಡಿದು ಲಕ್ಷ ನುಂಗಿದ ಈ ಕಾರ್ಪೊ ರೇಟ್ ಭ್ರಷ್ಟಾಚಾರವನ್ನು ಕಾನೂನು ಆರ್ಥಿಕ ನೀತಿಯೆಂದು ಕಾನೂನುಬದ್ಧಗೊಳಿಸಿಬಿಟ್ಟಿದೆ. (ಆದರೆ ಕರ್ನಾಟಕದಲ್ಲಿ ನಡೆದ ಭ್ರಷ್ಟಾಚಾರ ಸ್ವಲ್ಪ ಭಿನ್ನ. ಇಲ್ಲಿಯೂ ಕೆಲವು ಕಾರ್ಪೊರೇಟ್ ಸಂಸ್ಥೆಗಳು ಲಾಭ ಪಡೆದರೂ ಇಲ್ಲಿ ಏಕಕಾಲದಲ್ಲಿ ನೀತಿರೂಪಿಸಿ ಮತ್ತು ಕಾನೂನು ಮುರಿದೂ ಎರಡು ಬಗೆಯಲ್ಲಿ ಪ್ರಧಾನ ಫಲಾನುಭವಿಗಳಾದವರು ಯಡಿಯೂರಪ್ಪ ಮತ್ತು ರೆಡ್ಡಿ ಪಟಾಲಂಗಳೇ!)

ವಾಸ್ತವವಾಗಿ ಕಾನೂನು ಬದ್ಧ ಭ್ರಷ್ಟಾಚಾರದ ಪ್ರಮಾಣ ಕಾನೂನು ಬಾಹಿರ ಭ್ರಷ್ಟಾಚಾರದ ನೂರುಪಟ್ಟು ಇರುತ್ತದೆ. ಈ ದೇಶದ ಸಂವಿಧಾನದ ಆಶಯಕ್ಕೆ ಧಕ್ಕೆ ತರುತ್ತಿರುವ ಕಾರ್ಪೊರೇಟ್ ಉದ್ಯಮಿಗಳ ಈ ಕಾನೂನುಬದ್ಧ ಮತ್ತು ಕಾನೂನು ಬಾಹಿರ ಭ್ರಷ್ಟಾಚಾರವನ್ನು ಹತ್ತಿಕ್ಕದೆ ಈ ದೇಶದ ಸಂವಿಧಾನವನ್ನು ರಕ್ಷಿಸಲಾಗುವುದಿಲ್ಲ. ಈ ದೇಶದ ಸಂವಿಧಾನಕ್ಕೆ ತಕ್ಕಂತೆ ನಡೆಯಬೇಕಿದ್ದ ಸಂಸತ್ತು ಮತ್ತು ಆಡಳಿತಶಾಹಿ ತಾನೇ ಮುಂದೆ ನಿಂತು ಈ ದೇಶದ ಸಂಪತ್ತನ್ನು ಬಿಡಿಗಾಸಿಗೆ ಹರಾಜು ಹಾಕುತ್ತಾ ಆದರಲ್ಲಿ ತನಗೆ ಸಿಕ್ಕಿದ್ದನ್ನು ಬಾಚಿಕೊಳ್ಳುತ್ತಿದೆ.

ಕಾರ್ಯಾಂಗ ಮತ್ತು ಶಾಸಕಾಂಗಗಳು ಸಂವಿಧಾನವನ್ನು ರಕ್ಷಿಸುವಲ್ಲಿ ವಿಫಲವಾದಾಗ ಅದರ ರಕ್ಷಣೆ ಮಾಡಬೇಕಾದದ್ದು ಈ ದೇಶದ ಸರ್ವೋಚ್ಚ ನ್ಯಾಯಾಲಯದ ಕರ್ತವ್ಯ. ಆದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಆಗಾಗ ಜನರ ಪರವಾಗಿ ಕಾಣಿಸಿಕೊಳ್ಳುತ್ತಿದ್ದ ಸುಪ್ರೀಂಕೋರ್ಟು ಸಾರಾಂಶದಲ್ಲಿ ಜನರ ಹಾಗೂ ಸಂವಿಧಾನದ ನೆರವಿಗೆ ಬರಲೇ ಇಲ್ಲ. ಸಂವಿಧಾನದ ಮೌಲ್ಯಗಳಿಗೆ ತದ್ವಿರುದ್ಧವಾದ ಆರ್ಥಿಕ ನೀತಿಗಳನ್ನು ಶಾಸಕಾಂಗ ಜಾರಿಗೆ ತಂದರೆ ಅದನ್ನು ತಡೆಗಟ್ಟಬೇಕಾದ ತನ್ನ ಸಾಂವಿಧಾನಾತ್ಮಕವಾದ ಜವಾಬ್ದಾರಿಯನ್ನು ನಿಭಾಯಿಸಲೇ ಇಲ್ಲ, ಬದಲಿಗೆ ತಾನು ಆರ್ಥಿಕ ನೀತಿಗಳ ವಿಷಯದಲ್ಲಿ ಮೂಗು ತೂರಿಸು



ಕೋರ್ಟೋ-ಕಾರ್ಪೊರೇಟೋ ಭಾಯೀ ಭಾಯೀ
ನ್ಯಾಯ, ಸಂವಿಧಾನ ಸಾಯೀ ಸಾಯೀ

ವುದಿಲ್ಲ ಎಂದು ತನಗೆ ತಾನೇ (ಪ್ರಖ್ಯಾತ ಕಾನೂನು ವಿದ್ವಾಂಸ ಉಪೇಂದ್ರ ಭಕ್ಷಿ ಹೇಳುವಂತೆ) ಲಕ್ಷ್ಮಣ ರೇಖೆ ವಿಧಿಸಿಕೊಂಡು ಬಿಟ್ಟಿತು. ಇದರಿಂದ ಕಳೆದ ಇಪ್ಪತ್ತು ವರ್ಷದಲ್ಲಿ ಈ ದೇಶದಲ್ಲಿ ಸಂಪತ್ತು ಕೇವಲ ನೂರಿನ್ನೂರು ಬಿಲಿಯನ್ನರುಗಳ ಕೈಯಲ್ಲಿ ಕೇಂದ್ರೀಕೃತವಾಗುತ್ತಾ ಉಳಿದ ಜನರು ಮಾತ್ರವಲ್ಲದೆ ಸರ್ಕಾರವೇ ಅವರ ಕೃಪಾ ಕಟಾಕ್ಷದಲ್ಲಿ ಬದುಕುವಂತಾಯಿತು. ಹೀಗೆ ಪ್ರಜಾತಂತ್ರವನ್ನು ಅವಹೇಳನ ಮಾಡುತ್ತಿದ್ದರೂ ಸಂವಿಧಾನವನ್ನು ರಕ್ಷಿಸಬೇಕಾದ ಸುಪ್ರಿಂ ಕೋರ್ಟು ರಕ್ಷಣೆಗೆ ಬರದೆ ತಾನೂ ಜನರ ಬದುಕಿನ ಸೀತಾಪಹರಣದಲ್ಲಿ ಪಾಲುದಾರನಾಗಿಬಿಟ್ಟಿದೆ.

2ಜಿ ಹಗರಣದ ವಿಚಾರಣೆಯಲ್ಲಿ ರಾಜಕಾರಣಿಗಳು

ಶಿವಸುಂದರ್ ಚಾರ್ವಾಕ

ಮಾತ್ರವಲ್ಲದೆ ಅದರ ನಿಜವಾದ ಫಲಾನುಭವಿಯಾದ ಖಾಸಗಿ ಕಂಪನಿಗಳು ಕಾನೂನು ಬದ್ಧವಾಗಿ ಪಡೆದುಕೊಂಡ ಲಾಭವಲ್ಲದೆ ಕಾನೂನುಬಾಹಿರವಾಗಿಯೂ ಲಾಭ ಪಡೆದಿದ್ದಾರೆಂಬುದು ಸಾಬೀತಾಗಿದೆ. ಕಾನೂನುಬದ್ಧವಾಗಿ ಪಡೆದ ಲಾಭವೇ ಸಂವಿಧಾನ ವಿರೋಧಿ. ಅಪರಾಧ. ಇನ್ನು ಕಾನೂನು ಬಾಹಿರವಾಗಿ ಪಡೆದ ಲಾಭಕ್ಕಾದರೂ ಅವರಿಗೆ ಕೋರ್ಟು ಶಿಕ್ಷೆ ವಿಧಿಸಬೇಕಲ್ಲವೇ? ಈ ದೇಶದಲ್ಲಿ ಕಾನೂನಿನ ಮುಂದೆ ಎಲ್ಲರೂ ಸಮಾನರಲ್ಲವೇ? ಸರ್ಕಾರ ಎಲ್ಲರನ್ನೂ ಸಮಾನವಾಗಿ ನೋಡದೆ ಇದ್ದಾಗ ಕನಿಷ್ಠ ಈ ದೇಶದ ಸರ್ವೋಚ್ಚ ನ್ಯಾಯಾಲಯ "ಕಾನೂನಿನ ಆಡಳಿತ" - Rule Of law- ವನ್ನು ಎತ್ತಿಹಿಡಿಯಬೇಕಲ್ಲವೇ? ಇಲ್ಲದಿದ್ದರೆ ನಮ್ಮದೂ ಸಹ ಗಣರಾಜ್ಯದ ಹೆಸರಲ್ಲಿ ಶ್ರೀಮಂತರ ಮತ್ತು ವಿದೇಶೀ ಕಂಪನಿಗಳ ರಾಜ್ಯಭಾರವೇ ನಡೆಯುವ ಬನಾನಾ ಗಣರಾಜ್ಯಗಳಂತಾಗಿ ಬಿಡುವುದಿಲ್ಲವೇ? 2ಜಿ ಪ್ರಕರಣದಲ್ಲಿ ಕನ್ನಿಮೋಳಿ, ರಾಜಾ ಮಾತ್ರವಲ್ಲದೆ ಅದರ ಪ್ರಧಾನ ಫಲಾನುಭವಿಗಳಾದ ಹಲವಾರು ಖಾಸಗಿ ಟೆಲಿಕಾಂ ಸಂಸ್ಥೆಗಳ ಮಾಲೀಕರು ಮತ್ತು ಪ್ರಧಾನ ಕಾರ್ಯಭಾರಿಗಳು ಪಾತ್ರದಾರರು ಎಂದು ಸಾಬೀತಾಗಿರುವುದರಿಂದ ಅವರನ್ನು ಬಂಧಿಸಬೇಕೆ ಬೇಡವೇ? ಬಂಧಿಸಿದರೂ ಅವರಿಗೆ ಕೂಡಲೇ ಜಾಮೀನು ಕೊಟ್ಟುಬಿಡಬೇಕೆ? ರಾಜಕಾರಣಿಗಳಿಗೆ ಈ ವಿಷಯದಲ್ಲಿ ಜಾಮೀನು ಕೊಡುವಲ್ಲಿ ಕಠಿಣ ನಿಲುವು ತೆಗೆದುಕೊಂಡ ಸುಪ್ರೀಂ ಕೋರ್ಟ್ ಉದ್ಯಮಿಗಳ ವಿಷಯದಲ್ಲಿ ಅದೇ ಬಗೆಯ ನಿಲುವನ್ನು ತಳೆಯಬಾರದೆಂದು ಕೇಂದ್ರ ಸರ್ಕಾರದ ಮಂತ್ರಿಗಳು ಮಾತ್ರವಲ್ಲದೆ ಬಿಜೆಪಿಯಂಥ ವಿರೋಧ ಪಕ್ಷಗಳೂ ಹೇಳಿದವು! ಹೋದವಾರ ಕೇಂದ್ರ ಕಾನೂನು ಮಂತ್ರಿ ಸಲ್ಮಾನ್ ಖುರ್ಷಿದ್ ಅವರು ಹಲವು ಮಾಧ್ಯಮಗಳಿಗೆ ಕೊಟ್ಟ ಸಂದರ್ಶನದಲ್ಲಿ "ಭಾರತ ಬದಲಾಗುತ್ತಿದೆ. ಆರ್ಥಿಕತೆ ಬದಲಾಗುತ್ತಿದೆ. ನಾವು ಹೆಚ್ಚೆಚ್ಚು ಖಾಸಗಿ ಮತ್ತು ವಿದೇಶೀ ಬಂಡವಾಳದ ಮೇಲೆ ಅವಲಂಬಿತರಾಗುತ್ತಿದ್ದೇವೆ. ಇದನ್ನುಸುಪ್ರೀಂ ಕೋರ್ಟ್ ಸಹ ಅರ್ಥಮಾಡಿಕೊಳ್ಳಬೇಕು. ಹಾಗೆ ಮಾಡದೆ ಉದ್ಯಮಿಗಳನ್ನು ಜೈಲು ಪಾಲು ಮಾಡಿದರೆ ಈ ದೇಶಕ್ಕೆ ಹರಿದುಬರುವ ಬಂಡವಾಳಕ್ಕೆ ಧಕ್ಕೆಯಾಗುತ್ತದೆ. ಇದರಿಂದ ಈ ದೇಶದ ಅಭಿವೃದ್ಧಿಗೇ ಅಡ್ಡಿಯಾಗುತ್ತದೆ. ಸುಪ್ರೀಂ ಕೋರ್ಟ್ ಸಹ ಸರ್ಕಾರದಂತೆ ಪ್ರಭುತ್ವದ ಭಾಗವೇ ಆಗಿದ್ದು ಬದಲಾಗುತ್ತಿರುವ ರಾಜಕೀಯ ಆರ್ಥಿಕತೆಗೆ ತಕ್ಕಂತೆ ತಾನೂ ಬದಲಾಗಬೇಕು" ಎಂದು ಬಹಿರಂಗವಾಗಿ ನ್ಯಾಯಾಲಯಗಳಿಗೆ ಕಂಪನಿಗಳ ಪರವಾಗಿ ಧಮಕಿ ಹಾಕಿದರು. ಅರ್ಥಾತ್ ಸಂವಿಧಾನ ಬಾಹಿರವಾದ ಕೆಲಸಕೆ ಸುಪ್ರೀಂ ಕೋರ್ಟ್ ಸಮ್ಮತಿ ನೀಡಬೇಕು ಎನ್ನುವುದು ಈ ಹೇಳಿಕೆಯ ತಾತ್ಪರ್ಯ.

> ಕಾನೂನು ಬದ್ಧ ಭ್ರಷ್ಟಾಚಾರದ ಪ್ರಮಾಣ ಕಾನೂನು ಬಾಹಿರ ಭ್ರಷ್ಟಾಚಾರದ ನೂರುಪಟ್ಟು ಇರುತ್ತದೆ. ಈ ದೇಶದ ಸಂವಿಧಾನದ ಆಶಯಕ್ಕೆ ಧಕ್ಕೆ ತರುತ್ತಿರುವ ಕಾರ್ಪೊರೇಟ್ ಉದ್ಯಮಿಗಳ ಈ ಕಾನೂನುಬದ್ಧ ಮತ್ತು ಕಾನೂನು ಬಾಹಿರ ಭ್ರಷ್ಟಾಚಾರವನ್ನು ಹತ್ತಿಕ್ಕದೆ ಈ ದೇಶದ ಸಂವಿಧಾನವನ್ನು ರಕ್ಷಿಸಲಾಗುವುದಿಲ್ಲ.

ದುರಂತವೆಂದರೆ ಈ ಹೇಳಿಕೆಯನ್ನು ಸಂವಿಧಾನ ವಿರೋಧಿ ಎಂದೂ, ನ್ಯಾಯಾಂಗ ನಿಂದನೆಯೆಂದೂ ಭಾವಿಸಬೇಕಿದ್ದ ಸುಪ್ರೀಂ ಕೋರ್ಟ್ ಅದರ ಬದಲಿಗೆ ಆ ಹೇಳಿಕೆಯ ಹಿಂದಿದ್ದ ಕಾರ್ಪೊರೇಟ್ ಆದೇಶಕ್ಕೆ ಸಂಪೂರ್ಣ ತಲೆ ಬಾಗಿದ ಹೇಳಿಕೆ ನೀಡಿದೆ. ಸುಪ್ರೀಂ ಕೋರ್ಟಿನ ದ್ವಿಸದಸ್ಯ ಪೀಠದ ನ್ಯಾಯಮೂರ್ತಿ ಎಚ್.ಎಲ್.ಗಟ್ಟು ಮತ್ತು ನ್ಯಾಯಮೂರ್ತಿ ಎಚ್.ಎಸ್. ಸಿಂಘ್ವಿಯವರು ಮರುದಿನ ಸರ್ಕಾರಿ ವಕೀಲರ ಬಳಿ ಖುರ್ಶೀದರ ಈ ಹೇಳಿಕೆಯ ಬಗ್ಗೆ ತಗಾದೆ ತೆಗೆದಿದ್ದಾರೆ. ಆದರೆ ಅವರ ಹೇಳಿಕೆ ತಪ್ಪು ಮತ್ತು ಸಂವಿಧಾನ ವಿರೋಧಿ ಎಂದು ಹೇಳಲಿಲ್ಲ. ಬದಲಿಗೆ ಸುಪ್ರೀಮ್ ಕೋರ್ಟ್ ಖಾಸಗಿ ಬಂಡವಾಳದ ಹರಿವಿಗೆ ವಿರುದ್ಧವಾಗಿದೆಯೆಂಬ ಮತ್ತು ಉದ್ಯಮಿಗಳನ್ನು ಜೈಲಿಗೆ ತಳ್ಳಲು ಉತ್ಸುಕವಾಗಿದೆಯೆಂಬ "ತಪ್ಪು ಅಭಿಪ್ರಾಯ" ಬರುವಂತೆ ಹೇಳಿಕೆ ನೀಡಿರುವುದನ್ನು ಪೀಠ ಖಂಡಿಸಿದೆ! ಅಷ್ಟೇ ಅಲ್ಲ, ತನಗೆ ಖುರ್ಷೀದ್ ಹೇಳಿದ ಎಲ್ಲದರ ಬಗೆಯೂ ಅರಿವಿದೆಯೆಂದೂ ತಾವೂ ಸಹ ದೇಶದ ಅಭಿವೃದ್ಧಿ ಪಥಕ್ಕೆ ಪೂರಕವಾಗಿ ದ್ದೇವೆಂದೂ ಭರವಸೆ ನೀಡಿದೆ!!

ಅಂದರೆ ಅರ್ಥವೇನು? ಈ ದೇಶದ ಸಂವಿಧಾನದ ಹಿಂದಿನ ಆಶಯವಾದ- ಬಡವರಾಗಲೀ, ಶ್ರೀಮಂತರಾಗಲೀ ಎಲ್ಲರಿಗೂ ಒಂದೇ ಕಾನೂನು- Rule Of law- ಅನ್ನು ಇನ್ನು ಮುಂದೆ ಸಂಪೂರ್ಣವಾಗಿ ರದ್ದುಪಡಿಸಲಾಗುವುದೇ?

ಕಳೆದ 63 ವರ್ಷಗಳಿಂದಲೂ ವಾಸ್ತವದಲ್ಲಿ ಈ ದೇಶದಲ್ಲಿ ಇದ್ದದ್ದು ಶ್ರೀಮಂತರಿಗೊಂದು ಮತ್ತು ಬಡವರಿಗೊಂದು ಕಾನೂನೇ. ಅದಕ್ಕೇ ಅಲ್ಲವೇ ಈ ದೇಶದಲ್ಲಿ ಈವರೆಗೆ ಶ್ರೀಮಂತರು, ಕಾರ್ಪೊರೇಟ್ ಉದ್ಯಮಿಗಳು ಈ… ಜನರನ್ನು ಮತ್ತು ಸಂಪತ್ತನ್ನು ಎಷ್ಟೇ ಸುಲಿಗೆ ಮಾ… ಒಬ್ಬರೂ ಸಹ ಜೈಲು ಸೇರದೇ ಇರುವುದು? ಭೂ… ನಂತಹ ಪ್ರಕರಣಗಳಲ್ಲಿ ಸಾವಿರಾರು ಜನರನ್ನು… ಉದ್ಯಮಪತಿಯನ್ನು ಹಾರಿಹೋಗಲು ಸರ್ಕಾರವೇ… ಅನುವು ಮಾಡಿಕೊಟ್ಟದ್ದು? ಅದನ್ನು ಸುಪ್ರೀಂ ಕೋ… ಸಹ ತಪ್ಪಲ್ಲ ಎಂದು ಹೇಳಿದ್ದು...

ಈವರೆಗೆ ತಳಹಂತದಿಂದ ಮೇಲು ಹಂತದವ… ಪುಟ್ಟ ಕಳ್ಳತನ ಮಾಡಿದವರನ್ನು ಜೈಲಿಗಟ್ಟಿ ಜಾ… ಕೊಡದೆ ಸತಾಯಿಸುತ್ತಿದ್ದ ಕೋರ್ಟುಗಳು, … ಅಪರಾಧಗಳಿಗೆ ಮಾತ್ರ ಹಗಲು ಬಂಧಿಸಿದರೆ ಸಂ… ಜಾಮೀನು ಕೊಟ್ಟು ಬಿಡುಗಡೆಮಾಡುತ್ತಿತ್ತು. ಶಿಕ್ಷೆಂ… ಅಪರೂಪ ಅಥವಾ ಇಲ್ಲವೇ ಇಲ್ಲ ಎಂದರ… ಜಾಗತೀಕರಣ ಪ್ರಾರಂಭವಾದ ಮೇಲೆ ವಿಶ್ವ ಬ್ಯಾಂಕು … ಆಡಳಿತ – Good Gover… ವನ್ನು ಜಾರಿಗೆ ತರಬೇಕೆಂದು … ಮಾಡಿತ್ತು, ಆದರಲ್ಲಿನ ಪ್ರಮು… ಆಡಳಿತದಲ್ಲಿ ಪಾರದರ್ಶ… ಜೊತೆಗೆ ಯಾವುದನ್ನು … ಆರ್ಥಿಕ ಅಪರಾಧಗಳು … ಕರೆಯಲಾಗುತ್ತಿತ್ತೋ ಅವ… ರಾಧದ ವ್ಯಾಖ್ಯಾನದಿಂದ … ಹಾಕುವುದು. ಅಂದರೆ … ದರೋಡೆಯನ್ನು ಕಾನೂನು… ಗೊಳಿಸುವುದು. ಅಂದರೆ … ದಲ್ಲಿ ಸ್ವಾತಂತ್ರ್ಯ-ಸಮ… ಭ್ರಾತೃತ್ವಗಳ ಆಧಾರದಲ್ಲಿ … ಹೋರಟದ ತರುಣದಲ್ಲಿ … ರೂಪಿಸಿಕೊಂಡ ಕಲ್ಯಾಣ ಪ್ರ… ಬದಲಿಗೆ ಬಂಡವಾಳಶಾ… ಗೊಂದು ಕಾನೂನು ಮತ್ತು … ಜನರಿಗೊಂದು ಕಾನೂನೆಂ… ಬ್ಯಾಂಕ್ ವಿರಚಿತ ಸಂವಿಧಾ… ಜಾರಿಗೆ ತರುವುದು...

ನಮ್ಮ ಸಂವಿಧಾನಕ್ಕೆ ಯ… ತಿದ್ದುಪಡಿಯನ್ನೇ ಮಾಡದ… ಗಲೇ ವಿಶ್ವಬ್ಯಾಂಕ್ ಸಂವಿಧಾ… ಸಂಸತ್ತು 1991ರಿಂದ ಜಾರಿಗೊಳಿಸುತ್ತಿದೆ. ಸಂವಿಧಾ… ರಕ್ಷಿಸಬೇಕಾದ ನ್ಯಾಯಾಂಗ ಈ ನ್ಯಾಯಾಪಹರಣಕ್ಕೆ ಮ… ಶಕ್ತಿಗಳು ವಿಧಿಸಿದ ಲಕ್ಷ್ಮಣರೇಖೆಯನ್ನು ದಾಟದೆ … ಮೌನವಾಗಿ ಸಹಕರಿಸುತ್ತಿದ್ದವು. ಈಗ ಈ ಪ್ರಕರಣದ … ನೇರವಾಗಿ ಈ ಅಪಹರಣಕ್ಕೆ ನ್ಯಾಯಮುದ್ರೆಯನ್ನು …

ಈ ದೇಶದ ಜನರನ್ನು ಈ ದೇಶದ ಕಾರ್ಯಾಂ… ಕಾಂಗ, ನ್ಯಾಯಾಂಗ ಎಲ್ಲವೂ ರಕ್ಷಿಸಲು ವಿಫಲ… ಜನರು ಏನು ಮಾಡಬೇಕು? ಈ ಪ್ರಶ್ನೆಯನ್ನು ಈಗಲ… ಹಾಕಿಕೊಳ್ಳಬೇಕಷ್ಟೆ. ಸರಿಯಾದ ಪ್ರಶ್ನೆಯನ್ನು… ಹಾಕಿಕೊಂಡರೆ ಕೂಡಲೇ ಸರಿಯಾದ ಉತ್ತರ ಸಿಗ… ಉತ್ತರವಿರುವ ದಿಕ್ಕು ಪತ್ತೆಯಾಗುತ್ತದೆ.

ನೋ ಕಾಮೆಂಟ್ಸ್

"ದಲಿತ ಬಂಡವಾಳಶಾಹಿ ಎನ್ನುವ ಪದದಲ್ಲೇ ವೈರುಧ್ಯವಿದೆ. ಈ ಪರಿಕಲ್ಪನೆಯನ್ನು ಪಾಶ್ಚಿಮಾತ್ಯ ಮಾರುಕಟ್ಟೆ ಶಕ್ತಿಗಳು ಸ್ಥಳೀಯ ಆಳುವ ವರ್ಗಗಳ ಜೊತೆ ಸೇರಿ ಜಾಗತೀಕರಣವು ದಲಿತರಿಗೆ ಒಳ್ಳೆಯದು ಮಾಡಿದೆ ಎಂಬ ಭಾವನೆಯನ್ನು ಬಿತ್ತಲೆಂದೇ ಹುಟ್ಟುಹಾಕುತ್ತಿದ್ದಾರೆ. ಒಂದೆಡೆ ವಿಶ್ವ ಆರೋಗ್ಯ ಸಂಸ್ಥೆಯು ಬಿಡುಗಡೆ ಮಾಡಿರುವ ವರದಿಯು ಬಹುಸಂಖ್ಯಾತ ದಲಿತರು ಹೆಚ್ಚೂ ಕಡಿಮೆ ಸದಾ ಬರಗಾಲ ಪೀಡಿತ ಜನರಂತೆ ಬದುಕುತ್ತಿದ್ದಾರೆ ಎಂದು ಹೇಳುತ್ತಿರುವಾಗ, ಜಾಗತೀಕರಣವು ದಲಿತ ಸಮುದಾಯದ ಜೀವನೋಪಾಯಗಳ ಮೇಲೆ ಹಿಂದೆಂದೂ ಇಲ್ಲದ ದಾಳಿ ನಡೆಸುತ್ತಿರುವಾಗ "ದಲಿತ ಬಂಡವಾಳಶಾಹಿ" ಎಂದು ಮಾತಾಡುವುದು ದಲಿತ ಸಮುದಾಯದ ಬಗ್ಗೆ ಮಾಡುವ ಅತಿ ಕ್ರೂರ ಮತ್ತು ಅಕ್ಷಮ್ಯ ಹಾಸ್ಯ"

- ಆನಂದ ತೇಲ್‌ತುಂಬ್ಡೆ

"ಚಿಂತನೆಯ ಸ್ವಾತಂತ್ರ್ಯ ಎಂಬುದು ವಿಮೋಚನೆಗೆ ಪೂರ್ವ ಶರತ್ತು, ಇಂದು ಅಮೆರಿಕದ ವ್ಯವಸ್ಥೆ ನಮಗೇ ಗೊತ್ತಿಲ್ಲದಂತೆ ನಮ್ಮಿಂದ ಚಿಂತನೆಯ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಭ್ರಷ್ಟಾಚಾರ ಮತ್ತು ಲಂಚಗುಳಿತನಗಳು ಮೂಲ ಸಮಸ್ಯೆಯಲ್ಲ, ಮೂಲ ಸಮಸ್ಯೆ ಅದನ್ನು ಹುಟ್ಟುಹಾಕಿ ಪೋಷಿಸುವ ವ್ಯವಸ್ಥೆಯದ್ದು. ಆದರೆ ವ್ಯವಸ್ಥೆಯ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸಬಲ್ಲ ಹತಾರಗಳನ್ನೇ ನಮ್ಮಿಂದ ಕಸಿದುಕೊಳ್ಳಲಾಗಿದೆ. ಒಂದು ಹಳೆ ಕಥೆಯನ್ನು ಹೇಳುವುದಾದರೆ..ಪೂರ್ವ ಯೂರೋಪಿನಲ್ಲಿ ಕಮ್ಯುನಿಸ್ಟ್ ಆಳ್ವಿಕೆಯ ಸಂದರ್ಭದಲ್ಲಿ ಒಬ್ಬನನ್ನು ಸೈಬೀರಿಯಾಗೆ ಗಡೀಪಾರು ಮಾಡಲಾಗುತ್ತದೆ. ಅವನು ಹೋಗುವ ಮುನ್ನ ತನ್ನ ಸ್ನೇಹಿತನಿಗೆ ಅಲ್ಲಿಂದ ನಾನು ಬರೆವ ಪತ್ರಗಳು ಖಂಡಿತಾ ಸೆನ್ಸಾರ್‌ಗೆ ಗುರಿಯಾಗುತ್ತವೆ. ಆದ್ದರಿಂದ ಕೋಡ್ ಇಟ್ಟುಕೊಳ್ಳೋಣ. ನಾನು ನೀಲಿ ಇಂಕಿನಲ್ಲಿ ಪತ್ರ ಬರೆದರೆ ಎಲ್ಲವೂ ಸತ್ಯ. ಕೆಂಪು ಇಂಕಿನಲ್ಲಿ ಬರೆದರೆ ಸುಳ್ಳು ಎಂದಿಟ್ಟುಕೊಳ್ಳೋಣ ಎಂದು ಹೇಳುತ್ತಾನೆ. ನಂತರ ಸೈಬೀರಿಯಾಗೆ ಹೋದ ತಿಂಗಳ ನಂತರ ಅವನ ಸ್ನೇಹಿತನಿಗೆ ಅವನ ಮೊದಲ ಪತ್ರ ಸಿಗುತ್ತದೆ. ಎಲ್ಲವೂ ನೀಲಿ ಇಂಕಿನಲ್ಲಿ ಇರುತ್ತೆ. ಪತ್ರದಲ್ಲಿ "ಇಲ್ಲಿ ಎಲ್ಲವೂ ಚೆನ್ನಾಗಿದೆ. ಉತ್ತಮ ಆಹಾರ, ಒಳ್ಳೆ ಪಾಶ್ಚಿಮಾತ್ಯ ಚಲನಚಿತ್ರ ಎಲ್ಲವೂ ಸಿಗುತ್ತದೆ. ಸಿಗದೇ ಇರುವುದು ಒಂದೇ. ಅದು ಕೆಂಪು ಇಂಕು" ಎಂದು ಬರೆದಿರುತ್ತಾನೆ. ಅಮೆರಿಕನ್ ಸಮಾಜವೂ ಅಷ್ಟೆ. ನಮಗೆ ಎಲ್ಲವನ್ನೂ ಕೊಟ್ಟಿದೆ ಎಂಬ ಭ್ರಾಂತಿಯನ್ನು ಕೊಟ್ಟಿದೆ. ಆದರೆ ನಮಗೆ ಏನು ಬೇಕು ಎಂಬುದನ್ನು ಮತ್ತು ನಮಗಿಲ್ಲದ ಸ್ವಾತಂತ್ರ್ಯವನ್ನು ಅಭಿವ್ಯಕ್ತಗೊಳಿಸುವ ಭಾಷೆಯನ್ನು ಮಾತ್ರ ಕೊಟ್ಟಿಲ್ಲ"

- ಸ್ಲಾವೋಜ್ ಝಿಜೆಕ್, ಅಮೆರಿಕನ್ ಚಿಂತಕ, ವಾಲ್‌ಸ್ಟ್ರೀಟ್ ಹೋರಾಟಗಾರರನ್ನುದ್ದೇಶಿಸಿ

"ನನ್ನ ಹಾಗೂ ಅಣ್ಣಾ ಹಜಾರೆ ಅವರ ಬಾಂಧವ್ಯ 25 ವರ್ಷಗಳಿಂದ… ಆದರೆ ಅಷ್ಟೊಂದು ಉನ್ನತ ಧ್ಯೇಯ ಹೊಂದಿರುವ ಅವರ ಅಭಿಯಾನ… ಕೆಲವರು ಸಂಕುಚಿತ ಉದ್ದೇಶಗಳಿಗಾಗಿ ದಿಕ್ಕು ತಪ್ಪಿಸುತ್ತಿದ್ದಾರೆ. ಸಂಸದೀಯ … ಯನ್ನು ವಿರೋಧಿಸಿ ಚಳವಳಿ ಮಾಡುವುದು ಸರಿಯಲ್ಲವೆಂದು ನಾನು ಅ… ಪತ್ರ ಬರೆದಿದ್ದೆ. ಅವರ ತಂಡದ ಕೇಜ್ರಿವಾಲ್ ಮತ್ತು ಕಿರಣ್ ಬೇಡಿ … ಸುಷ್ಮಾ ಸ್ವರಾಜ್ ಮತ್ತು ಅಡ್ವಾಣಿಯವರನ್ನು ಭೇಟಿ ಮಾಡುತ್ತಿದ್ದರು … ಬಿಜೆಪಿಯಿಂದ ಸೂಚನೆಗಳನ್ನು ಪಡೆಯುತ್ತಿದ್ದರು. ಆದ್ದರಿಂದ ಅವರು ಕೇಜ್ರಿ… ಮತ್ತು ಬೇಡಿಯವರನ್ನು ಹೊರಗಿಡಬೇಕು."

- ಪ್ರೊ. ಎಚ್.ಎಂ.ದೇಸರ್ದ, ಅಣ್ಣಾ ಅನುಯಾ…

"ನ್ಯಾಯಾಂಗದಲ್ಲಿ ನನಗೆ ಭರವಸೆ ಇಲ್ಲ. ನ್ಯಾಯಾಂಗದ ಮಂದಿ… ಭ್ರಷ್ಟಾಚಾರಕ್ಕೆ ಗುರಿಯಾಗಿರುವುದರಿಂದ ಈ ಮಾತು ಹೇಳುತ್ತಿದ್ದೇನೆ."

- ಸಂತೋಷ್…

"ಹೈಕಮಾಂಡ್ ರಕ್ಷಣೆ ಇದ್ದರೂ, ಎಲ್ಲಾ ಮಠಾಧೀಶರೂ ಬೆಂಬಲಕ್ಕೆ ಇ… ಯಡಿಯೂರಪ್ಪನವರು ಜೈಲಿಗೆ ಹೋಗಲೇ ಬೇಕಾಯ್ತು. ಇವರನ್ನು … ಧೀಶರುಗಳು ಹೇಗೆ ಬಿಡಿಸಿಕೊಳ್ಳುತ್ತಾರೋ ಗೊತ್ತಿಲ್ಲ. ಆದ್ದ… ಮಠಾಧೀಶರನ್ನೂ ನಿಯಂತ್ರಣಕ್ಕೆ ಒಳಪಡಿಸಬೇಕಿದೆ."

- ಎಚ್.ಎಸ್. ದೊರೆ…

ಗೌಡರ ಅಜ್ಞಾನ ಹಜಾರೆಯ ಅರೆಜ್ಞಾನ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಕಳ್ಳ ಯಡಿಯೂರಪ್ಪನ ಜೈಲು-ಆಸ್ಪತ್ರೆ ಪ್ರಹಸನಕ್ಕೆ ...ನಗೂ ತೆರೆ ಬಿದ್ದಿದೆ. ಈತ ಮುಖ್ಯಮಂತ್ರಿ ಆಗಿದ್ದಾಗ ...ತ್ತೂ ಮುಜುಗರವಿಲ್ಲದೆ ಭ್ರಷ್ಟಾಚಾರದಲ್ಲಿ ತೊಡಗಿ ...ಮಿಯನ್ನು ಕದ್ದ, ಲಂಚವನ್ನು ಪಡೆದ, ಅಕ್ರಮವಾಗಿ ...ಟ್ಯಂತರ ರೂಪಾಯಿ ಬೆಲೆ ಬಾಳುವ ಸಾಮ್ರಾಜ್ಯವನ್ನೇ ...ಸಿದ. ಆಗೆಲ್ಲ ಮೂರನ್ನೂ ಬಿಟ್ಟಿದ್ದ ಯಡಿಯೂರಪ್ಪನಿಗೆ ...ನ್ನೆ ಇದ್ದಕ್ಕಿದ್ದಂತೆ ತನ್ನ ಮಾನ ಮರ್ಯಾದೆ ಬಗ್ಗೆ ಯೋಚನೆ ...ದಿದೆ. ಆದಕ್ಕೆ ಮೊದಲು ಪರಪ್ಪನ ಅಗ್ರಹಾರ ಸೇರುವಾಗ ...ಲೀಸ್ ಬಂದೋಬಸ್ತಿನ ಮರೆಯಲ್ಲಿ ಜೈಲು ಗೇಟು ...ವೇಶಿಸಿದ. ಆನಂತರ ವಿಕ್ಟೋರಿಯಾ ಆಸ್ಪತ್ರೆಗೆ ಬೆಡ್‌ಶೀಟ್ ...ನ ಮರೆಯಲ್ಲಿ ದಾಖಲಾದ. ಅಲ್ಲ, ಯಡ್ಡಿಗೆ ಅಷ್ಟು ಮುಜು ...ವಾಗಿದ್ದರೆ ಪೊಲೀಸರು ಸಾಮಾನ್ಯ ಸೈಕಲ್ ಕಳ್ಳರ, ದರೋಡೆ ...ರರ ಮುಖಕ್ಕೆ ಹೊದಿಸುವ ಕಪ್ಪು ಕವರ್ ಒಂದನ್ನು ...ಡಿಯೂರಪ್ಪನಿಗೆ ಕೊಡಬಹುದಿತ್ತಲ್ಲವೇ?!

...ಕಳೆದ ಮೂರು ದಿನಗಳಿಂದ ಯಡ್ಡಿಯ ನಾಟಕಗಳನ್ನು ...ಯ ಪರದೆಯ ಮೇಲೆ ನೋಡಿದ ಕನ್ನಡಿಗರು ಅಸಹ್ಯ ...ಟ್ಟಿದ್ದಾರೆ. ರಾಜ್ಯಕ್ಕೆ ಇಂತಹ ಅವಮಾನವಾಯಿತಲ್ಲ ಎಂದು ...ಂದಿದ್ದಾರೆ. ಇದನ್ನು ಅರ್ಥಮಾಡಿಕೊಳ್ಳದ ಬಿಜೆಪಿ ಜನರು ...ಡ್ಡಿಗಿಂತಲೂ ಅಸಹ್ಯವಾಗಿ ನಡೆದುಕೊಂಡಿದ್ದಾರೆ.


...ವಾಸ್ತವವಾಗಿ ನ್ಯಾಯಾಂಗದ ಕಣ್ಣಿನಲ್ಲಿ ಯಡ್ಡಿ ಇವತ್ತು ...ಕ್ರಿಮಿನಲ್. ಆತನ ವಿರುದ್ಧ ದಾಖಲಾಗಿರುವ ಕೇಸು ...ಂದ ಬಚಾವಾಗಲು ಆತ ಏನಾದರು ಕಿತಾಪತಿ ಮಾಡಿ ...ನು ಎಂಬ ಎಚ್ಚರಿಕೆಯಿಂದಲೇ ಆತನನ್ನು ಜೈಲಿಗೆ ...ಸಲಾಗಿದೆ. ಅದು ನ್ಯಾಯಾಂಗ ಬಂಧನ. ಆತ ಜೈಲಿನಲ್ಲಿ ..., ಅಥವಾ ಅಲ್ಲಿಂದ ಯಾವುದೇ ಹೊರಗಿನ ...ತ್ರೆಗೆ ದಾಖಲಾದರೂ ಅದು ಜೈಲಿನ ಭಾಗವೇ ...ರುತ್ತದೆ. ಇದರ ಅರ್ಥ ಅಂತಹ ಪರಿಸ್ಥಿತಿ ...ಲ್ಲಿ ಯಾರು ಬೇಕಾದರೂ ಹೋಗಿ ಆತನನ್ನು ... ಆಗುವಂತಿಲ್ಲ, ಹಾಗೆ ಭೇಟಿ ಆಗಬೇಕಿದ್ದರೆ ...ನನ್ನು ಆಸ್ಪತ್ರೆಗೆ ತಂದಿರುವ ಜೈಲ್ ಅಧಿ ...ಯ ಅನುಮತಿಯನ್ನು ಪಡೆದು, ಅಧಿ ...ಯ ಬಳಿ ಇರುವ ರಿಜಿಸ್ಟರ್‌ನಲ್ಲಿ ತಮ್ಮ ಹೆಸ ... ದಾಖಲಿಸಬೇಕಾಗುತ್ತದೆ. ಅದು ನಿಯಮ.

...ಆದರೆ ಯಡ್ಡಿ ವಿಷಯದಲ್ಲಿ ಏನಾಯಿತು? ...ಡ್ಡಿ ಆಸ್ಪತ್ರೆ ಸೇರಿದ ಕೂಡಲೇ ಆತನಿಗೆ ...ಗಡೆ ಸಿಕ್ಕಿತೆಂಬಂತೆ ಆಸ್ಪತ್ರೆಗೆ ಎಲ್ಲರಿಗಿಂತ ...ದಲು ಧಾವಿಸಿದ್ದು ಆತನ ನಂಬರ್ ಒನ್ ...ಗಿ ಶೋಭಾ ಕರಂದ್ಲಾಜೆ. ಇನ್ನು ಸೋಮಣ್ಣನಂತಹ ...ರು, ರೇಣುಕಾಚಾರ್ಯನಂತಹ ಹುಚ್ಚರು ಕೂಡ ಆಸ್ಪತ್ರೆ ...ತ್ತೆ ಧಾವಿಸಿ ತಮ್ಮ ಸೊಗಲಾಡಿತನವನ್ನು ಪ್ರದರ್ಶಿಸಿದರು.

...ಅದೆಲ್ಲಕ್ಕಿಂತ ಆಘಾತಕಾರಿ ಆದದ್ದು ಸ್ವತಃ ಮುಖ್ಯಮಂತ್ರಿ ...ನಂದ ಗೌಡ ಕೂಡ ತನ್ನ ಅಧಿಕೃತ ಕಾರಿನಲ್ಲಿ ಆಸ್ಪತ್ರೆಗೆ ...ಗಿ ಯಡ್ಡಿಯನ್ನು ಭೇಟಿ ಆಗಿದ್ದು. ಯಾವುದೇ ಮುಖ್ಯ ...ತ್ರಿ ನಮ್ಮ ಸಂವಿಧಾನಕ್ಕೆ ಬದ್ಧರಾಗಿಯೇ ಅಧಿಕಾರ ಸ್ವೀಕರಿ ...ತ್ತಾರೆ. ಇದರ ಅರ್ಥ ಮುಖ್ಯಮಂತ್ರಿ ಆದವನು ರಾಜ್ಯದ ...ಸು, ಆಡಳಿತ, ಎಲ್ಲದರ ಮೇಲೆ ಅಧಿಕಾರ ಹೊಂದಿದ್ದು ... ಎಲ್ಲ ಕಾನೂನುಗಳನ್ನು ಪಾಲಿಸತಕ್ಕದ್ದು.

...ಆದರೆ ಅಂತಹ ಸ್ಥಾನವನ್ನು (ಅದು ಯಡ್ಡಿಯ ...ರ್ಜಿಯಿಂದಲೇ ದೊರಕಿದ್ದರೂ) ಅಲಂಕರಿಸಿರುವ ...ನಂದ ಗೌಡ ತಾನು ಕಾನೂನನ್ನು ಪಾಲಿಸಬೇಕು ...ಬುದನ್ನೇ ಮರೆತು ಕ್ರಿಮಿನಲ್ ಯಡ್ಡಿಯನ್ನು ಭೇಟಿ ...ಲು ತನ್ನ ಗೂಟದ ಕಾರಿನಲ್ಲಿ ಹೋಗುತ್ತಾನೆಂದರೆ ಅದು ...ದ್ದಿಗೇಡಿತನ ಅಲ್ಲದೆ ಬೇರೇನೂ ಅಲ್ಲ.

...ಇದೆಲ್ಲ ಅವಕಾಶವಾದಿ ರಾಜಕಾರಣಿಗಳ ಮಾತಾಯಿತು. ...ರೆ ಇವರಿಗಿಂತ ಭಿನ್ನವಾಗಿ ಸರ್ವಸಂಗ ಪರಿತ್ಯಾಗಿಗಳಾದ ...ಗಾಯತ ಮಠಾಧೀಶರು ವರ್ತಿಸಲಿಲ್ಲ. ಯಡ್ಡಿಯನ್ನು ...ಡಲು ಹಲವಾರು ಪುಡಿ ಲಿಂಗಾಯತ ಸ್ವಾಮಿಗಳು ...ದರಾದರೂ ಅವರಲ್ಲಿ ಪ್ರಮುಖರು ಮೈಸೂರಿನ ...ತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿ ... ಆದರೆ ಈ ಸ್ವಾಮಿಗಳು ಒಂದೆಡೆ ಕಾವಿ ಧರಿಸಿರುವ ...ಸ್ ವ್ಯಕ್ತಿ ಆಗಿದ್ದಾರೆ. ಮತ್ತೊಂದೆಡೆ ಅಪ್ಪಟ ಜಾತೀವಾದಿ ... ಕೋಮುವಾದಿ ಚಟುವಟಿಕೆಗಳಿಗೆ ತಮ್ಮ ಮಠದಲ್ಲಿ ...ಬೆಗೆ ಸ್ಥಾವಕಾಶ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಅವರ ...ಗೆ 'ಸಹಜ ಸ್ಫೂರ್ತಿ' ಕಾರಣವೆಂದು ನಿರ್ಲಕ್ಷಿಸಬಹುದು. ...ರೆ ಅವರಿಗಿಂತಲೂ ಮೊದಲು ಯಡ್ಡಿಯನ್ನು ಆಸ್ಪತ್ರೆಯಲ್ಲಿ ... ಆದದ್ದು ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಗಳು. ...ಸ್ವಾಮಿಗಳು ಹಲವಾರು ದಶಕಗಳಿಂದ ವಿದ್ಯಾದಾಸೋಹ ... ಅನ್ನ ದಾಸೋಹದಂತಹ ಕೆಲಸಗಳಿಂದ ಎಲ್ಲ ಜಾತಿ,



ಧರ್ಮಗಳ ಜನರ ಪ್ರೀತಿ ಪಡೆದಿದ್ದರು. ಆದರೆ ಈಗ ಅವರಿಗೆ ಇಳಿ ವಯಸ್ಸಿನಲ್ಲಿ ಅರಳು ಮರಳು ಆಗಿರಬಹುದೆನಿಸುವಷ್ಟು ಅವರ ನಡವಳಿಕೆ ಬದಲಾಗಿದೆ.

ಯಡಿಯೂರಪ್ಪ ಈ ರಾಜ್ಯ ಕಂಡಿರುವ ಅತಿ ಭ್ರಷ್ಟ ರಾಜಕಾರಣಿ ಎಂದು ಗೊತ್ತಿದ್ದರೂ, ಆ ಕಾರಣಕ್ಕೆ ಆತನನ್ನು ನ್ಯಾಯಾಲಯ ಜೈಲಿಗೆ ಕಳುಹಿಸಿದೆ ಎಂಬ ಅರಿವಿದ್ದರೂ ಯಡ್ಡಿ ಓರ್ವ ಲಿಂಗಾಯತ ಎಂಬ ಏಕೈಕ ಕಾರಣಕ್ಕೆ ಆತನನ್ನು ನೋಡಲು ಈ ಸ್ವಾಮಿ ಧಾವಿಸಿ ಬರುತ್ತಾರೆಂದರೆ, ಆ ಮೂಲಕ ಕ್ರಿಮಿನಲ್ ಯಡ್ಡಿಗೆ ಈಗಲೂ ಮಠಾಧೀಶರ ಮತ್ತು ಲಿಂಗಾಯತರ ಬೆಂಬಲ ಇದೆ ಎಂದು ತೋರಿಸುವ ಹುನ್ನಾರದಲ್ಲಿ ಭಾಗಿ ಆಗುತ್ತಾರೆಂದರೆ, ಈ ಸ್ವಾಮಿ ನಿಜವಾಗಲೂ ದಾರಿ ತಪ್ಪಿದ್ದಾರೆ ಮತ್ತು ಅವರ ತಲೆ ಕೆಟ್ಟಿದೆ ಎಂದೆನಿಸುತ್ತದೆ.

****



ಯಡ್ಡಿಯೊಂದಿಗೆ ಜೈಲುಪಾಲಾಗಿರುವ ಕೃಷ್ಣಯ್ಯ ಶೆಟ್ಟಿ ಎಂಬ ಮತ್ತೊಬ್ಬ ಕ್ರಿಮಿನಲ್‌ನ ಪ್ರಹಸನವೂ ಮಜಭೂತಾಗಿದೆ. ಈತ ಹಾಡುಹಗಲೇ ಭೂದರೋಡೆ ಮಾಡಿ ಅದನ್ನು ತನ್ನ ಕುಲ ಕಸುಬು ಎಂದು ಸಮರ್ಥಿಸಿಕೊಂಡಾತ. ಮುಜರಾಯಿ ಮಂತ್ರಿಯಾಗಿ ರಾಜ್ಯದ ಎಲ್ಲಾ ದೇವಸ್ಥಾನಗಳು ತಮ್ಮ ಪ್ರತಿದಿನದ ಪೂಜೆಗಳನ್ನು ಯಡ್ಡಿಗೆ ಪ್ರಾರ್ಥಿಸುವ ಮೂಲಕ ಪ್ರಾರಂಭಿಸಬೇಕು ಎಂಬ ತಿಕ್ಕಲು ಆದೇಶವನ್ನು ಹೊರಡಿಸಿದ್ದ ಈ ಶೆಟ್ಟಿ, ಆದಾದ ನಂತರ ಉತ್ತರಪ್ರದೇಶದಿಂದ ಗಂಗಾ ಜಲ ತರಿಸುತ್ತೇನೆ, ತಿರುಪತಿಯಿಂದ ಲಡ್ಡು ಕೊಡಿಸುತ್ತೇನೆ, ಜನರನ್ನು ತೀರ್ಥ ಯಾತ್ರೆಗೆ ಕಳುಹಿಸುತ್ತೇನೆ ಎಂದು ಬಂಡಲ್ ಬಿಟ್ಟ ಆಸಾಮಿ ಶೆಟ್ಟಿ.

ಭಕ್ತಿ, ಪುಣ್ಯದ ಬಗ್ಗೆ ಮಾತಾಡುತ್ತಲೇ ರೈತರ ಭೂಮಿಯನ್ನು ಕದ್ದ, ರಾಜ್ಯದ ತಿಜೋರಿಗೆ ಕನ್ನ ಹಾಕಿದ, ಎಲ್ಲ ತರಹದ ಅಕ್ರಮಗಳನ್ನು ಎಸಗಿದ ಈ ಶೆಟ್ಟಿ ಜನರಿಂದ ಕದ್ದಿದ್ದು ಕೋಟ್ಯಂತರ ರೂಪಾಯಿಗಳನ್ನು. ಇಂತಹ ಪಾಪ ಕೃತ್ಯಗಳನ್ನು ಮಾಡಿ ಸಿಕ್ಕಿಹಾಕಿಕೊಂಡ ಶೆಟ್ಟಿ ನ್ಯಾಯಾಲಯದಲ್ಲಿ ಗಾಯತ್ರಿ ಮಂತ್ರ ಜಪಿಸುತ್ತಿದ್ದ. ಅದು ತನ್ನನ್ನು ಅಕ್ರಮಗಳ ಸುಳಿಯಿಂದ ರಕ್ಷಿಸುತ್ತದೆ ಎಂಬ ಭ್ರಮೆ ಈ ಮೂರ್ಖನಿಗಿತ್ತು. ಅದು ಸುಳ್ಳಾಯಿತು!

******

ಅಣ್ಣಾ ಹಜಾರೆ ಅವರು ಪ್ರಾಮಾಣಿಕರು ಎಂಬುದರ ಬಗ್ಗೆ ಎರಡು ಮಾತಿಲ್ಲ. ಆದರೆ ಹಜಾರೆ ಅವರನ್ನು ಮೆಚ್ಚಲು, ಅವರನ್ನು ಹಿಂಬಾಲಿಸಲು, ಅವರನ್ನು ಗಾಂಧಿವಾದಿ ಎಂದು ಬಣ್ಣಿಸಲು ಅದೊಂದೇ ಸಾಕೆ? ಈ ಪ್ರಶ್ನೆ ಯಾಕೆಂದರೆ ಅಣ್ಣಾ ಹಜಾರೆ ಅವರು ಮತ್ತೊಮ್ಮೆ ತಮ್ಮ ಸೀಮಿತ ರಾಜಕೀಯ ತಿಳಿವಳಿಕೆಯನ್ನು ತೋರಿದ್ದಾರೆ. ಅದಕ್ಕಿಂತ ಮುಖ್ಯವಾಗಿ ತಮ್ಮ ಆಳದಲ್ಲಿರುವ ಮೃದು ಹಿಂದೂತ್ವವಾದವನ್ನೂ ಬಹಿರಂಗ ಪಡಿಸಿದ್ದಾರೆ.


ಟೀಮ್ ಅಣ್ಣಾದ ಮುಖ್ಯ ಸದಸ್ಯರಾಗಿದ್ದವರು ಖ್ಯಾತ ವಕೀಲ ಪ್ರಶಾಂತ್ ಭೂಷಣ್. ಇತ್ತೀಚೆಗೆ ಕೆಲ ಚಿಡ್ಡಿಗಳು ಭೂಷಣ್ ಅವರ ಆಫೀಸಿಗೆ ನುಗ್ಗಿ ಅವರನ್ನು ಥಳಿಸಿದರು. ಅದಕ್ಕೆ ಕಾರಣ ಭೂಷಣ್ ಅವರು "ಕಾಶ್ಮೀರ ಸಮಸ್ಯೆ ನಿಜವಾಗಲು ಬಗೆಹರಿಯಬೇಕಿದ್ದರೆ ಅಲ್ಲಿ ಜನಾಭಿಪ್ರಾಯವನ್ನು ಸಂಗ್ರಹಿಸಬೇಕು" ಎಂದು ನೀಡಿದ್ದ ಹೇಳಿಕೆ.

ತನ್ನ ತಂಡದ ಒಬ್ಬ ಪ್ರಮುಖನ ಮೇಲಾದ ಹಲ್ಲೆಯ ಬಗ್ಗೆ ಪ್ರತಿಕ್ರಯಿಸುತ್ತಾ ಅಣ್ಣಾ ಹಜಾರೆ ಅವರು "ಕೆಲವರು ಕಾಶ್ಮೀರದ ಬಗ್ಗೆ ಅಸಂಬದ್ಧವಾಗಿ ಮಾತನಾಡುತ್ತಾರೆ. ನನ್ನ ನಂಬಿಕೆಯ ಪ್ರಕಾರ ಕಾಶ್ಮೀರ ಎಂದೆಂದಿಗೂ ಭಾರತದ ಭಾಗವಾಗಿದೆ. ಈ ಕುರಿತು ಪಾಕಿಸ್ತಾನದ ವಿರುದ್ಧ ಯುದ್ಧ ನಡೆದರೆ ನಾನು ಆ ಯುದ್ಧದಲ್ಲಿ ಭಾಗವಹಿ ಸಲು ಈಗಲೂ ಸಿದ್ಧನಿದ್ದೇನೆ" ಎಂದಿದ್ದಾರೆ. ಈ ಚಿಕ್ಕ ಹೇಳಿಕೆಯಲ್ಲಿ ಮೂರು ಮುಖ್ಯ ವಿಷಯಗಳು ಅಡಗಿವೆ.

ಮೊದಲನೆಯದಾಗಿ, ನಮ್ಮ ದೇಶದ ಸಂವಿಧಾನ ಎಲ್ಲರಿಗೂ ವಾಕ್ ಸ್ವಾತಂತ್ರ್ಯ ನೀಡಿದೆ. ಆ ಹಕ್ಕನ್ನು ಪ್ರಶಾಂತ್ ಭೂಷಣ್ ಚಲಾಯಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರಷ್ಟೇ. ಅವರ ಆ ಅಭಿಪ್ರಾಯದೊಂದಿಗೆ ಒಪ್ಪುವ ಅಥವಾ ಒಪ್ಪದೇ ಇರುವ ಹಕ್ಕು ಎಲ್ಲರಿಗೂ ಇದೆ. ಆದರೆ ಅದಕ್ಕೆಂದು ಅವರ ಮೇಲೆ ಹಲ್ಲೆ ಮಾಡುವ ಹಕ್ಕು ಯಾರಿಗೂ ಇಲ್ಲ. ಅಣ್ಣಾ ಅವರು ಭೂಷಣ್ ಮೇಲಾದ ಹಲ್ಲೆಯನ್ನು ಖಂಡಿಸುವ ಬದಲಾಗಿ ಭೂಷಣ್ ಅವರು ಅಸಂಬದ್ಧವಾಗಿ ಮಾತನಾಡಿದ್ದಾರೆ ಎಂದಿರುವುದು ಶುದ್ಧ ಅವಿವೇಕತನವೇ ಸರಿ.

ಎರಡನೆಯದಾಗಿ ಕಾಶ್ಮೀರ ಎಂದೆಂದಿಗೂ ಭಾರತದ ಭಾಗವಾಗಿದೆ ಎಂದಿದ್ದಾರೆ. ಆದರೆ ವಾಸ್ತವವಾಗಿ ಭಾರತ ಎಂಬ ದೇಶವೇ ಅಸ್ತಿತ್ವಕ್ಕೆ ಬಂದದ್ದು 1947ರಲ್ಲಿ. ಇನ್ನು ಕಾಶ್ಮೀರವನ್ನು ರಾಜ ಹರಿಸಿಂಗ್ ಎಂಬಾತ ಭಾರತದೊಂದಿಗೆ ಸೇರಿಸಿದ್ದು 1948ರಲ್ಲಿ, ಅದೂ ಬರುವ ದಿನಗಳಲ್ಲಿ ಕಾಶ್ಮೀರಿಗಳ ಅಭಿಪ್ರಾಯ ವನ್ನು ಸಂಗ್ರಹಿಸಿ ಅದರ ಪ್ರಕಾರ ನಡೆದುಕೊಳ್ಳುವುದಾಗಿ ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರು ಭರವಸೆ ನೀಡಿದ ನಂತರ. ಆ ಭರವಸೆಯನ್ನು ಇವತ್ತಿನ ತನಕ ಭಾರತ ಭರಿಸಿಲ್ಲ. ಅಷ್ಟೇ ಅಲ್ಲ, ಅವತ್ತಿನಿಂದ ಇವತ್ತಿನ ತನಕ ಆ ಪ್ರದೇಶದಲ್ಲಿ ಕಪಟ ರಾಜಕೀಯವನ್ನು ಮಾಡುತ್ತ ತನ್ನ ಸೈನಿಕರ ಮೂಲಕ ಅಲ್ಲಿನ ಜನರ ಆಶಯಗಳನ್ನು ದಮನ ಮಾಡುತ್ತಲೇ ಬಂದಿದೆ. ಇದು ವಾಸ್ತವ. ಆದರೂ ಹಜಾರೆ ಅವರು "ಕಾಶ್ಮೀರ ಎಂದೆಂದಿಗೂ ಭಾರತದ ಅವಿಭಾಜ್ಯ ಭಾಗ" ಎಂದಿರುವುದು ಅವರ ಸೀಮಿತ ಜ್ಞಾನವನ್ನು ಮತ್ತು ಪ್ರಜಾಸತ್ತೆಯ ಬಗ್ಗೆ ಅವರಲ್ಲಿ ಇಲ್ಲದಿರುವ ಕಾಳಜಿಯನ್ನು ತೋರುತ್ತದೆ.

ಮೂರನೆಯದಾಗಿ, ನಾಳೆ ಪಾಕಿಸ್ತಾನದ ವಿರುದ್ಧ ಕಾಶ್ಮೀರಕ್ಕಾಗಿ ಯುದ್ಧ ನಡೆದರೆ ತಾನು ಅದರಲ್ಲಿ



ಭಾಗವಹಿಸಲು ಈ ವಯಸ್ಸಿನಲ್ಲೂ ಸಿದ್ಧನಿದ್ದೇನೆ ಎನ್ನುವ ಮೂಲಕ ಹಜಾರೆ ಅವರು ಕಾಶ್ಮೀರಿಗಳನ್ನು ಪಾಕಿಸ್ತಾನದ ಮುಸಲ್ಮಾನರೊಂದಿಗೆ ಸೇರಿಸಿದ್ದಾರೆ. ಅಷ್ಟೇ ಅಲ್ಲ, ಇನ್ನೂ ಆಘಾತಕಾರಿಯಾಗಿ ಪಾಕಿಸ್ತಾನದೊಂದಿಗಿನ ಯುದ್ಧವು ಹಿಂದೂ ಮತ್ತು ಮುಸಲ್ಮಾನರ ನಡುವಿನ ಯುದ್ಧ ಎಂಬ ಅರ್ಥವನ್ನೂ ನೀಡಿದ್ದಾರೆ.

ಆದರೆ ಇತಿಹಾಸ ಹೇಳುವುದೇನೆಂದರೆ ಭಾರತ ವಿಭಜನೆ ಆದಾಗ ಮುಸಲ್ಮಾನರೇ ಕಾಶ್ಮೀರ ಪ್ರದೇಶದಲ್ಲಿ ಬಹುಸಂಖ್ಯಾತರಾಗಿದ್ದರೂ ಅವರು ಇಸ್ಲಾಂ ಧರ್ಮಾಧಾರಿತವಾಗಿ ರಚನೆಗೊಂಡ ಪಾಕಿಸ್ತಾನಕ್ಕೆ ಸೇರಲು ಇಷ್ಟ ಪಡಲಿಲ್ಲ. ಮಾತ್ರವಲ್ಲ, 1948ರಲ್ಲಿ ಪಾಕಿಸ್ತಾನದ ಸೈನಿಕರು ಬುಡಕಟ್ಟು ಜನರ ವೇಷದಲ್ಲಿ ಕಾಶ್ಮೀರದ ಮೇಲೆ ಯುದ್ಧ ಆರಂಭಿಸಿದಾಗ, ಭಾರತದ ಸೈನ್ಯ ಕಾಶ್ಮೀರವನ್ನು ತಲುಪುವ ತನಕ ಪಾಕಿಸ್ತಾನದ ಸೈನ್ಯದ ವಿರುದ್ಧ ಹೋರಾಡಿ ಅದನ್ನು ತಡೆಗಟ್ಟಿದವರು ಕಾಶ್ಮೀರಿಗಳು. ಆಗ ಅದೆಷ್ಟೋ ಕಾಶ್ಮೀರಿಗಳು ಪಾಕಿಸ್ತಾನದ ಸೈನಿಕರಿಗೆ ಬಲಿಯಾಗಿದ್ದರು. ಅದೆಲ್ಲಕ್ಕಿಂತ ಮುಖ್ಯವಾಗಿ ಆ ಯುದ್ಧ ಮುಗಿದ ನಂತರ ಶ್ರೀನಗರದ ಕೇಂದ್ರ ಪ್ರದೇಶವಾದ ಲಾಲ್ ಚೌಕದಲ್ಲಿ ನೆಹರು ಮತ್ತು ಅಂದಿನ ಕಾಶ್ಮೀರಿಗಳ ನಾಯಕ ಶೇಖ್ ಅಬ್ದುಲ್ಲಾ ಅವರು "ಕಾಶ್ಮೀರ ಭಾರತದ ಜಾತ್ಯತೀತ ಸಂವಿಧಾನದ ಆಶಯಕ್ಕೆ ತೊಟ್ಟಿಲಾಗುತ್ತದೆ" ಎಂದು ಸಾರಿದ್ದರು. (ಆನಂತರ ಅದೇ ನೆಹರು ಮತ್ತು ಅವರ ಕುಟುಂಬ ಅದೇ ಶೇಖ್ ಅವರನ್ನು 17 ವರ್ಷಗಳ ಕಾಲ ಜೈಲಿನಲ್ಲಿಟ್ಟು ಕಾಶ್ಮೀರಿಗರಿಗೆ ದ್ರೋಹ ಬಗೆದರು ಎಂಬುದು ಬೇರೆ ಮಾತು. ಈ ಕಾರಣಕ್ಕಾಗಿಯೇ ಇವತ್ತು ಕಾಶ್ಮೀರದಲ್ಲಿ ಭಿನ್ನಮತ ಭುಗಿಲೆದ್ದಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.)

ಹೀಗಿರುವಾಗ ಹಜಾರೆ ಅವರು ಅದು ಹೇಗೆ ಕಾಶ್ಮೀರದ ಮುಸಲ್ಮಾನರನ್ನು ಪಾಕಿಸ್ತಾನದೊಂದಿಗೆ ಸೇರಿಸುತ್ತಾರೆ? ಮತ್ತು ಪಾಕಿಸ್ತಾನದೊಂದಿಗಿನ ಯುದ್ಧವನ್ನು ಅದು ಹೇಗೆ ಹಿಂದೂ ಮತ್ತು ಮುಸಲ್ಮಾನರ ನಡುವಿನ ಯುದ್ಧವೆಂಬಂತೆ ಭಾವಿಸುತ್ತಾರೆ? ತಾವು ಗಾಂಧಿವಾದಿ ಎನ್ನುವ ಹಜಾರೆ ಅವರು ಗಾಂಧಿ ಟೋಪಿ ತೊಟ್ಟ ಮಾತ್ರಕ್ಕೆ ಗಾಂಧಿವಾದಿ ಆಗುವುದಿಲ್ಲ. ಬದಲಾಗಿ ಗಾಂಧಿಯಂತೆ ಕೋಮು ಸೌಹಾರ್ದತೆಗೆ ಪ್ರಯತ್ನಿಸಿದಾಗ ಮಾತ್ರ ಗಾಂಧಿವಾದಿ ಆಗುತ್ತಾರೆ. ಆದರೆ ಕೋಮು ಸೌಹಾರ್ದವಿರಲಿ, ಹಿಂಸಾತ್ಮಕ ಯುದ್ಧಕ್ಕೆ ತಾನು ಈ ವಯಸ್ಸಿನಲ್ಲೂ ಸಿದ್ಧ ಎಂದಿರುವ ಹಜಾರೆ ತಾನು ಗಾಂಧಿವಾದಿ ಅಲ್ಲ, ಬದಲಾಗಿ ಮೃದು ಹಿಂದೂತ್ವವಾದಿ ಎಂದು ಸಾರಿದ್ದಾರೆ.

ಈ ಎಲ್ಲ ಕಾರಣಗಳಿಗೆ ಅಣ್ಣಾ ಹಜಾರೆ ತರಹದ ಅರೆಜ್ಞಾನ ಹೊಂದಿರುವ 'ಐಕಾನ್'ಗಳ ಬಗ್ಗೆ ಎಚ್ಚರದಿಂದಿರುವುದು ದೇಶಕ್ಕೇ ಒಳ್ಳೆಯದು....

ಕೋಟಿಕೋಟಿಯ ಬಿಬಿಎಂಪಿ ಆಸ್ತಿಗೆ ವಕ್ರ

ಆರೆಸ್ಸೆಸ್ ಭೂಕಬಳಿಕೆ ಆರಂಭ

ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ನಾಯಕರು ಬೆಂಗಳೂರಿನ ಬಹುತೇಕ ನಾಗರಿಕ ಸಂಘಟನೆಗಳ ಸಭೆ ಕರೆದು ಬೆಂಗಳೂರಿನ ಭವಿಷ್ಯಕ್ಕೆ ದ್ರೋಹ ಬಗೆಯುವುದಿಲ್ಲ ಎಂದು ಮಾತು ಕೊಟ್ಟಿದ್ದು ಏನಾಯಿತು? ಹೀಗೆ ಅಳಿದುಳಿದ ಸಿ.ಎ. ಸೈಟುಗಳನ್ನೆಲ್ಲ ಅಧಿಕಾರದ ಅಟ್ಟಹಾಸದಲ್ಲಿ ಆರೆಸ್ಸೆಸ ಕ್ರಿಮಿಗಳಿಗೆ ಹಂಚುತ್ತಾ ಹೋದರೆ ಮುಂದೊಮ್ಮೆ ಜನ ಕಾಲಿಡುವುದಕ ಜಾಗ ಎಲ್ಲಿದ್ದೀತು? ಇಂಥ ನೂರಾ ಎಪ್ಪತ್ತು ಆರೆಸ್ಸೆಸ್ ಅಂಗಸಂಸ್ಥೆಗಳಿಗಾ ಬೆಂಗಳೂರಿನ ಅದೆಷ್ಟು ಪಾಲಿಕೆ ಭೂಮಿಗೆ ಗತಿ ಕಾದಿದೆಯೋ? ಈ ಬಗ್ಗೆ ಯಾರೂ ದನಿಯೆತ್ತುತ್ತಿಲ್ಲವಲ್ಲ ಅದಕ್ಕಿಂತ ದುರಂತ ಬೇಕೆ?

• ರಾ. ಸೋಮನಾಥ್



ಬಸವನಗುಡಿಯ ಅನಾಥ ಶಿಶುನಿವಾಸ



ಬಡವರನ್ನು ಹೊರದಬ್ಬಿ ಬಿಡಿಎ ಬೋರ್ಡು

ಜೈಲಿಗೂ ಹೋಗದೆ ಲೋಕಾಯುಕ್ತಕ್ಕೂ ಸಿಲುಕದೆ ಕೋಟಿಕೋಟಿ ಬೆಲೆ ಬಾಳುವ ಸರ್ಕಾರಿ ಭೂಮಿಯನ್ನು ಲಪಟಾಯಿಸುವುದು ಹೇಗೆ?

ಯಾರೇ ನೆಲಗಳ್ಳ, ಯಾವುದೇ ವಕೀಲ, ಅಧಿಕಾರಿ-ಮಂತ್ರಿಗಳಿಗೂ ಹೊಳೆಯದ ವಿನೂತನ ಶೈಲಿಯ ಲ್ಯಾಂಡ್ ಗ್ರ್ಯಾಬಿಂಗ್ ತಂತ್ರವೊಂದನ್ನು ಆರೆಸ್ಸೆಸ್ ಕಂಡು ಹಿಡಿದಿದೆ!


ಅದು ಕಾನೂನು ಪ್ರಕಾರವೇ ಸರ್ಕಾರಿ ಸೊತ್ತನ್ನು ದೋಚುವುದು. ರಾಜಧಾನಿ ಬೆಂಗಳೂರಿನ ಜನದಟ್ಟಣೆಯ ನಡುವೆ ಆ ಕಾಲದಿಂದ ಪಾಲಿಕೆ ಸೊತ್ತೆಂದೋ, ಪಾರ್ಕುಗಳಿಗೆಂದೋ, ಪಾರ್ಕಿಂಗ್, ಬಿಬಿಎಂಪಿಯ ವಾರ್ಡ್ ಕಚೇರಿ, ಆಟದ ಮೈದಾನ, ಸಾರ್ವಜನಿಕ ಶೌಚಾಲಯ, ಬಸ್ ನಿಲ್ದಾಣ, ಸ್ಮಶಾನ, ಆಸ್ಪತ್ರೆಗಳಿಗೆಂದೋ ಮೀಸಲಿಟ್ಟ ಅಳಿದುಳಿದ ಸಿ.ಎ. ಸೈಟುಗಳನ್ನು ವ್ಯವಸ್ಥಿತವಾಗಿ ಕಬಳಿಸುವ ಆರೆಸ್ಸೆಸ್ ಕುತಂತ್ರದ ವಿರುದ್ಧ ಈಗ ಬೆಂಗಳೂರಿನ ಪ್ರಜ್ಞಾವಂತರು ಬೀದಿಗಿಳಿಯಲೇಬೇಕಾಗಿದೆ.

ಇದು ಕೇವಲ ಒಂದು ಸೈಟಿನ ಕತೆಯಲ್ಲ. ಇಂಥ ನೂರಕ್ಕೂ ಅಧಿಕ ಪಾಲಿಕೆ ಸೊತ್ತುಗಳ ಮೇಲೀಗ ಆರೆಸ್ಸೆಸ್ ಕಣ್ಣುಬಿದ್ದಿದೆ. ಉತ್ತರಹಳ್ಳಿಯ ಕೆರೆ ಏರಿಗೆ ಹೊಂದಿಕೊಂಡಂತೆ ಪೂರ್ಣಪ್ರಜ್ಞ ನಗರದಲ್ಲಿ ಸದ್ಯ ಆರೆಸ್ಸೆಸ್ ಕಬಳಿಸಿದ ಹತ್ತು ಕೋಟಿ ರೂಪಾಯಿಗಳ ಪಾಲಿಕೆ ಸೊತ್ತನ್ನು ಬಿಡಿಎ ದುಗ್ಗಾಣಿಯ ಬೆಲೆಗೆ ಚಿಡ್ಡಿಗಳ ಬಾಯಿಗೆ ಹಾಕಿದ್ದರ ವಿರುದ್ಧ ಬೆಂಗಳೂರಿನ ಯಾವೊಬ್ಬ ಶಾಸಕ, ಪುರಪಿತೃ, ಹೋರಾಟಗಾರರೂ ಏಕೆ ಬಾಯಿಬಿಡುತ್ತಿಲ್ಲವೋ ಗೊತ್ತಿಲ್ಲ.

ಅನಾಥ ಶಿಶು ನಿವಾಸ

ಸಂಘ ಪರಿವಾರದ ಹೆತ್ತ ತಾಯಿಯಾದ ಆರೆಸ್ಸೆಸ್ ಹೇಗೆ ರಾಜಕೀಯವಾಗಿ ಬಿಜೆಪಿಗೆ ಜನ್ಮ ಕೊಟ್ಟಿದೆಯೋ ಹಾಗೇ ರಾಷ್ಟ್ರೋತ್ಥಾನ ಪರಿಷತ್, ಭಜರಂಗದಳ, ಎಬಿವಿಪಿ ಅರ್ಥಾತ್ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಭಾರತೀಯ ಮಜ್ದೂರ್ ಸಂಘ, ವನವಾಸಿ ಕಲ್ಯಾಣ ಕೇಂದ್ರ, ಭಾರತೀಯ ವಿದ್ಯಾ ಭವನ, ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಹೊಸ ದಿಗಂತ, ವಿಕ್ರಮ, ಪುಂಗವ ಮುಂತಾದ ಪತ್ರಿಕೆಗಳು; ಇತ್ಯಾದಿ ಬೇರೆಬೇರೆ ಸಂಘಟನೆ-ಸಂಸ್ಥೆಗಳ ಹೆಸರಲ್ಲೂ ಬ್ರಾಹ್ಮಣ ಸಾಮ್ರಾಜ್ಯದ ರಕ್ಷಣೆಗೆ ಷಡ್ಯಂತ್ರ ರೂಪಿಸುತ್ತದೆ. ಕಾಲಾನುಕಾಲಕ್ಕೆ ಅಯೋಧ್ಯೆ, ರಾಜೀವ್ ದೀಕ್ಷಿತ್, ಸ್ವದೇಶಿ ಆಂದೋಲನ, ರಾಮಸೇತುವೆ, ರಥಯಾತ್ರೆ, ಅಣ್ಣಾ ಹಜಾರೆ ಹೋರಾಟಗಳ ಮೂಲಕ ಜನರನ್ನು ನೈಜ ಸಮಸ್ಯೆಗಳಿಂದ ದಿಕ್ಕುತಪ್ಪಿಸುತ್ತಲೇ ಇರುತ್ತದೆ.

ಹೀಗೆ ಆರೆಸ್ಸೆಸ್ ಹುತ್ತದಿಂದ ಜನ್ಮ ತಳೆದ ನೂರಾ ಎಪ್ಪತ್ತಕ್ಕೂ ಅಧಿಕ ಸಹಯೋಗಿ ಸಂಸ್ಥೆಗಳ ಪೈಕಿ ಒಂದು ಬಸವನಗುಡಿಯ ಅನಾಥ ಶಿಶು ನಿವಾಸ. ಬಸವನಗುಡಿಯ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನ ಎದುರಿಗೇ ಇರುವ ಈ ಅನಾಥ ಶಿಶು ನಿವಾಸವನ್ನು ಸ್ವಾತಂತ್ರಪೂರ್ವದಲ್ಲೇ ಅಂದರೆ 1942ರ ಹೊತ್ತಿಗೆ ಬಾಡಿಗೆ ಮನೆಯೊಂದರಲ್ಲಿ ಶುರು ಮಾಡಲಾಯಿತಾದರೂ 1958ರ ಹೊತ್ತಿಗದು ಆರೆಸ್ಸೆಸ್ ನಾಯಕರ ಅಧಿಪತ್ಯಕ್ಕೊಳಪಟ್ಟು ಸರ್ಕಾರದಿಂದ ಬಸವನಗುಡಿಯಲ್ಲಿ ಉಚಿತ ಸೈಟನ್ನೂ ಹೊಡೆಯಿತು. ನೆಪಕ್ಕಷ್ಟೇ ಒಂದಷ್ಟು ಅನಾಥ ಮಕ್ಕಳನ್ನು ಸಾಕುತ್ತಾ ಅವರನ್ನು ತೋರಿಸಿ ಬೆಂಗಳೂರಿನ ಶ್ರೀಮಂತರಿಂದ ಹಣ ಕೀಳುವುದು ಆರೆಸ್ಸೆಸ್ ತಂತ್ರ. ಹೀಗೆ ಹೆಸರಿಗೆ ಅನಾಥ ಮಕ್ಕಳನ್ನು ತೋರಿಸಿ ಕ್ರಮೇಣ ಅದನ್ನು ವೃತ್ತಿ ತರಬೇತಿ ಕೇಂದ್ರವನ್ನಾಗಿಸಿ ತಾಂತ್ರಿಕ ಕೋರ್ಸುಗಳ ಕಾಲೇಜನ್ನಾಗಿ ಪರಿವರ್ತಿಸಿ ದುಡ್ಡು ದೋಚುವ ಕುಟಿಲೋಪಾಯವನ್ನೂ ಆರೆಸ್ಸೆಸ್ ನಡೆಸುತ್ತಾ ಬಂದಿದೆ. ಇದಕ್ಕೆ ಖ್ಯಾತ ಜ್ಯುವೆಲ್ಲರಿ ಕಂಪನಿಯಾದ ಗಂಜಾಂ ನಾಗಪ್ಪ ಅಂಡ್ ಸನ್ಸ್ ಸಾಕಷ್ಟು ಫಂಡು ಕೊಡುತ್ತದೆ. ಹಾಗೇ ಗಂಜಾಂ ನಾಗಪ್ಪ ಕಂಪನಿ ಕೊಟ್ಟ ದುಡ್ಡಿಗೆ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯೂ ಸಿಗುತ್ತದೆಯಾದ್ದರಿಂದ ಬ್ಲಾಕ್ ಮನಿ ಮತ್ತು ಸಮಾಜೋದ್ಧಾರ ಒಟ್ಟೊಟ್ಟಿಗೇ ನೆರವೇರುತ್ತದೆ.



ಆರೆಸ್ಸೆಸ್ ಅಧಿಪತಿ ಮೈ.ಚ. ಜಯದೇವ

ಇಂಥ ಅನಾಥ ಶಿಶು ನಿವಾಸಕ್ಕೆ ಸದ್ಯ ಬಿ.ವಿ. ಶೇಷ ಎಂಬ ಆರೆಸ್ಸೆಸ್ ಕಾರ್ಯಕರ್ತನೇ ಕಾರ್ಯದರ್ಶಿಯಾಗಿ ಮೋಹನ್ ಕೃಷ್ಣ ಎಂಬ ಮತ್ತೊಬ್ಬ ಚಿಡ್ಡಿ ಮ್ಯಾನೇಜಿಂಗ್ ಟ್ರಸ್ಟಿಯ[...] ಸೂತ್ರಧಾರಿಯಂತಿರುವುದು ಕರ್ನಾಟಕದ ಆರೆಸ್ಸೆಸ್ ಮ[...] ಮೈ.ಚ. ಜಯದೇವ.

ಆರೆಸ್ಸೆಸ್ ದಕ್ಷಿಣ ಭಾರತೀಯ ಪ[...] ಪ್ರಮುಖ ಜಯದೇವ ಯಾರನ್ನು ನೇ[...] ತ್ತಾರೋ ಅವರೇ ಈ ಸಂಸ್ಥೆಯ ಟ್ರಸ್ಟಿ[...] ಕಾರ್ಯದರ್ಶಿ, ವ್ಯವಸ್ಥಾಪಕ ಟ್ರಸ್ಟಿಗಳ [...] ದಲ್ಲಿರುತ್ತಾರೆ. ಇಂಥದೊಂದು ಕಪಟ ಸ[...] ಬಿಡಿಎ ಉತ್ತರಹಳ್ಳಿಯಲ್ಲಿದ್ದ ತನ್ನ ಅ[...] ದುಬಾರಿಯ 35,850.33 ಚದುರ ಅಡಿ[...] ಸಾರ್ವಜನಿಕ ಉದ್ದೇಶದ ಸಿ.ಎ. ಸೈಟನ್ನು 2011 ರ ಜನವರಿ 25 ರಂದು ಮಂಜ[...] ಮಾಡಿದೆ. ಬಿಡಿಎ ಮೂಲಗಳೇ ಹೇಳು[...] ಪಾರ್ಕ್ ಉದ್ದೇಶಕ್ಕೆಂದು ಮೀಸಲಿಟ್ಟಿ[...] ಸೈಟನ್ನು ಆಗ ಮುಖ್ಯಮಂತ್ರಿಯಾಗಿದ್ದ ಯ[...] ಬ್ಲಾಕ್‌ಮೇಲ್ ಮಾಡಿಯೇ ಮೈ.ಚ. ಜಯ[...] ಕಬಳಿಸಿದ್ದಾರೆ.

9ನೇ ಪು[...]

ಪಾಲಿಕೆ ಕಚೇರಿ, ಹೆಣ್ಣು ಮಕ್ಕಳ ಶಾಲೆ, ಮಾಸ್ತಿ ರಂಗಮಂದಿರ, ಸಮುದಾಯ ಭವನ ಎಲ್ಲವೂ ಸ್ವಾಹಾ...

ಬೆಂಗಳೂರಿನ ಆಯಕಟ್ಟಿನ ಪಾರ್ಕು, ಆಟದ ಮೈದಾನ, ಪಾಲಿಕೆ ಕಚೇರಿ, ಸ್ಮಶಾನ, ಪಾಲಿಕೆ ಆಸ್ತಿ, ಸರ್ಕಾರಿ ಶಾಲೆಗಳ ಪೈಕಿ ಆರೆಸ್ಸೆಸ್ ಪಾಲಿಗೆ ಯಾವ್ಯಾವುದು ಪ್ರಶಸ್ತವಾಗಿ ಕಾಣುತ್ತೋ ಅವುಗಳನ್ನೆಲ್ಲ ತನ್ನ ಒಂದಲ್ಲಾ ಒಂದು ಅಂಗಸಂಸ್ಥೆಗೆ ಧಾರೆಯೆರೆಯಲು ಆರೆಸ್ಸೆಸ್ ರಹಸ್ಯ ಕಾರ್ಯತಂತ್ರವೊಂದನ್ನು ರೂಪಿಸಿದೆ.



ಕೆಂಪಾಂಬುದಿಯ ಹೆಣ್ಣುಮಕ್ಕಳ ಪ್ರೌಢಶಾಲೆ

ಚನ್ನಮ್ಮನ ಕೆರೆಯ ಪಾಲಿಕೆ ಕಚೇರಿ

ಪೀಇಎಸ್ ಧಣಿಯ ಕಾನ್ವೆಂಟು

ಇದರ ಮೊದಲ ಹೆಜ್ಜೆಯಾಗಿ ಆರೆಸ್ಸೆಸ್ ಆಪೋಶನಗೈದಿದ್ದು ಬಸವನಗುಡಿಯ ಬಿಬಿಎಂಪಿ ವಾರ್ಡ್ ಕಚೇರಿಯನ್ನು. ಬುಲ್ ಟೆಂಪಲ್ ರಸ್ತೆಯಲ್ಲಿ ಸುಂಕೇನಹಳ್ಳಿಯ ಖ್ಯಾತ ದ್ವಾರಕಾ ಹೋಟೆಲ್ ಎದುರಿಗಿದ್ದ ಪಾಲಿಕೆ ವಾರ್ಡ್ ಕಚೇರಿ ಮತ್ತು ಅದರ ಸುತ್ತಲ ಪಾರ್ಕ್ ಜಮೀನು ಸೇರಿದಂತೆ ಇರುವ ಕಾಂಪೌಂಡ್‌ನ ವಿಸ್ತೀರ್ಣವೇ 100x100 ಭರ್ಜರಿ ಸೈಟಾಗುತ್ತದೆ. ನಿನ್ನೆ ಮೊನ್ನೆಯ ತನಕ ಅಲ್ಲಿ ಪಾಲಿಕೆಯ ಆರೋಗ್ಯಾಧಿಕಾರಿ ಮತ್ತು ಇಂಜಿನಿಯರಿಂಗ್ ವಿಭಾಗಗಳ ಕಚೇರಿಗಳಿದ್ದವು. ಇಲ್ಲಿಗೆ ತಿಂಗಳ ಹಿಂದಷ್ಟೇ ಏಕಾಏಕಿ ಪಾಲಿಕೆ ಕಚೇರಿಯ ಮೇಲೆ ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯೆಂಬ ಬೋರ್ಡು ಬಿತ್ತು, ಜೊತೆಗೆ ಅಲ್ಲಿದ್ದ ಪಾಲಿಕೆ ಕಚೇರಿಗಳನ್ನು ಚನ್ನಮ್ಮನಕೆರೆ ಪಾಲಿಕೆ ಕಟ್ಟಡಕ್ಕೆ ಸ್ಥಳಾಂತರಿಸಿದ ಸೂಚನಾ ಫಲಕವೂ ಬಿತ್ತು!

ರಾತ್ರೋರಾತ್ರಿಯ ಈ ಬದಲಾವಣೆಯಿಂದ ಅವಕ್ಕಾದ ಸುತ್ತಮುತ್ತಲ ಜನ ಹೋಗಿ ವಿಚಾರಿಸಿದರೆ ಅಲ್ಲಿ ಯಾರೋ ಕಾವಿಧಾರಿಯೊಬ್ಬ ರುದ್ರಾಕ್ಷಿ ಮಾಲೆ ಹಿಡಿದು ಹೋಮಕುಂಡದ ಬೆಂಕಿಗೆ ತುಪ್ಪ ಸುರಿಯುತ್ತಿದ್ದ. 'ಏನಾಯ್ತಪ್ಪಾ... ಇಲ್ಲಿದ್ದ ಬಿಬಿಎಂಪಿ ಆಫೀಸು, ಎಂದರೆ ದೌಲತ್ತಿನಿಂದ 'ಗೊತ್ತಿಲ್ಲ' ಎಂದು ಗೋಣು ಹಾರಿಸುತ್ತಿದ್ದ. ತೀರ ತಲೆ ಕೆಡಿಸಿಕೊಂಡ ನಾಗರೀಕರಿಗೆ ಗೊತ್ತಾಗಿದ್ದೇನೆಂದರೆ ತಿಂಗಳ ಹಿಂದೆಯೇ ಪಾಲಿಕೆ ಸಭೆಯಲ್ಲಿ ಆರೆಸ್ಸೆಸ್ ಪರ ನಿರ್ಣಯ ಮಂಡಿಸಿ ಬಸವನಗುಡಿಯ ಇಡೀ ಪಾಲಿಕೆ ಕಚೇರಿಯನ್ನೇ ಸ್ಥಳಾಂತರಿಸಿ ಅದನ್ನು ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ 15 ವರ್ಷಗಳ ಗುತ್ತಿಗೆಗೆ ವಹಿಸಲಾಗಿತ್ತು.


ಬಸವನಗುಡಿ ಭಾಗದ ನಾಗರಿಕರಿಗೆ ಪಾಲಿಕೆ ಕಚೇರಿಯೆಂದು ಇದ್ದದ್ದು ಇದೊಂದೇ. ಜನ ಈಗ ದೂರದ ಚನ್ನಮ್ಮನಕೆರೆ ಅಚ್ಚುಕಟ್ಟು ವಾರ್ಡ್ ಕಚೇರಿಗೆ ಹೋಗಬೇಕು. ಜನಬಳಕೆಯ ಸರ್ಕಾರಿ ಕಚೇರಿಯೊಂದನ್ನು ತೆರುವುಗೊಳಿಸಿ ಅಲ್ಲಿ ದಂಡಪಿಂಡಗಳಿಗೆ ಅಷ್ಟಾಂಗಯೋಗ ಶಿಬಿರ ನಡೆಸುವ ಆರೆಸ್ಸೆಸ್ ತಂತ್ರದ ಹಿಂದಿರುವುದು ಬ್ರಾಹ್ಮಣಿಕೆಯ ಷಡ್ಯಂತ್ರವೊಂದೇ.

ಇದಕ್ಕೂ ಮೊದಲು ಹನುಮಂತನಗರದ ಲಕ್ಷ್ಮಿಪುರದ ಪಾಲಿಕೆ ಸಮುದಾಯ ಭವನವನ್ನು ಸಂಸದ ಅನಂತ್‌ಕುಮಾರ್ ನಡೆಸುವ ಬಿಸಿಯೂಟದ ದಂಧೆಗೆಂದು ಅದಮ್ಯ ಚೇತನ ಟ್ರಸ್ಟ್‌ಗೆ ಬಿಟ್ಟು ಕೊಡಲಾಗಿತ್ತು. ಅದಮ್ಯ ಚೇತನ ಸಂಸ್ಥೆಯಾಗಲಿ ಅನಂತ್ ಪತ್ನಿ ತೇಜಸ್ವಿನಿಯಾಗಲಿ ಯಾವುದನ್ನೂ ಬಿಟ್ಟಿಗೆ ಮಾಡುತ್ತಿಲ್ಲ, ಅಂದಮೇಲೆ ಪಾಲಿಕೆ ಸಮುದಾಯ ಭವನವನ್ನೇಕೆ ಬಿಟ್ಟುಕೊಡಬೇಕು?

ಬಸವನಗುಡಿ ಸುತ್ತಮುತ್ತಲ ನಾಗರಿಕರಿಗೆ ಈಗ ಮತ್ತೊಂದು ಅನಾಹುತಕಾರಿ ಸುದ್ದಿ ಕಾದಿದೆ. ಅದು ಕೆಂಪಾಂಬುದಿ ಕೆರೆ ಪ್ರದೇಶದಲ್ಲಿದ್ದ ಪಾಲಿಕೆ ಹೆಣ್ಣುಮಕ್ಕಳ ಶಾಲೆಯನ್ನು ತೆರವು ಗೊಳಿಸಿ ಇಡೀ ಶಾಲಾ ಕಟ್ಟಡವನ್ನು ಆರೆಸ್ಸೆಸ್‌ನ ಮತ್ತೊಂದು ಅಂಗಸಂಸ್ಥೆಯಾದ ಸೇವಾಭಾರತಿ ಟ್ರಸ್ಟ್‌ಗೆ ವಹಿಸುವ ಪಾಲಿಕೆ ನಿರ್ಣಯ. ಇಲ್ಲಿರುವ ಹೆಣ್ಣುಮಕ್ಕಳ ಪ್ರೌಢಶಾಲೆಯನ್ನು ಕೆಂಪೇಗೌಡನಗರದ ಪಾಲಿಕೆ ಗಂಡುಮಕ್ಕಳ ಪ್ರೌಢಶಾಲೆಗೆ ವಿಲೀನಗೊಳಿಸಿ ಅದ[...] ಸೇವಾಭಾರತಿ ಟ್ರಸ್ಟ್‌ನ ಕೋಮು ದುರುದ್ದೇಶಗಳಿಗೆ ಬಳಸುವಂತೆ ಎ[...] ವಿಷಾರ್ಡುಗಳನ್ನೂ ಆರೆಸ್ಸೆಸ್ ಮಾಡಿಕೊಂಡಿದೆ. ಈ ಸಂಬಂಧ ನಗರ ಯೋ[...] ಸ್ಥಾಯಿ ಸಮಿತಿ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ಅನುಮೋದನೆಯ[...] ಮುಗಿದಿದೆ. ಉಳಿದಿರುವುದು ಪಾ[...] ಸಭೆಯ ನಿರ್ಣಯ ಮಾತ್ರ.

ಇದಲ್ಲದೆ ಶಂಕರಪುರದ ಮಾಸ್ತಿ ರ[...] ಮಂದಿರ ಮೇಲೂ ಆರೆಸ್ಸೆಸ್ ಕಣ್ಣುಬಿದ್ದಿ[...] ಕೇವಲ ಸಾಂಸ್ಕೃತಿಕ ಚಟುವಟಿಕೆಗಳಿಗ[...] ಮೀಸಲಾಗಿದ್ದ ಮಾಸ್ತಿ ರಂಗಮಂದಿರವ[...] ಬಿಜೆಪಿ ಅಧಿಕಾರಕ್ಕೆ ಬಂದಿದ್ದೇ ತ[...] ಮಾರ್ವಾಡಿಗಳ ಮದುವೆ, ತಿಥಿಗಳಿಗೆಂ[...] ಬಾಡಿಗೆಗೆ ಕೊಡಲಾರಂಭಿಸಿದರು. ಅ[...] ದನ್ನು ಶಂಕರಪುರದ ಮಂಡಳ ಬಿಜೆಪಿ ಅ[...] ಛಾಯಾಪತಿ ಎಂಬಾತ ಆಕ್ರಮಿಸಿಕೊ[...] ದ್ದಾನೆ. ಇದನ್ನು ಆತನೇ ಅಧ್ಯಕ್ಷನಾಗಿರು[...] ರಾಮಸೇವಾ ಮಂಡಳಿಗೆ ಗುತ್ತಿಗೆ ಪಡೆದು ಅಲ್ಲಿ ಪ್ರತಿನಿತ್ಯ ಭಜನೆ-ಪೂಜೆ ಶು[...] ಹಚ್ಚಿಕೊಳ್ಳುವುದು ಆರೆಸ್ಸೆಸ್‌ನ ಮತ್ತೊಂದು ಷಡ್ಯಂತ್ರ.

ಇನ್ನು ಬಿಜೆಪಿ ನಾಯಕರ ರೊಕ್ಕದ ಖಯಾಲಿಗೂ ಪಾಲಿಕೆ [...] ಬಳಕೆಯಾಗದಿದ್ದರೆ ಹೇಗೆ? ಇದಕ್ಕೊಂದು ಬಲಿಯಾದದ್ದು ಚನ್ನಮ್ಮನಕೆರೆ ಪಾಲಿಕೆ ವಾರ್ಡ್ ಕಚೇರಿ. ಇದರ ಎದುರೇ ಪೀಇಎಸ್ ಕಾಲೇಜು ಸಮೂಹ[...] ಅಧಿಪತಿ ದೊರೆಸ್ವಾಮಿ ನಾಯ್ಡುನ ಪತ್ನಿ ನಡೆಸುವ ASS[...] ಎಂಬ ಕಾನ್ವೆಂಟಿದೆ. ಈ ಕಾನ್ವೆಂಟಿಗೆ ರೊಕ್ಕದ ಹೊಳೆ ಹರಿಸಬೇಕ[...] ಅದಕ್ಕೆಂದು ಎದುರಿಗಿರುವ ಪಾಲಿಕೆ ವಾರ್ಡ್‌ನ ಕಚೇರಿಯ[...] ಗುತ್ತಿಗೆಗೆ ಪಡೆದು ಅಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಂ[...] ಪೀಇಎಸ್ ಧಣಿಯ ಕಾನ್ವೆಂಟಿಗೆ ಸಿಕ್ಕಾಪಟ್ಟೆ ಡೊನೇಷ[...] ಹರಿಯುತ್ತದೆ. ಚನ್ನಮ್ಮನಕೆರೆ ಪಾಲಿಕೆ ಆಸ್ತಿಯನ್ನು ಪೀಇ[...] ಧಣಿಯ ಕಾನ್ವೆಂಟಿಗೆ ವಹಿಸುವ ಎಲ್ಲಾ ತಯಾರಿಯೂ ಭರದಿ[...] ಸಾಗಿದೆ. ಜನ ಬಿಜೆಪಿಗೆ ಓಟು ಕೊಟ್ಟು ಪಾಲಿಕೆಯನ್ನೊಪ್ಪಿಸಿ[...] ಇಂಥ ಅನಾಹುತಕ್ಕಾ? ಆರೆಸ್ಸೆಸ್-ಬಿಜೆಪಿ ಭೂದಾಹರ[...] ಬೆಂಗಳೂರಿಗೆ ಉಳಿಗಾಲವುಂಟಾ?




ಪೀಇ[...] [...]ಸ್ವಾಮಿ

ವಿಶ್ವ ಕನ್ನಡ ಸಮ್ಮೇಳನ ಯೂರೋಪ್ -2011

ಕನ್ನಡ ಸಮ್ಮೇಳನದ ಹೆಸರಿನಲ್ಲಿ ಕಾಸು ಗೆಬರಲು ಅನಿವಾಸಿ ಚೆಡ್ಡಿಗಳ ಸಂಚು !



ಕನ್ನಡ ನೆಲದಲ್ಲಿ ಹುಟ್ಟಿ ಬೆಳೆದು ಈಗ ಲಂಡನ್‌ನಲ್ಲಿ ...ಸಿರುವ ಒಂದಿಷ್ಟು ಚೆಡ್ಡಿ ಎನ್ನಾರೈಗಳು ಮತ್ತು ಸಮಾಜ ...ವೆಯ ಸೋಗಿನಲ್ಲಿ ಸದಾ ಫಾರಿನ್ ಟ್ರಿಪ್ ಮಾಡಿಕೊಂಡಿ...ವ ಮಹಿಳೆಯೊಬ್ಬಳು ಜೊತೆಗೂಡಿ ರಾಜ್ಯ ಸರ್ಕಾರದ ...ಕ್ಕಸಕ್ಕೆ ಕೈ ಹಾಕಿರುವ ಗಂಡಾಂತರಕಾರಿ ಯೋಜನೆ ...ಂದು ಬೆಳಕಿಗೆ ಬಂದಿದೆ.


ಎನ್ನಾರೈಗಳ ಜೊತೆ ಪೋಸು ಕೊಡುತ್ತಿರುವ ಯಡ್ಡಿ....

ಈಗಷ್ಟೇ ಜೈಲುಪಾಲಾಗಿರುವ ಮಾಜಿ ಮುಖ್ಯಮಂತ್ರಿ ...ಎಸ್.ಯಡಿಯೂರಪ್ಪನ ಮಗ ಬಿ.ವೈ. ರಾಘವೇಂದ್ರನ ...ಸ್ಕೂಲ್ ಕ್ಲಾಸ್‌ಮೇಟ್ ಕುಮಾರ್ ಎಂಬಾತ ಈಗ ಲಂಡನ್ ...ಲ್ಲಿ ವಾಸವಿದ್ದಾನೆ. ಅಲ್ಲಿರುವ ಅಷ್ಟಿಷ್ಟು ಅನಿವಾಸಿ ಕನ್ನಡಿಗ ...ಎಲ್ಲಾ ಸೇರಿಸಿ 'ಸಂಗಮ' ಎಂಬ ಸಂಸ್ಥೆಯೊಂದನ್ನು ಈತ ...ಸುತ್ತಿದ್ದಾನೆ. ಯಡ್ಡಿ ಮಗ ರಾಘವೇಂದ್ರ ತನ್ನ ಸ್ನೇಹಿತ ...ನ್ನೋದನ್ನೇ ಕಾರಣವನ್ನಾಗಿಟ್ಟುಕೊಂಡು ಈ ಕುಮಾರ್ ...ದ ವರ್ಷದಿಂದಲೇ ಲಂಡನ್‌ನಲ್ಲಿ ಕನ್ನಡ ಸಮಾವೇಶ ...ಂದನ್ನು ಆಯೋಜಿಸಲು ಪ್ಲಾನು ಮಾಡಿದ್ದ. ಇದಕ್ಕೆ ಕರಾ...ಯ ಒಂದಿಷ್ಟು ಚೆಡ್ಡಿಗಳೂ ಕೈಜೋಡಿಸಿದ್ದರು. ಸಂಪತ್ ...ಮಾರ್ ಯಾದವಾಡ ಮತ್ತು ಶರತ್ ಅಯ್ಯರ್ ಎಂಬ ...ಬ್ಬರು ಕನ್ನಡ 'ರಕ್ಷಕರು' ಹಲವು ಚೆಡ್ಡಿ ಮಂತ್ರಿಗಳನ್ನು


ಪೋಸುಕೊಡುತ್ತಿರುವ ಮಂತ್ರಿಗಳು ಹಾಗೂ ರೂಪಾ ಅಯ್ಯರ್

...ಷಿದು ಸರ್ಕಾರಿ ಸ್ವಾಮ್ಯದ ಸಂಘ ಸಂಸ್ಥೆಗಳಿಂದ ಫಂಡೆತ್ತಲು ...ಥ ಮಾಡಿದರು. ಕನ್ನಡ ಪ್ರಾಧ್ಯಾಪಕನಾಗಿದ್ದು ಸದ್ಯ ...ನಿವೃತ್ತಿಹೊಂದಿರುವ ಕಾಸರಗೋಡಿನ ಕುಂಟಿಕಾನಮಠ ...ಬಾಲಕೃಷ್ಣ ಭಟ್ ಎಂಬ ಮುದಿ ಚೆಡ್ಡಿಯೇ ಸಮ್ಮೇಳನದ ...ಧ್ಯಕ್ಷ ಎಂದೂ ಘೋಷಿಸಿದರು.

ಈ ಮಧ್ಯೆ "ನಾನು ಸಮಾಜ ಸೇವೆ ಮಾಡ್ತಿದೀನಿ. ಏಡ್ಸ್ ...ಪೀಡಿತರ ದನಿಯಾಗಿ ಸಿನಿಮಾ ಮಾಡಿದೀನಿ" ಎಂದೆಲ್ಲ ...ಏನೇನೋ ಮಾತಾಡುತ್ತಾ ಥಳಾಪಳಾ ವೇಶ ತೊಟ್ಟು ತಿರುಗಾಡುವ ರೂಪಾ ಅಯ್ಯರ್ ಎಂಬ ಭರತನಾಟ್ಯ ಕಲಾವಿದೆ, ಕಂ ನಟಿ, ಕಂ ಸಮಾಜ 'ಸೇವಕಿ'ಯನ್ನು ಇಂಗ್ಲೆಂಡಿನ ಕನ್ನಡ ರಕ್ಷಕರು ಈ ಸಮ್ಮೇಳನಕ್ಕೆ ಕರ್ನಾಟಕದ ಪ್ರತಿನಿಧಿಯನ್ನಾಗಿ ನೇಮಿಸಿದರು.

ಗಣಿ ಧೂಳಿನ ರಾಡಿಯಲ್ಲಿ ಬಳ್ಳಾರಿ ಧಣಿಗಳು ಸಿಲುಕದಿದ್ದರೆ, ಲೋಕಾಯುಕ್ತ ವರದಿ ಹೊರಬರದೇ ಇದ್ದರೆ ಈ ಹೊತ್ತಿಗೆ - ಅಂದರೆ ಆಗಸ್ಟ್ 27, 28ಕ್ಕೆ - ಈ ಸಮಾವೇಶ ಲಂಡನ್‌ನಲ್ಲಿ ನಡೆಯಬೇಕಿತ್ತು. ಸ್ವತಃ ಯಡ್ಡಿ "ಎಷ್ಟೇ ಒತ್ತಡವಿದ್ದರೂ ಸರಿ ಲಂಡನ್ ಸಮಾವೇಶಕ್ಕೆ ಹಾಜರಾಗೇ ತೀರುತ್ತೇನೆ" ಎಂದು ಲಂಡನ್ನಿಗರ ತಲೆ ಮೇಲೆ ಆಣೆ ಮಾಡಿದ್ದರು. ಆದರೆ ಕನ್ನಡಾಂಬೆಯ ಆಶೀರ್ವಾದದಿಂದ ಅಂತ ಯಾವ ದುರ್ಘಟನೆಯೂ ನಡೆಯಲಿಲ್ಲ! ಯಡಿಯೂರಪ್ಪ ಲಂಡನ್‌ಗೆ ಹೋಗುತ್ತಿದ್ದರೋ ಬಿಡುತ್ತಿದ್ದರೋ, ಆದರೆ ಸರ್ಕಾರಿ ಬೊಕ್ಕಸದಿಂದ ಬರೋಬ್ಬರಿ ಎರಡು ಕೋಟಿ ರೂಪಾಯಿಗಳ ಗ್ರ್ಯಾಂಟು ಈ ಸಮಾವೇಶಕ್ಕೆ ಹರಿದು ಹೋಗುವುದಂತೂ ತಪ್ಪಿತು.

ಸರ್ಕಾರದ ಖಜಾನೆಯಲ್ಲಿರುವುದು ತನ್ನಪ್ಪನ ಮನೆಯ ದುಡ್ಡು ಎಂದುಕೊಂಡಿದ್ದನೋ ಏನೋ ಯಡ್ಡಿ, ಅದಕ್ಕೆ ಇಂಗ್ಲೆಂಡಿನಲ್ಲಿ ನಡೆಯಬೇಕಿದ್ದ ಕನ್ನಡ ಸಮ್ಮೇಳನಕ್ಕೆ ಎರಡು ಕೋಟಿ ಕೊಡಲು ಮುಂದಾಗಿದ್ದ. ಇನ್ನೇನು ಆ ಹಣ ಮಂಜೂರಾಗಿ ಲಂಡನ್ನಿಗೆ ರವಾನೆಯಾಗಬೇಕು ಅನ್ನುವಷ್ಟರಲ್ಲಿ ಸ್ವತಃ ಯಡ್ಡಿಯೇ ಮುಖ್ಯಮಂತ್ರಿ ಸೀಟಿನಿಂದ ಇಳಿಯಬೇಕಾಗಿ ಬಂದಿದ್ದರಿಂದ ಹಣ ಕೂಡಾ ಅವರ ಕೈ ತಲುಪಲಿಲ್ಲ.

ಆಗಸ್ಟ್ ನಲ್ಲಿ ನಡೆಯಬೇಕಿದ್ದ "ವಿಶ್ವ ಕನ್ನಡ ಸಮ್ಮೇಳನ ಯುರೋಪ್ -2011" ಅಂದುಕೊಂಡ ಡೇಟಿಗೆ ನಡೆಯಲಿಲ್ಲ. ಕಡೆಗೆ ಸೆಪ್ಟೆಂಬರ್ ತಿಂಗಳಲ್ಲಿ ನಡೆಸುತ್ತೇವೆ ಎಂದು ಹೇಳಿದರು.

ಆದರೆ ಕಳೆದ ತಿಂಗಳಿಡೀ ಲೋಕಾಯುಕ್ತ ವರದಿಯ ಸೈಡ್ ಎಫೆಕ್ಟ್‌ನಿಂದ ತತ್ತರಿಸಿದ ಯಡ್ಡಿ ಸಮ್ಮೇಳನವನ್ನು ಅಕ್ಟೋಬರ್ ತಿಂಗಳಿಗೆ ಮುಂದೂಡಿ ಎಂದು ಸೂಚಿಸಿದರಂತೆ. ಹೀಗಾಗಿ ಸತತವಾಗಿ ಎರಡು ಮೂರು ಬಾರಿ ಈ ಸಮಾವೇಶದ ದಿನಾಂಕವನ್ನು ಮುಂದೂಡಿದರು.



ಈಗ ಇದೇ ಸಮಾವೇಶವನ್ನು ಇದೇ ತಿಂಗಳು 22 ಮತ್ತು 23ರಂದು ನಡೆಸಲು ಎಲ್ಲಾ ಸಿದ್ಧತೆಗಳೂ ನಡೆದಿವೆ. ಎರಡು ಕೋಟಿಯಿದ್ದ ರಾಜ್ಯದ ಅನುದಾನ ಈಗ ಎಂಭತ್ತು ಲಕ್ಷಕ್ಕೆ ಇಳಿದಿದೆ. ಈ ಹಣವನ್ನು ಮುಖ್ಯಮಂತ್ರಿ ಸದಾನಂದ ಗೌಡರು ಕೊಡಲು ಧಾರಾಳತನ ತೋರಿದ್ದಾರಾದರೂ, ಬರಗೂರು ರಾಮಚಂದ್ರಪ್ಪ ಸೇರಿದಂತೆ ಅನೇಕ ಕನ್ನಡಪರ ಸಂಘಟನೆಗಳು ಇದರ ವಿರುದ್ಧ ದನಿಯೆತ್ತಿದ್ದಾರೆ. "ಕರ್ನಾಟಕದಲ್ಲೇ ಕನ್ನಡವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವಾಗ, ಶತ ಶತಮಾನಗಳ ಕಾಲ ನಮ್ಮನ್ನು ಆಳಿ, ನಮ್ಮ ನಾಡನ್ನು ಅಳಿವಿನಂಚಿಗೆ ತಳ್ಳಿದವರ ನಾಡಿನಲ್ಲಿ, ಭಾರತದ ಅಮೂಲ್ಯ ಸಂಪತ್ತನ್ನು ದೋಚಿಕೊಂಡು ಪರಾರಿಯಾದವರ ನೆಲದಲ್ಲಿ ಕನ್ನಡ ಧ್ವಜವನ್ನು ನೆಡುವ ಅವಶ್ಯಕತೆಯಿಲ್ಲ" ಎಂದು ರಾಮಚಂದ್ರಪ್ಪನವರು ಪ್ರತಿರೋಧ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ಅನುದಾನ ಇನ್ನೂ ಅವರ ಜೋಳಿಗೆ ಸೇರಿಲ್ಲ, ಆದರೆ ಸೋಮಶೇಖರ ರೆಡ್ಡಿ ಕೆ.ಎಂ.ಎಫ್‌ನಿಂದ ಮತ್ತು ರೇಣುಕಾಚಾರ್ಯ ಅಬಕಾರಿ ಇಲಾಖೆಯಿಂದ ಧನಸಹಾಯ ಮಾಡಿದ್ದಾರಂತೆ. ಅದರಲ್ಲೂ ಕಿಸ್ಸಿಂಗ್ ಖ್ಯಾತಿಯ ರೇಣುಕಾನಂತೂ ತನ್ನ ಕೃಪಾಪೋಷಿತ ಹೆಂಡದ ದೊರೆಗಳಿಂದ ಕೋಟಿಗಟ್ಟಲೆ ಹಣವನ್ನು ಈ ಸಮಾವೇಶಕ್ಕೆ ತಲುಪಿಸುವ ವ್ಯವಸ್ಥೆ ಮಾಡಿದ್ದಾನಂತೆ. ಜೊತೆಗೆ ಎಂಎಸ್‌ಐಎಲ್, ಕೆಎಸ್‌ಐಸಿ, ಮೈಸೂರು ಸೋಪ್ಸ್ ಮತ್ತು ಸಹಕಾರ ಇಲಾಖೆಯ ಪ್ರಾಯೋಜಕತ್ವವೂ ಪ್ರಾಪ್ತಿಯಾಗಿದೆ.

ಈ ಕುಮಾರ್ ಮತ್ತು ರೂಪಾ ಅಯ್ಯರ್‌ರಂಥ ಡಿಂಗೋಗಳಿಗೆ ನಿಜಕ್ಕೂ ಕನ್ನಡ, ಕರ್ನಾಟಕದ ಬಗ್ಗೆ ಕಾಳಜಿಯಿದ್ದಿದ್ದರೆ ಅವರು ಇಂಗ್ಲೆಂಡಿನಲ್ಲಿ ದುಡಿದಿರುವ ಹಣವನ್ನು ಇಲ್ಲಿಗೆ ತಂದು ಕರ್ನಾಟಕದಲ್ಲೇ ಒಂದು ಸಮಾವೇಶ ನಡೆಸಬಹುದಿತ್ತು, ಅಥವಾ ಸಾಲಬಾಧೆಗೆ ಸಿಲುಕಿ ಜೀವ ಬಿಡುತ್ತಿರುವ ರೈತರಿಗೋ, ನೇಕಾರರ ಮಕ್ಕಳ ಬದುಕಿಗೋ ನೆರವಾಗಬಹುದಿತ್ತು. ಆದರೆ ಅಂತಹ ಯಾವ ಜನಪರ ಕೆಲಸಗಳನ್ನೂ ಮಾಡದೆ, ಸಮ್ಮೇಳನದ ನೆಪದಲ್ಲಿ ಕರ್ನಾಟಕ ರಾಜ್ಯದ ಬೊಕ್ಕಸದ ಹಣಕ್ಕೆ ಕೈಹಾಕಿದ್ದು ನಾಚಿಕೆಗೇಡಿನ ವಿಚಾರವಲ್ಲವೇ?

ರಾಜ್ ಕುಟುಂಬವೂ ಒಲ್ಲೆ ಎನ್ನುತ್ತಿದೆ...

ಡಾ.ರಾಜ್‌ಕುಮಾರ್ ಅವರ ಕುಟುಂಬವನ್ನು ಲಂಡನ್ ಸಮಾವೇಶಕ್ಕೆ ಕರೆದೊಯ್ದರೆ ತಮ್ಮ ಕಮರ್ಷಿಯಲ್ ವ್ಯಾಲ್ಯೂ ಹೆಚ್ಚಾಗುತ್ತದೆ ಅನ್ನೋದು ಈ ಎನ್ನಾರೈಗಳಿಗೆ ಸ್ಪಷ್ಟವಾಗಿ ಗೊತ್ತಿತ್ತು. ಹೀಗಾಗಿ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್‌ರನ್ನು ತಮ್ಮ ಹೆಂಡತಿ ಮಕ್ಕಳ ಸಮೇತ ಕರೆದೊಯ್ಯಲು ರೂಪಾ ಅಯ್ಯರ್ ಸಕಲ ರೀತಿಯ ವ್ಯವಸ್ಥೆಗಳನ್ನು ಮಾಡಿದ್ದಳು. ರಾಜ್ ಕುಟುಂಬದವರು ಕೂಡಾ ಇದಕ್ಕೆ ಸಮ್ಮತಿಸಿದ್ದರು. ಆದರೆ ಕನ್ನಡದ ಚಿಂತಕರು, ಹೋರಾಟಗಾರರ ಪ್ರತಿರೋಧ ಮೆಲ್ಲಗೆ ಕಾವು ಪಡೆಯುತ್ತಿರುವ ವಿಚಾರ ಗೊತ್ತಾಗಿದ್ದೇ ಸಮಾವೇಶಕ್ಕೆ ತೆರಳಲು ರಾಜ್ ಕುಟುಂಬ ಹಿಂದೇಟು ಹಾಕುತ್ತಿದೆ.

• ಅರುಣ್.ಜಿ

...ನನಿಗೆ ಲಿಂಗಾಯಿತ್ರ ಓಟೇ ಬೇಡ ಕಂಡ್ರೀ


ಶಿವಮೊಗ್ಗದಲ್ಲಿ ಸಣ್ಣಪುಟ್ಟ ಕೇಸುಗಳೊಂದಿಗೆ ಕಾಲ ಹಾಕುತ್ತಿದ್ದ ಸಿರಾಜ್ ...ಮತ್ತು ಬಾಲರಾಜ್ ಎಂಬ ಕರಟಕ ದಮನಕರನ್ನು ಕರೆಸಿಕೊಂಡ ದೇವು ಫ್ಯಾಮಿಲಿ, ...ಎಡೂರಪ್ಪನ ಡಿನೋಟಿಫಿಕೇಷನ್ ದಾಖಲೆ ಕೊಟ್ಟು "ನೀವೇನೂ ಹೆದರಬೇಡಿ. ...ಮ್ಮ ಹೆಜ್ಜೆಗೆ ಹೆಜ್ಜೆ, ಹೆಗಲಿಗೆ ಹೆಗಲಾಗಿ ನಮ್ಮವರಿದ್ದಾರೆ" ಎಂದು ಹುರಿ...ದುಂಬಿಸಿದ ಪರಿಣಾಮವಾಗಿ–ಕುರುಡನ ಏಟು ತರುಡಿಗೆ ಬಿದ್ದಂತೆ ಯಡ್ಡಿ ಜೈಲು ...ಪಾಲಾದರಲ್ಲಾ! ಇದರಿಂದ ಶಾಕ್ ಅನುಭವಿಸಿದ ಕುಮಾರಸ್ವಾಮಿ ಎಡೂರಪ್ಪನನ್ನ ...ಭೇಟಿಯಾಗಿ "ಎಡೂರಪ್ಪನವರೇ, ಇದರಲ್ಲಿ ನಮ್ಮ ತಪ್ಪೇನೂ ಇಲ್ಲ, ರಾಜ...ಕಾರಣದಲ್ಲಿ ಇದೆಲ್ಲ ಮಾಮೂಲು. ನಾನೂ ಕಮ್ಯುನಿಟಿ ಲೀಡರ್, ನೀವೂ ...ಕಮ್ಯುನಿಟಿ ಲೀಡರ್. ಮುಂದೆ ನಾವಿಬ್ಬರೂ ಒಂದಾದರೆ ಕಾಂಗ್ರೆಸ್ಸಿಗೆ ಮತ್ತು ...ಬಿಜೆಪಿಗೆ ತಕ್ಕ ಪಾಠ ಕಲಿಸಿ, ಗೆದ್ದು ಬಂದು, ನೀವು ಎಂದಿನಂತೆ ಉಪಮುಖ್ಯಮಂತ್ರಿ, ...ನಾನು ಮುಖ್ಯಮಂತ್ರಿಯಾಗಿ ಮೆರೆಯೋಣ" ಎಂದರಂತಲ್ಲಾ, ಥೂತ್ತೇರಿ!

* * * * * *

ನೋಡು ನೋಡುತ್ತಿದ್ದಂತೆ ಜೈಲುಪಾಲಾದ ಎಡೂರಪ್ಪ ಈ ಸಂಬಂಧವಾಗಿ ...ಮ್ಮ ನಿಜವಾದ ವೈರಿಗಳ್ಯಾರು ಎಂದು ಯೋಚಿಸುವಾಗ ಮೊದಲ ಹೆಸರು ...ಅನಂತಕುಮಾರ್, ಎರಡನೆಯದು ಈಶ್ವರಪ್ಪ ಮೂರನೆಯದು ಮಾಧ್ಯಮ ಎಂದು ...ಹೊಳೆದುಬಿಟ್ಟಿತಂತಲ್ಲಾ, ಆ ಕೂಡಲೇ ಎತ್ತಿನಂತೆ ಮುಸುಗರಿಯತೊಡಗಿದ ...ಎಡೂರಪ್ಪ, ಸೋಮಣ್ಣ ಎಂಬ ಜನಾಂಗದ ಪರಿಚಾರಕನನ್ನು ಕರೆದು "ಮಾಧ್ಯಮ...ದವರಿಗೆ ಸರಿಯಾಗಿ ಬುದ್ಧಿ ಹೇಳು" ಎಂದು ಕಳಿಸಿಕೊಟ್ಟರಂತಲ್ಲಾ, ನಂತರ ಯಡ್ಡಿ...ಯಿಂದಲೇ ಕಳೆದ ಮೂರು ವರ್ಷದಿಂದ ಕಾಲಯಾಪನೆ ಮಾಡುತ್ತ ಭೂಮಿಗೆ ...ಭಾರವಾಗಿ ಬದುಕುತ್ತಿರುವ ಸ್ವಾಮಿಗಳ ಹಿಂಡು ಸಾಲುಸಾಲಾಗಿ ಹೋಗಿ, ...ಎಡೂರಪ್ಪನಿಗೆ ಧೈರ್ಯ ಹೇಳಿ "ನೀವು ಯಾವ ತಪ್ಪನ್ನು ಮಾಡಿಲ್ಲ, ನಿಮಗೇನೂ ...ಆಗಲ್ಲ, ಹೊರಬಂದು ಎಂದಿನ ನಿಮ್ಮ ಕಾಯಕವನ್ನು ಕೈಗೊಳ್ಳಿ" ಎಂದು ...ಆಶೀರ್ವದಿಸಿ ಬಂದವಂತಲ್ಲಾ, ಈ ಪೈಕಿ ಸುತ್ತೂರು ಮಠದ ಸ್ವಾಮಿ "ಈ ಜೈಲನ್ನೇ ...ಶಿವಾಲಯವೆಂದು ಭಾವಿಸಿಕೊಂಡು, ಇತರ ಖೈದಿಗಳನ್ನ ಶಿವಗಣವೆಂದು ತಿಳಿದು, ...ಜೈಲಿನ ಊಟವನ್ನೇ ಶಿವಪ್ರಸಾದವೆಂದು ಬಗೆದರೆ ನಿಮಗೆಂದೂ ಕೇಡಾಗದು" ...ಎಂದು ಆಶೀರ್ವದಿಸಿ ನಗುನಗುತ್ತಲೇ ಕಾರತ್ತಿ ಹೋದರಂತಲ್ಲಾ, ಥೂತ್ತೇರಿ

* * * * * *

ಎಡೂರಪ್ಪನ ಕಡೆಯಿಂದ ಸೈಟು ಪಡೆದು, ಹಣ ಪಡೆದು ಹಲವರು ...ನೆಯನ್ನು ಪಡೆದಿರುವ ಮಾಧ್ಯಮದವರು ಏನು ಬರೆಯಬೇಕಾಗಿತ್ತೆಂದರೆ, "ಕರ್ನಾಟಕ ಕಂಡ ಧೀಮಂತ, ಕೊಡುಗೈ ದಾನಿ, ಶ್ರೇಷ್ಠ ಆಡಳಿತಗಾರ, ...ಎಡಿಯೂರಪ್ಪನವರು ತಮ್ಮ ವಕೀಲ ಮಿತ್ರರನ್ನ ಕಾಣಲೋಸ್ಕರ ಕೋರ್ಟಿಗೆ ...ಹೋಗಿದ್ದರು. ಅಲ್ಲಿ ಪರಪ್ಪನ ಅಗ್ರಹಾರದಲ್ಲಿದ್ದ ತಮ್ಮ ಸನ್ಮಿತ್ರರಾದ ಕಟ್ಟಾ ಮತ್ತವನ ಮಗ ಸುಬ್ಬಾನನ್ನ ಭೇಟಿಯಾಗಲು ಜೈಲಿಗೆ ಹೋಗಿದ್ದರು. ಅಲ್ಲಿಂದ ದೇವೇಗೌಡರ ಕುಟುಂಬದ ಪ್ರಖ್ಯಾತ ವೈದ್ಯರನ್ನು ಖುದ್ದು ಕಾಣಲು ಜಯದೇವ ಆಸ್ಪತ್ರೆಗೆ ಹೋಗಿದ್ದರು. ಈ ಕಾರಣವನ್ನೇ ಅಪಾರ್ಥ ಮಾಡಿಕೊಂಡ ನಾಡಿನ ರಾಜಕಾರಣಿಗಳು, ಕೆಲಸವಿಲ್ಲದ ಬಟ್ಟಿಕೂಳಿನ ಸ್ವಾಮಿಗಳು, ಎಡೂರಪ್ಪನನ್ನ ಕಾಣಲು ದೌಡಾಯಿಸಿದ್ದು ಅಕ್ಷಮ್ಯ. ಈ ಅನಿರೀಕ್ಷಿತ ಜನಸಾಗರ ನೋಡಿದ ಎಡೂರಪ್ಪ ಸಂತೋಷದಿಂದ ಕಂಗಾಲಾಗಿ, ವಿಕ್ಟೋರಿಯಾ ಸೇರಿಕೊಳ್ಳುವಂತಾಯ್ತು. ಈಗಾಗಲೇ ಜೈಲುಪಾಲಾಗಿ ಮುಖಮುಚ್ಚಿಕೊಂಡು ತಿರುಗಾಡುತ್ತಿರುವ ಕೃಷ್ಣಯ್ಯಶೆಟ್ಟಿ ಎಂಬ ನೆಲಗುಮ್ಮ ಹೆಗ್ಗಣವನ್ನು ಪುನಃ ಭೇಟಿ ಮಾಡುವ ಸಲುವಾಗಿ ಎಡೂರಪ್ಪನವರು ಪರಪ್ಪನ ಅಗ್ರಹಾರದ ಜೈಲಿಗೆ ಭೇಟಿಕೊಡಲಿದ್ದಾರೆಯೇ ಹೊರತು ಎಡೂರಪ್ಪನಿಗೂ, ಜೈಲಿಗೂ, ಹೃದ್ರೋಗದ ದವಾಖಾನೆಗೂ, ವಿಕ್ಟೋರಿಯಾ ಎಂಬ ನರಕಕ್ಕೂ ಯಾವ ಸಂಬಂಧವೂ ಇಲ್ಲ" ಎಂದು ಬರೆಯಬೇಕಾಗಿತ್ತಲ್ಲವೇ, ಥೂತ್ತೇರಿ!!



* * * * * *

ಈ ಸಮಯದಲ್ಲಿ ಎಡೂರಪ್ಪನ ಎರಡನೇ ವೈರಿಯಾದ ಈಶ್ವರಪ್ಪನನ್ನ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.

"ಹಲೋ ನಮಸ್ಕಾರ, ನಾನು ಯಾಹು ಸಾರ್."

"ಏನ್ರಿ ಯಾಹು ಅವ್ರೆ, ಎಡೂರಪ್ಪ ಜೈಲಿಗೋದ್ರಲ್ಲ ಆ ಬಗ್ಗೆ ಕೇಳಕ್ಕೆ ಫೋನ್ ಮಾಡಿದ್ದೀರಿ ಅಲವೇನ್ರಿ?"

"ಹಂಡ್ರೆಡ್ ಪರಸೆಂಟ್ ಕರಟ್ಟು ಸಾರ್. ನೀವು ಈ ತರ ಗೆಸ್ ಮಾಡಿ ಎಡೂರಪ್ಪನ ವಿಷಯದಲ್ಲೂ ಸಕ್ಸಸ್ ಆದ್ರಿ"

"ಏನು ಗೆಸ್ ಮಾಡಿದೇರಿ?"

"ಎಡೂರಪ್ಪ ಜೈಲಿಗೋಗೋ ಹಿಂದಿನ ದಿನ ಅವರ ಕಾಲಿಗೆ ಬಿದ್ರಲ್ಲಾ, ಮೊದಲೇ ಗೆಸ್ ಮಾಡಿದ್ರಲ್ಲವಾ ಸಾರ್?"

"ಹೌದು ಕಂಡ್ರಿ. ನಾನು ಸುಮಾರು ಜನ ಬಿಜೆಪಿ ವಕೀಲರನ್ನು ಕೇಳಿದ್ದೆ. ಗ್ಯಾರಂಟಿ ಒಳಗೋಯ್ತರೆ ಅಂದಿದ್ರು. ಅದ್ಕೆ ಕಾಲಿಗೆ ಬಿದ್ದು ಕಳಿಸಿಕೊಟ್ಟೆ."

"ಒಂದು ರಾಷ್ಟ್ರೀಯ ಪಕ್ಷದ ರಾಜ್ಯಾಧ್ಯಕ್ಷರಾದ ನೀವು ಕ್ರಿಮಿನಲ್ ಕೇಸಿನ ವ್ಯಕ್ತಿ ಕಾಲಿಗೆ ಬಿದ್ದಿದ್ದು ಸರಿನಾ?"

"ಇದು ಸರಿ ತಪ್ಪು ಅನ್ನಕ್ಕೆ ಬರದಿಲ್ಲ ಕಂಡ್ರಿ. ನಾನು ಸ್ವಲ್ಪ ಬಾವುಕ ವ್ಯಕ್ತಿ ಕಂಡ್ರಿ."

"ನಿಜ ಸಾರ್. ಅದಕ್ಕೆ ಹೇರಳವಾದ ಸಾಕ್ಷಿಗಳು ನಮ್ಮತ್ರ ಅವೆ. ಗೋಮಾಂಸ ತಿನ್ನೋರ್ನ ಹಿಡಕೊಂಡು ಕೈಕಡಿರಿ, ನಾಲಗೆ ಕತ್ತರಿಸಿ, ಗಂಟ್ಲು ಸೀಳಿ ಅಂತಿರಿ. ಎಡೂರಪ್ಪ ತಂದೆ ಸಮಾನ ಅಂತಿರಿ, ಪೇಜಾವರನೇ ಭಕ್ತ ಕುಚೇಲ ಅಂತಿರಿ. ಮೆಚ್ಚಿನ ರಾಜಕಾರಣಿ ದೇವೇಗೌಡ ಅಂತಿರಿ. ಈ ತರ ನಿಮ್ಮ ಭಾವುಕತೆಗೆ ಸಿಕ್ಕಿದ ಪದಾರ್ಥಗಳು ತತ್ತರಿಸಿಹೋಗಿರದನ್ನ ನೋಡಿದ್ದೀವಿ."

"ಆವತ್ತೂ ಅಂಗೆ ಆಯ್ತು ಕಂಡ್ರಿ. ಶಿವಮೊಗ್ಗದ ಫಂಕ್ಷನ್ನಲ್ಲಿ ಎಡೂರಪ್ಪನ್ನ ನೋಡಿದೆ. ಪಾಪ ಇಂತ ವ್ಯಕ್ತಿ ನಾಳೆ ಜೈಲಿಗೋಗ್ತನಲ್ಲಾ ಅನ್ನಿಸ್ತು, ಕೂಡ್ಲೆ ಕಾಲಿಗೆ ಬಿದ್ದೆ. ಇದು ತಪ್ಪೇನ್ರಿ?"

"ದೇವರಾಣೆ ತಪ್ಪಲ್ಲ ಸಾರ್. ಒಬ್ಬ ಕುರುಬ ಅನಾಮತ್ತು ಸಾರ್ವಜನಿಕವಾಗಿ ಲಿಂಗಾಯತನ ಕಾಲಿಗೆ ಬೀಳದು ತಪ್ಪಲ್ಲ. ಅದೇ ಯಡ್ಡಿ ನಿಮ್ಮ ಕಾಲಿಗೆ ಬೀಳಬಾರ್ದು."

"ನಮ್ಮ ಪೇಜಾವರ ಹೇಳದು ಅದನ್ನೇ ಕಂಡ್ರಿ. ಕೆಳಜಾತಿ ಕಾಲಿಗೆ ಬೀಳಬೇಡಿ ಅಂತರೆ."

"ಅಂತೂ ನಿಮ್ಮ ಪಾರ್ಟಿಯ ಯಾವುದೇ ವಿಷಯದಲ್ಲೂ ಪೇಜಾವರ ಇರತರೆ."

"ಇರಲೇಬೇಕಲ್ಲ, ನಮಿಗೆ ಪೇಜಾವರ, ಜೆಡಿಎಸ್‌ಗೆ ಚುಂಚನಗಿರಿ. ಈ ತರ ಪಾರ್ಟಿಗೊಬ್ಬರು ಸ್ವಾಮಿ ಇರಬೇಕು."

"ಪಾಪ ಆ ಕಾಂಗ್ರೆಸ್ಸಿಗೆ ನೋಡಿ ಯಾರು ಇಲ್ಲ."

"ಅವ್ರುರಿಗೂ ಇದಾರೆ ಕಂಡ್ರಿ, ಬಹಿರಂಗವಾಗಿ ಹೇಳಿಕಳಲ್ಲ."

"ಎಡೂರಪ್ಪನ್ನ ನೋಡಕ್ಕೋಗಿದ್ರಂತೆ. ಏನಂದ್ರು ಸಾರ್?"

"ಆ ಮನುಸನ ಅಹಂಕಾರ ಇನ್ನೂ ಇಳದಿಲ್ಲ ಕಂಡ್ರಿ. ನನ್ನನ್ನ ನೋಡಿದ ಕೂಡ್ಲೆ ಅನಂತಕುಮಾರನ್ನ ಬೈತನ್ನಲ್ರಿ. ಅದು ನನಿಗೆ ಬೋದಂಗೆ ತಾನೆ? ನಾನು ಶಿವಮೊಗ್ಗದಲ್ಲಿ ಲಿಂಗಾಯಿತ್ರ ಓಟ ನಚಿಗಂಡಿದ್ದಿನಿ. ಅದ್ಕೆ ತಡಕಂಡು ಸುಮ್ಮನಾದೆ. ಇಲ್ಲ ಅಂದ್ರೆ ಸರಿಯಾಗಿ ಹೇಳಿ ಬತ್ತಿದ್ದೆ."

"ಆದ್ರೂ ಈ ಸತಿ ಲಿಂಗಾಯಿತ್ರು ನಿಮಿಗೋಟಾಕದಿಲ್ಲ."

"ಬೇಡ ಬಿಡ್ರಿ. ಕಾಂಗ್ರೆಸ್ಸಿಂದ್ಲೆ ವೀಕ್ ಕ್ಯಾಂಡೇಟ್ ಹಾಕಿಸಿಕೊಳ್ತಿನಿ. ಕಳದ ಸತಿ ಅಂಗೆ ಮಾಡಿ ಸಕ್ಸಸ್ ಆದೆ. ಈ ಸರ್ತಿನೂ ಅಂಗೆ ಮಾಡ್ತಿನಿ. ನನಿಗೆ ಲಿಂಗಾಯಿತ್ರ ಓಟೇ ಬ್ಯಾಡ!"

"ಥೂತ್ತೇರಿ!!"



ಬಸವರಾಜನ್ ವಿರುದ್ಧ ಶರಣರ FIR!



• ಪಾರ್ವತೀಶ

ಚಿತ್ರದುರ್ಗದ ಮುರುಘಾಮಠದ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ.ಬಸವರಾಜನ್ ಮಠದಿಂದ ಉಚ್ಚಾಟನೆಗೊಂಡು ನಾಲ್ಕೈದು ವರ್ಷವಾಗುತ್ತಿದೆ.

ಇದಕ್ಕೆ ಇದ್ದ ನೈಜ ಕಾರಣಗಳೇನೆಂಬುದು ಜನಸಾಮಾನ್ಯರಿಗಾಗಲಿ ಅಥವಾ ಮಠದ ಭಕ್ತರಿಗಾಗಲಿ ಪೂರ್ತಿ ತಿಳಿದಿರಲಿಲ್ಲ. ಮಠ ಬಿಟ್ಟು ಹೊರಬಂದ ನಂತರ ಬಸವರಾಜನ್ ಬೀದಿ ಜಗಳದ ಲೆವೆಲ್‌ನಲ್ಲಿ ಅನೇಕ ಬಾರಿ ನಡೆದುಕೊಂಡರೂ ಶರಣರು ಅದನ್ನೆಲ್ಲ Ignore ಮಾಡಿ ಸುಮ್ಮನಿದ್ದರು. ಹೊರನೋಟಕ್ಕೆ ಇವರಿಬ್ಬರ ನಡುವೆ ಅಪಾರ ವಿಶ್ವಾಸ, ನಂಬಿಕೆ ಹಾಗೂ ಅವಲಂಬನೆ ಇದ್ದಂತೆ ಕಾಣುತ್ತಿತ್ತೇನೋ ನಿಜ. ಆದರೆ ಅದು ಹಾಗಿರದೆ ಬಸವರಾಜನ್ ಇಡೀ ಮಠ ಹಾಗೂ ಮಠದ ಮುಖ್ಯಸ್ಥರಾದ ಗುರುಗಳನ್ನು ಹೇಗೆ ತನ್ನ ಕಂಟ್ರೋಲಿನಲ್ಲಿಟ್ಟುಕೊಳ್ಳಲು ಯತ್ನಿಸುತ್ತಿದ್ದರೆಂಬುದು ಈಗ ಬೆಳಕಿಗೆ ಬರುತ್ತಿದೆ.

ಸ್ವತಃ ಮುರುಘಾ ಶರಣರೇ ಅಂತಹ ಅನೇಕ ಪ್ರಸಂಗಗಳನ್ನು 'ಅಭಿವೃದ್ಧಿಯ ಹಾದಿಗೆ ಮುಳ್ಳಿನ ಹಾಸಿಗೆ' ಎಂಬ ಕಿರು ಪುಸ್ತಕವೊಂದರಲ್ಲಿ ನಿವೇದಿಸಿಕೊಂಡಿದ್ದಾರೆ.

ಇದು ಮುರುಘಾಮಠದಲ್ಲಿ ನಡೆದ ಅಂತಃಕಲಹದ ಮೊಟ್ಟಮೊದಲ First Informatin Report (FIR) ಆಗಿದೆ.

ಈ ಪುಸ್ತಕದ ಕೆಲ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

***

ಸ್ವಯಂಘೋಷಿತ

ಹಿರಿಯ ಶ್ರೀಗಳು ಅಧಿಕೃತವಾಗಿ ತಮ್ಮ ಆಪ್ತಕಾರ್ಯದರ್ಶಿ (ಎಸ್.ಕೆ.ಬಸವರಾಜನ್)ಗೆ ಯಾವ ಜವಾಬ್ದಾರಿಗಳನ್ನು ನೀಡಿರಲಿಲ್ಲ. ಒಂದು ಹಂತದಲ್ಲಿ ಸ್ವಯಂ ಘೋಷಿತ. ಅಧಿಕಾರ ಕೊಡದಿದ್ದಾಗ್ಯೂ ಹಿರಿಯರನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲಾಗಿತ್ತು. ಆತನ ಮಾತೆಂದರೆ ವೇದವಾಕ್ಯ. ಹಿರಿಯ ಶ್ರೀಗಳ ನಂತರ ನಾನು ಅವರನ್ನು ಅಧಿಕೃತ ಆಡಳಿತಾಧಿಕಾರಿಯೆಂದು ನೇಮಕ ಮಾಡಿದೆ. ಅಲ್ಲಿಯವರೆಗೆ ಅವರು ಅದನ್ನೂ ನೀಡಿರಲಿಲ್ಲ. ಒಮ್ಮೊಮ್ಮೆ ದೇಶ-ವಿದೇಶಕ್ಕೆ ಹೋಗುವ ಸಂದರ್ಭ, ಹೋದಾಗ ಏನಾದರು ನಡೆದರೆ ಎಂಬ ಶಂಕೆಯಿಂದ ಖಾಲಿ ಬಿಳಿಕಾಗದದ ಮೇಲೆ ಅಥವಾ ಸ್ಟಾಂಪ್ ಪೇಪರ್ ಮೇಲೆ ನನ್ನ ಸಹಿ ಮಾಡಿಸಿಕೊಳ್ಳಲಾಗುತ್ತಿತ್ತು. ಆದರಂತೆ ಖಾಲಿ ಚೆಕ್ಕುಗಳಿಗೂ. ಆರಂಭದಲ್ಲಿ ನನ್ನ ಗೈರುಹಾಜರಿಯಲ್ಲಿ ರೂ.10 ಸಾವಿರಗಳವರೆಗೆ ಬ್ಯಾಂಕಿನಿಂದ ಡ್ರಾ ಮಾಡುವ ಅಧಿಕಾರ. ಹೀಗೆ ನನ್ನ ಅನುಪಸ್ಥಿತಿಯಲ್ಲಿ ಶ್ರೀಮಠ ಹಾಗೂ ವಿದ್ಯಾಪೀಠದ ಅಧಿಕಾರವು ಏಕವ್ಯಕ್ತಿಯಲ್ಲಿ ಕೇಂದ್ರೀಕೃತವಾಯಿತು. ಸ್ವಾಮಿಗಳು ಕೇವಲ ಧರ್ಮಪ್ರಚಾರಕ್ಕೆ ಆಡಳಿತಾಧಿಕಾರಿಗೇ ಎಲ್ಲ ಅಧಿಕಾರ ಎಂದು ಅವರ ಹಿಂಬಾಲಕರು ಹೇಳಿಕೊಳ್ಳುತ್ತಿದ್ದರು.


ನಾಮಕಾವಸ್ಥೆ ಸ್ವಾಮಿಗಳು

ಅಧಿಕಾರ ಇದ್ದವರನ್ನು ಜನ ಓಲೈಸುತ್ತಾರೆ. ಅದರಂತೆ ಅಧಿಕಾರ ಇಲ್ಲದವರು ಮೂಲೆಗುಂಪಾಗುತ್ತಾರೆ. ಅಧಿಕಾರ ಇದ್ದವರು ಅಟ್ಟಹಾಸ ಮೆರೆಯುತ್ತಾರೆ. ನಾನು ದಿನದಿಂದ ದಿನಕ್ಕೆ ಮೂಲೆಗುಂಪಾಗುತ್ತಿದ್ದೇನೆಂದು ಅನ್ನಿಸುತ್ತಿತ್ತು. ಅದನ್ನೆಲ್ಲ ಪ್ರಶ್ನಿಸಿದರೆ, ಇಬ್ಬರ ನಡುವೆ ಸಂಘರ್ಷಗಳಾಗುತ್ತವೆ, ದ್ವೇಷಾಸೂಯೆಗಳು ನುಸುಳುತ್ತವೆಂದು ಸಹಿಸಿಕೊಂಡು ಹೊಸಹೊಸ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗುತ್ತ ಬಂದೆ. ಸಂಪ್ರದಾಯಬದ್ಧವಾದ ಪೀಠವನ್ನು ಒಂದು ವೈಚಾರಿಕ ಪೀಠವನ್ನಾಗಿಸಲು ಎಲ್ಲಿಲ್ಲದ ಪ್ರಯತ್ನ ಮಾಡತೊಡಗಿದೆ. ಸಮಾಜಮುಖಿ ಕಾರ್ಯಗಳು ಯಶಸ್ವಿಯಾಗುತ್ತಾ ನಡೆದವು. ಮಾನ್ಯತೆ, ಅಧಿಕಾರ ಇತ್ಯಾದಿ ಸಿಗಲಿಲ್ಲವೆಂದು ಸುಮ್ಮನೆ ಕೂಡ್ರದೇ ರಚನಾತ್ಮಕ ಕಾರ್ಯಗಳನ್ನು ನಡೆಸುತ್ತ ಹೋದೆ. ಅದರ ಫಲವೇ ಬಸವೇಶ್ವರ ಗ್ರಾಮ ವಿಕಾಸ ವೇದಿಕೆ, ಸಹಜ ಶಿವಯೋಗ, ವಚನಕಮ್ಮಟ, ಬಸವತತ್ವ ಕಾಲೇಜು, ಬಸವಕೇಂದ್ರ, ಶರಣಸಂಸ್ಕೃತಿ ಉತ್ಸವ, ಶರಣಸಂಗಮ, ವೃದ್ಧಾಶ್ರಮ ಹಾಗೂ ಅನಾಥಾಶ್ರಮ. ಹೊಸದಾಗಿ ಆರಂಭಿಸಿದ ಸಂಸ್ಥೆಗಳಿಗೆಲ್ಲ ಆಡಳಿತಾಧಿಕಾರಿಗಳು ಇಲ್ಲವೇ ಅವರ ಶ್ರೀಮತಿಯವರು ಅಧ್ಯಕ್ಷರಾಗಿ ಅಧಿಕಾರವನ್ನು ಅನುಭವಿ ಸುತ್ತಾ ಹೋದರು. ಎಲ್ಲ ಸಂಸ್ಥೆಗಳ ಸಂಸ್ಥಾಪಕರು ನಾನೇ ಆದರೂ ನನ್ನ ಹೆಸರು ಇರುತ್ತಿರಲಿಲ್ಲ.

ಸ್ವಾಮಿಗಳೇ ವಿದ್ಯಾಪೀಠದ ಅಧ್ಯಕ್ಷರು. ಆದರಂತೆ ಮಠಕ್ಕು, ವರ್ಷಕ್ಕೆ ಒಂದೆರಡು ಸಾರಿ ಶ್ರೀಗಳ ಅಧ್ಯಕ್ಷತೆಯಲ್ಲಿ ಸಭೆ ಕರೆಯಲು ಸೂಚಿಸಿದಾಗ, ಅದಕ್ಕೆ ಯಾವ ಕಿಮ್ಮತ್ತು ಕೊಡಲಿಲ್ಲ. ಅಧಿಕಾರವನ್ನು ಮ್ಯಾಕ್ಸಿಮಮ್ ಅನುಭವಿಸುತ್ತಿದ್ದು, ಅದಕ್ಕಿಂತಲೂ ಹೆಚ್ಚಿನ ಅಧಿಕಾರವನ್ನು ಅನುಭವಿಸಬೇಕೆಂಬ ಬಯಕೆ. ಅದಕ್ಕಾಗಿ ರಾಜಕೀಯ ಪ್ರವೇಶದ ಕನಸು. ಶ್ರೀಮಠದ ಗುಡ್‌ವಿಲ್ ಮತ್ತು ಶಿಫಾರಸ್ಸು ಬಳಸಿಕೊಂಡೇ ಟಿಕೆಟ್ ಗಿಟ್ಟಿಸಿಕೊಳ್ಳಲಾಗುತ್ತಿತ್ತು. ತಾನು ರಾಜಕಾರಣ ಪ್ರವೇಶಿಸಿದ್ದಲ್ಲದೆ, ತಮ್ಮ ಪತ್ನಿಯನ್ನೂ ರಾಜಕೀಯಕ್ಕೆ ತರಲಾಯಿತು. ಇಬ್ಬರ ರಾಜಕೀಯ ಪ್ರವೇಶದ ಬಗ್ಗೆ ನನ್ನ ಆಕ್ಷೇಪಣೆ ಇದ್ದೇಯಿತ್ತು. ಈ ಬಗ್ಗೆ ಸುದೀರ್ಘವಾದ ಚರ್ಚೆಗಳು ನಡೆಯುತ್ತಿದ್ದವು. ತನಗೆ ಬೇಕಾದವರಿಂದ ಒತ್ತಡ ಹೇರಲಾಗುತ್ತಿತ್ತು. ಚುನಾವಣೆಗೆಂದು ಶ್ರೀಮಠದ ಹಾಗೂ ವಿದ್ಯಾಪೀಠದ ನೌಕರರಿಂದ ಹಣ ವಸೂಲಿ. ಈ ಸಂಬಂಧ ಪ್ರಶ್ನಿಸಿದರೆ, ತನ್ನ ಅಭಿಮಾನಿಗಳು ತನ್ನ ಚುನಾವಣೆಗೆ ಹಣವನ್ನು ಖರ್ಚು ಮಾಡುತ್ತಾರೆಂಬ ಸಬೂಬು. ಯಾರೂ ಈ ಬಗ್ಗೆ ಎದುರಾಗಿ ಮಾತನಾಡುವಂತಿರಲಿಲ್ಲ.

ಶ್ರೀಮಠದಿಂದ ಹೊರಕ್ಕೆ

ಬರುಬರುತ್ತಾ ಅಸ್ತಿತ್ವದ ಪ್ರಶ್ನೆ ಅವರಿಗೆ ಕಾಡಿರಬಹುದು. ತಾನೇ ಎಲ್ಲಿ ಮೂಲೆಗುಂಪಾಗುತ್ತೇನೋ ಎಂಬ ಆತಂಕ ಮೂಡಿರಬಹುದು. ಸ್ವಾಮಿಗಳ ಅಧ್ಯಕ್ಷತೆಯಲ್ಲಿ ವಿದ್ಯಾಪೀಠದ ಸಂಸ್ಥೆಗಳ ಮುಖ್ಯಸ್ಥರ ಸಭೆ ಕರೆಯಲು ನನ್ನಿಂದ ಒತ್ತಡ. ಅದಕ್ಕೆ ಯಾವ ಬೆಲೆಯೂ ಸಿಗಲಿಲ್ಲ. "ರಾಜಕಾರಣಕ್ಕೆ ಹೋಗಬಾರದು, ಆಡಳಿತದಲ್ಲಿ ಇತ್ತೀಚೆಗೆ ನಿಮ್ಮ ಶ್ರೀಮತಿಯವರ ವಿನಾಕಾರಣ ಪ್ರವೇಶ ಆಗುತ್ತಿದೆ. ಇದು ಆರೋಗ್ಯಕರವಲ್ಲ" ಎಂಬ ತಿಳಿವಳಿಕೆ ನೀಡಲಾಯಿತು. ಇಂಥ ಎಂಟು ನಿಬಂಧನೆಗಳನ್ನು ವಿಧಿಸಿ, ಅವುಗಳಿಗೆ ಅನುಗುಣವಾಗಿ ನಡೆದುಕೊಂಡು ಹೋಗುವುದಾದರೆ, ಶ್ರೀಮಠದಲ್ಲಿ ಮುಂದುವರೆಯಬಹುದು; ಇದರಲ್ಲಿ ಯಾವುದೇ ಒಂದು ಅಂಶಕ್ಕೆ ವ್ಯತಿರಿಕ್ತವಾಗಿ ನಡೆದಲ್ಲಿ ಅಧಿಕಾರ ಬಿಟ್ಟು ಹೋಗಬೇಕಾಗುತ್ತದೆಂಬ ತಾಕೀತು. ಅವುಗಳಲ್ಲಿ ವಿನಾಯಿತಿಯನ್ನು ನಿರಾಕರಿಸಿದಾಗ ಶುರು ಆಯಿತು ಸಂಘರ್ಷ.



ಇಷ್ಟೆಲ್ಲ ಒತ್ತಡಗಳ ನಡುವೆಯೂ ನನ್ನ ತೀರ್ಮಾನ ಅಚಲವಾಗಿತ್ತು. ಎಸ್.ಹೆಚ್.ಪಟೇಲ್‌ರನ್ನು ಕಾರ್ಯದರ್ಶಿಯನ್ನಾಗಿ ನಿಯಮಿಸುತ್ತಿರುವ ವಿಚಾರ ಗೊತ್ತಾದ ತಕ್ಷಣವೇ ಗಂಡ-ಹೆಂಡತಿ ಇಬ್ಬರೂ ಶ್ರೀಮಠದ ಅಭಿಮಾನಿಗಳಿಗೆಲ್ಲ ಕರೆಮಾಡಿ, "ನಮ್ಮನ್ನು ಮಠದಿಂದ ಹೊರಹಾಕಲಾಗುತ್ತಿದೆ. ಮುಂಜಾನೆ ಎಲ್ಲರೂ ಬಂದುಬಿಡಿ" ಎಂಬ ಸಂದೇಶ ರವಾನೆ. ನಮ್ಮ ಕಡೆಯಿಂದ ಜನರನ್ನು ಸೇರಿಸುವ ಯಾವ ಪ್ರಯತ್ನವೂ ನಡೆಯಲಿಲ್ಲ. ಆದರೆ 2007 ನವೆಂಬರ್ 16ರಂದು ಮುಂಜಾನೆ ಶ್ರೀಮಠದಲ್ಲಿ ನಾಲ್ಕೈದು ನೂರು ಜನರು ಜಮಾಯಿಸಿದರು. ಹೀಗೆ ಆಗುತ್ತದೆಂಬ ಶಂಕೆಯಿಂದ ಪೊಲೀಸ್ ಇಲಾಖೆಯನ್ನು ಸಂಪರ್ಕಿಸಿ, ಸೂಕ್ತ ಬಂದೋಬಸ್ತ್ ಮಾಡುವಂತೆ ಮೊದಲೇ ಕೋರಿಕೆ ಸಲ್ಲಿಸಿದ್ದೆ.

ಮಠದ ಮನೆಯಿಂದ ಬಾಡಿಗೆ ಮನೆಗೆ

ಮಾಜಿ ಆಡಳಿತಾಧಿಕಾರಿಗಳ ಆಪ್ತರಾದ ಶ್ರೀಯುತರಾದ ಸುರೇಶಬಾಬು, ನೂರುಲ್ಲಾಷರೀಫ್, ಸ್ಪಿರಿಟ್ ರಮೇಶ್ ಮುಂತಾದವರಿಂದ ಸಂಧಾನ. ಮುಂದಿನ ಜೀವನ ಚೆನ್ನಾಗಿರಲೆಂದು ಸ್ಕೋಡಾ ಕಾರ್ ಮತ್ತು ಬೆಂಗಳೂರಿಗೆ ಹೋದಾಗ ತಂಗಲು ಕಾನಿಷ್ಕದಲ್ಲಿ ಒಂದು ಕೊಠಡಿಯನ್ನು ನೀಡಲಾಯಿತು. ಒಂದು ತಿಂಗಳವರೆಗೆ ಸುಮ್ಮನಿದ್ದುದನ್ನು ಕಂಡು ಅವರು ಮಠದ ತಂಟೆಗೆ ಬರುತ್ತಿಲ್ಲವೆಂಬ ಸಮಾಧಾನ. ಈ ಮೌನದ ರಹಸ್ಯವು ನಂತರ ಅರ್ಥವಾಯಿತು. ಅದೇ ಸುರೇಶ್‌ಬಾಬು ಮುಖಾಂತರ ಒಂದು ಲಿಸ್ಟ್ ಕಳುಹಿಸಿ ತಾನು ಬೇರೆಬೇರೆಯವರಿಂದ ಕೈಗಡ ತೆಗೆದುಕೊಂಡಿದ್ದ ಸಾಲದ ಪಟ್ಟಿಯನ್ನು ತಲುಪಿಸಿದರು. ಇಪ್ಪತ್ತುಕೋಟಿ ರೂಪಾಯಿಗಳಷ್ಟು ಕೈಗಡ ತೆಗೆದುಕೊಂಡ ಸಾಲವದು.

ಯಾತಕ್ಕೋ ಮಾಡಿದ ಸಾಲವನ್ನು ನಾನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆ. ಒಬ್ಬರಿಗೆ ನಿರಾಭಾರ; ಇನ್ನೊಬ್ಬರಿಗೆ ಬಹುಭಾರ. ತಾನು ಮಾಡಿದ ಸಾಲದ ಮೂಟೆಯನ್ನು ಹೀಗೆ ನನ್ನ ಮೇಲೆ ಹೊರಿಸಿ ಕೈತೊಳೆದುಕೊಂಡರು.

ಮಾಡಿದ ಸಾಲವನ್ನು ಒಪ್ಪಿಕೊಂಡ ನಂತರದಲ್ಲಿ ಕಿರುಕುಳಗಳ ಸರಮಾಲೆಯೇ ಶುರುವಾಯಿತು. (1) ಎಸ್‌ಜೆಎಂ ಬ್ಯಾಂಕ್‌ನ ವ್ಯವಹಾರವನ್ನು, ಮಾಹಿತಿಯನ್ನು ಕದಿಯಲು ತನ್ನ ಅಳಿಯನನ್ನು ಕಳಿಸಿದಾಗ, ಆತ ಬ್ಯಾಂಕ್ ಮ್ಯಾನೇಜರ್ ಕೈಗೆ ಸಿಕ್ಕಿಬಿದ್ದಿದ್ದು, (2) ಮಠದಿಂದ ಹೊರನಡೆದಾಗ, ಶ್ರೀಮಠದ ಮನೆಯಲ್ಲಿ ಒಂದು ಸಾಮಾನು ಬಿಡದಂತೆ ಖಾಲಿಮಾಡಿ ಹೋಗಿದ್ದು ಯಾರೋ ದರೋಡೆ ಮಾಡಿಹೋಗಿದ್ದಾರೇನೋ ಎಂಬ ಭಾವನೆ ಮೂಡಿತು. (3) ವಿದ್ಯಾಪೀಠದ ನೌಕರರನ್ನು ಎತ್ತಿಕಟ್ಟಲು ಪ್ರಯತ್ನ ಮಾಡಿದ್ದು- ಗುಂಪುಗಾರಿಕೆಗೆ ಅವಕಾಶ ನೀಡಿದ್ದು, (4) ಮಾನನಷ್ಟ ಮೊಕದ್ದಮೆ (ಅಟ್ರಾಸಿಟಿ ಕೇಸ್) ಹಾಕಿಸಿದ್ದು.

ಮನೆಗೆ ಬರಲು ಸಂಧಾನ

ಈ ನಡುವೆ ಮಾಜಿ ಅಧಿಕಾರಿಗಳ ಮಗಳು ಆಕಸ್ಮಿಕವಾಗಿ ಬಸ್ ಮತ್ತು ಮೋಟಾರ್ ಸೈಕಲ್ ಅಪಘಾತದಲ್ಲಿ ಸಾವನ್ನಪ್ಪಿದಳು. ಘಟನೆ ತಿಳಿಯುತ್ತಿದ್ದಂತೆ ನಾನು ಮತ್ತಿತರ ಮಠಾಧೀಶರು (ಇಳಕಲ್ ಶ್ರೀಗಳು) ನಮ್ಮ ಬಸವೇಶ್ವರ ವೈದ್ಯಕೀಯ ಕಾಲೇಜಿನ ಪೋಸ್ಟ್‌ಮಾರ್ಟಮ್ ವಿಭಾಗಕ್ಕೆ ಭೇಟಿಕೊಟ್ಟು ಅಂತಿಮ ದರ್ಶನ ಪಡೆದೆವು. ಆ ಸಂದರ್ಭದಲ್ಲಿ ಮಗುವಿನ ತಂದೆ-ತಾಯಿಗಳಿದ್ದಿದ್ದರೆ, ಸಾಂತ್ವನ ಹೇಳಬೇಕೆಂಬ ಇಚ್ಛೆ ಇತ್ತು. ಅವರು ಮನೆಯಲ್ಲಿದ್ದರಿಂದ ಅದು ಸಾಧ್ಯವಾಗಲಿಲ್ಲ. ಪೊಲೀಸಿನವರು ಮನೆಗೆ ಹೋಗುವುದು ಬೇಡ. ಆಸ್ಪತ್ರೆಗೆ ಬಂದರೆ ಸಾಕೆಂಬ ಅಭಿಪ್ರಾಯದಂತೆ ನಾನು ನಡೆದುಕೊಂಡೆ. ಈ ಘಟನೆ ನಡೆದು ಒಂದೆರಡು ದಿನಗಳ ನಂತರ ಸುರೇಶ್ ಬಾಬು ಹಾಗೂ ವಾಗೀಶ್‌ಬಾಬು ಇಬ್ಬರು ನನ್ನ ಕಾರ್ಯಾಲಯಕ್ಕೆ ಬಂದು -ಘಟನೆ ನಡೆದುಹೋಗಿದೆ. ಇಂಥ ಸಂದರ್ಭ ದಲ್ಲಿ ಅವರ ಮನೆಗೆ ಹೋಗಿ ಸಾಂತ್ವನ ಹೇಳುವುದು ಸೂಕ್ತವೆಂದರು. ಅವರ ಸಲಹೆ ಸಮಯೋಚಿತವೆನಿಸಿ, ಆಗಲಿ ಮನೆಗೆ ಹೋಗೋಣವೆಂದೆ. ನೀವು ಮುಂದೆ ಹೋಗಿರಿ, ನಾನು ಹಿಂದೆ ಬರುತ್ತೇನೆಂದು ಅವರನ್ನು ಕಳಿಸಿಕೊಟ್ಟೆ. ನಿಮ್ಮಿಂದ ಫೋನ್ ಕರೆ ಬಂದಾಕ್ಷಣ ಬರುತ್ತೇನೆಂದು ತಿಳಿಸಿದೆ. ಅವರ ಫೋನ್ ಕರೆಗಾಗಿ ಗಂಟೆಗಟ್ಟಲೇ ಕಾದೆ, ಬರಲಿಲ್ಲ. ಒಬ್ಬ ಮಠಾಧೀಶರು ಮನೆಗೆ ಬಂದು ಸಾಂತ್ವನ ಹೇಳುತ್ತಾರೆಂದರೂ ಅವಕಾಶ ಕೊಡಲಿಲ್ಲ. ಇದೆಂತಹ ದ್ವೇಷ?

ಗೆದ್ದಾಗ

ರಾಜಕೀಯಕ್ಕೆ ಹೋಗಬೇಕೆಂಬ ಮಹತ್ವಾಕಾಂಕ್ಷೆ. ಅದಕ್ಕಾಗಿ ಅಂದು ಚುನಾವಣೆಯಲ್ಲಿ ಸ್ಪರ್ಧಿಸುವ ಸಂದರ್ಭ. ಮಠಬಿಟ್ಟು ಹೊರಗಡೆ ಹೋಗಿ ಆಗಿದೆ. ಜನರ ತೀರ್ಮಾನಕ್ಕೆ ಬಿಟ್ಟದ್ದು. ಇದರಲ್ಲಿ ಯಾವುದೇ ಪ್ರಚಾರ ಮತ್ತು ಅಪಪ್ರಚಾರಕ್ಕೆ ಅವಕಾಶ ಕೊಡದೆ ತಟಸ್ಥನೀತಿಯನ್ನು ಅನುಸರಿಸಲಾಯಿತು. ಮಠಬಿಟ್ಟು ಬಂದದ್ದು ಮತ್ತು ಮಗಳು ಸತ್ತ ಸಿಂಪತಿಯ ಅಲೆ. ಇದರಿಂದಾಗಿ ಚುನಾವಣೆಯಲ್ಲಿ ಗೆಲುವು.

ಫಲಿತಾಂಶ ಪ್ರಕಟವಾದ ದಿನ ತಾವಿದ್ದ ಶ್ರೀಮಠಕ್ಕೆ ಭೇಟಿಕೊಟ್ಟರು. ಅವರು ಶ್ರೀಮಠಕ್ಕೆ ಬರುತ್ತಾರೆಂಬ ವಿಷಯ ತಿಳಿಯಿತು. ದಂಪತಿಗಳಿಬ್ಬರು ಗದ್ದುಗೆಯನ್ನು ಸಂದರ್ಶಿಸಿದರು. ನಾನಂದು ಶ್ರೀಮಠದಲ್ಲಿದ್ದೆ. ಅಂದು ಆಡಳಿತಾಧಿ ಇಂದು ಜನತಾಪ್ರತಿನಿಧಿ, ಬಂದರೆ ಶಾಲು ಹೊದಿಸಿ, ವ ಹಾಕಿ ಹಾರೈಸಬೇಕೆಂಬ ಭಾವನೆ. ಅವರು ಇತ್ತ ಸುಳಿಯ ಇಲ್ಲ. ದ್ವೇಷವನ್ನು ಮರೆಯಬೇಕು, ಪ್ರೀತಿಯನ್ನು ಬೆಳೆಸಬ ಎಂಬ ಭಾವ ಬರಲಿಲ್ಲ.

ಪೆಟ್ರೋಲ್ ಬಂಕ್ ಪ್ರಕರಣ

ಶ್ರೀಮಠಕ್ಕೆ ಸೇರಿದ ಜಾಗವು ನಗರದ ಮಧ್ಯಭಾಗ ಅದನ್ನು ಈ ಹಿಂದೆ ಒಬ್ಬರಿಗೆ ಬಂಕ್ ನಡೆಸಲು ಬಾ ಕೊಡಲಾಗಿತ್ತು. ಪರಿವರ್ತಿತ ಬಾಡಿಗೆ ಆಕರಣೆಯಂತೆ ತಿಂಗಳು 25 ಸಾವಿರ ರೂ.ಗಳು ಸಂದಾಯವಾಗುತ್ತಿದ್ದ ಹಣವನ್ನು ಹಿಂದಿನ ಆಡಳಿತಾಧಿಕಾರಿಗಳೇ ತೆಗೆದುಕೊ ತ್ತಿದ್ದರು. ಅದರ ಖಾತೆಯ ವಿಚಾರದಲ್ಲಿ ಒಮ್ಮೆ ನಾನು ಕೇ ಮಠದ ಶ್ರೀಗಳ ಹೆಸರಲ್ಲೇ ಆ ಪೆಟ್ರೋಲ್ ಬಂಕ್ ಎಂಬ ಸಲಹೆಯು ನನ್ನಿಂದ. ಹಾಗೆಲ್ಲ ಶ್ರೀಗಳ ಹೆಸ ಪೆಟ್ರೋಲ್ ಬಂಕ್ ಇರಕೂಡದೆಂಬ ಸಲಹೆಯು ಆಡಳಿ ಕಾರಿಗಳಿಂದ. ಹಾಗಾದರೆ ಏನು ಮಾಡಬೇಕು? ಅದನ್ನು ಹೆಸರಿಗೆ ಮಾಡಿಸಿಕೊಡಬೇಕೆಂಬ ಹಠ. ಅದಕ್ಕಾಗಿ ನ ಒಂದು ಪತ್ರ. ಅದನ್ನು ಇತ್ತೀಚೆಗೆ ಫೋರ್ಜರಿ ಮಾಡಿ ವರ್ಷಗಳೆಂದು ತಿದ್ದಿಕೊಳ್ಳಲಾಗಿರುತ್ತದೆ. ನ್ಯಾಯಾಲಯ ಅದನ್ನು ಪ್ರಶ್ನಿಸಲಾಗಿ, ಮಠದ ಪರವಾಗಿ ನ್ಯಾಯ ದೆ ರುತ್ತದೆ.

ಕಾವೇರಿ ಸ್ಟೋರ್

ಶ್ರೀಮಠದ ನಿತ್ಯದಾಸೋಹಕ್ಕೆ ಅನುಕೂಲವಾಗಲ ಕಾವೇರಿ ಸ್ಟೋರನ್ನು ಪ್ರಾರಂಭಿಸಲಾಯಿತು. ಇದರ ಖ ವೆಚ್ಚವನ್ನು ಶ್ರೀಮಠದಿಂದಲೇ ಭರಿಸಲಾಗಿದೆ. ಶ್ರೀಮ ಹೆಸರಿನಲ್ಲಿ ಕಟ್ಟಡ ಮತ್ತು ಜಾಗ ಇರುತ್ತದೆ. ಆಡಳಿ ಕಾರಿಗಳು ಹೊರಹೋದ ನಂತರ ಶ್ರೀಮಠದ ದಾಸೋ ಕೊಡುತ್ತಿದ್ದ ರೇಷನ್‌ಅನ್ನು ನಿಲ್ಲಿಸಿರುತ್ತಾರೆ. ಬಾಡಿಗೆಯ ಕೊಡುತ್ತಿರುವುದಿಲ್ಲ. ಈ ಜಾಗವನ್ನು ಹಿಂದಿನ ಆಡಳಿ ಕಾರಿಗಳು ತಮ್ಮ ಪತ್ನಿಗೆ ಬರೆದುಕೊಟ್ಟಿರುತ್ತಾರೆ. ಮ ಆಸ್ತಿಯನ್ನು ತಮ್ಮ ಪತ್ನಿಗೆ ಬರೆದುಕೊಡುವುದರ ಮುಖಾ ಅಧಿಕಾರ ದುರುಪಯೋಗ ಆಗಿರುತ್ತದೆ. ಈ ಜಾಗ ಕಟ್ಟಡವು ಮಠಕ್ಕೆ ಸೇರಿದ್ದೆಂದು, ಅದನ್ನು ಬಿಡಿಸಿಕೊಡು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಗಿರು ಪ್ರಕರಣವು ಕೋರ್ಟ್ ಮುಂದೆ ಇರುತ್ತದೆ.

ಚೆಕ್ ಬೌನ್ಸ್ ಹಗರಣ

ವಿಶ್ವಾಸ ಇಡುವುದು ತಪ್ಪಲ್ಲ; ಆ ವಿಶ್ವಾಸಕ್ಕೆ ದ್ರೋ ಬಗೆಯುವುದು ಸರಿಯಲ್ಲ. ವಿಶ್ವಾಸದ್ರೋಹ ನಡೆಯಿ ದೇಶ-ವಿದೇಶಕ್ಕೆ ಹೋಗುವ ಮುನ್ನ ತುರ್ತುಪರಿಸ್ಥಿತಿಯ ನಿಭಾಯಿಸುವ ದೃಷ್ಟಿಯಿಂದ ಖಾಲಿ ಚೆಕ್ಕುಗಳಿಗೆ ಸಹಿ ಮ ಬೇಕಾಗುತ್ತದೆಂಬ ಕೋರಿಕೆಗೆ ಇರಬಹುದೆಂದು ಭಾ ಇಡೀ ಚೆಕ್ ಬುಕ್ ಹಾಗೂ ಖಾಲಿ ಹಾಳೆಗಳಿಗೆ ಸಹಿ ಮಾ ಕೊಳ್ಳಲಾಯಿತು. ಹಿಂದಿನ ಕೇಸ್‌ಗಳೆಲ್ಲ ಯಶಸ್ವಿ ಆಗದಿ ದರಿಂದ ಇದೊಂದು ಕ್ರಿಮಿನಲ್ ಕೇಸ್. ಶ್ರೀಮಠದ ತನಗೆ 15 ಲಕ್ಷ ಕೊಡಬೇಕೆಂದು ಈ ಸಂಬಂಧ ಕೊಡಲಾಗಿದೆಯೆಂದು, ಆ ಚೆಕ್ಕನ್ನು ಬ್ಯಾಂಕ್‌ಗೆ ಕಳಿಸಲಾ ಆ ವ್ಯಕ್ತಿಯೊಂದಿಗೆ ಯಾವುದೇ ವ್ಯವಹಾರ ಮಾಡದಿ 15 ಲಕ್ಷ ರೂ.ಗಳ ಚೆಕ್ ಕ್ಲಿಯರೆನ್ಸ್‌ಗೆ ಬಂದಿದ್ದಾದರೂ ಎಂಬ ವಿಚಾರ. ಈ ಬಗ್ಗೆ ಇಂಥ ನಂಬರ್‌ನಿಂದ ನಂಬರ್‌ವರೆಗಿನ ಚೆಕ್‌ಬುಕ್ ಕಳುವಾಗಿದೆಯೆ


ರ್ಯವಾದು ಕೊಡಲಾಗಿದೆ. ಚೆಕ್ ಬೌನ್ಸ್ ಕೇಸ್ ಮೂಲಕ ಸ್ವಾಮಿಗಳನ್ನು ರೆಸ್ಟ್ ಮಾಡಿಸುವ ಕುತಂತ್ರ ಅಡಗಿದೆ. ಇಂಥ ಇನ್ನೂ ಕೆಲವು ಪ್ರಕರಣಗಳು ಆಗಿವೆ. ಚೆಕ್ ಬುಕ್ ಕಳುವಾದದ್ದಾದರು ಹೇಗೆ? ವಿದೇಶಕ್ಕೆ ಹೋದ ಸಂದರ್ಭದಲ್ಲಿ ಸಹಿ ಮಾಡಿಸಿಟ್ಟುಕೊಂಡಿದ್ದ ಖಾಲಿ ಚೆಕ್‌ಅನ್ನೇ ತಮ್ಮ ವಿಶ್ವಾಸಿಕರ ಹೆಸರಿಗೆ ಕೊಡಲಾಗಿದೆ. ಅವರು ಆ ಚೆಕ್ಕನ್ನು ಸಂಬಂಧಪಟ್ಟ ಬ್ಯಾಂಕ್‌ಗೆ ಸಲ್ಲಿಸಿಕೊಟ್ಟಿದ್ದಾರಷ್ಟೇ.

...ವಾಡದ ಶಂಕೆ

ಚಿತ್ರದುರ್ಗ ನಗರದಲ್ಲಿ ಶ್ರೀಮಠಕ್ಕೆ ಸೇರಿದ ಬ್ಯಾಂಕ್ ಇದೆ. ಎಲ್ಲ ...ಚಾರದಲ್ಲೂ ಅದಕ್ಕೆ ಉತ್ತಮ ಹೆಸರಿದ್ದು, ಈ ಸಂಬಂಧ ಇತ್ತೀಚೆಗೆ ಒಂದು ...ತಂತ್ರ ನಡೆಯಿತು. ದಿನಪತ್ರಿಕೆ ಗಳನ್ನು ಹಾಕುವ ಹುಡುಗರ ನೆರವಿನಿಂದ ...ಂದು ಕರಪತ್ರವನ್ನು ದಿನಪತ್ರಿಕೆಗಳಲ್ಲಿ ಹಾಕಿಸಲಾಯಿತು. ಅದರಲ್ಲಿ ...ದ್ದುದ್ದಾರು ಏನು? ಬ್ಯಾಂಕ್ ದಿವಾಳಿ ಆಗುತ್ತಿದ್ದು, ಸಂಬಂಧಪಟ್ಟವರು ...ಪಾಸಿಟ್‌ಅನ್ನು ವಾಪಸ್ ಪಡೆಯಬೇಕೆಂಬ ಕೋರಿಕೆ. ಈ ಸಂಬಂಧ ಬ್ಯಾಂಕ್ ...ಧಿಕಾರಿಗಳು ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದು, ಈ ಪ್ರಕರಣದಲ್ಲಿ ...ಾರಿದ್ದಾರೆಂಬುದನ್ನು ಪತ್ತೆ ಹಚ್ಚಲು ಆಗ್ರಹಿಸಲಾಗಿದೆ. ಪೊಲೀಸ್ ...ಲಾಖೆಯವರು ಪೇಪರ್ ಹುಡುಗರನ್ನು ವಿಚಾರಿಸಲಾಗಿ ಗುರುನಾಥ್ ...ಂಬು ವವರು ತಮಗೆ ಆ ಕರಪತ್ರಗಳನ್ನು ನೀಡಿದ್ದಾರೆಂದು, ಅವರ ...ೋಟೋ ಗುರುತಿಸಿ ದೃಢೀಕರಿಸಿದ್ದಾರೆ. ಈ ಗುರುನಾಥ್ ಯಾರ ಹತ್ತಿರ ...ದ್ದಾರೆಂಬುದು ದುರ್ಗದ ಜನರಿಗೆಲ್ಲ ಗೊತ್ತಿರುವ ಸಂಗತಿಯಾಗಿದೆ.

ಅನ್ಯಾಯವನ್ನು ಸರಿಪಡಿಸಿರಿ

ನಾನು ಮತ್ತು ಎಸ್.ಜೆ.ಎಂ. ವಿದ್ಯಾಪೀಠದ ಅಧಿಕಾರಿ ಕೆನಡಾದ ...ರೊಂಟೊಕ್ಕೆ ವಿಎಸ್‌ಎನ್‌ಎ ಅವರ ವಾರ್ಷಿಕ ಸಮ್ಮೇಳನಕ್ಕೆ ಹೋಗಿದ್ದೆವು. ...ೋದ ಸಂದರ್ಭದಲ್ಲಿ ಏನಾದರು ಭಾನಗಡಿ ಮಾಡಬೇಕೆಂದು ಷಡ್ಯಂತ್ರ ...ೂಪಿಸಲಾಗಿತ್ತು, ಅದನ್ನು ಈ ಹಿಂದೆ ವಿವರಿಸಲಾಗಿದೆ. ಪುನಃ ಪುನಃ ಈ ...ತಿ ಅತಂತ್ರವನ್ನು ರೂಪಿಸುತ್ತಿರುವ ವ್ಯಕ್ತಿಯನ್ನು ಕರೆಸಿರಿ, ಅವರೊಂದಿಗೆ ...ಾತನಾಡುತ್ತೇನೆಂದು ಮಾದಾರ ಚೆನ್ನಯ್ಯ ಸ್ವಾಮಿಗಳಿಗೆ ಸೂಚಿಸಿದೆ. ಅವರು ...ೋಣೆಹಳ್ಳಿ ಗುರು ಮೂರ್ತಿಯನ್ನು ಕರೆತಂದರು. ನೀವು ಹೀಗೆ ಏಕೆ ...ಾಡುತ್ತಿದ್ದೀ ರೆಂದು ಅವರೊಂದಿಗೆ ಚರ್ಚಿಸಿದೆ. ಆ ಪತ್ರಕರ್ತರು, ಶ್ರೀಮಠ ...ಂದ ಪ್ರಕಟವಾಗುತ್ತಿದ್ದ ಜನವಾಹಿನಿ ಪತ್ರಿಕೆಯ ಸಂಪಾದಕ ರಾಗಿ ...ರ್ಯನಿರ್ವಹಿಸುತ್ತಿದ್ದರು. ಕಾರಣಾಂತರದಿಂದ ಆ ಪತ್ರಿಕೆಯನ್ನು ...ಲ್ಲಿಸಲಾಯಿತು.



...ತ್ರಿಕೆಯನ್ನು ...ಟ್ಟುಹೋಗುವಾಗ, ...ಂದಿನ ...ಡಳಿತಾಧಿಕಾರಿಗಳು ...ಸ್.ಕೆ.ಬಸವರಾಜನ್) ...ನಗೆ ಕೊಡಬೇಕಾದ ...ಣವನ್ನು ಕೊಡದೆ ...ಂಚಿಸಿದ್ದಾರೆ, ...ವಾದರೂ ಅದನ್ನು ...ಿಪಡಿಸಿ ರೆಂದು ...ಳಿಕೊಂಡರು. ಹಿಂದೆ ಆಗಿರಬಹುದಾದ ಅನ್ಯಾಯ ವನ್ನು ...ಿಪಡಿಸೋಣವೆಂದೆ. ಅದಕ್ಕವರು 25 ಲಕ್ಷ ಪರಿಹಾರ ಬೇಕೆಂದರು. ...ಷ್ಟೆಲ್ಲ ಕೊಡಲು ಆಗುವುದಿಲ್ಲವೆಂದೆ. ಹತ್ತು ಲಕ್ಷಕ್ಕೆ ಅದನ್ನು ...ುಗಿಸಲಾಯಿತು. ಮುಂದೆ ಅವರು ತನಗೆ ಒಂದು ಹುದ್ದೆಯನ್ನು ...ಡಬೇಕು. ಆ ಹುದ್ದೆಗೆ ಬೇಕಾದ ಕಾರ್, ಡ್ರೈವರ್, ಒಂದು ...ಸಜ್ಜಿತವಾದ ಆಫೀಸ್, ಕಂಪ್ಯೂ ಟರ್, ಅದಕ್ಕೆ ಬೇಕಾದ ಆಪರೇಟರ್ ...ೀಗೆ ಬೇಡಿಕೆಗಳ ಪಟ್ಟಿ ಮುಂದುವರೆಯಿತು. ಈ ಸಮಾಲೋಚನೆಯಲ್ಲಿ ...ರೇಶ್‌ಬಾಬು ಅವರು ಭಾಗಿ ಆಗಿದ್ದರು.

ಶ್ರೀಮಠಕ್ಕೆ ಎಲ್ಲ ಸ್ತರದ ವ್ಯಕ್ತಿತ್ವಗಳು ಬೇಕಾಗುತ್ತಾರೆ. ಇವರ ಸೇವೆ ...ಶ್ರೀಮಠಕ್ಕೆ ಸಲ್ಲಲೆಂಬ ಭಾವನೆಯಿಂದ ಅವರನ್ನು ಮಾಧ್ಯಮ ...ಪ್ರತಿನಿಧಿಯೆಂದು ನೇಮಿಸಿ, ಪ್ರತಿ ತಿಂಗಳು ಮೂವತ್ತು ಸಾವಿರ ರೂ.ವೇತನ ...ಗದಿಪಡಿಸ ಲಾಯಿತು. ಶ್ರೀಮಠದ ಆವರಣದಲ್ಲಿಯೇ ಒಂದು ...ಾರ್ಯಾಲಯವನ್ನು ಕಲ್ಪಿಸಲಾಗಿತ್ತು, ಇವರು ಹಿಂದಿನ ಆಡಳಿತಾಧಿಕಾರಿಗಳು ...ದ್ದಂತಹ ಮನೆಯನ್ನೂ ನಿರೀಕ್ಷಿಸಿ ದ್ದರು.

ಹುದ್ದೆಯನ್ನು ಸ್ವೀಕರಿಸಿದ ದೊಣೆಹಳ್ಳಿಯವರು 3-4 ತಿಂಗಳು ...ಪರ್ಕದಲ್ಲಿದ್ದರು. ಕಳೆದ ವರ್ಷದ ಶರಣಸಂಸ್ಕೃತಿ ಉತ್ಸವದಲ್ಲಿ ಸಕ್ರಿಯವಾಗಿ ...ಾಗವಹಿಸಿದ್ದರು. ಕೆಲ ಅತಿಥಿಗಳನ್ನು ನಿಗದಿಪಡಿಸುವಲ್ಲಿ ಸಹಕಾರ ...ೀರಿದರು. ನಂತರ ಅವರು ಶ್ರೀಮಠದ ಕಾರ್ಯಾಲಯದಲ್ಲಿ ಕುಳಿತು ...ಂದೂ ಕಾರ್ಯನಿರ್ವಹಿಸಲಿಲ್ಲ, ಬದಲಾಗಿ ಬೇರೆ ಕಡೆ ನಡೆದ ಉಪ ...ನಾವಣೆಗೆ (ಬೈ ಎಲೆಕ್ಷನ್) ಕ್ಯಾನ್‌ವಾಸ್‌ಗೆ ಹೋದದ್ದು ಕಂಡುಬಂತು.

ನೀವು ಬೆಂಗಳೂರಿನಲ್ಲಿದ್ದುಕೊಂಡು, ಮಠದ ಹಾಗೂ ವಿದ್ಯಾಪೀಠದ ...ತಗಳನ್ನು ವಿಲೇವಾರಿ ಮಾಡಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಿರೆಂದು ...ೂಚಿಸಲಾಯಿತು. ಅದನ್ನು ಅವರು ನಿರ್ವಹಿಸುವುದಾಗಿ ಹೇಳಿ ಹೋದರಷ್ಟೆ. ...ದರಂತೆ ನಡೆದುಕೊಳ್ಳಲಿಲ್ಲ, ನಂತರ ಅವರು ಶ್ರೀಮಠ ದೊಂದಿಗಿನ ...ಬಂಧವನ್ನು ಕಡಿದುಕೊಂಡರು.

***

ಈ ಘಟನೆಗಳು ಈಗ ಬಹಿರಂಗಗೊಂಡ ಬಗ್ಗೆ ಶಾಸಕ ಬಸವರಾಜನ್‌ಗೆ ...ಿಸಿಯಾಗುವುದು ಖಚಿತ. ಆದರೆ ಅವರು ಸಹನೆಯಿಂದ ಕೂತು ...ೋಚಿಸಿದರೆ ಅವರ ತಪ್ಪುಗಳು ಅರ್ಥವಾಗಲೂಬಹುದು.

ಇವರಿಬ್ಬರ ಕಾರ್ಯಕ್ಷೇತ್ರಗಳು ಬೇರೆ ಬೇರೆಯಾಗಿವೆ.


ಹೇಗೆ ಶರಣರು ತಮ್ಮದೇ ಹಾದಿಯಲ್ಲಿ ಕಾಯಕ ನಡೆಸುತ್ತಾ ...ಗುತ್ತಿದ್ದಾರೋ ಅದೇರೀತಿ ಬಸವರಾಜನ್ ಸಹ ಸಾರ್ವಜನಿಕ ಕ್ಷೇತ್ರದಲ್ಲಿ ...ಸ ಮಾಡುತ್ತಾ ದುರ್ಗದ ಜನರಿಗೆ ಒಳ್ಳೆಯ ಕೆಲಸಗಳನ್ನು ಮಾಡಿಕೊಡುತ್ತಾ ...ಂದುವರೆಯಲಿ. ಕಿತಾಪತಿ, ಸಣ್ಣತನದ ವರ್ತನೆಗಳಿಂದ 'ಜನನಾಯಕರು' ...ಶಪಡೆಯುವುದಿಲ್ಲ,

ಬಸವರಾಜನ್‌ಗೆ ಇದು ಬೇಗ ಅರ್ಥವಾದರೆ ಒಳ್ಳೆಯದು.

ಕಳ್ಳ ಖೇಣಿ ಬಡರೈತನ ಹೆಣ ಕೆಡವಿದ

'ಧರ್ಮ ರತ್ನಾಕರ' ಅಶೋಕ ಖೇಣಿಯ ಅಧರ್ಮ ವೃತ್ತಾಂತ ಆಘಾತಕಾರಿ ಮುಖದೊಂದಿಗೆ ಅನಾವರಣಗೊಂಡಿದೆ. ಹಡಬೆ ಹಣದಿಂದಲೇ ಹಿಂಬಾಲಕರು, ರಾಜಕಾರಣಿಗಳು ಹಾಗೂ ಪುಟಗೋಸಿ ಪ್ರಶಸ್ತಿಗಳನ್ನೂ ಖರೀದಿಸಿ ಮೆರೆಯುತ್ತಿರುವವನು ಕಳ್ಳ ಖೇಣಿ. ಈತ ನೈಸ್ ಕಾರಿಡಾರ್ ಹೆಸರಲ್ಲಿ ಬಡರೈತರ ಎದೆ ಮೇಲೆ ಸವಾರಿ ಶುರುಮಾಡಿ ವರ್ಷಗಳೇ ಸಂದಿವೆ. ಇದರಲ್ಲಾದ ವಂಚನೆಯ ವಿರುದ್ಧ ಬಂಡೆದ್ದವರಿಗೆ ಥರಥರದ ಕಿರುಕುಳ, ಧಮಕಿಗಳು ಖೇಣಿ ಕಡೆಯಿಂದ ಧಾರಾಳವಾಗಿ ಸಿಕ್ಕಿದೆ. ಇಂಥಾ ಖೇಣಿ ಇದೀಗ ತನ್ನ ದಂಧೆಗೆ ಎದುರಾದ ರೈತನೊಬ್ಬನ ಹೆಣ ಉರುಳಿಸಿ ದುಷ್ಟತನ ಪ್ರದರ್ಶಿಸಿದ್ದಾನೆ.

ಖೇಣಿಯ ಕಳ್ಳಾಟದ ವಿರುದ್ಧ ಅಖಂಡ ಹತ್ತುವರ್ಷದಿಂದ ಹೋರಾಡುತ್ತಾ ಬಂದಿದ್ದ ರೈತ ಸಿದ್ದಲಿಂಗ ಪ್ರಭು ಕೊಲೆಯಾದವನು. ಸೋಮಪುರ ಮೂಲದವನಾದ ಸಿದ್ದಲಿಂಗ ಖೇಣಿಯ ನೈಸ್ ವಂಚನೆಗೆ ತನ್ನ ಸಂಸಾರದ ಜೀವನಾಧಾರವಾಗಿದ್ದ ಅಖಂಡ ನಲವತ್ತು ಎಕರೆ ಜಮೀನು ಕಳಕೊಂಡಿದ್ದ. ಇದರ ವಿರುದ್ಧ ಯಾರ ಬಳಿ ಗೋಗರೆದರೂ ಪ್ರಯೋಜನವಾಗಲಿಲ್ಲ, ತದನಂತರ ನೈಸ್ ವಂಚನೆ ವಿರೋಧಿ ಹೋರಾಟಗಳಲ್ಲಿ ಸಕ್ರಿಯನಾಗಿ ಗುರುತಿಸಿಕೊಳ್ಳತೊಡಗಿದ. ಆತನೆದೆಯಲ್ಲಿದ್ದದ್ದು ಫಲವತ್ತಾದ ಭೂಮಿ ಮತ್ತೆ ಸಿಕ್ಕೀತೆಂಬ ಉತ್ಕಟ ಆಸೆ. ಆದರೆ ದುಷ್ಟ ಖೇಣಿಯ ದುಷ್ಟಕೂಟ ಆ ಆಸೆಯ ಸಮೇತ ಸಿದ್ದಲಿಂಗ ಪ್ರಭುವನ್ನು ಕೊಂದು ಮುಗಿಸಿದೆ. ಈ ಮೂಲಕ ಕ್ರಿಮಿನಲ್ ಖೇಣಿ ತನ್ನ ವಿರುದ್ಧ ದನಿಯೆತ್ತುವವರಿಗೆಲ್ಲಾ ಇದೇ ಗತಿಯೆಂಬ ಸಂದೇಶವನ್ನೂ ರವಾನಿಸಿದ್ದಾನೆ.



ಈ ಕುಕೃತ್ಯದ ವಿರುದ್ಧ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇದರಲ್ಲಿ ನೈಸ್ ಖೇಣಿ ಮತ್ತವನ ಬಲಗೈ ಭಂಟ ರುದ್ರೇಶ ಆರೋಪಿ ಸ್ಥಾನದಲ್ಲಿದ್ದಾರೆ. ಇವರ ಕಡೆಯಿಂದ ಹತ್ಯೆಯನ್ನು ದಕ್ಕಿಸಿಕೊಳ್ಳುವ ಕಸರತ್ತುಗಳೂ ಕೇಸು ಬಿದ್ದ ಕ್ಷಣದಿಂದಲೇ ಜಾರಿಗೆ ಬಂದಿವೆ. ಆದರೆ ನೈಸ್ ವಿರೋಧಿ ಹೋರಾಟಗಾರರಿಗೆ ಹಾಗೂ ಸಿದ್ದಲಿಂಗ ಪ್ರಭುವಿಗೆ ಖೇಣಿ ಚೇಲಾ ಪಡೆ ನೀಡುತ್ತಾ ಬಂದ ಕಿರುಕುಳಗಳು ಎಲ್ಲವನ್ನೂ ಸ್ಪಷ್ಟಪಡಿಸುವಂತಿವೆ.

ಸಿದ್ದಲಿಂಗ ಪ್ರಭು ಹಾಗೂ ಆತನ ಸಂಬಂಧಿಗಳಾದ ಬಸಪ್ಪ, ಹೊನ್ನಪ್ಪ, ರೇಣುಕಾಪ್ರಸಾದ್‌ರದ್ದು ಸೋಮಪುರ ಸೀಮೆಯಲ್ಲಿನ ಗೌರವಸ್ಥ ಕೂಡು ಕುಟುಂಬ. ಇವರಿಗೆ ನಲವತ್ತು ಎಕರೆಯಷ್ಟು ಫಲವತ್ತಾದ ಜಮೀನಿತ್ತು. ಆದರೆ ನೋಡನೋಡುತ್ತಲೇ ನೈಸ್ ಪ್ರಾಜೆಕ್ಟ್‌ನ ಬಿಎಂಐಸಿ ಯೋಜನೆ ಈ ಜಮೀನನ್ನು ಆಪೋಶನ ತೆಗೆದುಕೊಂಡಿತ್ತು. ಇದರ ಬೆನ್ನಲ್ಲೇ ಈ ಭಾಗದ ಹತ್ತಾರು ರೈತ ಕುಟುಂಬಗಳು ಇದೇ ಸ್ಥಿತಿ ತಲುಪಿದವು. ಮನವಿ, ಗೋಗರೆತಗಳಿಗೆಲ್ಲಾ ಖೇಣಿ ಸಾಮ್ರಾಜ್ಯದಲ್ಲಿ ಬೆಲೆ ಸಿಗದಿದ್ದಾಗ ಇವರೆಲ್ಲಾ ನೈಸ್ ವಿರೋಧಿ ಹೋರಾಟದಲ್ಲಿ ಸಕ್ರಿಯರಾದರು.

ಸಿದ್ದಲಿಂಗ ಪ್ರಭುವಂತೂ ಯಾವ ಏರಿಯಾದಲ್ಲೇ ಆಗಲಿ ನೈಸ್ ವಂಚನೆ ವಿರುದ್ಧದ ಹೋರಾಟ ನಡೆದರೂ ಪಾಲ್ಗೊಳ್ಳುತ್ತಿದ್ದ. ಬರುಬರುತ್ತಾ ಮುಂಚೂಣಿಯಲ್ಲಿ ಕಾಣಿಸಿಕೊಳ್ಳಲಾರಂಭಿಸಿದ್ದ. ಇದು ಸಹಜವಾಗಿಯೇ ಖದೀಮ ಖೇಣಿಗೆ ಕಣ್ಣುರಿ ತರಿಸಿತ್ತು. ಖೇಣಿ ಶಿಷ್ಯ ರುದ್ರೇಶನೂ ಸೋಮಪುರದವನೇ ಆದುದರಿಂದ ಆ ಭಾಗದ ಕಿಡಿಗೇಡಿಗಳ ಮೂಲಕ ಸಿದ್ದಲಿಂಗಪ್ರಭುವನ್ನು ಕಾಡಲಾರಂಭಿಸಿದ್ದ. ತರಹೇವಾರಿ ರೀತಿಯಲ್ಲಿ ಬೆದರಿಕೆಗಳನ್ನು ಹಾಕಿಸಿದ್ದ. ಇದ್ಯಾವುದಕ್ಕೂ ಸಿದ್ದಲಿಂಗ ಬಗ್ಗದಿದ್ದಾಗ ವಿನಾಕಾರಣ ಹದಿನೈದರಷ್ಟು ಸುಳ್ಳುಕೇಸು ಜಡಿಸಿದ್ದ. ಇದಾದ ಬಳಿಕವೂ ಆತ ಹೋರಾಟದಲ್ಲಿ ಸಕ್ರಿಯನಾದನಲ್ಲಾ? ಆಗ ಖೇಣಿಯ ಟೀಮು ಪಕ್ಕಾ ಗೂಂಡಾಗಿರಿಗಿಳಿದಿತ್ತು, ಹಲ್ಲೆ ನಡೆಸುವಷ್ಟರ ಮಟ್ಟಿಗೂ ಮುಂದುವರೆದಿತ್ತು. ಇತ್ತೀಚೆಗೆ ಮದುವೆಯಾಗಿ ಒಂದು ಮಗುವಿಗೆ ತಂದೆಯಾಗಿದ್ದ ಸಿದ್ದಲಿಂಗ ಊರಲ್ಲಿ ಬದುಕಿರುವುದು ಸಾಧ್ಯವೇ ಇಲ್ಲವೆಂದಾದಾಗ ವರ್ಷದ ಹಿಂದೆ ಬೆಂಗಳೂರಿನ ಕೆಂಗೇರಿಯಲ್ಲೊಂದು ಬಾಡಿಗೆ ಮನೆಯಲ್ಲಿ ವಾಸಿಸಲಾರಂಭಿಸಿದ್ದ. ಆದರೂ ಸಹ ಆತ ನೈಸ್ ವಿರೋಧಿ ಹೋರಾಟದಲ್ಲಿ ಸಕ್ರಿಯನಾಗಿದ್ದ.

ಈ ಹೊತ್ತಿಗಾಗಲೇ ನೈಸ್ ವಿರೋಧಿ ಹೋರಾಟ ಪಂಚಲಿಂಗಯ್ಯನವರ ನೇತೃತ್ವದಲ್ಲಿ ಕಾವು ಪಡೆದುಕೊಂಡಿದ್ದು, ನಿರಾಶ್ರಿತ ರೈತರು ಮಾತ್ರವಲ್ಲದೆ ಇತರೆ ಸಮಾಜಮುಖಿ ಸಂಘಟನೆಗಳೂ ಇದಕ್ಕೆ ಸಾಥ್ ನೀಡಲಾರಂಭಿಸಿದ್ದವು. ಇದು ಹೀಗೇ ಮುಂದುವರೆದರೆ ಕಳ್ಳ ಖೇಣಿಯ ಅಸಲೀಯತ್ತುಗಳು ಬೆತ್ತಲಾಗುವುದು ದೂರವಿರಲಿಲ್ಲ. ಇಂಥ ಸಂದರ್ಭದಲ್ಲಿ ಜನಹೋರಾಟವನ್ನು ಹತ್ತಿಕ್ಕುವುದು ಸುಲಭದ ವಿಚಾರವಲ್ಲ ಎಂಬ ಸತ್ಯವೂ ಕಳ್ಳ ಖೇಣಿಗೆ ಮನವರಿಕೆಯಾಗಿ ಹೋಗಿತ್ತು, ಆಗ ಖೇಣಿಯ ದುಷ್ಟಕೂಟ ಅನಾಹುತಕಾರಿ ನಿರ್ಧಾರವೊಂದಕ್ಕೆ ಬಂದಿತು. ಹೋರಾಟದಲ್ಲಿ ಸಕ್ರಿಯನಾಗಿರುವ ರೈತನೊಬ್ಬನ ಹೆಣ ಕೆಡಹುವುದು, ಆ ಮೂಲಕ ಭಯ ಹುಟ್ಟಿಸುವುದು ಅದರ ತಾತ್ಪರ್ಯ. ಈ ದುಷ್ಟತನಕ್ಕೆ ಟಾರ್ಗೆಟ್ ಆದವನು ಸಿದ್ದಲಿಂಗ ಪ್ರಭು!

ಮೊನ್ನೆ ಸೋಮವಾರ ಬೆಳ್ಳಂಬೆಳಗ್ಗೆಯೇ ಮನೆಯಿಂದ ಹೊರಬಿದ್ದ ಸಿದ್ದಲಿಂಗ ಪ್ರಭು ಕೆಂಗೇರಿ ಉಪನಗರದ ಭೈರವಿ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಹೋಗಿದ್ದ. ಈತನನ್ನು ಹಿಂಬಾಲಿಸಿಕೊಂಡು ಬಂದ ಹಂತಕ ಪಡೆಯ ಸದಸ್ಯರಿಬ್ಬರು ಒಳಬಂದು ಪಕ್ಕದ ಟೇಬಲ್‌ನಲ್ಲೇ ಕೂತಿದ್ದಾರೆ. ನೋಡನೋಡುತ್ತಲೇ ಆ ಇಬ್ಬರ ಬಳಿಗೆ ಮತ್ತೊಂದು ಟೀಮು ಎಂಟ್ರಿಕೊಟ್ಟಿದೆ. ಆ ಬಳಿಕ ಏಕಾಏಕಿ ಸಿದ್ದಲಿಂಗ ಪ್ರಭುವನ್ನು ಎತ್ತಿಕೊಂಡು ಹೊರಬಂದ ಹಂತಕರು ಆತನನ್ನು ಕಾರಲ್ಲಿ ತುಂಬಿಕೊಂಡು ಮರೆಯಾಗಿದ್ದಾರೆ. ತದನಂತರ ತಲಘಟ್ಟಪುರ-ಕನಕಪುರ ರಸ್ತೆಯ ರಾಚನಮಡುವಿನ ಗ್ರೀನ್‌ವ್ಯಾಲಿ ಹತ್ತಿರ ಭಯಾನಕ ಹಲ್ಲೆ ನಡೆಸಿ, ಇರಿದು ಸಿದ್ದಲಿಂಗ ಪ್ರಭುವನ್ನು ಹತ್ಯೆಗೈದಿದ್ದಾರೆ. ಬಳಿಕ ಶವವನ್ನು ಹಳ್ಳಕ್ಕೆಸೆದು ಅಲ್ಲೇ ಊಟ-ಮದ್ಯ ಸಮಾರಾಧನೆ ನಡೆಸಿದ ಹಂತಕರು ಪರಾರಿ ಯಾಗಿದ್ದಾರೆ.

ಮುಂಜಾನೆ ಮನೆಯಿಂದ ಹೊರಟ ಪತಿ ಮಾರನೇ ದಿನ ಬೆಳಗಾದರೂ ವಾಪಸಾಗದಿದ್ದಾಗ ಹೆದರಿದ ಸಿದ್ದಲಿಂಗನ ಹೆಂಡತಿ ನೈಸ್ ವಿರೋಧಿ ಹೋರಾಟ ವೇದಿಕೆಯ ಪಂಚಲಿಂಗಯ್ಯನವರಿಗೆ ವಿಷಯ ಮುಟ್ಟಿಸಿದ್ದಾರೆ. ಅವರಿಗಾಗಲೇ ಇದು ಖೇಣಿ ಕಡೆಯ ಹಲಾಲುಕೋರರ ಕೆಲಸವೆಂಬುದು ಖಚಿತವಾಗಿ ಪೊಲೀಸರ ನೆರವಿನಿಂದ ಟವರ್ ಮೂಲಕ ಸಿದ್ದಲಿಂಗು ಇರಬಹುದಾಗಿದ್ದ ಸ್ಥಳ ಪತ್ತೆಹಚ್ಚಲಾಯ್ತು. ಬಳಿಕ ಕೆಂಗೇರಿ ಉಪನಗರ ಠಾಣೆಗೆ ದೂರು ದಾಖಲಿಸಬೇಕೆಂಬಷ್ಟರಲ್ಲಿ ಹಾರೋಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಶವ ಪತ್ತೆಯಾಗಿತ್ತು. ಸಿದ್ದಲಿಂಗ ಪ್ರಭುವಿನ ಶವವಿದ್ದ ಸ್ಥಿತಿ, ಭಯಾನಕ ಹಲ್ಲೆಗಳ ಗುರುತುಗಳಲ್ಲಿ ಅಕ್ಷರಶಃ ಅಮಾನವೀಯ ವಾಗಿದ್ದವು. ತಕ್ಷಣ ಈ ಬಗ್ಗೆ ತಲಘಟ್ಟಪುರ ಠಾಣೆಯಲ್ಲಿ ಅಶೋಕ್ ಖೇಣಿ ಮತ್ತವನ ಶಿಷ್ಯ ರುದ್ರೇಶನ ವಿರುದ್ಧ ದೂರು ದಾಖಲಿಸಲಾಗಿದೆ.

ದೂರು ದಾಖಲಿಸಿಕೊಂಡ ಪೊಲೀಸರು ವಾರದೊಪ್ಪತ್ತಲ್ಲೇ ಪ್ರಕರಣ ಭೇದಿಸುವುದಾಗಿ ಗುಟುರು ಹಾಕಿದ್ದಾರೆ. ಆದರೆ ಖೇಣಿಯ ಪ್ರಭಾವ ತನಿಖೆಯನ್ನು ಹಾದಿ ತಪ್ಪಿಸುವುದು ನಿಚ್ಚಳವಾಗಿದೆ. ಪ್ರಗತಿಪರ ಸಂಘಟನೆಗಳು ಸೂಕ್ತ ರೀತಿಯಲ್ಲಿ ಕಾರ್ಯಾಚರಿಸದಿದ್ದರೆ ಸಿದ್ದಲಿಂಗನ ಹತ್ಯೆ ಯಾರ್ಯಾರದ್ದೋ ನೆತ್ತಿ ಹತ್ತಿ ಕಳ್ಳ ಖೇಣಿ ಬಚಾವಾಗುವ ಅಪಾಯಗಳೂ ಇವೆ.

ನೈಸ್ ಹೆಸರಲ್ಲಿ ಖೇಣಿ ನಡೆಸುತ್ತಿರುವ ಅನಾಚಾರಗಳು ಒಂದೆರಡಲ್ಲ. ಕದ್ದ ದುಡ್ಡಿಂದ ಭ್ರಷ್ಟ ರಾಜಕಾರಣಿಗಳನ್ನು ಖರೀದಿಸಿ, ಖಾಕಿ ಪಡೆಯನ್ನು ಹದ್ದುಬಸ್ತಿನಲ್ಲಿಟ್ಟುಕೊಂಡಿರುವ ಖೇಣಿ ಅಭಿವೃದ್ಧಿಯ ಹರಿಕಾರನೆಂಬಂತೆ ಬಿಂಬಿಸಿಕೊಳ್ಳುತ್ತಿದ್ದಾನೆ. ಬಡರೈತರ ಎದೆಮೇಲೆ ಕೋಟಿ ಕೋಟಿ ಕಳ್ಳದುಡ್ಡಿನ ಮಹಲು ಕಟ್ಟಿ ಹೊರಟಿದ್ದಾನೆ.

ಹೀಗೆ ದೋಚಿದ ದುಡ್ಡು ಹರಡಿಕೊಂಡು ತಲೆಕೆಟ್ಟವನಂತಾಡುತ್ತಿರುವ ಖೇಣಿ ಸಿದ್ದಲಿಂಗ ಪ್ರಭುವಿನ ಕುಟುಂಬದಿಂದ ವಶಪಡಿಸಿಕೊಂಡಿರುವ ನಲವತ್ತೆಕರೆ ಜಮೀನಿನಲ್ಲಿ ಫಿಲ್ಮ್‌ಸಿಟಿ ತೆರೆಯುವ ಆಲೋಚನೆಯಲ್ಲಿದ್ದಾನಂತೆ. ಇದು ಆತನ ದುಷ್ಟತನಕ್ಕೊಂದು ಸ್ಯಾಂಪಲ್ ಅಷ್ಟೆ.

ಸದ್ಯ ಸಿದ್ದಲಿಂಗ ಪ್ರಭುವಿನ ಕೊಲೆಯ ಸಂಬಂಧ ಸ್ಥಳಕ್ಕೆ ತೆರಳಿದ ದೇವೇಗೌಡರು ಗಳಗಳನೆ ಅತ್ತು ವಾಪಸಾಗಿದ್ದಾರೆ. ಹತ್ತಿರದಲ್ಲೇ ಯಾವ ಚುನಾವಣೆಗಳೂ ಇಲ್ಲದಿರುವುದರಿಂದ ಅವರು ತೀವ್ರವಾಗಿ ಹೋರಾಟಕ್ಕಿಳಿಯುವ ಸೂಚನೆಗಳೂ ಇಲ್ಲ! ಆದರೆ ಖೇಣಿಯ ದುಷ್ಟತನದ ವಿರುದ್ಧ ಸರಿಯಾದದ್ದೊಂದು ಹೋರಾಟ ನಡೆಯಲೇಬೇಕಿದೆ. ಸಿದ್ದಲಿಂಗ ಪ್ರಭುವಿನ ಕೊಲೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆದು ಖೇಣಿಯ ಕೊಲೆಗಡುಕತನ ಜಾಹೀರಾಗಬೇಕಿದೆ.

ಇದಾಗದಿದ್ದರೆ ಖೇಣಿಯ ಕಳ್ಳ ಸಾಮ್ರಾಜ್ಯಕ್ಕೆ ಇನ್ನೊಂದಷ್ಟು ಮಂದಿ ರೈತರು, ಹೋರಾಟಗಾರರು ಬಲಿಯಾಗುವುದು ನಿಶ್ಚಿತ.

• ಸಂತೋಷ್ ಬಾಗಿಲಗದ್ದೆ

ಅಬ್ಬೇಪಾರಿ ರುದ್ರೇಶ ಅನಾಹುತಕಾರಿಯಾದ ಬಗೆ!

ಕಳ್ಳ ಖೇಣಿಯ ಮಾನಸ ಪುತ್ರನಂತೆ ಕಂಗೊಳಿಸುತ್ತಾ ಆತನ ಸಕಲ ವಂಚನೆಗಳಿಗೂ ಸಾಥ್ ನೀಡುತ್ತಿರುವಾತ ರುದ್ರೇಶ್. ಅಮಾಯಕ ರೈತರಿಂದ ನೈಸ್ ವಂಚನೆಗೆ ಭೂಮಿ ಕಸಿದುಕೊಳ್ಳುವುದರಿಂದ ಮೊದಲ್ಗೊಂಡು, ವಿರುದ್ಧ ನಡೆದವರಿಗೆ ಬೆದರಿಕೆ ಹಾಕುವವರೆಗೆ ಸಕಲವನ್ನೂ ನಿಭಾಯಿಸುವವನು ಈತನೆ.

ಸದ್ಯ ಕೋಟಿ ಕುಳವಾಗಿರುವ ರುದ್ರೇಶ್ ಕಂಠೀರವ ಕ್ರೀಡಾಂಗಣ ಉಸ್ತುವಾರಿ ಸಮಿತಿಯ ಅಧ್ಯಕ್ಷ. ಈತ ಮೂಲತಃ ಸೋಮಪುರದವನು. ಬಿಟಿಎಸ್ ಕಂಡೆಕ್ಟರ್‌ನ ಮಗ. ಸೋಮಪುರ ಸೀಮೆಯಲ್ಲಿ ರುದ್ರೇಶನ ತಂದೆ ಗೌರವಾನ್ವಿತರು. ಈತ ಕೂಡಾ ಸಭ್ಯನಾಗಿಯೇ ಇದ್ದವನು. ಇವರಿಗಿದ್ದ ಎಂಟತ್ತು ಎಕರೆಯನ್ನು ಬಿಡಿಎ ವಶಪಡಿಸಿಕೊಂಡ ನಂತರ ಒಂದಷ್ಟು ಪರಿಹಾರ ಧನ ಬಂದಿತ್ತು, ಆದರೂ ಕೂಡಾ 2003ರ ಆಸುಪಾಸಿನವರೆಗೂ ರುದ್ರೇಶ ಅಬ್ಬೇಪಾರಿಯಂತೆಯೇ ಇದ್ದ.


ಆದರೆ ಕಳ್ಳ ಖೇಣಿ ಮಂಡ್ಯ-ಸೋಮಪುರ ಭಾಗಕ್ಕೆ ನೈಸ್ ಪ್ರಾಜೆಕ್ಟ್‌ನ ಮೂಲಕ ಅಮರಿಕೊಂಡ ನೋಡಿ? ಆ ನಂತರದಿಂದ ರುದ್ರೇಶನ ಲಕ್ಕು ಖುಲಾಯಿಸಲಾರಂಭಿಸಿತ್ತು. ಖೇಣಿಗೆ ಕಾರ್ಪೋರೇಟ್ ಜಗತ್ತು, ಭ್ರಷ್ಟ ರಾಜಕಾರಣಿಗಳು ಮುಂತಾದ ಹೈಲೆವೆಲ್ ಸಂಪರ್ಕ ಇತ್ತೇ ಹೊರತು ಸಾಮಾಜಿಕವಾಗಿ ಯಾವ ಕಾಂಟ್ಯಾಕ್ಟುಗಳೂ ಇರಲಿಲ್ಲ, ಆದರೆ ಸೋಮಪುರ ಸುತ್ತಮುತ್ತಲ ರೈತರನ್ನ ಪಳಗಿಸಿಕೊಳ್ಳಲು ಅದು ತೀರಾ ಅನಿವಾರ್ಯವಾಗಿತ್ತು, ಆಗ ಖೇಣಿ ಕಣ್ಣಿಗೆ ಬಿದ್ದವನು ಸೋಮಪುರದ ಲಿಂಗಾಯತ ಹೈದ ರುದ್ರೇಶ!



ಹೀಗೆ ಖೇಣಿಗೆ ಹತ್ತಿರಾದ ರುದ್ರೇಶ ತದನಂತರ ಆತನ ಚೇಲಾ ಕಂ ಏಜೆಂಟ್ ಆಗಿ ಬದಲಾದ. ಸೋಮಪುರ ಸುತ್ತಲ ರೈತರನ್ನ ನೈಸಾಗಿ ವಂಚಿಸಿ ಫಲವತ್ತಾದ ಭೂಮಿಯನ್ನು ಕಿತ್ತುಕೊಂಡು ಕಳ್ಳ ಖೇಣಿಯ ಉಡಿಗೆ ಹಾಕಿದ. ಖೇಣಿಯ ಮೂಲಕವೇ ಸರ್ಕಾರಿ ಕಾಂಟ್ರಾಕ್ಟುಗಳನ್ನು ಪಡೆದುಕೊಂಡು ಥರಥರದ ಲಾಬಿ ದೀಲುಗಳನ್ನು ಮಾಡಲಾರಂಭಿಸಿದ. ಜೊತೆಗೆ ಕೆಲ ರೈತರ ಜಮೀನನ್ನು ನೈಸ್ ನೆಪದಲ್ಲಿ ತನ್ನದೇ ಹೆಸರಿಗೆ ನೋಂದಾಯಿಸಿಕೊಂಡ. ಇಂಥ ಘನಕಾರ್ಯಗಳಿಗೆಲ್ಲ ರುದ್ರೇಶನ ಅಣ್ಣ ರಾಜಶೇಖರ ಸಾಥ್ ನೀಡಲಾರಂಭಿಸಿದ. ಈ ಅಣ್ಣತಮ್ಮಂದಿರು ಕೂಡಿಕೊಂಡು ನೈಸ್ ವಿರೋಧಿ ಹೋರಾಟಗಳು ನಡೆದಾಗಲೆಲ್ಲ ಖೇಣಿ ಪರ ಹೋರಾಟ ಸಂಘಟಿಸಲಾರಂಭಿಸಿದರು. ಈ ಹೊತ್ತಲ್ಲೇ ತಣ್ಣಗೆ ರಿಯಲ್ ಎಸ್ಟೇಟ್ ದಂಧೆಗೆ ಕೈಹಚ್ಚಿದ ರಾಜಶೇಖರ ಇದೀಗ ಕೆಂಗೇರಿಯಲ್ಲಿ ಎಂಆರ್‌ಆರ್ ಡೆವಲಪರ್ಸ್ ಅಂತೊಂದು ಅಂಗಡಿ ತೆರೆದು ದಂಧೆ ನಡೆಸುತ್ತಿದ್ದಾನೆ. ಈಗೊಂದು ಏಳೆಂಟು ವರ್ಷದ ಹಿಂದೆ ಅಬ್ಬೇಪಾರಿಯಂತಿದ್ದ ರುದ್ರೇಶನೀಗ ಕೋಟಿ ಕುಳವಾಗಿ ಬದಲಾಗಿದ್ದಾನೆ. ಸಿನಿಮಾಗಳಿಗೂ ಫೈನಾನ್ಸ್ ಮಾಡುತ್ತಿದ್ದಾನೆ. 'ಗುಬ್ಬಿ' ಮುಂತಾದ ಹಲವಾರು ಚಿತ್ರಗಳಿಗೆ ಇದೀಗಲೇ ಹಣ ಹಾಕಿರುವ ರುದ್ರೇಶ್ ದುನಿಯಾ ವಿಜಯ 'ಭೀಮಾ ತೀರದ ಹಂತಕರು' ಚಿತ್ರಕ್ಕೂ ಫೈನಾನ್ಸಿಯರ್. ಅಣಜಿ ನಾಗರಾಜ್‌ನ ಖಾಯಂ ಪಾರ್ಟನರ್.

ಹಾಗಂತ ರುದ್ರೇಶ್ ವ್ಯಕ್ತಿಗತವಾಗಿ ದುಷ್ಟನಲ್ಲ, ಅಹಂಕಾರಿಯೂ ಅಲ್ಲ. ಆದರೆ ಖೇಣಿಯ ಮರ್ಜಿಗೆ ಬಿದ್ದು ಮಾಡಬಾರದ ಕೆಲಸಗಳನ್ನೆಲ್ಲ ಮಾಡುತ್ತಿದ್ದಾನೆ. ಅದಕ್ಕೆ ಸಿದ್ದಲಿಂಗ ಪ್ರಭುವಿನ ಹತ್ಯೆಯೇ ಸಾಕ್ಷಿ...

ಕಾರವಾರ ಅಸಡ್ಡಾಳ ಅಸ್ನೋಟಿಕರ್ ಫಿಶ್ ಮಿಲ್ ಅವ್ಯವಹಾರ!



ಬಿಂದರು ನಗರಿ ಕಾರವಾರ ಕಂಗಾಲಾಗಿ ಕೂತಿದೆ! ಅದ್ಯಾವ ಕೆಟ್ಟ ಕ್ಷಣದಲ್ಲಿ ಅಡ್ನಾಸುಬಿ ಆನಂದ್ ಅಸ್ನೋಟಿಕರ್ ಈ ಕ್ಷೇತ್ರದ ಶಾಸಕನಾಗಿದ್ದನೋ ಏನೋ?! ಆ ಗಳಿಗೆಯಲ್ಲೇ ಕಾರವಾರ-ಅಂಕೋಲಾ ಕ್ಷೇತ್ರಕ್ಕೆ 'ರಾಹು' ಹೊಕ್ಕಂತಾಗಿಬಿಟ್ಟಿತ್ತು!! ಶಾಸಕ ನಾದಂದಿನಿಂದ ಅಸ್ನೋಟಿಕರ್ ಶುರು ಹಚ್ಚಿಕೊಂಡಿದ್ದ ಅವಾಂತರ-ಅನ್ಯಾಯ-ಅಕ್ರಮ-ಅವ್ಯವಹಾರ-ಅನಾಚಾರಗಳೆಲ್ಲವೂ ಇವತ್ತಿಗೂ ಹಾಗೇ ನಿರಾಂತಕವಾಗಿ ಮುಂದುವರೆದಿವೆ. ಕನಿಷ್ಠ ಮುನ್ಸಿಪಾಲ್ಟಿ ಮೆಂಬರಿಕೆಗೂ ಯೋಗ್ಯನಲ್ಲದ ಈ ಉಂಡಾಡಿ ಪುಂಡನ ಅಹಂಕಾರ-ಅಧಿಕ ಪ್ರಸಂಗ-ದುಡ್ಡಿನ ದಾಹದ ಹುಚ್ಚಾಟಕ್ಕೆ ಅಂಕೋಲಾ ಕಾರವಾರದ ಜನರು ದೊಡ್ಡ ದಂಡ ತೆರುತ್ತಿರುವುದು ಮಾತ್ರ ಘೋರ ದುರಂತವೇ ಸರಿ!

ಕಾರವಾರ ಕ್ಷೇತ್ರ ಶಾಸಕನಿದ್ದೂ ಸತ್ತಂಥ ಸ್ಥಿತಿಯಲ್ಲಿದೆ. ಎಮ್ಮೆಲ್ಲೆಯಾದ ನಲವತ್ತೈದೇ ದಿನಕ್ಕೆ ಕಾಂಗ್ರೆಸ್ ಬಿಟ್ಟು ಬಿಜೆಪಿ ಪಾಲಾಗಿದ್ದ ಅಸ್ನೋಟಿಕರ್ ಅಲ್ಲಿಂದಿಲ್ಲಿಗೂ ಮಾಡಿದ್ದು ಪರಮ ಜನದ್ರೋಹದ ದಗಲ್ಬಾಜಿ ದಂಧೆಗಳೇ. ಯಡ್ಡಿ ಸರ್ಕಾರದಲ್ಲಿ ಮಂತ್ರಿಯಾಗಿದ್ದೇ ತಡ, ಆತನ ದೋನಂಬರ್ ಖಯಾಲಿಗಳಿಗೆಲ್ಲ ಖತರ್‌ನಾಕ್ ಖದರ್ರು ಬಂದುಬಿಟ್ಟಿತು! ಜನ ಬಳಕೆಯ ರೌಡಿ ಎಮ್ಮೆಲ್ಲೆ ಅನ್ನಿಸಿದ್ದ ಆನಂದ್ ಅಸ್ನೋಟಿಕರ್‌ನ ಅಪ್ಪ ವಸಂತ್ ಅಸ್ನೋಟಿಕರ್‌ನಿಂದ ಮಗನಿಗೆ ಕೋಟ್ಯಂತರ ರೂಪಾಯಿ ಕಳ್ಳ ವಹಿವಾಟಿನ ಕಾರವಾರ ಬಂದರು ಮಾಫಿಯಾ ಡಾನ್‌ಗಿರಿ ಬಳುವಳಿಯಾಗಿ ಬಂದಿತ್ತು. ಮಂತ್ರಿ ಸ್ಥಾನ-ಮಾನದಿಂದ ತನ್ನ ಕಳ್ಳ ಸಾಮ್ರಾಜ್ಯ ವಿಸ್ತರಣೆಯ ಚಟಕ್ಕೆ ಬಿದ್ದ ಅಸ್ನೋಟಿಕರ್ ಒಂದರ ಹಿಂದೊಂದರಂತೆ ಹರಾಮಿ ಕಾರ್ಯಾಚರಣೆ ಮಾಡತೊಡಗಿದೆ.

ಕಟ್ಟುನಿಟ್ಟಿನ ಸಿಆರ್‌ಝಡ್ ಕಾನೂನನ್ನೇ ಕಡೆಗಣಿಸಿ 'ಲೋಟಸ್' ಎಂಬ ಬಹುಮಹಡಿ ರೆಸಾರ್ಟ್ ಅನ್ನು ಕಾರವಾರ ಸಮುದ್ರದಲ್ಲೇ ಕಟ್ಟನಿಲ್ಲಿಸಿರುವ ಈ ಧಗಾಕೋರ ಕಾಳಿ ನದಿ ಉಸುಕು ಮಾಲ್ಡೀವ್ಸ್‌ಗೆ 'ಕಳ್ಳ ಸಾಗಾಣಿಕೆ' ಮಾಡಲು ಹವಣಿಸಿದಾಗ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ದೊಡ್ಡ ರಂಪ-ರಗಳೆಯೇ ಆಯ್ತು. ಅಸ್ನೋಟಿಕರ್‌ನ ದುಡ್ಡಿನ ದುರಾಸೆಯಿಂದ ಕಾರವಾರದ ಉಸುಕುಗಾರಿಕೆಯೇ ಬಂದ್ ಆಗುವಂತಾಯ್ತು. ಇವತ್ತು ಕಾಮಗಾರಿಗೆ ಉಸುಕಿಲ್ಲದೆ ಕಾರವಾರವಿಡೀ ಹೈರಾಣಾಗಿದೆ. ಸದಾ ದುಡ್ಡು ಮಾಡುವ ಅಡ್ಡದಾರಿ ಅನ್ವೇಷಣೆಯಲ್ಲೇ ಇರುವ ಅಸ್ನೋಟಿಕರ್ ಬೇಲೇಕೇರಿ ಬಂದರಿನಲ್ಲಿ ಸರ್ಕಾರಿ ಜಾಗ-ಸಮುದ್ರ ಕಬಳಿಸಿ ಅದಿರು ರಫ್ತು ಮಾಡುವ ಜಟ್ಟಿ ಕಟ್ಟಲು ಕರಾಮತ್ತು ಮಾಡಿದ್ದು ದೊಡ್ಡ ವಿವಾದವನ್ನೇ ಸೃಷ್ಟಿಸಿತ್ತು. ಎದುರಾಳಿ ಸತೀಶ್ ಸೈಲ್‌ನಂತೆ ತಾನೂ ಭರ್ಜರಿ ಅದಿರು ಎಕ್ಸ್‌ಪೋರ್ಟರ್ ಆಗಬೇಕೆಂಬ ದ್ವೇಷಾಸೂಯೆಯ ಸ್ಪರ್ಧೆಗೆ ಬಿದ್ದಿದ್ದ ಈ 'ಸುಂದರ ರಾವಣ' ಬೇಲೇಕೇರಿಯಿಂದ ಅಂದು ಸುಟ್ಟ ಬೆಕ್ಕಂತೆ ಓಡಿ ಹೋಗುವಂತಾಗಿತ್ತು.

ಬಿಜೆಪಿ ಭೂಪ ವೆಂಕಯ್ಯ ನಾಯ್ಡುನ ಅಳಿಯನ ಕಲ್ಲಿದ್ದಲು ವಿದ್ಯುತ್ ಕಂಪನಿ ದಾದಾಗಿರಿಯಿಂದ ಕಾರವಾರದ ಹಣಕೋಣಕ್ಕೆ ವಕ್ಕರಿಸಿದಾಗ ಈ ಆಂಧ್ರವಾಳ್ಳುಗಳಿಗೆ ಬೆಂಗಾವಲಾಗಿ ನಿಂತು ಕಾಸು ಬಾಚಿದ್ದ. ಈ ಜೀವ ವಿರೋಧಿ ಯೋಜನೆ ವಿರುದ್ಧ ಜನ ತಿರುಗಿಬಿದ್ದಾಗ ಪಾಪಿ ಅಸ್ನೋಟಿಕರ್ ಪ್ರತಿಭಟನಾಕಾರರ ಮೇಲೆ ಪೊಲೀಸರನ್ನು ಛೂಬಿಟ್ಟು ರಕ್ತಪಾತ ಮಾಡಿಸಿದ್ದು; ಆಂಧ್ರವಾಳ್ಳುಗಳ ಅಮೇಧ್ಯದ ಆಸೆಗೆ ಕಾರವಾರ ರೌರವ ನರಕವಾಗಿಸಿದ್ದ. ಆದರೆ ಜನರ ಸಾತ್ವಿಕ-ನ್ಯಾಯಬದ್ಧ ಸಿಟ್ಟಿಗೆ ಹೆದರಿದ ಥರ್ಮಲ್ ಕರೆಂಟ್ ಕಂಪನಿ ಖಳರು ಕಾರವಾರದಿಂದ ಕಾಲ್ಕಿತ್ತು ಬಚಾವಾಗಿದ್ದರು, ಆ ಮಾತು ಬೇರೆ. "ಆಪರೇಷನ್ ಕ-ಮಲ" ಮಾಡಿಸಿಕೊಂಡಿದ್ದಕ್ಕೆ ಬೇಲೇಕೇರಿ-ಬೆಂಗಳೂರಲ್ಲಿ ಎಕರೆಗಟ್ಟಲೇ ಜಮೀನು ಈ ಅಸ್ನೋಟಿಕರ್‌ಗೆ ಯಡ್ಡಿ ಬಕ್ಷೀಸ್ ಆಗಿ ಕೊಟ್ಟಿದ್ದರು. ಯಾವಾಗ ಗರ್ಭಗುಡಿ ಸಂಸ್ಕೃತಿಯ ಬಿಜೆಪಿಯಲ್ಲಿ ಈ ಶೂದ್ರಪ್ರಾಣಿ ಮಾನ-ಮರ್ಯಾದೆ ಇಲ್ಲದೆ ಮೂಲೆ ಗುಂಪಾದನೋ ಆಗ ಯಡ್ಡಿಗೆ ಬೈಯ್ಯತೊಡಗಿದ್ದ. ಆಗ ಬಿಜೆಪಿಯ ಪುರೋಹಿತರ 'ಅನರ್ಹ' ಶಾಪಕ್ಕೆ ಅಸ್ನೋಟಿಕರ್ ತುತ್ತಾಗಿದ್ದನಲ್ಲವೆ? ಅನರ್ಹತೆಯ ಅವಧಿಯಲ್ಲೇ ಚಿಡ್ಡಿ ಸರ್ಕಾರ ಅಸ್ನೋಟಿಕರ್‌ನ 'ಇನಾಮ್ ಭೂಮಿ' ಕಸಿದುಕೊಂಡು ತಿರುಬೋಕಿ ಮಾಡಿತ್ತು.

ಇಂಥ ಗಂಡಾಗುಂಡಿಗಳೇ ಮಂತ್ರಿಗಿರಿ-ಶಾಸಕತ್ವಕ್ಕೆಲ್ಲ ಭೂಷಣವೆಂಬಂತೆ ಹಾರಾಡತೊಡಗಿದ್ದ ಅಸ್ನೋಟಿಕರ್‌ನ ಇಮೇಜ್ ಆತನ ತವರಲ್ಲೇ ನಿರ್ನಾಮ ಮಾಡಲು ಸ್ವ-ಪಕ್ಷದೊಳಗಿನ ಪರಮವೈರಿ ಕಾಗೇರಿ ಮಾಣಿ ಕೈತೋಳೇರಿಸಿಕೊಂಡು ಬೆನ್ನತ್ತಿದ್ದರು! ಆರೆಸ್ಸೆಸ್ ಲಾಬಿ, ಕ್ಯಾಬಿನೆಟ್‌ನ ಸೀನಿಯಾರಿಟಿ ಮತ್ತು ಬಿಜೆಪಿ ಒರಿಜಿನಾಲಿಟಿ ಎಂಬ ತ್ರಿವಿಧ ಅಸ್ತ್ರ ಅಸ್ನೋಟಿಕರ್‌ನ ನೆತ್ತಿ ಮೇಲೆ ಪ್ರಯೋಗಿಸಿ ಕಾಗೇರಿ ಶತ್ರುವನ್ನು ಹೈರಾಣಾಗಿಸಿಬಿಟ್ಟರು. ಹಸೀ ಹುಂಬ ಅಸ್ನೋಟಿಕರ್‌ಗೆ ಗುಳ್ಳೆನರಿ ಕಾಗೇರಿ ತಂತ್ರಗಾರಿಕೆಗೆ ಪ್ರತಿ ಪಟ್ಟು ಹಾಕಲಾಗಲೇ ಇಲ್ಲ. ಜಿಲ್ಲಾ ಕೇಂದ್ರ ಕಾರವಾರದ ಕಿಮ್ಮತ್ತೇ ಕಮ್ಮಿ ಮಾಡಿ ತನ್ನ ಹೈಗರ ಸಾಮ್ರಾಜ್ಯದ ರಾಜಧಾನಿ ಶಿರಸಿಗೆ ಮಹತ್ವ ಬರುವಂತೆ ತುಂಬ ರಹಸ್ಯ-ವ್ಯವಸ್ಥಿತವಾಗಿ ಕಾಗೇರಿ ಕಾರ್ಯಾಚರಣೆ ನಡೆಸಿದ್ದರು. ಈ ಮದ್ದಾನೆಗಳ ಗುದ್ದಾಟದಲ್ಲಿ ಕಾರವಾರ-ಅಂಕೋಲೆಯ ಅಭಿವೃದ್ಧಿ ಮಾತ್ರ ಬರೋಬ್ಬರಿ ಒಂದು ಯುಗ ಹಿಂದಕ್ಕೆ ಸರಿಯಿತು.



ಯಡ್ಡಿಗೆ ಬಾಯಿಗೆ ಬಂದಂತೆ ಬೈದು ಶಾಸಕತ್ವದಿಂದಲೇ ಅನರ್ಹನಾಗಿ ಆರೆಂಟು ತಿಂಗಳು ಅಂತರ್ ಪಿಶಾಚಿಯಂತೆ ಅಂಡಲೆದ ಅಸ್ನೋಟಿಕರ್ 'ಅರ್ಹ'ನಾಗಿದ್ದೇ ತಡ, ಮಾನ-ಮರ್ಯಾದೆಯೆಲ್ಲ ಬಿಟ್ಟು ಮತ್ತದೇ ಬಿಜೆಪಿಯೊಳಗೆ ತೂರಿಕೊಂಡು ಜೊಲ್ಲು ಸುರಿಸತೊಡಗಿದ್ದ; ಡೀವಿ ಸರ್ಕಾರ ರಚನೆ ಹೊತ್ತಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಹರಕುಬಾಯಿ ಈಶ್ವರಪ್ಪನಿಗೆ ಕೋಟಿ-ಕಾಣಿಕೆ ಕೊಟ್ಟು ಮಂತ್ರಿಗಿರಿ ಖರೀದಿಸಿದ್ದ. ಇದೆಲ್ಲ ಹಳೇ ಕತೆ ಪುರಾಣ. ಆದರೆ ಆತನ ಲೇಟೆಸ್ಟ್ ಲಫಡಾಗಳೀಗ ದಿನಕ್ಕೊಂದರಂತೆ ನಡೆಯುತ್ತಿದೆ. ಮತ್ತೆ ಮಂತ್ರಿ ಆಗಿದ್ದೇ ಆತನೊಳಗಿನ ದೋನಂಬರ್ ದಂಧೆದಾರ ಅಟ್ಟಹಾಸಗೈಯ್ಯತೊಡಗಿದ್ದಾನೆ. ಸಚಿವ ಸ್ಥಾನ-ಮಾನ ಬಳಸಿಕೊಂಡು ಕಾರವಾರದಿಂದ ಬಾಗಲಕೋಟೆ-ಇಳಕಲ್ ಕಡೆಯ ಗ್ರಾನೈಟ್ ಕಲ್ಲುಗಳನ್ನು ಕಾರವಾರ ಬಂದರಿನಿಂದ ವಿದೇಶಕ್ಕೆ ಕಳ್ಳ ಸಾಗಾಣಿಕೆ ಮಾಡುವ ಸ್ಕೆಚ್ ಅಸ್ನೋಟಿಕರ್ ಹಾಕಿಕೊಂಡು ಕೂತಿದ್ದಾನೆ. ಮತ್ತೊಂದೆಡೆ ಪರಿಸರ ಮಾಲಿನ್ಯ ಮಾಡುವ ಫಿಶ್ ಮಿಲ್ ಕಾರವಾರದ ಬೈತಖೋಲ್ ಎಂಬಲ್ಲಿ ನಡೆಸುತ್ತಿರುವ ಆಂಧ್ರದ ಧಗಾಕೋರ ಉದ್ಯಮಿಗಳಿಗೆ ಸಾಥ್ ಕೊಟ್ಟು ಗೋಲ್‌ಮಾಲ್ ದಂಧೆ ಗಿಳಿದಿದ್ದಾನೆ. ಈ ದಗಲುಬಾಜಿ ವ್ಯವಹಾರದಲ್ಲಾತ ಕೇಂದ್ರ ಕಸ್ಟಮ್ಸ್ ಇಲಾಖೆಗೂ ಮಕ್‌ಮಲ್ ಟೋಪಿ ಏರಿಸಿದ್ದಾನೆ.

ಫಿಶ್ ಮಿಲ್ ಭಾನ್ಗಡಿ

ಬಿಜೆಪಿಯ ಬಾರಾ ಭಾನ್ಗಡಿ ಸಚಿವರ ಸಾಲಿಗೆ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಿ ಆನಂದ್ ಅಸ್ನೋಟಿಕರ್ ಹೊಸ ಎಂಟ್ರಿ! ಆಂಧ್ರ ಪ್ರದೇಶದ ವಿಜಯವಾಡದ ಶ್ಯಾಮಪ್ರಸಾದ್ ಮತ್ತು ಕೃಷ್ಣಪ್ರಸಾದ್ ಎಂಬ ಸೋದರರ ನಡುವಿನ ವ್ಯವಹಾರಿಕ ವೈಷಮ್ಯ ದುರುಪಯೋಗಿಸಿಕೊಂಡು ಆನಂದ್ ಅಸ್ನೋಟಿಕರ್ ಅಕ್ರಮ ಫಿಶ್ ಮಿಲ್ ಉದ್ಯಮ ನಡೆಸುತ್ತಿರುವುದೀಗ ಕಾರವಾರದಲ್ಲಿ ದೊಡ್ಡ ಗಲಾಟೆ-ಗೌಜಿ ಎಬ್ಬಿಸಿಬಿಟ್ಟಿದೆ. ಶ್ಯಾಮ್‌ಪ್ರಸಾದ್ ಜೊತೆ ಸೇರಿರುವ ಅಸ್ನೋಟಿಕರ್ ತನ್ನ ತಾಯಿ ಮಾಜಿ ಎಮ್ಮೆಲ್ಸಿಣಿ ಶುಭಲತಾ ಅಸ್ನೋಟಿಕರ್ ಪಾಲುದಾರಿಕೆಯ ನಕಲಿ ಕಂಪನಿಯೊಂದನ್ನು ಹುಟ್ಟು ಹಾಕಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ವಂಚಿಸುತ್ತಿದ್ದಾನೆಂಬುದೇ ಈ ಕೇಸ್‌ನ ಒಟ್ಟಾರೆ ತಿರುಳು.


ಫಿಶ್ ಮಿಲ್-ಅಂದರೆ ಮೀನಿನಿಂದ ಗೊಬ್ಬರ-ಮೀನೆಣ್ಣೆ ತಯಾರಿಸುವ ಘಟಕ. ವಿದೇಶಕ್ಕೆ ರಫ್ತಾಗುವ ಮೀನೆಣ್ಣೆ ಬಿಸಿನೆಸ್ ಕೋಟ್ಯಂತರ ರೂಪಾಯಿ ಟರ್ನ್‌ವರ್ ಇರುವಂಥದ್ದು. ಇಂಥದೊಂದು ಫಿಶ್ ಮಿಲ್ ವಿಜಯವಾಡದ ಶ್ಯಾಮ್‌ಪ್ರಸಾದ್ ಮತ್ತು ಕೃಷ್ಣ ಪ್ರಸಾದ್ ಎಂಬ ಅಣ್ಣ-ತಮ್ಮ ಕಳೆದ ಮೂರು ವರ್ಷದಿಂದ ಕಾರವಾರದ ಬೈತಖೋಲ್‌ನಲ್ಲಿ ನಡೆಸುತ್ತಾ ಬಂದಿದ್ದಾರೆ. ವಿಜಯವಾಡದ ವೇಮುರಿ ಫ್ಯಾಮಿಲಿಯ ಮೆ. ಸಾಯಿ ಅನ್ನಪೂರ್ಣ ಬಯೋ ಪ್ರೋಟಿನ್ಸ್ ಪ್ರೈ ಲಿ. ಕಂಪನಿಯಲ್ಲಿ ಒಡಕು ಉಂಟಾಗಿ ಅಣ್ಣ-ತಮ್ಮ ಜಗಳಕ್ಕೆ ಬಿದ್ದಿದ್ದಾರೆ. ಟಿವಿ-9, ರಿಲಯನ್ಸ್‌ನಂಥ ದೊಡ್ಡ ಕಂಪನಿಗಳಲ್ಲಿ ಅಪಾರ ಶೇರು ಹೊಂದಿರುವ ಈ ವೇಮುರಿ ಫ್ಯಾಮಿಲಿ ಜಗಳ ತನ್ನ ಲಾಭಕ್ಕೆ ಮೀನುಗಾರಿಕೆ ಮಂತ್ರಿಗಿರಿ ಪ್ರಭಾವದಿಂದ ಅಸ್ನೋಟಿಕರ್ ಬಳಸಿಕೊಂಡಿದ್ದಾರೆಂಬುದು ಎಂಥ ಗಾಂಪನಿಗೂ ಈ ಪ್ರಕರಣ ಪರಾಮರ್ಶಿಸಿದಾಗ ಅರ್ಥವಾಗುತ್ತದೆ.

ಸೀಜ್‌ಗೆ ಆದೇಶ

ವೇಮುರಿ ಕುಟುಂಬದ ಸಾಯಿ ಅನ್ನಪೂರ್ಣ ಬಯೋ ಪ್ರೋಟಿನ್ಸ್ ಕಂಪನಿಯ ಬೈತಖೋಲ್ ಫಿಶ್ ಮಿಲ್‌ನಿಂದ ಪರಿಸರ ನಾಶವಾಗುತ್ತಿದೆ. ಫ್ಯಾಕ್ಟರಿಯ ಸುತ್ತ ಗಬ್ಬುನಾಥ ಹಬ್ಬಿದೆ; ಇದರಿಂದ ಸುತ್ತಲಿನವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗುತ್ತಿದೆ ಎಂಬ ಕೂಗು ಎದ್ದಿತ್ತು. ಆಗ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮಾಲಿನ್ಯ ನಿಯಂತ್ರಿಸಲು ಕಂಪನಿಗೆ ಕಟ್ಟಾಜ್ಞೆ ಮಾಡಿತ್ತು. ಆದರೆ ಕೌಟುಂಬಿಕ ಕಲಹದಿಂದ ಮಿಲ್ ಎಂ.ಡಿ. ಕೃಷ್ಣಪ್ರಸಾದ್ ಮಾಲಿನ್ಯ ನಿಯಂತ್ರಿಸುವ ಆಧುನಿಕ ಇಟಿಪಿ ಯಂತ್ರ ಅಳವಡಿಸಲು ಸಾಧ್ಯವಾಗಲಿಲ್ಲ. ಇದೇ ನೆಪದಿಂದ ಮಿಲ್ ಬಂದ್ ಮಾಡಿಸಿ ಅಣ್ಣನಿಗೆ ದೋಖಾ ನೀಡಲು ತಮ್ಮ ಮಸಲತ್ತು ಮಾಡಿದ್ದ. ಮಿಲ್‌ನ ವ್ಯವಸ್ಥಾಪಕ ನಿರ್ದೇಶಕ ಕೃಷ್ಣಪ್ರಸಾದ್ ಮಾಲಿನ್ಯ ನಿಯಂತ್ರಣ ಮಂಡಳಿಗೊಂದು ಪತ್ರ ಬರೆದು ತಾನು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಯಾವುದೇ ಸುಧಾರಣೆ ಸಾಧ್ಯವಾಗುತ್ತಿಲ್ಲ, ಹಾಗಾಗಿ ತಾವು ಬೇಕಾದ ಕ್ರಮ ತೆಗೆದುಕೊಳ್ಳಬಹುದು-ಎಂದು ಹೇಳಿದರು. ಆಗ ಅನಿವಾರ್ಯವಾಗಿ ಪರಿಸರ ಮಂಡಳಿ ಸದ್ರಿ ಕಂಪನಿ ಮುಚ್ಚಲು ಆದೇಶ ಹೊರಡಿಸಿತ್ತು.

ಮಿನಿಸ್ಟರಿಕೆ ಮಸಲತ್ತು

ಯಾವಾಗ ಮಾಲಿನ್ಯ ನಿಯಂತ್ರಣ ಮಂಡಳಿ ಬೈತಖೋಲದ ಸಾಯಿ ಅನ್ನಪೂರ್ಣ ಫಿಶ್ ಮಿಲ್ ಬಂದ್‌ಗೆ ಆದೇಶ ನೀಡಿತ್ತೋ, ಆಗ ಮೀನುಗಾರಿಕಾ ಮಂತ್ರಿ ಆನಂದ್ ಅಸ್ನೋಟಿಕರ್ ರಂಗ ಪ್ರವೇಶ ಮಾಡಿದ. ಹೇಗಾದರೂ ಮಾಡಿ ಲಾಭದಾಯಕವಾದ ಈ ಫಿಶ್ ಮಿಲ್ ಉಳಿಸಿಕೊಳ್ಳುವ ನೆಪದಲ್ಲಿ ಕಟಿಪಿಟಿ ಶುರು ಹಚ್ಚಿಕೊಂಡಿದ್ದ ಅಣ್ಣ ಶ್ಯಾಮ್‌ಪ್ರಸಾದ್ ಸಹಜವಾಗೇ ಮೀನುಗಾರಿಕಾ ಮಂತ್ರಿ, ಅಸ್ನೋಟಿಕರ್‌ನನ್ನು 'ರಹಸ್ಯ'ವಾಗಿ ಸಂಧಿಸಿದರು. ಮೀನುಗಾರಿಕಾ ಇಲಾಖೆಯ ಫೆಡರೇಷನ್ ಜಾಗದಲ್ಲಿರುವ ಈ ಮೀನು ಮಿಲ್ 'ರಕ್ಷಣೆ'ಗೆ ಅಸ್ನೋಟಿಕರ್ ತುಂಬ ಮುತುವರ್ಜಿಯಿಂದ ಕಾರ್ಯಾಚರಣೆ ಆರಂಭಿಸಿದ.



ದೊಡ್ಡ ಲಾಭ ತರುವ, ವಿದೇಶಕ್ಕೂ ರಫ್ತಾಗುವ ಮೀನೆಣ್ಣೆ ಫ್ಯಾಕ್ಟರಿ ಕಟ್ಟುವ ಕನಸು ಕಾಣುತ್ತಿದ್ದ ಅಸ್ನೋಟಿಕರ್‌ಗೆ ವೇಮುರಿ ಪ್ರಸಾದ್‌ಗಳ ಕಿತ್ತಾಟ 'ವರ'ವಾಗಿ ಪರಿಣಮಿಸಿತು. ಹಣವಂತ ಶ್ಯಾಮ್ ಪ್ರಸಾದ್‌ನನ್ನು ಬುಟ್ಟಿಗೆ ಹಾಕಿಕೊಂಡು ಗೋವಾದ ತಾಂಡಾದಲ್ಲೊಂದು ಇಂಥದೇ ಮೀನೆಣ್ಣೆ ಮಿಲ್ ಸ್ಥಾಪಿಸಲು ಅಸ್ನೋಟಿಕರ್ ಸ್ಕೆಚ್ ಹಾಕಿದ. ಇದಕ್ಕೆ ಶ್ಯಾಮ್ ಪ್ರಸಾದ್ ಒಪ್ಪಿದ ತಕ್ಷಣವೇ ಶ್ಯಾಮ್ ಪ್ರಸಾದ್ ಮತ್ತು ಅಸ್ನೋಟಿಕರ್ ತಾಯಿ ಶುಭಾಲತಾರ ತಲಾ ಶೇ. 50 ಷೇರಿರುವ 'ಸಾಯಿ ಅನ್ನಪೂರ್ಣ ಬಯೋಪ್ರೋಟಿನ್ (ಗೋವಾ) ಪ್ರೈಲಿ" ಎಂಬ ಕಂಪನಿ ಸ್ಥಾಪಿಸಲಾಯಿತು.

ಡಿಸಿ ಮೇಲೆ ಒತ್ತಡ

ಆನಂದ್ ಅಸ್ನೋಟಿಕರ್ ಒಂದೊಂದಾಗಿ ಮಂತ್ರಿಗಿರಿ ಮಲಸತ್ತು ಪ್ರಯೋ... ಲಾರಂಭಿಸಿದ. ಬೈತಖೋಲ್‌ನ ಮೀನೆಣ್ಣೆ ಘಟಕ ತಕ್ಷಣ ಮುಚ್ಚುವಂತೆ ಪರಿ... ಮಾಲಿನ್ಯ ನಿಯಂತ್ರಣ ಮಂಡಳಿ ಜಿಲ್ಲಾಧಿಕಾರಿಗೆ ಆದೇಶಿಸಿದರೂ ಅದು ಅನುಷ್ಠಾನವಾಗುವುದೇ ಇಲ್ಲ. ಹೆಸ್ಕಾಮ್ ಫಿಶ್ ಮಿಲ್‌ಗೆ ವಿದ್ಯುತ್ ಸಪ್ಲೈ ಮಾ.ನಿ. ಮಂ... ಆಜ್ಞೆಯಂತೆ ನಿಲ್ಲಿಸಿದರೂ ಡಿಸಿ ಸಾಹೇಬರು ಮಾತ್ರ ಅದರ ಉಸಾಬರಿಗೇ ಹೋಗ... ನಿರ್ಲಿಪ್ತರಾಗಿ ಉಳಿದರು. ಜಿಲ್ಲಾಧಿಕಾರಿ ಕಣ್ಣು ಮುಚ್ಚಿಕೊಂಡಿರಲು ಮಂ... ಅಸ್ನೋಟಿಕರ್ ಒತ್ತಡವೇ ಕಾರಣವೆಂಬುದು ಕಾರವರದಲ್ಲಿ ಟಾಕ್ ಆಫ್ ದಿ ಟೌ... ಸಮಾಚಾರ.

ಅಷ್ಟೇ ಅಲ್ಲ ಬೈತಖೋಲ್‌ನ ಫಿಶ್ ಮಿಲ್‌ನಲ್ಲಿ ಮಂತ್ರಿ ಅಸ್ನೋಟಿಕ... ಸಹಕಾರದಿಂದ ಜನರೇಟರ್ ಬಳಸಿ ಮೀನೆಣ್ಣೆ ಗೊಬ್ಬರ ತಯಾರಿಕೆ ಮಾಡಲಾಗುತ್ತಿ... ಎಂಬುದು ಜಿಲ್ಲಾಡಳಿತಕ್ಕೂ ಗೊತ್ತಿದೆ. ಡಿಸಿ ಸಾಹೇಬರಿಗೆ ಈ ಫಿಶ್ ಮಿಲ್‌ನ... ಅಕ್ರಮವಾಗಿ ಉತ್ಪಾದನೆ ನಡೆಯುತ್ತಿದೆ ಎಂದು ಕಂಪನಿ ಎಂಡಿ ಕೃಷ್ಣಪ್ರಸಾದ್... ದೂರು ಪತ್ರ ಸಹ ಬರೆದಿದ್ದಾರೆ. ಆದರೆ ಜಿಲ್ಲಾಡಳಿತ ಮೀನುಗಾರಿಕಾ ಮಂತ್ರಿ... ಗುಪ್ತ ಆದೇಶ ಶಿರಸಾ ಪಾಲಿಸುತ್ತಿದೆ! ಅಕ್ರಮ ಫಿಶ್ ಮಿಲ್ ಮುಟ್ಟುಗೋ... ಹಾಕುವ ಗೋಜಿಗೆ ಡಿಸಿ ಕೃಷ್ಣಯ್ಯನೆಂಬ ನಾಜೂಕಯ್ಯ ಹೋಗಿಲ್ಲ.

ಸುಳ್ಳು ದಾಖಲೆ

ವೇಮುರಿ ಫ್ಯಾಮಿಲಿಯ ಸಾಯಿ ಅನ್ನಪೂರ್ಣ ಬಯೋಪ್ರೋಟಿನ್ಸ್ ಪ್ರೈ... ಕಂ. ಅಸ್ತಿತ್ವದಲ್ಲಿರುವಾಗಲೇ ಸುಳ್ಳು ದಾಖಲೆ ಸೃಷ್ಟಿಸಿ ಮಂತ್ರಿ ಮಾತೆ ಶುಭಲ... ಮತ್ತು ಶ್ಯಾಮ್ ಪ್ರಸಾದ್ ಪಾಲುದಾರತ್ವದ ಸಾಯಿ ಅನ್ನಪೂರ್ಣ ಬಯೋಪ್ರೋಟಿ... ಪ್ರೈಲಿ. ಕಂಪನಿ (ಗೋವಾ) ಎಂಬ ... ರಲ್ಲಿ ಮತ್ತೊಂದು ಕಂಪನಿ ಹುಟ್ಟು... ಹಾಕಲಾಗಿದೆ. ಕಂಪನಿಯ ಎಂಡಿ ಕೃ... ಪ್ರಸಾದ್‌ನನ್ನು ದೂರ ಇಡುವ ... ಮತ್ತಿದು. ಇದೇ ಹೊಸ ಹೆಸರಲ್ಲಿ ಮೀ... ನಲ್ಲಿ ಉತ್ಪಾದನೆಯನ್ನು ಒಳಗೊಳ... ನಡೆಸಲಾಗುತ್ತಿದೆ.

ಆನಂತರ ಒಂದು ಹವಾಡ ಅಸ್ನೋ... ಟಿಕರ್- ಶ್ಯಾಮ್ ಪ್ರಸಾದ್ ನಡೆಸಿದರು... ಮಾಲಿನ್ಯ ನಿಯಂತ್ರಣ ಮಂಡಳಿಗೆ ದಾ... ತಪ್ಪಿಸಲೆಂದು ಮತ್ತೆ ಕಂಪನಿ ಹೆಸರು ಬದಲಾಯಿಸಿದರು. ಕಳೆದ ಆಗಸ್ಟ್ 2... ರಂದು ಪರಿಸರ ಮಾಲಿನ್ಯ ಮಂಡಳಿ ಫಿ... ಮಿಲ್ ಮುಚ್ಚುವಂತೆ ಆದೇಶ ನೀಡಿತ... ಅಂದೇ ಈ ಕಂಪನಿಗೆ 'ಮೆ ಪಾಂಡ... ಬಯೋಪ್ರೋಟೀನ್ಸ್ ಪ್ರೈ ಲಿ.' ಎಂದು... ಮರು ನಾಮಕರಣ ಮಾಡಲಾಯಿತು... ಫಿಶ್ ಮಿಲ್ ಮುಚ್ಚುವ ಆದೇ... ನಿಷ್ಪ್ರಯೋಜಕ ಮಾಡುವ ಮೋಸ... ರಿಕೆಯ ತಂತ್ರವಿದು!! ಇಂಥದ್ದರ... ಅಸ್ನೋಟಿಕರ್ ಬಂದರು ವ್ಯವಹಾರ... ಸಂದರ್ಭಗಳಲ್ಲೇ-ಅಂದರೆ ತನ್ನ ಬಾಲ್ಯಾವಸ್ಥೆಯಲ್ಲೇ ಪಳಗಿರುವ ಪರಾಕ್ರಮಿ!

ಕಸ್ಟಮ್ಸ್‌ಗೆ ವಂಚನೆ

ಗೋವಾದ ತಾಂಡಾದಲ್ಲಿ ಫಿಶ್ ಮಿಲ್ ಆರಂಭಿಸಬೇಕೆಂಬುದು ಅಸ್ನೋಟಿಕರ್‌ನ ಬಹುದಿನದ ಕನಸು. ಅದಕ್ಕೆಂದೇ ಆತ ಶ್ಯಾಮ್‌ಪ್ರಸಾದ್ ಮತ್ತು ತಾಂ... ಸಮಪಾಲುದಾರಿಕೆಯಲ್ಲಿ ಸಾಯಿ ಅನ್ನಪೂರ್ಣ ಬಯೋ ಪ್ರೋಟಿನ್ಸ್ ಪ್ರೈ... (ಗೋವಾ) ಎಂಬ ಕಂಪನಿ ಕಟ್ಟಿದ್ದು. ಈ ಹೆಸರಲ್ಲಿ ಕಾರವಾರದ ಬೈತಖೋಲ್‌ನ... ನಡೆಯುತ್ತಿರುವ ಫಿಶ್ ಮಿಲ್‌ಗೆಂದು ಚೀನಾದಿಂದ ದುಬಾರಿ ಆಧುನಿಕ ಮೆಷಿನ್... ತರಿಸಲಾಗಿದೆ. ಅದೆಲ್ಲ ಈಗ ಕದ್ದು ತಾಂಡಾಕ್ಕೆ ಕಳಿಸಲು ಕಂಪನಿ ಕುಳಗ... ರೆಡಿಯಾಗಿದ್ದಾರೆ. ಈ ಸಂದರ್ಭದಲ್ಲಿ ಕಸ್ಟಮ್ಸ್ ಇಲಾಖೆಗೆ ಸುಳ್ಳು ದಾಖಲೆ ತೋರಿ... ಕೋಟ್ಯಂತರ ರೂಪಾಯಿ ವಂಚಿಸಲಾಗಿದೆ. ಇದೊಂದು ದೊಡ್ಡ ಫ್ರಾಡ್... ಇದೊಂದೇ ಸಾಕು ಅಸ್ನೋಟಿಕರ್‌ನ ಮಾಜಿ ಮಂತ್ರಿ ಮಾಡಿ ಕೋರ್ಟು-ಕಚೇ... ಅಲೆಸಲು; ಜೈಲುಪಾಲು ಮಾಡಲು.

ಪೊಲೀಸ್ ಕೇಸ್

ಈ ವಂಚನೆ ಬಗ್ಗೆ ಕೃಷ್ಣಪ್ರಸಾದ್ ಆಂಧ್ರದ ವಿಜಯವಾಡ ಪೊಲೀಸ್ ಠಾಣೆಯ... ದೂರೊಂದು ದಾಖಲಿಸಿದ್ದಾರೆ. ಕಾರವಾರಕ್ಕೆ ಬಂದು ಕೇಸ್ ಮಾಡಲು ಆತನ... ಜೀವ ಭಯ ಕಾಡುತ್ತಿದೆ. ಕಾರವಾರವನ್ನು ಜಹಗೀರು ಮಾಡಿಕೊಂಡಿರುವ ಗೂಂಡಾ ಮಂತ್ರಿ ಅಸ್ನೋಟಿಕರ್‌ನನ್ನು ಎದುರಿಸುವ ತಾಕತ್ತು ಆತನಿಗಿಲ್ಲ, ಹಾಗಂತ ಆ... ಸುಮ್ಮನೆ ಕುಳಿತಿಲ್ಲ. ತನ್ನ ಕಂಪನಿಯನ್ನು ಕಾನೂನುಬಾಹಿರವಾಗಿ ನಡೆಸುತ್ತಿರು... ಕುರಿತು ಆತ ಲೋಕಾಯುಕ್ತಕ್ಕೂ ದೂರು ಕೊಟ್ಟಿದ್ದಾರೆ. ಅಕ್ರಮ ಫಿಶ್ ಮಿ... ಸೀಜ್ ಮಾಡುವಂತೆ ಜಿಲ್ಲಾಧಿಕಾರಿ ಕೃಷ್ಣಯ್ಯರಿಗೆ ಹಲವು ಬಾರಿ ವಿನಂತಿಸಿದರು... ಆತ ಕ್ರಮಕೈಗೊಂಡಿಲ್ಲವೆಂದು ದೂರಿನಲ್ಲಿ ಹೇಳಿದ್ದಾರೆ.


ಮಂತ್ರಿ ಆನಂದ್ ಅಸ್ನೋಟಿಕರ್, ಶುಭಲತಾ ಅಸ್ನೋಟಿಕರ್ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೂ ನೋಟಿಸ್ ಕಳಿಸಿದ್ದಾ... ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖ... ಸುವ ತಯಾರಿ ಕೃಷ್ಣಪ್ರಸಾದ್ ನಡೆಸಿದ್ದಾರೆ. ಅ... ಅಸ್ನೋಟಿಕರ್‌ನ ಮಂತ್ರಿಗಿರಿಗೆ ಸಂಚಕಾ... ಗ್ಯಾರಂಟಿ. ಹಾಗಂತ ಕಾರವಾರದ ಮಂ... ಕಂಡ-ಕಂಡಲ್ಲಿ ರೋಚಕ ಚರ್ಚೆ ನಡೆಸಿದ್ದಾ... ಸರಿಯಾಗಿ ಕೇಸ್ ನಡೆದರೆ, ಈ ಕೃಷ್ಣ ಪ್ರಸಾದ್... ಯಾವುದೇ ಒತ್ತಡಕ್ಕೆ ಮಣಿಯದೆ ಸೆಟೆದು... ನಿಂತರೆ, ಮೀನುಗಾರಿಕಾ ಮಂತ್ರಿಗಿರಿ ಪವ... ಪ್ರಯೋಗಿಸಿ ಅಕ್ರಮ ಫಿಶ್ ಮಿಲ್ ನಡೆಸು... ವವರಿಗೆ ನೆರವಾಗಿರುವುದು, ತನ್ನ ತಾಯಿ ಪಾಲುದಾರಿಕೆಯಲ್ಲಿ ಕಂಪನಿ ಕಟ್ಟಿರುವುದ... ಅದರ ಹೆಸರು ಬದಲಾಯಿಸಿ ಸರ್ಕಾರಕ್ಕೆ ಮೋಸ ಮಾಡಿರುವುದು ಮತ್ತು ಕಸ್ಟಮ... ಸುಂಕ ವಂಚಿಸಿರುವ ಪ್ರಕರಣಗಳು ಅಸ್ನೋಟಿಕರ್‌ಗೆ ಉರುಳಾಗುವುದಂತೂ ಖಾತ್ರಿ...

• ನಹುಷ

ನೇ ಪುಟದಿಂದ....


ಭರ್ಜರಿ ಸೈಟು

ಉತ್ತರಹಳ್ಳಿ ಕೆರೆಗೆ ಹೊಂದಿಕೊಂಡಂತೆಯೇ ಪೂರ್ಣ ಪ್ರಜ್ಞ ಹೌಸಿಂಗ್ ಸೊಸೈಟಿಯ ನೂರಾರು ಸೈಟುಗಳಿವೆ. ಪೂರ್ಣಪ್ರಜ್ಞ ನಗರ ಬಡಾವಣೆಯಲ್ಲಿ ಕಾನೂನು ರಿತ್ಯ ಸಾರ್ವಜನಿಕ ಉದ್ದೇಶಕ್ಕೆಂದು ಭೂಮಿಯನ್ನು ಮೀಸಲಿಡ ಬೇಕಿತ್ತು, ಹಾಗೇ ಸಿ.ಎ. ಸೈಟೆಂದು ಬಿಡಿಎ ಜೋಪಾನ


ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ಪತ್ರ

ಬಿಡಿಎ ಮಂಜೂರಾತಿ ಪತ್ರ


ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:13/01/2011.

ನಗರಾಭಿವೃದ್ಧಿ ಕಾರ್ಯದರ್ಶಿಯ ಆದೇಶ

ಇಡಿದ್ದ 3585.33 ಚದುರ ಮೀಟರ್‌ಗಳ ಈ ಸೊತ್ತಿಗೆ ಾ ಚದುರ ಅಡಿ ಆಸ್ತಿಗೆ ಅಲ್ಲಿ ಕಮ್ಮಿಯೆಂದರೂ ಡೂವರೆ ಸಾವಿರ ರೂಪಾಯಿ ಮಾರುಕಟ್ಟೆ ರೇಟಿದೆ. ಆ ಾರ ಇಡೀ ಸೈಟಿನ ಸದ್ಯದ ಬೆಲೆ ಹತ್ತು ಕೋಟಿ. ಂದೊಮ್ಮೆ ಪಾರ್ಕು, ಪೊಲೀಸ್ ಠಾಣೆ, ಬಸ್ ನಿಲ್ದಾಣ, ಿಕೆ ಕಚೇರಿ, ದೇವಸ್ಥಾನ, ಆಸ್ಪತ್ರೆ ಏನೇ ಆಗಬೇಕೆಂದರೂ ಿದಿರುವುದು ಇದೊಂದೇ.

ಇಂಥ ಜನೋಪಯೋಗಿ ಸೈಟನ್ನು ಆರೆಸ್ಸೆಸ್ ನಡೆಸುವ ಾಥ ಶಿಶು ನಿವಾಸಕ್ಕೆಂದೋ ವೃತ್ತಿ ತರಬೇತಿ ಕೇಂದ್ರ ೋ ಕೊಡಲೇಬೇಕಾದ ಅನಿವಾರ್ಯವಾಗಲಿ, ಹರಕತ್ತಾ ಖಂಡಿತ ಸರ್ಕಾರಕ್ಕಿಲ್ಲ. ಇಂಥ ಅಸಂಖ್ಯಾತ ವೃದ್ಧಾಶ್ರಮ ಾಥಶ್ರಮ, ಹಾಸ್ಟೆಲು, ಅಬಲಾಶ್ರಮಗಳಿಗೆಲ್ಲ ಆಯಾ ್ಥೆಗಳೇ ಜಮೀನು ಖರೀದಿಸಿ ತಮ್ಮದೇ ದುಡ್ಡು ಹಾಕಿ ಸುತ್ತಿರುವಾಗ ಈ ಒಂದಕ್ಕೇ ಬಿಡಿಎ ಏಕೆ ಅತ್ಯಂತ ಸೂಕ್ಷ್ಮ ಸತಿಯ ಸಿ.ಎ. ಸೈಟನ್ನು ಮಂಜೂರು ಮಾಡುತ್ತದೆ.

ಹಾಗೆ ನೋಡಿದರೆ ಸಿ.ಎ. ಸೈಟಿಗಾಗಿ ಬಿಡಿಎಗೆ ಅರ್ಜಿ ಿ ಹತ್ತಾರು ವರ್ಷಗಳಿಂದ ಕಾದು ಕೂತ ಶಿಕ್ಷಣ ್ಥೆಗಳು, ಸೇವಾ ಕೇಂದ್ರಗಳು, ವೃದ್ಧಾಶ್ರಮ, ಅಬಲಾಶ್ರಮ, ್ಥೆಗಳ ಸಂಖ್ಯೆಯೇ ಹತ್ತು ಸಾವಿರವನ್ನು ಮೀರುತ್ತದೆ. ಿ ಮತ್ತು ಜ್ಯೇಷ್ಠತೆಗೆ ಹೋಲಿಸಿದರೆ ಅನಾಥ ಶಿಶು ಾಸಕ್ಕೆ ಯಾವುದೇ ಕಾರಣಕ್ಕೂ ಬಿಡಿಎ ಸೈಟು ುವಂತೆಯೇ ಇಲ್ಲ. ಆದರೆ ಬಿಜೆಪಿ ಅಧಿಕಾರಕ್ಕೆ ಬಂದು ಡ್ಡಿ ಮುಖ್ಯಮಂತ್ರಿಯಾಗುತ್ತಿದ್ದಂತೆ 2010 ರ ಬರ್‌ನಲ್ಲಿ ಆರೆಸ್ಸೆಸ್ ವರಿಷ್ಠ ಮೈ.ಚ. ಜಯದೇವರ ಾಲಕ ಮುಖ್ಯಮಂತ್ರಿಗೆ ರಹಸ್ಯ ಶಿಫಾರಸ್ಸು ಪಟ್ಟಿ ಾನೆಯಾಗುತ್ತದೆ. ಹೀಗೆ ಆರೆಸ್ಸೆಸ್ ಕಟ್ಟಪ್ಪಣೆ ಬಂದ ಒಂದೇ ಕ್ಕೆ ಅಂದರೆ 2010 ರ ಡಿಸೆಂಬರ್ 18 ರಂದು ಬಿಡಿಎ ಏಕಿ ಅನಾಥ ಶಿಶು ನಿವಾಸಕ್ಕೆ ಪೂರ್ಣಪ್ರಜ್ಞ ನಗರದ ರಿಕ ಸೌಲಭ್ಯದ ನಿವೇಶನ ಸಂಖ್ಯೆ 11 ಅನ್ನು ಮಂಜೂರು ಡುವ ನಿರ್ಣಯ ಕೈಗೊಳ್ಳುತ್ತದೆ.


ಹೀಗೆ ತರಾತುರಿಯಲ್ಲಿ ಬಿಡಿಎ ಕೈಗೊಂಡ ನಿರ್ಣಯಕ್ಕೆ ್ಟೇ ವೇಗವಾಗಿ ಅಂದರೆ 2011 ರ ಜನವರಿ 3 ರಂದು ್ಕಾರದ ಅನುಮೋದನೆ ಸಿಕ್ಕಿಬಿಡುತ್ತದೆ. ಇದಾಗಿ ಹತ್ತು ್ಕೇ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ್. ರೇಣುಕಾರಾಧ್ಯ ಬಿಡಿಎ ಆಯುಕ್ತರಿಗೆ ಮಂಜೂರಾತಿ ೇಶವನ್ನು ರವಾನಿಸುತ್ತಾರೆ. ಹೀಗೆ ಆದೇಶ ರವಾನೆಯಾದ ನೇ ದಿನಕ್ಕೆ ಸರಿಯಾಗಿ ಅಂದರೆ 2011 ರ ಜನವರಿ 25 ು ಬಿಡಿಎ ಅನಾಥ ಶಿಶು ನಿವಾಸದ ಕಾರ್ಯದರ್ಶಿ ಬಿ.ವಿ. ಸರ ಹೆಸರಿಗೆ ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ವನ್ನು ನೀಡುತ್ತದೆ. 2011 ರ ಜೂನ್ 8 ರಂದು ಗಳೂರು ನಗರ ಜಿಲ್ಲೆ ಅಧಿಕ ಜಿಲ್ಲಾ ಉಪನೋಂದಣಾ ರಿ ಕಚೇರಿಯಲ್ಲಿ ಅನಾಥ ಶಿಶು ನಿವಾಸದ ಕಾರ್ಯದರ್ಶಿ ಿ. ಶೇಷರ ಹೆಸರಿಗೆ ಬಿಡಿಎ ಉಪಕಾರ್ಯದರ್ಶಿ ೇಂದ್ರ ಕುಮಾರ್ ಸೈಟು ನೋಂದಾಯಿಸಿ ಕೊಡುತ್ತಾರೆ.

ಬಿಡಿಎ-ಆರೆಸ್ಸೆಸ್ ಗೂಂಡಾಗಿರಿ

ಅಲ್ಲಿಗೆ 3585.33 ಚದುರ ಮೀಟರ್ ಅಂದರೆ 850.33 ಚದುರ ಅಡಿಗಳ ಹತ್ತುಕೋಟಿ ರೂಪಾಯಿ ಬಾಳುವ ಬಿಡಿಎ ಅನಾಥಶಿಶು ನಿವಾಸದ ಹೆಸರಲ್ಲಿ ಸ್ಸೆಸ್ ಪಾಲಾಗುತ್ತದೆ. ಉತ್ತರಹಳ್ಳಿಯಿಂದ ಮೈಸೂರು ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಅದೂ ಉತ್ತರಹಳ್ಳಿ ಕೆರೆಗೆ ಂದಿಕೊಂಡರೆ ಹೆಚ್ಚೂಕಮ್ಮಿ ಮುಕ್ಕಾಲೆಕರೆಗೂ ಮೀರಿದ ಸಿ.ಎ. ಸೈಟು ಯಾವತ್ತು ಆರೆಸ್ಸೆಸ್ ಪಾಲಾಯಿತೋ ಅದು ಕೇವಲ ಉತ್ತರಹಳ್ಳಿ, ಪೂರ್ಣಪ್ರಜ್ಞ ಲೇಔಟ್, ಚನ್ನಸಂದ್ರ ಇತ್ಯಾದಿ ಏರಿಯಾಗಳ ನಾಗರಿಕರಿಗಷ್ಟೇ ಅಲ್ಲ ಸರಿಸುಮಾರು ಮೂವತ್ತಕ್ಕೂ ಅಧಿಕ ನಿರ್ಗತಿಕ ಕುಟುಂಬಗಳ ಪಾಲಿಗೂ ಸರ್ವನಾಶವಾಗಿ ಪರಿಣಮಿಸಿತ್ತು.

ಈಗಾಗಲೇ ಈ ಸಿ.ಎ. ಸೈಟಿನಲ್ಲಿ ಸರಿಸುಮಾರು ಮೂವತ್ತು ಜೋಪಡಿಗಳಿದ್ದವು. ಉತ್ತರ ಕರ್ನಾಟಕದ ಬಡ ದಲಿತರೂ ಸೇರಿದಂತೆ ಸರಿಸುಮಾರು 30 ರಷ್ಟಿದ್ದ ನಿರ್ಗತಿಕರ ಜೋಪಡಿಗಳನ್ನು ಇಲ್ಲಿಗೆ ಹತ್ತು ದಿನದ ಹಿಂದೆ ರಾತ್ರೋರಾತ್ರಿ ಪೋಲೀಸರು ಮತ್ತು ಆರೆಸ್ಸೆಸ್ ಗೂಂಡಾ ಗಳನ್ನು ಛೂಬಿಟ್ಟು ನೆಲಸಮಗೊಳಿಸಲಾಯ್ತು. ಬಿಡಿಎ ಅಧಿಕಾರಿಗಳೇ ನಿಂತು ಸ್ಲಮ್ ಧ್ವಂಸ ಗೊಳಿಸಿದರು. ಅಳುತ್ತಿದ್ದ ಮಕ್ಕಳು, ಎದೆಬಡಿದುಕೊಂಡು ರೋಧಿಸುತ್ತಿದ್ದ ಹೆಂಗಸರು, ಮುದುಕರೆನ್ನದೇ ಒದ್ದು ಸೈಟಿನಿಂದ ಹೊರದಬ್ಬಲಾಯ್ತು. ನಿರ್ಗತಿಕರ ಪರ ನ್ಯಾಯ ಕೇಳಲು ಬಂದವರನ್ನೂ ಥಳಿಸಲಾಯ್ತು. ಈಗ ಈ ಬಡವರ ಪೈಕಿ ಕೆಲವರನ್ನು ಬೆಂಗಳೂರು ದಕ್ಷಿಣದ ಶಾಸಕ ಕೃಷ್ಣಪ್ಪನ ಜಾಗದ ಪಕ್ಕದಲ್ಲೇ ರಸ್ತೆಬದಿ ಗುಡಿಸಲು ಹಾಕಲು ಬಿಟ್ಟಿದ್ದಾರೆ ನಿಜ, ಆದರೆ ಎಷ್ಟು ದಿನ?

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಾಗರಿಕ ಸೌಲಭ್ಯಗಳ ನಿವೇಶನ ಹಂಚಿಕೆ ನಿಯಮಗಳು 1989 ರ ಪ್ರಕಾರ ಸಿ.ಎ. ಸೈಟುಗಳನ್ನು ಸೇವಾ ಸಂಸ್ಥೆಗಳಿಗೆಂದು ನೀಡಬಹುದು. ಆದರದು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರತಕ್ಕದ್ದು. ಹಾಗೆ ನೀಡಿದ ಸಿ.ಎ. ಸೈಟಿನಿಂದಾಗಿ ಆ ಭಾಗದ ಸಾರ್ವಜನಿಕ ಬದುಕಿಗೆ ಯಾವುದೇ ಭಂಗ ಬರುವಂತಿಲ್ಲ. ಸೈಟು ಪಡೆದ ಸಂಸ್ಥೆಯ ಉದ್ದೇಶ ಕೂಡ



ಉತ್ತರಹಳ್ಳಿಯ ಭರ್ಜರಿ ಸೈಟು

ಪ್ರಾಮಾಣಿಕವಾಗಿ ಜನಪರವಾಗೇ ಇರಬೇಕು. ಅದನ್ನು ಪ್ರಾಮಾಣಿಕವಾಗಿ ಮಂಜೂರಾದ ಉದ್ದೇಶಕ್ಕೇ ಬಳಸಬೇಕು ಮತ್ತು ಮಾರುಕಟ್ಟೆ ರೇಟಿಗೇ ನೀಡಬೇಕು.

ಆದರೆ ಬಿಡಿಎ ನೀಡಿರುವುದು ಪಕ್ಕಾ ಕೋಮುವಾದಿ ವಿಚ್ಛಿದ್ರಕಾರಿ ಆರೆಸ್ಸೆಸ್‌ನ ಕಪಟ ಅಂಗಸಂಸ್ಥೆಗೆ. ಹತ್ತು ಕೋಟಿಯ ಸೊತ್ತನ್ನು ಕೇವಲ 83,56,250 ಅಂದರೆ ಎಂಭತ್ಮೂರು ಲಕ್ಷದ ಐವತ್ತಾರು ಸಾವಿರ ರೂಪಾಯಿಗಳ ಅಗದೀ ಕಮ್ಮಿ ರೇಟಿಗೆ ನೀಡಲಾಗಿದೆ. ಈ ಮೊತ್ತವನ್ನು ಕಂತುಗಳ ಆದಾಯದ ಮೇಲೆ ಬಿಡಿಎಗೆ ಪಾವತಿಸಬಹುದಾದರೂ ಅದನ್ನು ಒಂದೇ ಬಾರಿಗೆ ಟ್ರಸ್ಟ್ ಕಾರ್ಯದರ್ಶಿ ಶೇಷ ಬಿಡಿಎಗೆ ಕಟ್ಟಿದ್ದಾರೆ. ಅನಾಥ ಶಿಶು ನಿವಾಸ ನಡೆಸುವ ಸಂಸ್ಥೆಯೊಂದಕ್ಕೆ ಇಷ್ಟೆಲ್ಲ ರೊಕ್ಕ ಎಲ್ಲಿಂದ ಬಂತು?


ಮುಂದೊಮ್ಮೆ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ ಸೈಟನ್ನು ಯಾವ ಪುರುಷಾರ್ಥಕ್ಕೆಂದು ಬಿಡಿಎ ಆರೆಸ್ಸೆಸ್ ಅಂಗಸಂಸ್ಥೆಗೆ ಧಾರೆಯೆರಿದಿದೆ. ಅದೂ ಬಡಬಗ್ಗರು, ದಲಿತರ ಗುಡಿಸಲುಗಳನ್ನು ಕಿತ್ತೆಸೆದು ಅವರನ್ನು ಬೀದಿಪಾಲು ಮಾಡಿ ಇನ್ನಾರೋ ಅನಾಥ ಮಕ್ಕಳ ಹೆಸರಲ್ಲಿ ಹಾಸ್ಟೆಲ್ ನಿರ್ಮಿಸ ಹೊರಟ ಆರೆಸ್ಸೆಸ್ ಅದನ್ನು ತನ್ನ ವಿಷಕಾರಕ ಉದ್ದೇಶಕ್ಕೆ ಬಳಸುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ನಾಯಕರು ಬೆಂಗಳೂರಿನ ಬಹುತೇಕ ನಾಗರಿಕ ಸಂಘಟನೆಗಳ ಸಭೆ ಕರೆದು ಬೆಂಗಳೂರಿನ ಭವಿಷ್ಯಕ್ಕೆ ದ್ರೋಹ ಬಗೆಯುವುದಿಲ್ಲ ಎಂದು ಮಾತು ಕೊಟ್ಟಿದ್ದು ಏನಾಯಿತು? ಹೀಗೆ ಅಳಿದುಳಿದ ಸಿ.ಎ. ಸೈಟುಗಳನ್ನೆಲ್ಲ ಅಧಿಕಾರದ ಅಟ್ಟಹಾಸದಲ್ಲಿ ಆರೆಸ್ಸೆಸ್ ಕ್ರಿಮಿಗಳಿಗೆ ಹಂಚುತ್ತಾ ಹೋದರೆ ಮುಂದೊಮ್ಮೆ ಜನ ಕಾಲಿಡುವುದಕ್ಕೂ ಜಾಗ ಎಲ್ಲಿದ್ದೀತು?

ಇಂಥ ನೂರಾ ಎಪ್ಪತ್ತು ಆರೆಸ್ಸೆಸ್ ಅಂಗಸಂಸ್ಥೆಗಳಿಗಾಗಿ ಬೆಂಗಳೂರಿನ ಅದೆಷ್ಟು ಪಾಲಿಕೆ ಭೂಮಿಗೆ ಗತಿ ಕಾದಿದೆಯೋ? ಈ ಬಗ್ಗೆ ಯಾರೂ ದನಿಯೆತ್ತುತ್ತಿಲ್ಲವಲ್ಲ ಅದಕ್ಕಿಂತ ದುರಂತ ಬೇಕೆ?

ಓಂ

ಕಲಘಟಗಿ

ಮುದಿ ನಿಂಬಣ್ಣನ ಅರವತ್ನಾಲ್ಕರ ಚಪಲಕ್ಕೆ ಇಪ್ಪತ್ತಾರರ ಯುವತಿ!



ನಿಂಬಣ್ಣ

ರಾಜಕೀಯದಲ್ಲಿ ಸೋಲಿನ ಸರದಾರನಾಗಿ ಬಸವಳಿದಿರುವ ಸಿ.ಎಂ.ನಿಂಬಣ್ಣವರ ಅರವತ್ನಾಲ್ಕರ ಇಳಿ ವಯಸ್ಸಲ್ಲೂ ಪ್ರಣಯದಾಟದಲ್ಲಿ ಗೆದ್ದು ಬೀಗುತ್ತಿದ್ದಾನೆ. ಕಲಘಟಗಿಯ ಜನ ನಿಂಬಣ್ಣ ಗೂಟದ ಕಾರು ಹತ್ತಿದ್ದನ್ನು ಕಂಡು ಒಂದಷ್ಟು ಅಭಿವೃದ್ಧಿಯನ್ನಾದರೂ ಕ್ಷೇತ್ರಕ್ಕೆ ಕರೆತರಬಹುದೆಂಬ ನಿರೀಕ್ಷೆಯಲ್ಲಿದ್ದರು. ಆದರೆ ಮುದಿ ನಿಂಬಣ್ಣ ಹೊಸ ಹುಡುಗಿಯನ್ನ ಕರೆದುಕೊಂಡು ಹೋಗುವ ಸನ್ನಾಹದಲ್ಲಿದ್ದಾನೆ!

ಕಲಘಟಗಿಯ ಚಡ್ಡಿ ನಾಯಕ ಸಿ.ಎಂ. ನಿಂಬಣ್ಣನವರ ತನ್ನ ಅರವತ್ನಾಲ್ಕನೇ ವಯಸ್ಸಿನಲ್ಲಿ 26ರ ಯುವತಿಯನ್ನು ಎರಡನೇ ಮದುವೆ ಮಾಡಿಕೊಂಡು ಮುದಿ ಪ್ರಣಯವನ್ನು ಪ್ರಾರಂಭಿಸಿದ್ದಾನೆ!

ಈ ನಿಂಬಣ್ಣನವರ ಈಗ ಇಂಧನ ನವೀಕರಣ ಅಭಿವೃದ್ಧಿ ನಿಗಮ (ಕ್ರೆಡಲ್)ದ ಅಧ್ಯಕ್ಷನಾಗಿ ಗೂಟದ ಕಾರಲ್ಲಿ ಓಡಾಡುತ್ತಿದ್ದಾನೆ. ಈಗ ರಾಜ್ಯ ಕತ್ತಲಲ್ಲಿದ್ದರೂ, ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾತ್ರ ಬೆಂಗಳೂರಿನ ಸುಂದರಿಯೊಬ್ಬಳನ್ನು ಪಟಾಯಿಸಿ ಹನಿಮೂನ್ ಮೂಡಿನಲ್ಲಿದ್ದಾನೆ ಎಂಬುದೆ ಈ ಭಾಗದಲ್ಲಿ ಹಾಟ್ ನ್ಯೂಸ್ ಆಗಿದೆ.

ಮೂಲತಃ ಕಲಘಟಗಿ ಪಟ್ಟಣದಿಂದ ಕೂಗಳತೆ ದೂರದಲ್ಲಿರುವ ಸಂಗೇದೇವರಕೊಪ್ಪ ಗ್ರಾಮದವನಾದ ಸಿ.ಎಂ. ನಿಂಬಣ್ಣವರ ಮರ್ಯಾದಸ್ಥ ಕುಟುಂಬದಿಂದ ಬಂದರೂ, ಜಾತಿ ಲಾಬಿ ಮೂಲಕವೇ ರಾಜಕೀಯಕ್ಕೆ ಎಂಟ್ರಿ ಕೊಟ್ಟವನು. ಇವನ ಸ್ವಜಾತಿ ಪ್ರೇಮದ ಫಲವಾಗಿಯೇ ಇವನಿಗೆ ಗೆಲುವಿನ ಮುಖ ಕಾಣಲೇ ಇಲ್ಲ. ಸ್ಪರ್ಧಿಸಿದ ಚುನಾವಣೆಯಲ್ಲೆಲ್ಲ ಹೀನಾಯ ಸೋಲೇ ಇವನ ರಾಜಕೀಯ ಸಾಧನೆ.


ಜಗದೀಶ್ ಶೆಟ್ಟರ್

ಯಡ್ಡಿಯ ಕುಲಬಾಂಧವ ಪ್ರೀತಿಯಿಂದಾಗಿಯೇ ಹೀನಾಯ ಸೋಲುಂಡಿದ್ದರೂ, ಮೊದಲ ಕಂತಿನಲ್ಲೇ ನಿಂಬಣ್ಣನಿಗೆ ಇಂಧನ ನವೀಕರಣ ಅಭಿವೃದ್ಧಿ ನಿಗಮ(ಕ್ರೆಡಲ್)ದ ಅಧ್ಯಕ್ಷಗಿರಿ ದಯಪಾಲಿಸಿದ್ದಲ್ಲದೇ, ಅದಕ್ಕೆ ಸಂಪುಟ ದರ್ಜೆಯ ಸ್ಥಾನಮಾನ ನೀಡಿ ಗೂಟದ ಕಾರು ಕೊಟ್ಟು ಪೊರೆದ. ಈ ಸಾಹೇಬರು ಭಲೆ ಉತ್ಸಾಹದಿಂದ ಲೂಟಿಗೆ ನಿಂತರು. ಇದರಿಂದ ನಾಲ್ಕು ಕಾಸು ಹೆಚ್ಚಿಗೆ ಕಂಡ ನಿಂಬಣ್ಣನ ಅರವತ್ತರ ದೇಹದಲ್ಲಿ ಚಪಲ ಕದಲತೊಡಗಿತು.


ಪ್ರಹ್ಲಾದ್ ಜೋಷಿ

ಈತನ ಪತ್ನಿ ಶಾಂತಾ ಕ್ಯಾನ್ಸರ್ ಖಾಯಿಲೆಯಿಂದ ತೀರಿಹೋಗಿದ್ದಾರೆ. ಅಲ್ಲದೆ ಇವರ ಇಬ್ಬರು ಹೆಣ್ಣುಮಕ್ಕಳ ಪೈಕಿ ಒಬ್ಬಳು ಅನಾರೋಗ್ಯದಿಂದ ಪ್ರಾಣ ಬಿಟ್ಟಿದ್ದಾಳೆ. ಈಗಿರುವ ಒಬ್ಬಳೇ ಮಗಳು ಮದುವೆಯಾಗಿ ಬೆಂಗಳೂರಿನಲ್ಲಿದ್ದು, ಆಕೆಯ ಮನೆಯೇ ಈ ಸಾಹೇಬರಿಗೆ ಸದ್ಯ ನೆರಳಾಗಿದೆ. ಅಲ್ಲಿಂದಲೇ ಜುಮ್ಮಂತ ಗೂಟದ ಕಾರಲ್ಲಿ ತಿರುಗಲು ಶುರುವಿಟ್ಟ ಸಾಹೇಬರು ಪ್ರಣಯದ ಮೂಡಿಗೆ ಜಾರಿದ್ದಾರೆ. ತದನಂತರ ಕಾಲೇಜು ಹುಡುಗರ ಉತ್ಸಾಹದಲ್ಲಿ ತಲಾಶು ಆರಂಭಿಸಿದ ನಿಂಬಣ್ಣನ ಖೆಡ್ಡಾಕ್ಕೆ ಬಿದ್ದವಳೇ 26ರ ಸುಂದರ ಯುವತಿ ಎನ್. ಸರಿತಾ. ಬೆಂಗಳೂರಿನ ನಾಗರಭಾವಿ ಮೂಲದವಳಾದ ಈಕೆ ಈ ಹಿಂದೆ ಇಂಡಿಯನ್ ಏರ್‌ಲೈನ್ಸ್‌ನ ಉದ್ಯೋಗದಲ್ಲಿದ್ದವಳು. ಈಗ ಸ್ವಿಸ್ ಏರ್‌ವೇಸ್‌ನಲ್ಲಿ ಕೆಲಸ ಮಾಡುತ್ತಿದ್ದಾಳೆ. ಕೆಲ ಪ್ರಭಾವಿ ಮುಖಂಡರಿಗೂ ಚಿರಪರಿಚಿತಳಾದ ಈ ಹೆಣ್ಣುಮಗಳು ಅದ್ಯಾವ ಯಾಂಗಲ್‌ನಿಂದ ನೋಡಿ ಈತನನ್ನು ಮೆಚ್ಚಿಕೊಂಡಳೆಂಬುದೇ ಸೋಜಿಗದ ವಿಚಾರ.

ಅಸಲಿಗೆ ಇದು ಪ್ರೀತಿಯೋ.. ಪ್ರೇಮವೋ.. ಪ್ರಣಯವೋ.. ಗೊತ್ತಿಲ್ಲ, ಆದರೂ ಈ ಜೋಡಿ ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಮದುವೆಯಾಗಿದೆ. ಸಚಿವ ವಿ.ಸೋಮಣ್ಣ ಖುದ್ದು ಮುಂದೆ ನಿಂತು ಅಕ್ಷತೆ ಹಾಕಿ ಈ ಜೋಡಿಯನ್ನು ಹರಸಿದ್ದಾರೆ ಎಂಬ ರೂಮರ್ ಜೋರಿರುವಾಗಲೇ ನಿಂಬಣ್ಣನ ಹೊಸ ಹೆಂಡತಿ ಸರಿತಾ ಸಚಿವ ಸೋಮಣ್ಣನ ಹತ್ತಿರದ ಸಂಬಂಧಿ ಎಂಬ ಸುದ್ದಿ ಕೂಡ ತೇಲಲಾರಂಭಿಸಿದೆ. ಕಳೆದ ಆಗಸ್ಟ್ 23ರಂದು ನಾಗರಭಾವಿಯ ಉಪನೋಂದಣಾಧಿಕಾರಿ ಹರಿಣಿ ಎಂಬುವರ ಮುಂದೆ ಕಾನೂನು ರೀತಿಯಲ್ಲಿಯೂ ಕೂಡ ಈ ಜೋಡಿ ಸತಿ ಪತಿಗಳಾಗಿದ್ದಾರೆ. ಈ ಮದುವೆಯ ನಕಲನ್ನು ಇಲ್ಲಿಯ ಉಪನೋಂದಣಾಧಿಕಾರಿ ಪ್ರತಿಮಾ ಬೀಳಿಹಾಳರಿಗೂ ಮಾಹಿತಿಗಾಗಿ ಕಳುಹಿಸಲಾಗಿದೆ. ಇಲಾಖೆಯ ನಿಯಮದಂತೆ ಕಚೇರಿಯ ನೋಟೀಸ್ ಬೋರ್ಡಿಗೆ ವಿವಾದವಿದ್ದರೆ ತಿಳಿಸಿ ಎಂದು ಅಂಟಿಸಲಾಗಿದೆ. ಆವಾಗಲೇ ನಿಂಬಣ್ಣರ 64ರ ಚಪಲದ ಸುದ್ದಿ ಕಲಘಟಗಿಯ ಪ್ರಮುಖ ಬೀದಿಯಲ್ಲಿ ಹರಿದಾಡಿದ್ದು.

ಒಟ್ಟಿನಲ್ಲಿ ರಾಜಕೀಯದಲ್ಲಿ ಸೋಲಿನ ಸರದಾರನಾಗಿ ಬಸವಳಿದಿರುವ ಸಿ.ಎಂ.ನಿಂಬಣ್ಣವರ ಅರವತ್ನಾಲ್ಕರ ಇಳಿ ವಯಸ್ಸಲ್ಲೂ ಪ್ರಣಯದಾಟದಲ್ಲಿ ಗೆದ್ದು ಬೀಗುತ್ತಿದ್ದಾನೆ. ಕಲಘಟಗಿಯ ಜನ ನಿಂಬಣ್ಣ ಗೂಟದ ಕಾರು ಹತ್ತಿದ್ದನ್ನು ಕಂಡು ಒಂದಷ್ಟು ಅಭಿವೃದ್ಧಿಯನ್ನಾದರೂ ಕ್ಷೇತ್ರಕ್ಕೆ ಕರೆತರಬಹುದೆಂಬ ನಿರೀಕ್ಷೆಯಲ್ಲಿದ್ದರು. ಆದರೆ ಮುದಿ ನಿಂಬಣ್ಣ ಹೊಸ ಹುಡುಗಿಯನ್ನ ಕರೆದುಕೊಂಡು ಹೋಗುವ ಸನ್ನಾಹದಲ್ಲಿದ್ದಾನೆ!

• ಹುರಳಿಕುಪ್ಪಿ ವಿನಯ

ಡೆಕ್ಕನ್ ಮೈನಿಂಗ್ ಲಕ್ಷ್ಮಿ ಅರುಣಾ-ಜೈನ್ ಅದಿರು ಲೂಟಿ!

ಡೆಕ್ಕನ್ ಹಾಗೂ NMDC ಲೀಸ್ ಏರಿಯಾದಲ್ಲಿ ಪ್ರತಿ ದಿನ ಅಂದಾಜು 3000 ಟನ್ ಅದಿರು ತೆಗೆದು ಸಾಗಿಸಲಾಗುತ್ತಿತ್ತು. ಅವತ್ತಿನ ಮಾರ್ಕೆಟ್ ರೇಟಿನಲ್ಲೇ ಹೇಳಬೇಕೆಂದರೂ ಅದು ದಿನಕ್ಕೆ 2 ಕೋಟಿ ರೂಪಾಯಿ ಲಾಭ ತರುತ್ತಿದ್ದ ದಂಧೆ. ಇದು ನಾಲ್ಕು ವರ್ಷ ನಿರಂತರವಾಗಿ ನಡೆಯಿತು. ನೀವಿಲ್ಲಿ ಒಂದು ಕ್ಷಣ ನಿಂತು ಲೆಕ್ಕ ಹಾಕಿ. ದಿನಕ್ಕೆ 2 ಕೋಟಿ ರೂ.ನಂತೆ ನಾಲ್ಕು ವರ್ಷ ಅಂದರೆ ಹೆಚ್ಚು ಕಡಿಮೆ ಮೂರು ಸಾವಿರ ಕೋಟಿ ರೂಪಾಯಿಗಳು! ಒಬ್ಬ ಜೈನ್ ಮೂಲಕ ರೆಡ್ಡಿ-ಲಕ್ಷ್ಮಿ ಅರುಣಾಗೆ ಮೂರು ಸಾವಿರ ಕೋಟಿ ರೂಪಾಯಿ ದೋಚಿದ್ದಾರೆಂದರೆ ಉಳಿದ 59 ಗಣಿ ಮಾಲೀಕರಿಂದ ದೋಚಿದ್ದೆಷ್ಟಿರಬಹುದು?

• ಪಾರ್ವತೀಶ

"ಗಣಿ ಮಾಲೀಕರನ್ನು ಬಿಡಬೇಡಿ. ಹೋಗಿ ತನಿಖೆ ಮಾಡಿ ವರದಿ ತನ್ನಿ"

-ಹೀಗೆಂಬ ಒಂದು ಆದೇಶವನ್ನು ಮೊನ್ನೆ ಅಕ್ಟೋಬರ್ 14 ರಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಕಪಾಡಿಯಾ ಸಹ ಇರುವ ಬೆಂಚ್ ಆದೇಶ ಕೊಟ್ಟಿದೆ.

ಹಾಗೆ ಆದೇಶ ನೀಡುವಾಗ ನಿರ್ದಿಷ್ಟವಾಗಿ ಎರಡು ಕಳ್ಳ ಗಣಿ ಕಂಪನಿಗಳ ಬಗ್ಗೆ ಸುಪ್ರೀಂ ಕೋರ್ಟ್ ಬೆರಳು ತೋರಿಸಿತು.

ಒಂದು ಅಸೋಸಿಯೆಟೆಡ್ ಮೈನಿಂಗ್ ಕಂಪನಿ. ಇನ್ನೊಂದು ಡೆಕನ್ ಮೈನಿಂಗ್ ಸಿಂಡಿಕೇಟ್.

ಗಾಲಿ ಜನಾರ್ದನ ರೆಡ್ಡಿ ಮತ್ತವನ ಹೆಂಡತಿ ಲಕ್ಷ್ಮಿ ಅರುಣಾ ಎಎಂಸಿಗೆ ಮಾಲೀಕರು. ರೆಡ್ಡಿ ಈಗ ಓಎಂಸಿ ಕಂಪನಿಯ ಅಕ್ರಮಗಳ ಆರೋಪದಲ್ಲಿ ಜೈಲು ಸೇರಿದ್ದಾನೆ. ಲಕ್ಷ್ಮೀ ಅರುಣಾ ಎಎಂಸಿ ಅಕ್ರಮಗಳ ಕಾರಣಕ್ಕೆ ಪರಪ್ಪನ



ಅಗ್ರಹಾರದತ್ತ ಪ್ರಯಾಣ ಬೆಳೆಸುವ ದಿನಗಳು ದೂರವಿಲ್ಲ ಬಿಡಿ. ಅವಳ ಹಿಂದೆಯೇ ಜೈಲು ಸೇರಬೇಕಾದ ಇನ್ನೊಬ್ಬ ಖದೀಮ ವ್ಯಾಪಾರಿಯೆಂದರೆ ರಾಜೇಂದರ್ ಜೈನ್. ಡೆಕ್ಕನ್ ಮೈನಿಂಗ್‌ನ ಮಾಲೀಕನೀತ.

ಈ ಡೆಕ್ಕನ್ ಗಣಿ ಕಳ್ಳರ ಕತೆ ರೆಡ್ಡಿಗಳ ಕಳ್ಳತನವನ್ನೇ ಹೋಲುತ್ತದೆ. ಆದರೆ ಇವರು ರೆಡ್ಡಿಗಿಂತಾ ಹಳೇ ಕಳ್ಳರು ಅಷ್ಟೇ. ಕಳೆದ ಮೂರ್ನಾಲ್ಕು ವರ್ಷಗಳಿಂದ ಈ ಜೈನ್ ಹಾಗೂ ರೆಡ್ಡಿ ಜಂಟಿ ಲೂಟಿ ನಡೆಸುತ್ತಾ ಬಂದಿದ್ದು ಈಗ ಸಿಕ್ಕಿಬಿದ್ದಿದ್ದಾರೆ.

ಹಳೇ ಕಳ್ಳ ಎಸ್.ಎಂ. ಜೈನ್

ಡೆಕ್ಕನ್ ಮೈನಿಂಗ್ ಸಿಂಡಿಕೇಟ್ ಎಂಬುದು 1966 ರಲ್ಲಿ ಅಸ್ತಿತ್ವಕ್ಕೆ ಬಂದ ಒಂದು ಗಣಿಗಾರಿಕೆ ಕಂಪನಿ. ಇದನ್ನು ಸ್ಥಾಪಿಸಿದ ಎಸ್.ಎಂ. ಜೈನ್ ಈಗಿಲ್ಲ, 2006 ರಲ್ಲಿ ಸತ್ತಿದ್ದಾನೆ. ಮೂಲತಃ ರಾಜಸ್ಥಾನದವನಾದ ಎಸ್.ಎಂ. ಜೈನ್ ಅರ್ಥಾತ್ ಸುವೆಲ್‌ಲಾಲ್ ಜೈನ್ ಕಲ್ಕತ್ತಾದ ಸೇಂಟ್ ಜೇವಿಯರ್ಸ್ ಕಾಲೇಜಿನಲ್ಲಿ ಓದಿ ನಂತರ ಸೀದಾ ಬಳ್ಳಾರಿಗೆ ಬಂದ. ಹಾಗೆ ಬರುವಾಗ `Industrialise or perish' ಎಂದಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಕರೆಯ ಸ್ಫೂರ್ತಿಯಿಂದ ತಾನು ಬಳ್ಳಾರಿಗೆ ಗಣಿಗಾರಿಕೆ ನಡೆಸಲು ಬಂದಿದ್ದಾಗಿ ಹೇಳಿಕೊಂಡ. ಗಣಿಗಾರಿಕೆ ನಡೆಸಿ ಕಬ್ಬಿಣದ ಅದಿರು ತೆಗೆದು ಮಾರುವುದು ದೇಶಸೇವೆ ಎಂತಲೂ ಹೇಳುತ್ತಿದ್ದ. ಕೆಲಕಾಲ ಕಾಂಗ್ರೆಸ್ ಪಾರ್ಟಿ ಜೊತೆ ಓಡಾಡಿಕೊಂಡಿದ್ದ. ಕೆ.ಸಿ. ಕೊಂಡಯ್ಯ, ಮಲ್ಲಿಕಾರ್ಜುನ ಖರ್ಗೆಯವರ ಗೆಳೆತನ ಮಾಡಿ ಒಂದಷ್ಟು ದಿನ ಎಐಸಿಸಿ ಮೆಂಬರ್ ಕೂಡ ಆದ.

ಹೀಗಿದ್ದ ಎಸ್.ಎಂ. ಜೈನ್‌ನೇ ಕರ್ನಾಟಕದಲ್ಲಿ ಮೊದಲ ಬಾರಿಗೆ ಅಕ್ರಮ ಗಣಿಗಾರಿಕೆಗೂ ಅಡಿಗಲ್ಲನಿಟ್ಟ.

ಈ ಜೈನ್‌ಗೆ ಸಂಡೂರು ತಾಲ್ಲೂಕಿನ ಕಮ್ಮತೂರು ಗ್ರಾಮದಲ್ಲಿ ಒಟ್ಟು 46 ಎಕರೆ ಪ್ರದೇಶವನ್ನು ಗಣಿಗಾರಿಕೆಗಾಗಿ ಲೀಸ್‌ಗೆ ನೀಡಲಾಗಿತ್ತು. ಎಸ್.ಎಂ. ಜೈನ್ ಆಗ ಡೆಕ್ಕನ್ ಮೈನಿಂಗ್ ಸಿಂಡಿಕೇಟ್‌ನ (ಡಿಎಂಎಸ್) ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರೆ ಅವನ ಮಗ ರಾಜೇಂದರ್ ಜೈನ್ ಕಂಪನಿಯ ಡೈರೆಕ್ಟರ್ ಆಗಿದ್ದ.

ಸರ್ಕಾರವು ಈ ಡಿಎಂಎಸ್‌ಗೆ ಲೀಸ್ ನೀಡಿದ್ದ ಜಾಗದ ಪಕ್ಕದಲ್ಲೇ ನ್ಯಾಷನಲ್ ಮಿನರಲ್ ಡವಲಪ್‌ಮೆಂಟ್ ಕಾರ್ಪೊರೇಷನ್ (NMDC)ನ ಗಣಿಯೂ ಇತ್ತು. ಹೇಳಿಕೇಳಿ ಅದು ಸರ್ಕಾರಿ ಸಂಸ್ಥೆ, ನಮ್ಮ ಮೈಸೂರ್ ಮಿನರಲ್ಸ್ ಸಂಸ್ಥೆಯ ತರವೇ ಈ ಕಂಪನಿಯೂ ಭ್ರಷ್ಟಾಚಾರ, ಸೋಂಭೇರಿತನ, ಅರಾಜಕತೆಗಳ ತವರೂರಾಗಿತ್ತು. ಇದನ್ನು ಗಮನಿಸಿದ ಜೈನ್ ತನ್ನ ಲೀಸ್ ಏರಿಯಾ ದಾಟಿ NMDC ಗೆ ಸೇರಿದ್ದ 26 ಎಕರೆ ಜಾಗವನ್ನೇ ಒತ್ತುವರಿ ಮಾಡಿ ಅಲ್ಲಿ ಅದಿರು ತೆಗೆಯಲು ಪ್ರಾರಂಭಿಸಿದ.

ಅದು ತನ್ನದೇ ಆಸ್ತಿಯೆಂಬಂತೆ 'ಎ' ಬ್ಲಾಕ್ ಎಂದು ಹೆಸರಿಟ್ಟು. ಇದನ್ನು ದಕ್ಕಿಸಿಕೊಳ್ಳಲು ಜೈನ್ ಏನು ಮಾಡಿದ ಗೊತ್ತೆ?

ಕರ್ನಾಟಕ ಆಂಧ್ರ ನಡುವಿನ ಗಡಿ ರೇಖೆಯಿದ್ದ ಒಂದು ಟ್ರೈ ಜಂಕ್ಷನ್ ಪಾಯಿಂಟ್ (Tri-Junction Point) ಅನ್ನೇ ಸ್ಫೋಟಿಸಿಬಿಟ್ಟ!


ಇದು ನಡೆದದ್ದು 12.4.2000 ದಲ್ಲಿ.

ಅವತ್ತು ಎಸ್.ಎಂ. ಜೈನ್ ಹಾಗೂ ರಾಜೇಂದರ್ ಜೈನ್ ಇಬ್ಬರೂ ಸ್ಥಳದಲ್ಲಿದ್ದರು. ಒಂದು ಸಾರಿ ಈ ಗಡಿ ಗುರುತನ್ನು ನಾಶ ಮಾಡಿ ಬಿಟ್ಟರೆ ಆ ನಂತರ ಡೆಕ್ಕನ್ ಕಂಪನಿಯು NMDC ಯವರ ಜಾಗ ಒತ್ತುವರಿ ಮಾಡಿದ್ದು ನಿಜವಾ ಎಂದು ತಿಳಿಯುವುದು ಕಷ್ಟವಾಗುತ್ತಿತ್ತು.

ಡೆಕ್ಕನ್ ಸಿಂಡಿಕೇಟ್ ಕಂಪನಿಯ ಭಾಗದಲ್ಲಿ ಘೋರ್ಪಡೆಯವರ SMORE (ಸಂಡೂರ್ ಮ್ಯಾಂಗನೀಸ್ ಅಂಡ್ ಐರನ್ ಓರ್) ಕಂಪನಿಯ ಲೀಸ್ ಏರಿಯಾ ಇತ್ತು, ಮತ್ತೊಂದೆಡೆ NMDC ಗೆ ಸೇರಿ[...] ಗಣಿಗಳಿದ್ದವು. ಅದೇ ಜಾಗದಲ್ಲೇ ಜೈನ್‌ನ ಗಣಿಯೂ ಇದ[...] ಅಲ್ಲೇ ಬ್ರಿಟಿಷರ ಕಾಲದ ಹಾಗೂ ರಾಜ್ಯ ಪುನರ್[...] ವಿಂಗಡಣೆಯಾದಾಗ ನೆಟ್ಟಿದ್ದ ಗಡಿ ವಿಭಜನಾ ಸ್ತಂಭಗಳಿದ್ದವ[...] ಏನಾಗಿತ್ತೆಂದರೆ NMDC ಯವರು ಜೈನ್‌ನ ಒತ್ತುವ[...] ಉಪಟಳದ ಬಗ್ಗೆ ಪೊಲೀಸರಿಗೆ ಹಾಗೂ ಗಣಿ ಇಲಾಖೆಗ[...] ದೂರು ಕೊಟ್ಟಿದ್ದರು. ನಾಳೆ ಯಾರಾದರೂ ಸ್ಥಳ ತನಿಖೆಗೆಂದ[...] ಬಂದರೆ ಗಣಿ ಏರಿಯಾದ ಗಡಿ ಗುರುತುಗಳ[...] ಸಿಗಬಾರದೆಂದು ಜೈನ್‌ಗಳು ಈ ವಿಧ್ವಂಸಕ ಕೃತ್ಯ ನಡೆಸಿದ್ದರ[...]

ಜೈನ್‌ನ ನಕಲಿ ಪರ್ಮಿಟ್ ದಂಧೆ

1966 ರಲ್ಲಿ ಡೆಕ್ಕನ್ ಕಂಪನಿ ಶುರುವಾಯಿತಾದರ[...] ಗಣಿ ದಂಧೆಯಲ್ಲಿ ದುಡ್ಡು ಹರಿದಾಡಲು ಶುರುವಾಗಿದ್ದ[...] 1998 ರ ನಂತರ. ಆಗಲೇ ಜೈನ್ ಕೂಡಾ ಚುರುಕಾ[...]



ಎಸ್.ಎಂ.ಜೈನ್

63+ ಗ್ರೇಡ್‌ನ ಅದಿರು ಯಥೇಚ್ಛವಾಗಿ ಸಿಗುತ್ತಿ[...] NMDC ಗಣಿ ಪ್ರದೇಶ ಒತ್ತುವರಿ ಮಾಡಿದ್ದಲ್ಲ[...] ನಯಾಪೈಸೆ ರಾಯಲ್ಟಿಯನ್ನು ಸರ್ಕಾರಕ್ಕೆ ಕೊಡದೆ ಅದಿರ[...] ಸಾಗಿಸುತ್ತಿದ್ದ. 1999 ರಿಂದ 2003 ರತನಕ ಇದ[...] ಅವ್ಯಾಹತವಾಗಿ ಸಾಗಿತು. ಆಗ ಒಂದು ಟನ್ ಅದಿರಿ[...] ರಾಯಲ್ಟಿ ಅಂತ ಇದ್ದಿದ್ದು ಜುಜುಬಿ 17 ರೂಪಾಯಿ. ಆದ[...] ಜೈನ್ ಅದನ್ನು ಯಾಕೆ ಸರ್ಕಾರಕ್ಕೆ ಕಟ್ಟಬೇಕು ಅಂತಾ ತಾನ[...] ನಕಲಿ ಪರ್ಮಿಟ್‌ಗಳನ್ನು ಬೆಂಗಳೂರಿನಲ್ಲಿ ಪ್ರಿಂಟ್ ಮಾಡಿ[...] ಬಳಸತೊಡಗಿದ. ಬಳ್ಳಾರಿಯ ಗಣಿ ಹಾಗ[...] ಅರಣ್ಯಾಧಿಕಾರಿಗಳ ಕೆಲ ಸಹಿಗಳನ್ನು ಫೋರ್ಜರಿ ಮಾ[...] ನಕಲಿ ಪರ್ಮಿಟ್‌ಗಳನ್ನು ತನಗೆ ತಾನೇ ಕೊಟ್ಟುಕೊಂಡ[...] ಲಕ್ಷಾಂತರ ಟನ್ ಅದಿರು ಸಾಗಿಸಿದ.

ಆಗಲೇ ಸಂಡೂರಿನ ಪೊಲೀಸ್ ಇನ್ಸ್‌ಪೆಕ್ಟರ್ ತೇಜ[...] ಡೆಕ್ಕನ್ ಕಂಪನಿಯ ಮೇಲೆ ಒಂದು ಸಾರಿ ದಾಳಿ ಮಾಡಿದರ[...] ಅವತ್ತು ರಾಶಿರಾಶಿ ನಕಲಿ ಪರ್ಮಿಟ್ ಸಿಕ್ಕಿತಾದರೂ ಜೈನ್[...] ತನಗಿದ್ದ ರಾಜಕೀಯ ಪ್ರಭಾವ ಬಳಸಿ ತಪ್ಪಿಸಿಕೊಂಡ. ಆಗ[...] ಜೈನ್ ಅಕ್ರಮ ಅದಿರನ್ನು ಕಿರ್ಲೋಸ್ಕರ್, ಜಿಂದಾಲ[...] ಓರಿಯಂಟಲ್ ಗೋವಾ ಕಂಪನಿಗಳಿಗೆ ಸರಬರಾಜ[...] ಮಾಡುತ್ತಿದ್ದ.

ಇವನೆಂತಾ ಖದೀಮನೆಂದರೆ ರಸ್ತೆ ಮೂಲಕ ಅದಿರ[...] ಸಾಗಿಸಬೇಕೆಂದರೆ ಪರ್ಮಿಟ್ ಬೇಕಾಗುತ್ತಲ್ಲ. ಹಾಗಾಗಿ ರೈ[...] ವ್ಯಾಗನ್‌ಗಳ ಮೂಲಕವೂ ಅದಿರು ಸಾಗಾಟಕ್ಕೆ ವ್ಯವ[...] ಮಾಡಿಕೊಂಡಿದ್ದ. ಸಂಡೂರಿನ ಸ್ವಾಮಿಹಳ್ಳಿ (SMIL[...] ರಣಜಿತ್‌ಪುರ (RNJP) ರೇಲ್ವೆ ಸ್ಟೇಷನ್‌ಗಳ ಮೂಲ[...]



ಜೈನ್ ಕುಟುಂಬದ ಅಕ್ರಮ ಆಸ್ತಿಗಳು ಎಲ್ಲೆಲ್ಲಿವೆ?

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಹತ್ತಿರ ನೂರಾರು ಎಕರೆ ವಿಸ್ತೀರ್ಣದ ಒಂದು ಎಸ್‌ಇಜೆಡ್, ಮೈಸೂರು ರೋಡಿನಲ್ಲಿ ವೆಸ್ಟ್ ಇಂಡಸ್ ಎಂಬ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ. ವೈಟ್‌ಫೀಲ್ಡ್ ಹತ್ತಿರ ಮೂರು ಬೃಹತ್ ಗೋಡೌನುಗಳು, ಕೋರಮಂಗಲ 3 ನೇ ಬ್ಲಾಕ್‌ನ ಶಾಂತಿ ಸಾಗರ ಹೋಟೆಲ್ ಬಳಿ ಒಂದು ದೊಡ್ಡ ಕಾಂಪ್ಲೆಕ್ಸ್, ವಸಂತನಗರದಲ್ಲಿ ಎರಡು ದೊಡ್ಡ ಮನೆಗಳು, ರೇಸ್ ಕೋರ್ಸ್ ರೋಡಿನ ಕಲ್ಪತರು ಮ್ಯಾನ್ಷನ್‌ನಲ್ಲಿ ಒಂದು ದೊಡ್ಡ ಸ್ವಂತದ ಕಾರ್ಪೊರೇಟ್ ಆಫೀಸ್, ವಸಂತಪುರ ಇಸ್ಕಾನ್ ದೇವಸ್ಥಾನದ ಹತ್ತಿರ ದೊಡ್ಡ ಅಪಾರ್ಟ್‌ಮೆಂಟ್ ಕಟ್ಟಡ... ಇವು ರಾಜೇಂದರ್ ಜೈನ್‌ನ ಬೆಂಗಳೂರಿನ ಆಸ್ತಿಗಳು.

ಇದರ ಜೊತೆ ಬಳ್ಳಾರಿ ಹಾಗೂ ಸಂಡೂರಿನಲ್ಲಿರುವ ಮನೆ, ಆಫೀಸ್, ಗಣಿ ಕಚೇರಿಗಳೂ ಬೇರೆ ಇವೆ. ಜೈನ್‌ನ ಭಾವ ಅಶೋಕ್ ಜೈನ್ ಮೂಲಕ ಮುಂಬೈ ಸೂರತ್‌ಗಳಲ್ಲೂ ಭಾರಿ ಆಸ್ತಿ ಖರೀದಿಸಲಾಗಿದೆ. ರಾಜಸ್ಥಾನದ ಸ್ವಂತ ಸ್ಥಳ ಗಡಶಿವಾನದಲ್ಲೂ ಆಸ್ತಿ ಮಾಡಿದ್ದಾರೆ. ಜೈನ್‌ನ ಸೋದರ ಮಾವನ ಮಗ ಗ್ರಾನೈಟ್ ವ್ಯಾಪಾರಿ ಅಶೋಕ್ ಚಾಲೀಸಾ ಜೊತೆ ಎಸ್‌ಇಜೆಡ್‌ನ ಜಂಟಿ ದಂಧೆಯೂ ಇವರಿಗಿದೆ.

ಇನ್ನೊಬ್ಬ ಚಿಕ್ಕಪ್ಪ ರಮೇಶ್ ಜೈನ್ ಹೆಸರಲ್ಲೂ ಅನೇಕ ಬೇನಾಮಿ ಆಸ್ತಿಗಳನ್ನು ಖರೀಸಿದ್ದಾರೆ. ಸೋದರಳಿಯ ನಿತೀಶ್ ಜೈನ್ ಹೆಸರಲ್ಲೂ ನೂರಾರು ಕೋಟಿ ಬೆಲೆಯ ಆಸ್ತಿ ಮಾಡಿದ್ದಾರೆ. ಬಾವ ಮಿಲಾಲ್ ಚಂದ್ ಕೂಡ ಫಲಾನುಭಾವಿಯೇ.

ಇವತ್ತಲ್ಲ ನಾಳೆ ಸಿಬಿಐ ತನಿಖೆದಾರರ ಗಮನಕ್ಕೆ ಇವೆಲ್ಲ ಸಿಕ್ಕೇ ಸಿಗಬೇಕು ಬಿಡಿ.

ಒಂದೇ ದಿನ 700 ಕೋಟಿ ರೂ. ಸಾಗಿಸಿದ ಶ್ರೀನಿವಾಸ ರೆಡ್ಡಿ!

ಅವತ್ತು 2009ರ ಡಿಸೆಂಬರ್ 8ನೇ ತಾರೀಕು ರಾತ್ರಿ 11 ಗಂಟೆ. ಅಂದರೆ ಇವತ್ತಿಗೆ ಕೇವಲ 20 ತಿಂಗಳ ಹಿಂದೆ ಗಾಲಿ ಜನಾರ್ದನ ರೆಡ್ಡಿಯ ನೆಂಟ ಶ್ರೀನಿವಾಸ ರೆಡ್ಡಿ ಬಳ್ಳಾರಿಯ ಆಕ್ಸಿಸ್ ಬ್ಯಾಂಕ್‌ನ ಲಾಕರ್‌ಗಳಿಂದ ಒಂದೇ ದಿನ 700 ಕೋಟಿ ರೂಪಾಯಿ ಹೊರ ತೆಗೆದನಂತೆ!

ಹೈದರಾಬಾದಿನ ಸಿಬಿಐ ಆಫೀಸ್‌ನೊಳಕ್ಕೆ ಆಗಾಗ ಹೋಗಿಬರುವ ಜನ ತರಹೇವಾರಿ ಘಟನಾವಳಿಗಳ ಕತೆಗಳನ್ನು ಹೊರ ತರುತ್ತಿರುತ್ತಾರೆ. ಅದೇ ತರದ ಘಟನೆ ಇದು.

2009ರ ಡಿಸೆಂಬರ್ 10ನೇ ತಾರೀಕು ಓಬಳಾಪುರಂ ಕಂಪನಿಗೆ ಸಂಬಂಧಿಸಿದಂತೆ ಶ್ರೀನಿವಾಸ ರೆಡ್ಡಿಯ ಮನೆ ಮೇಲೆ ಸಿಬಿಐ ರೈಡ್ ಆಯಿತು. ಆದರೆ ಅದು ಹೇಗೋ ಏನೋ ರೆಡ್ಡಿಗಳಿಗೆ ರೈಡ್ ಬಗ್ಗೆ ಡಿಸೆಂಬರ್ 8ನೇ ತಾರೀಕು ಸಂಜೆಯೇ ಇನ್‌ಫಾರ್ಮೇಷನ್ ಸಿಕ್ಕಿಬಿಟ್ಟಿತ್ತು. ಆ ತಕ್ಷಣ ಅರ್ಜೆಂಟಾಗಿ ಆಕ್ಸಿಸ್ ಬ್ಯಾಂಕ್‌ಗೆ ಓಡಿದ ಶ್ರೀನಿವಾಸ ರೆಡ್ಡಿ ಅಲ್ಲಿದ್ದ ತನ್ನ ಲಾಕರ್‌ಗಳನ್ನೆಲ್ಲ ತೆಗೆಯಬೇಕೆಂದು ಒತ್ತಾಯಿಸಿದ. ಅಷ್ಟರಲ್ಲಿ ಬ್ಯಾಂಕ್‌ನ ಕೆಲಸದ ಅವಧಿ ಮುಗಿದಿದ್ದರೂ ಸಹ ಮ್ಯಾನೇಜರ್ ಉದಯಕುಮಾರ್ ರೆಡ್ಡಿ ಹೇಳಿದಂತೆ ಕೇಳಿದ. ಲಾಕರ್ ಕೀಗಳನ್ನು ತರಿಸಿಕೊಟ್ಟ.



ಅವತ್ತು ಅಲ್ಲಿದ್ದ ಪ್ರತ್ಯಕ್ಷದರ್ಶಿಗಳ ಪ್ರಕಾರ ಲಾಕರ್‌ಗಳಲ್ಲಿ 700 ಕೋಟಿ ರೂಪಾಯಿ ಇತ್ತು. ಬ್ಯಾಂಕ್ ಲಾಕರ್‌ಗಳಲ್ಲಿ ಒಡವೆ, ಕಾಗದಪತ್ರ ಇಡಬಹುದೇ ವಿನಃ ಕ್ಯಾಶ್ ಇಡುವಂತಿಲ್ಲ. ಆದರೂ ರೆಡ್ಡಿಗಳು ಒಂದಲ್ಲ, ಎರಡಲ್ಲ ಏಳುನೂರು ಕೋಟಿ ರೂಪಾಯಿಗಳನ್ನು ಲಾಕರ್‌ನಲ್ಲಿಟ್ಟಿದ್ದರು.

ಸಿಬಿಐ ರೈಡ್ ಆದರೆ ಸಿಗಬಾರದೆಂದು ಆ ಹಣವನ್ನು ತಲಾ 2, 3, 4 ಕೋಟಿಯಂತೆ ವಿಭಾಗಿಸಿ ಗೋಣಿ ಚೀಲಗಳಲ್ಲಿ ತುಂಬಿಸಿ ನೌಕರರ, ಮನೆಕೆಲಸದವರ, ಡ್ರೈವರ್‌ಗಳ ಮನೆಗಳಿಗೆ ಸಾಗಿಸಿಬಿಟ್ಟ ರೆಡ್ಡಿ, ಅದರಲ್ಲಿ ಅವನಿಗೆಷ್ಟು ವಾಪಸ್ ಸಿಕ್ಕಿತೋ, ಸಿಕ್ಕಿದವರಿಗೆ ಸೀರುಂಡೆಯಾಗಿದ್ದೆಷ್ಟೋ?

ರಾಜೇಂದರ್ ಕಿಡ್ನಾಪ್

ಎಸ್.ಪಿ. ಹೇಮಂತ್ ನಿಂಬಾಳ್ಕರ್ 4 ಕೋಟಿ ತಿಂದ!

2004 ರ ಆಗಸ್ಟ್‌ನಲ್ಲಿ ಕರ್ನೂಲ್‌ನ ನಕಲಿ ನಕ್ಸಲೈಟ್ ನರಸಿಂಹಲು ಮತ್ತವನ ಗ್ಯಾಂಗ್ ಡೆಕ್ಕನ್ ಮೈನಿಂಗ್‌ನ ಮಾಲೀಕ ರಾಜೇಂದರ್ ಜೈನ್ ಸಂಡೂರಿನ ಗಣಿಗೆ ಹೋಗಿದ್ದಾಗ ಕಿಡ್ನಾಪ್ ಮಾಡಿತು.



ನಾಲ್ಕು ಕೋಟಿ ರೂ. ಕೊಡಬೇಕೆಂದು ನರಸಿಂಹಲು ಕೇಳಿದ. ಎಸ್.ಎಂ. ಜೈನ್ ಒಪ್ಪಿ ಮೊದಲ ಕಂತಾಗಿ 2 ಕೋಟಿ ಕಳಿಸಿದಾಗ ಮುಕ್ತಿಯಲ್ಲಿ ಇಬ್ಬರು ಪೊಲೀಸರು ಹೋಗಿದ್ದರು. ಅದೇ ಸಮಯದಲ್ಲೇ ಕಿಡ್‌ನ್ಯಾಪರ್‌ಗಳ ಜಾಲ ಪತ್ತೆಹಚ್ಚಿದ ಆಗಿನ ಎಸ್‌ಪಿ ಹೇಮಂತ್ ನಿಂಬಾಳ್ಕರ್ ಅವರನ್ನು ತಕ್ಷಣ ಅರೆಸ್ಟ್ ಮಾಡದೆ ಜೈನ್ ಕುಟುಂಬ ಹಣ ಕಳಿಸುವಂತೆ ನೋಡಿಕೊಂಡರು. ಹಣ ಕಿಡ್‌ನ್ಯಾಪರ್‌ಗಳ ಕೈ ಸೇರುವ ಮೊದಲೇ ನರಸಿಂಹಲುನನ್ನು ಎನ್‌ಕೌಂಟರ್‌ನಲ್ಲಿ ಮುಗಿಸಿ ಒತ್ತೆ ಹಣವನ್ನು ನಾಪತ್ತೆ ಮಾಡಿಬಿಟ್ಟರು.

ಈ ನಿಂಬಾಳ್ಕರ್ ಕಳೆದ ವರ್ಷ ಸಿಬಿಐ ದಾಳಿಯಲ್ಲಿ ಸಿಕ್ಕಿಬಿದ್ದ. ಆಗ ಅವನ ಹತ್ತಿರ ...ಕೋಟಿ ರೂ.ಗೂ ಹೆಚ್ಚಿನ ಆಸ್ತಿ ಪತ್ತೆಯಾಗಿತ್ತು.

...ತರ ಟನ್ ಅದಿರನ್ನು ಗೋವಾ, ಚೆನ್ನೈ ಬಂದರುಗಳಿಗೆ ... ಸಾವಿರಾರು ಕೋಟಿ ಲೂಟಿ ಹೊಡೆದ.

ಜೈನ್ ಕಿಡ್ನಾಪ್-ರೆಡ್ಡಿ ಎಂಟ್ರಿ

ಜೈನ್ ಕುಟುಂಬ ಹೀಗೆ ಕರ್ನಾಟಕ ನಿಸರ್ಗ ಸಂಪತ್ತನ್ನು ಹೊಡೆಯುತ್ತಿದ್ದರೂ ಅದು ಯಾರ ಗಮನಕ್ಕೂ ...ಬಲಿಲ್ಲ. ಆಗ ಗಣಿಗಾರಿಕೆಯಲ್ಲಿ ಈ ಪ್ರಮಾಣದ ...ದೆಯೆಂಬುದೇ ಅಸಲಿಗೆ ಹೊರಗಿನವರಿಗೆ ...ಲಿಲ್ಲ. ಆದರೆ 2004 ರ ಆಗಸ್ಟ್‌ನಲ್ಲಿ ನಡೆದ ಒಂದು ...ಯು ಎಲ್ಲರ ಗಮನವನ್ನು ಗಣಿ ಮಾಲೀಕರತ್ತ ...ತು.

...ದು ರಾಜೇಂದರ್ ಜೈನ್‌ನ ಕಿಡ್ನಾಪ್!

...ಧ್ರದ ರಾಯಲಸೀಮಾದ ನಕಲಿ ನಕ್ಸಲೈಟರ ಒಂದು ... ರಾಜೇಂದರ್ ಜೈನ್‌ನನ್ನು ಕಿಡ್ನಾಪ್ ಮಾಡಿ ...ಡೆಗಾಗಿ ನಾಲ್ಕು ಕೋಟಿ ರೂಪಾಯಿ ಕೇಳಿತು. ಎರಡು ... ರೂಪಾಯಿ ಅವರಿಗೆ ಸಿಕ್ಕಿಯೂ ಸಿಕ್ಕಿತು. ಆಗಿನ ... ಪೊಲೀಸ್ ಮುಖ್ಯಸ್ಥನಾಗಿದ್ದ ಹೇಮಂತ್ ...ಳ್ಕರ್ ಈ ಡೀಲ್‌ನಲ್ಲಿ ತಾನೂ ನಾಲ್ಕು ಕೋಟಿ ...ದ. ಅದರ ವಿವರಗಳು ಬಾಕ್ಸ್‌ನಲ್ಲಿವೆ... ಓದಿ

...ನ್ ಫ್ಯಾಮಿಲಿ ಯಾವಾಗ ನಾಲ್ಕಾರು ಕೋಟಿ ...ಯಿ ಖರ್ಚು ಮಾಡಿ ರಾಜೇಂದರ್ ಜೈನ್‌ನನ್ನು ...ಕೊಂಡು ಬಂತೊ ಎಲ್ಲರ ಗಮನ ಅತ್ತ ಹರಿಯಿತು.

...ಗ ತಾನೆ ಗಣಿ ದಂಧೆಗೆ ಕೈಹಾಕಿದ್ದ ಗಾಲಿ ಜನಾರ್ದನ ... ಇದನ್ನು ಗಮನಿಸಿದ. ಅಷ್ಟರಲ್ಲಾಗಲೇ ರೆಡ್ಡಿ ...ಯು-ಗಣಿ ದಂಧೆಯನ್ನೆಲ್ಲಾ ಬಳಸಿ ಬಳ್ಳಾರಿಯ ಬಲಿಷ್ಠ ... ಎನಿಸಿಕೊಂಡಿದ್ದ.

...ಥ ರೆಡ್ಡಿ ಒಂದು ದಿನ ರಾಜೇಂದರ್ ಜೈನ್‌ಗೆ ಹೇಳಿ

...ಎಂಸಿ-ಡೆಕ್ಕನ್ ಡೀಲ್ ಆಯಿತು

NMDC ಗಣಿ ಪ್ರದೇಶಕ್ಕೆ ನುಗ್ಗಿ ಅಕ್ರಮ ಗಣಿಗಾರಿಕೆ ...ದ್ದ ಜೈನ್ ಯಾವ ಮಟ್ಟಕ್ಕೆ ಕೊಬ್ಬಿದ್ದನೆಂದರೆ ತಾನು ... ಮಾಡಿದ್ದ 'ಎ' ಬ್ಲಾಕ್ ನಲ್ಲೇ ಡಬಲ್ ಡೆಕ್ ಗ್ರಾವಿಟಿ ... ಒಂದನ್ನು ತಂದಿರಿಸಿದ್ದ. ಗಣಿ ಉದ್ಯಮದಲ್ಲಿ ...ದು ಬೆಲೆ ಬಾಳುವ ಹಾಗೂ ದಂಧೆಯ ಅಗಾಧತೆ ...ಸುವ ಯಂತ್ರವಾಗಿದೆ. ಇದನ್ನು ಗೋವಾದ ಎಕ್ಸರ್ ...ವನ ಮೂಲಕ ಅಳವಡಿಸಲಾಗಿತ್ತು. ಈ ಜೈನ್ ...C ಪ್ರದೇಶದಲ್ಲೇ ಒಂದು ಕಾಲುವೆ ಮಾಡಿಸಿ ತನಗೆ ... ರೀತಿಯಲ್ಲಿ ಬೌಂಡರಿ ಗುರುತಿಸಿ ಸೆಕ್ಯೂರಿಟಿ ...ಗಳನ್ನಿಟ್ಟ. NMDC ಪ್ರದೇಶದ ನೀರಿನ ಪೈಪ್ ಸಾಲಿನ ಮೇಲೆ ತನ್ನ ಅದಿರಿನ ಡಂಪ್ ತಂದು ಸುರಿದ. ಈ ಬಗ್ಗೆ NMDC ಅಧಿಕಾರಿ ಚಂದ್ರಕಾಂತ್ ಪೊಲೀಸರಿಗೆ ದೂರು ಕೊಟ್ಟರು. ಆಗ ಸಂಡೂರಿನ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಒಂದಷ್ಟು ಕ್ರಮ ಕೈಗೊಂಡರಾದರೂ ಕೇಸ್ ಹೈಕೋರ್ಟ್‌ಗೆ ಹೋಯಿತು. ಹೀಗೆ 1999 ರಿಂದ 2008 ರ ತನಕ ನಡೆಯಿತು.

2008 ರಲ್ಲಿ ರೆಡ್ಡಿ ಜೈನ್‌ನನ್ನು ಕರೆಸಿಕೊಂ...

ರಾಜೇಂದರ್ ಜೈನ್ ತಕ್ಷಣ ರೆಡ್ಡಿಗೆ ಶರಣಾಗಿಬಿಟ್ಟ. ಅಷ್ಟರಲ್ಲಿ ಅವನಪ್ಪ ಎಸ್.ಎಂ. ಜೈನ್ ಸತ್ತಿದ್ದ. ಡೆಕ್ಕನ್‌ಗೆ ರಾಜೇಂದರ್‌ನೇ ಎಂ.ಡಿ.ಯಾಗಿದ್ದ. ಇವನಿಗೆ ರೆಡ್ಡಿಗಳ ತಾಕತ್ತು, ದುಷ್ಟತನ ಎಷ್ಟೆಂಬುದು ಗೊತ್ತಿತ್ತು. ಹಾಗಾಗಿ ತನ್ನ ಡೆಕ್ಕನ್ ಕಂಪನಿಯ ಲೀಸ್ ಏರಿಯಾ ಅಲ್ಲದೆ ಪಕ್ಕದ NMDCಯಲ್ಲಿ ತಾನು ಒತ್ತುವರಿ ಮಾಡಿದ್ದ 76 ಎಕರೆ ಪ್ರದೇಶವನ್ನು ರೆಡ್ಡಿಯ ಅಸೋಸಿಯೇಟೆಡ್ ಮೈನಿಂಗ್ ಕಂಪನಿಗೆ ಶರಣಾಗತಿ ಮಾಡಿಸಿಬಿಟ್ಟ.

ರೆಡ್ಡಿ ಹಾಗೂ ಲಕ್ಷ್ಮೀ ಅರುಣ ಇಲ್ಲಿ ಜೈನ್ ಅಕ್ರಮವಾಗಿ ತೆಗೆಯುತ್ತಿದ್ದ ಅದಿರನ್ನು ತಾವು ಕಡಿಮೆ ಬೆಲೆಗೆ ಪಡೆದು ಎಎಂಸಿ ಹಾಗೂ ಒಎಂಸಿ ಮೂಲಕ ವಿದೇಶಗಳಿಗೆ ಸಾಗಿಸಿದರು.

ಡೆಕ್ಕನ್ ಹಾಗೂ ಎಎಂಸಿ ನಡುವೆ ಈ ಡೀಲ್ ನಡೆದಾಗ ಒಬಾಳಪುರಂ ಕಂಪನಿಯ ಡೈರೆಕ್ಟರ್ ರಾಜಶೇಖರನೂ ಪ್ರತ್ಯಕ್ಷದರ್ಶಿಯಾಗಿದ್ದ.

ಡೆಕ್ಕನ್ ಹಾಗೂ NMDC ಲೀಸ್ ಏರಿಯಾದಲ್ಲಿ ಪ್ರತಿ ದಿನ ಅಂದಾಜು 3000 ಟನ್ ಅದಿರು ತೆಗೆದು ಸಾಗಿಸಲಾಗುತ್ತಿತ್ತು. ಅವತ್ತಿನ ಮಾರ್ಕೆಟ್ ರೇಟಿನಲ್ಲೇ ಹೇಳಬೇಕೆಂದರೂ ಅದು ದಿನಕ್ಕೆ 2 ಕೋಟಿ ರೂಪಾಯಿ ಲಾಭ ತರುತ್ತಿದ್ದ ದಂಧೆ. ಇದು ನಾಲ್ಕು ವರ್ಷ ನಿರಂತರವಾಗಿ ನಡೆಯಿತು.

ನೀವಿಲ್ಲಿ ಒಂದು ಕ್ಷಣ ನಿಂತು ಲೆಕ್ಕ ಹಾಕಿ.

ದಿನಕ್ಕೆ 2 ಕೋಟಿ ರೂ.ನಂತೆ ನಾಲ್ಕು ವರ್ಷ ಅಂದರೆ ಹೆಚ್ಚು ಕಡಿಮೆ ಮೂರು ಸಾವಿರ ಕೋಟಿ ರೂಪಾಯಿಗಳು!


ಇದಕ್ಕೂ ಮುನ್ನ ಜೈನ್ ತಾನೊಬ್ಬನೇ 10 ವರ್ಷ ಲೂಟಿ ನಡೆಸಿದ್ದ. ಅದರ ಮೊತ್ತ ಎಷ್ಟಿರಬೇಕು ಲೆಕ್ಕ ಹಾಕಿ.

ಇದು ಒಂದೆಡೆ ಇರಲಿ, ಗಾಲಿ ರೆಡ್ಡಿ ಜೈನ್ ತರಹದ ಸುಮಾರು 60 ಗಣಿ ಮಾಲೀಕರಿಂದ ಇದೇ ರೀತಿ ಬೆದರಿಸಿ ಅದಿರು ತೆಗೆದುಕೊಳ್ಳುತ್ತಿದ್ದ. ಒಬ್ಬ ಜೈನ್ ಮೂಲಕ ರೆಡ್ಡಿ-ಲಕ್ಷ್ಮಿ ಅರುಣಾಗೆ ಮೂರು ಸಾವಿರ ಕೋಟಿ ರೂಪಾಯಿ ದೋಚಿದ್ದಾರೆಂದರೆ ಉಳಿದ 59 ಗಣಿ ಮಾಲೀಕರಿಂದ ದೋಚಿದ್ದೆಷ್ಟಿರಬಹುದು?

ಜೈನ್-ರೆಡ್ಡಿ ವಿರುದ್ಧ ಆಂಜನೇಯ ಅಪ್ರೂವರ್!

...ಕ್ರಮ ಗಣಿ ದಂಧೆಯ ತಳಬುಡ ಶೋಧಿಸಲು ಹೊರಟಿರುವ ಸಿಬಿಐ ಪಾಲಿನ ಚಿನ್ನದ ಗಣಿ ಅಂದರೆ ಮಿ. ...ನೇಯ.

...ನೇಕ ವರ್ಷ ಜೈನ್‌ನ ಡೆಕ್ಕನ್ ಮೈನಿಂಗ್ ಸಿಂಡಿಕೇಟ್‌ನಲ್ಲಿ, ಎಂ.ವೈ.ಘೋರ್ಪಡೆ ... ಹಾಗೂ ಜನಾರ್ದನ ರೆಡ್ಡಿಯ ಓಬಳಾಪುರಂ ಕಂಪನಿಯಲ್ಲಿ ಕೆಲಸಗಾರರಾಗಿದ್ದ ...ಷ್ಟ ಆಂಜನೇಯ ಇವತ್ತು ಸಿಬಿಐ ಅಪ್ರೂವರ್ ಆಗಿದ್ದಾರೆ.


ಆಂಜನೇಯ

...ಣಿಕಳ್ಳರು ಎಲ್ಲೆಲ್ಲಿ ಯಾವಾಗ್ಯಾವಾಗ ಯಾವ್ಯಾವ ರೀತಿ ಅಕ್ರಮ ...ವರೆಂಬುದನ್ನು ಸವಿವರವಾಗಿ ಆಂಜನೇಯ ತಿಳಿಸಿದ್ದಾರೆ. ನಾಲ್ಕಾರು ಸಾರಿ ...ರು, ರಾಮದುರ್ಗದ ಗಣಿ ಏರಿಯಾಗೂ ಸಿಬಿಐ ಜೊತೆ ಹೋಗಿ ಬಂದಿದ್ದಾರೆ. ...ಣಿಗಾರಿಕೆ ಕುರಿತಂತೆ ಸಿಬಿಐನ ಡಿಐಜಿ ಲಕ್ಷ್ಮೀನಾರಾಯಣ್‌ಗೆ ಅನೇಕ ತಾಂತ್ರಿಕ ...ಗಳ ಮಾಹಿತಿ ನೀಡಿರುವ ಆಂಜನೇಯ ಈಗಲೂ ತಿಂಗಳುಗಳಿಗೆ ಎರಡು ...ವಾದರೂ ಹೈದರಾಬಾದಿನ ಸಿಬಿಐ ಕಚೇರಿಯಿಂದ ಬುಲಾವ್ ...ಸುತ್ತಿರುತ್ತಾರೆ. ಈ ರೆಡ್ಡಿ ಗ್ಯಾಂಗ್ ಆಂಜನೇಯನ ಕೊಲೆ ಮಾಡಿಸಲು ...ಮೂರು ಸಾರಿ ಯತ್ನಿಸಿ ವಿಫಲವಾಗಿದೆ.

...ಂಕೇಶ್'ನಲ್ಲಿ ಡೆಕ್ಕನ್ ಮೈನಿಂಗ್ ಸಿಂಡಿಕೇಟ್‌ನ ಅಕ್ರಮಗಳ ಬಗ್ಗೆ ವರದಿ ...ರಿಸುವಾಗ ಆಂಜನೇಯರನ್ನು ಸಂಪರ್ಕಿಸಿ ಕೆಲ ವಿಚಾರ ಕೇಳಿದಾಗ ತಮಗೆ ತಿಳಿದಿದ್ದನ್ನೆಲ್ಲಾ ಹೇಳಿದರು. ಸಿಬಿಐ ...ನಿರುವ ಸೆಕ್ಯುರಿಟಿಯವರ ಜೊತೆ ತಾವೇ ಪತ್ರಿಕೆ ಆಫೀಸಿಗೂ ಬಂದು ಎರಡು ತಾಸು ಕುಳಿತು ಅನೇಕ ವಿಚಾರಗಳನ್ನು ...ಕೊಂಡರು.


ಈ ಆಂಜನೇಯ ಅತ್ಯಂತ ಪ್ರಾಮಾಣಿಕ ವ್ಯಕ್ತಿ, ಅಷ್ಟೇ ಧೈರ್ಯಶಾಲಿ ಕೂಡಾ!

ಸುತ್ತೂರು-ಸಿದ್ಧಗಂಗಾ-ರಂಭಾಪುರಿ

ನಾಚಿಕೆಯಿಲ್ಲದ ಲಿಂಗಾಯತ ಸ್ವಾಮಿಗಳು

ಇದು ಬೇಕಿತ್ತಾ?

ಕರ್ನಾಟಕದ ಜನರೆಲ್ಲಾ ಇವತ್ತು ಅಸಹ್ಯಪಟ್ಟುಕೊಳ್ಳುತ್ತಿದ್ದಾರೆ. ಕೆಲವರಿಗೆ ಜಿಗುಪ್ಸೆಯಾಗಿದೆ. ಹಲವರಿಗೆ ರೇಜಿಗೆಯೆನಿಸಿದೆ, ಅನೇಕರು ಕನಲಿ ಹೋಗಿದ್ದಾರೆ. ಬೇಕಾದಷ್ಟು ಜನ ಕ್ಯಾಕರಿಸಿ ಉಗಿಯುತ್ತಿದ್ದಾರೆ.




ಆದರೆ ಯಡಿಯೂರಪ್ಪನಂತೆಯೇ ಸುತ್ತೂರು ಸ್ವಾಮಿ, ಸಿದ್ಧಗಂಗಾ ಹಾಗೂ ರಂಭಾಪುರಿ ಮಠಾಧೀಶರೂ ನಾಚಿಕೆ, ಮಾನ-ಮರ್ಯಾದೆಗಳನ್ನೆಲ್ಲಾ ಬಿಟ್ಟು ನಿಂತಿರುವಂತೆ ಕಾಣುತ್ತಿದೆ.

ಕಳ್ಳತನದ ಆರೋಪ ಹೊತ್ತು ಯಡ್ಡಿ ಜೈಲಿಗೆ ಹೋದರೆ ಅಂತಾ ಕಳ್ಳನ ಹಿಂದೆಯೇ ಓಡುತ್ತಾ ಹೋಗಿ ಸಮಾಧಾನಿಸಿ ಬರುವಂತಹ ಜರೂರತ್ತು ಈ ಸ್ವಾಮಿಗಳಿಗೇನಿತ್ತು?

ವೀರಶೈವ ಮಹಾಸಭಾದ ಕೆಲ ನಾಯಕರು ಹೇಳುವುದನ್ನು ನಂಬುವುದಾದರೆ ಮಠಾಧೀಶರ ಈ ನಡವಳಿಕೆಗೆ ಕೇವಲ ಸ್ವಜಾತಿ ಪ್ರೇಮ ಮಾತ್ರ ಕಾರಣವಲ್ಲ! ದೊಡ್ಡ ಮೊತ್ತದ ಹಣಕಾಸಿನ ಡೀಲ್‌ಗಳೂ ಇರುವ ಕಾರಣದಿಂದಾಗಿ ಈ ಮಠಾಧೀಶರು ಹಾಗೂ ಯಡ್ಡಿ ಒಬ್ಬರನ್ನೊಬ್ಬರು ಬಿಟ್ಟಿರಲಾರದ ಸ್ಥಿತಿ ತಲುಪಿದ್ದಾರೆ ಎನ್ನಲಾಗಿದೆ.

ಹೇಗಿದೆ ನೋಡಿ.....?



ಈ ಯಡ್ಡಿಯೇನು ದುಷ್ಟರಿಗೆ ಶಿಕ್ಷೆಗೆ, ಶಿಷ್ಟರನ್ನು ರಕ್ಷಣೆ ಮಾಡಿ ಬಂದ ಶೂರನೇ, ಲೋಕೋದ್ಧಾರಕನೆ, ಇಲ್ಲಾ ಮಹಾತ್ಮಾ ಗಾಂಧಿಯ ತುಂಡೆ....?

ಈತ ಮಾಡಿರುವುದು ಕಳ್ಳತನ, ಕೈಲಿ ಅಧಿಕಾರವಿರುವ ತನಕ ನಡೆಸಿದ್ದೆಲ್ಲಾ ಜಾತಿ ರಾಜಕೀಯ, ತಿಂದು ಕೊಬ್ಬಿದವರೆಲ್ಲಾ ಬ್ರಾಹ್ಮಣ ಮತ್ತು ಲಿಂಗಾಯತ ಮಠಾಧೀಶರೇ!

ಆದರೂ ಯಾವ ಬ್ರಾಹ್ಮಣ ಮಠಾಧೀಶರನೂ ಯಡ್ಡಿ ನೋಡಲು ಜೈಲಿಗೆ ಹೋಗಲಿಲ್ಲ. ಹೋದವರೆಲ್ಲಾ ಲಿಂಗಾಯತ ಮಠಾಧೀಶರೆ!

ನಾವು ಊಹಿಸಿದ್ದಕ್ಕಿಂತಾ ಯಡ್ಡಿ ಬಲಿಷ್ಠ

ಇದು ನಿಜ.

ನೀವೊಮ್ಮೆ ಪರಿಶೀಲಿಸಿ ನೋಡಿ. ಯಡ್ಡಿ ಅರೆಸ್ಟಾದ ನಂತರ ರಾಜ್ಯ ಸಚಿವ ಸಂಪುಟವು ಯಡ್ಡಿಯನ್ನೇ ಬೆಂಬಲಿಸುವ ನಿರ್ಣಯ ಕೈಗೊಳ್ಳುತ್ತದೆ. ಅತ್ತ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ ಶಿವಮೊಗ್ಗದಲ್ಲಿ ಬಹಿರಂಗವಾಗಿ ಯಡ್ಡಿಯ ಕಾಲಿಗೆ ಬೀಳುತ್ತಾರೆ. ಯಡ್ಡಿ ಜೈಲಿಗೆ ಕಾಲಿಡುವ ಮೊದಲೇ ಜೈಲು ಬಾಗಿಲಿಗೆ ಹೋಗಿ ಸ್ವಾಗತಿಸಿದ್ದ ಜೈಲು ಮಂತ್ರಿ ನಾರಾಯಣ ಸ್ವಾಮಿಯನ್ನು ಎಲ್ಲರೆದಿರೇ ಯಡ್ಡಿ "ಯೂಸ್‌ಲೆಸ್ ಫೆಲೊ" ಅಂತಾ ಬೈಯುತ್ತಾರೆ, ಅಷ್ಟಕ್ಕೆ ಹೆದರಿ ನಾರಾಯಣ ಸ್ವಾಮಿ ಅಲ್ಲಿಂದ ಪರಾರಿಯಾಗುತ್ತಾನೆ.



ಯಡ್ಡಿ ಜೈಲಾಸ್ಪತ್ರೆಯಲ್ಲಿದ್ದಾಗಲೇ ಲಿಂಗಾಯತ ಐಪಿಎಸ್ ಅಧಿಕಾರಿಗಳಾದ ಶಂಕರ್ ಬಿದರಿ ಹಾಗೂ ಜ್ಯೋತಿ ಪ್ರಕಾಶ್ ಮಿರ್ಜಿ ತರಾತುರಿಯಿಂದ ಧಾವಿಸಿ ಯಡ್ಡಿಯನ್ನು ಭೇಟಿಯಾಗಿ ಬಂದರು.

ಒಟ್ಟಾರೆ ಹೇಳಬೇಕೆಂದರೆ ಇವೆಲ್ಲಾ ಒಬ್ಬ ವ್ಯಕ್ತಿಯಲ್ಲಿ ತಮ್ಮ ನಿಷ್ಠೆ ಪ್ರದರ್ಶಿಸುವ ಘಟನೆಗಳಂತೆ ಕಾಣುತ್ತಿದೆ.

ಪ್ರಧಾನವಾಗಿ ಇದು ಲಿಂಗಾಯತ ಜಾತಿಯವರ ನಿಷ್ಠೆ ಹಾಗೂ ಭಯಭಕ್ತಿಯ ಪ್ರದರ್ಶನವಾಗಿದೆ.

ಕರ್ನಾಟಕದಲ್ಲಿ ಜಾತಿಗೆ ಮೀರಿದ ರಾಜಕೀಯ ಅಸ್ತಿತ್ವದಲ್ಲಿಲ್ಲ. ಆದರೆ ಕಳೆದ ಮೂರು ದಶಕದಲ್ಲಿ ಹಿಂದೆಂದೂ ಕಂಡಿರದಿದ್ದಷ್ಟು ಜಾತಿಯ ಭಾವನೆ ಈಗ ಮಡುಗಟ್ಟುತ್ತಿದೆ. ಸ್ಫೋಟಿಸುತ್ತಿದೆ.

ಲಿಂಗಾಯತ ಜಾತಿ ಪ್ರಜ್ಞೆ ಅದು. ಈ ಮೊದಲೆಲ್ಲಾ ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಟ್ಟಗಷ್ಟೇ ಇರುತ್ತಿದ್ದ ಒಕ್ಕಲಿಗ, ಲಿಂಗಾಯತ, ಕುರುಬ, ದಲಿತ ಜಾತಿ ರಾಜಕಾರಣವು ಈಗ ರಾಜ್ಯಮಟ್ಟದಲ್ಲೂ ಏಕೀಭವಿಸಿ ವ್ಯಕ್ತವಾಗುತ್ತಿದೆ.

ಇದರ ಪೈಕಿ ಎದ್ದು ಕಾಣುತ್ತಿರುವುದೇ ಲಿಂಗಾಯರತದ್ದು. ಯಡ್ಡಿ ಇದರ ನಾಯಕನಂತೆ ಈಗಾಗಲೇ ಬಿಂಬಿಸಲ್ಪಟ್ಟಿದ್ದಾನೆ. ಈ ಖದೀಮನ ಹಿಂದೆ ಭ್ರಷ್ಟ ಲಿಂಗಾಯತ ರಾಜ ಕಾರಣಿಗಳು, ಭ್ರಷ್ಟ ಮಠಾಧೀಶರು, ಆಫೀಸರ್‌ಗಳೆಲ್ಲಾ ಇದ್ದಾರೆ. ಬಡ ಲಿಂಗಾಯತರಿಗೆ ಇಲ್ಲಿ ಜಾಗವೂ ಇಲ್ಲ. ಅಂತವರಿಗೆ ಈ ತ್ರಿಮೂರ್ತಿಗಳ ಗ್ಯಾಂಗ್‌ನಿಂದ ಉಪಯೋಗವೂ ಆಗು ವುದಿಲ್ಲ.

ಆದರೆ ಇಂತಹ ಲಕ್ಷಾಂತರ ಮಂದಿ ಮುಗ್ಧ ಲಿಂಗಾಯತರನ್ನೇ ಈ ಗ್ಯಾಂಗ ನಂಬಿಸಿ ತಮ್ಮ ಸ್ವಾರ್ಥಕ್ಕೆ ಬಳಸುತ್ತಿದ್ದಾರೆ ಇದು ಸ್ವಲ್ಪ ಮಟ್ಟಿಗೆ ವರ್ಕ್‌ಔಟ್ ಆಗುತ್ತಿರುವಂತಿದೆ.

ಯಡ್ಡಿಗಿರುವ ವಿಪರೀತದ ಆತ್ಮ ವಿಶ್ವಾಸಕ್ಕೆ ಠೇಂಕಾರದ ಧೋರಣೆಗೆ ಅದೂ ಒಂದು ಕಾರಣವಿರಬಹುದು. ಯಡ್ಡಿ ಸರ್ಕಾರ ನಡೆಸುತ್ತಿದ್ದಾಗ ಹತ್ತಾರು ಕೋಟಿ ರೂಪಾಯಿಗಳನ್ನು ಲಿಂಗಾಯತ ಮಠಾಧೀಶರೂ ಕಿತ್ತು ತಿಂದಿದ್ದಾರೆ. ಅದೇ ರೀತಿ ಯಡ್ಡಿ ಕದ್ದಿರಬಹುದಾದ ನೂರಾರು ಕೋಟಿ ರೂಪಾಯಿಗಳಲ್ಲಿ ಕೆಲವನ್ನು ಸುತ್ತೂರು ಮಠಾಧೀಶರ ಹತ್ತಿರ ಬಚ್ಚಿಡಲಾಗಿದೆಯೆಂಬ ರೂಮರ್‌ಗಳೂ ಇವೆ. ಇನ್ನು ಸಿದ್ಧಗಂಗಾ ಸ್ವಾಮಿ ಒಂದು ಕಾಲದಲ್ಲಿ ಸಕಲ ಜಾತಿಗಳೆಲ್ಲರ ಗೌರವ ಪಡೆದಿದ್ದವರು. ಈಗ ನೂರಾ ಮೂರನೆ ವಯಸ್ಸಿನಲ್ಲಿ ಕಳ್ಳ ರಾಜಕಾರಣಿಯೊಬ್ಬನ ಪರ ನಿಂತು ತಮ್ಮ ಅಯೋಗ್ಯತೆಯನ್ನು ತಾವೇ ಸಾರಿ ಕೊಂಡಿದ್ದಾರೆ.

ಪಟೇಲ್, ಬೊಮ್ಮಾಯಿ, ವೀರೇಂದ್ರ ಪಾಟೀಲ್ ನೋಡಲು ಹೋಗಲಿಲ್ಲ ಯಾಕೆ?

ಯಡಿಯೂರಪ್ಪನಿಗೆ ಆರೋಗ್ಯ ಸರಿಯಿಲ್ಲದ ಕಾರಣ ಕ್ಷೇಮ ಸಮಾಚಾರ ವಿಚಾರಿಸಲು ತಾವು ಜೈಲಾಸ್ಪತ್ರೆಗೆ ಹೋಗಿದ್ದಾಗಿ ಕೆಲ ಮಠಾಧೀಶರು ಹೇಳುತ್ತಿದ್ದಾರೆ. ಒಂದು ಕ್ಷಣ ಇದು ನಿಜ ಅಂತಲೇ ಭಾವಿಸೋಣ. ಆದರೆ ಜೆ.ಎಚ್. ಪಟೇಲ್, ಎಸ್.ಆರ್. ಬೊಮ್ಮಾಯಿ, ವೀರೇಂದ್ರ ಪಾಟೀಲರೂ ಅನಾರೋಗ್ಯವಾಗಿ ಕೊನೆಗೆ ತೀರಿಕೊಂಡರಲ್ಲ, ಆಗ ಅವರು ಬದುಕಿದ್ದಾಗ ಯಾವ ಸ್ವಾಮಿಯೂ ಹೋಗಿ ಅವರ ಆರೋಗ್ಯ ವಿಚಾರಿಸಿರಲಿಲ್ಲ ಯಾಕೆ? ಅವರೂ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರೆ ತಾನೆ?

ಈ ಮಠಾಧೀಶರು ಪಟೇಲ್, ಬೊಮ್ಮಾಯಿ, ವೀರೇಂದ್ರ ಪಾಟೀಲರ ಆರೋಗ್ಯ ಕೆಟ್ಟಾಗ ಯಾಕೆ ಹೋಗಲಿಲ್ಲವೆಂದರೆ ಅವರೆಲ್ಲಾ ಯಡ್ಡಿ ತರ ಸರ್ಕಾರಿ ಹಣ ಕದ್ದು ಈ ಮಠಾಧೀಶರ ಕೈಗೆ ಕೊಟ್ಟಿರಲಿಲ್ಲ. ಜನರ ತೆರಿಗೆಯ ಹಣವನ್ನು ಯಡ್ಡಿಯ ರೀತಿ ಕೊಳಕು ಜಾತಿವಾದ ಬೆಳೆಸುತ್ತಿರುವ ಕೆಲ ಲಿಂಗಾಯತ ಮಠಗಳಿಗೆ ಹಂಚಲಿಲ್ಲ.

ಹಾಗಾಗಿಯೇ ಸುತ್ತೂರು ಸಿದ್ಧಗಂಗಾ ಸ್ವಾಮಿಗಳಿಗೆ ಪ್ರಾಮಾಣಿಕ ವೀರೇಂದ್ರ, ಪಾಟೀಲರಿಗಿಂತ ಸಮಾಜವಾದಿ ಸಿದ್ಧಾಂತದ ಪಟೇಲ್, ಬೊಮ್ಮಾಯಿಗಿಂತಾ ಹಗಲು ಕಳ್ಳ ಯಡ್ಡಿಯೇ ಮನಮೆಚ್ಚಿದ ಹೀರೋ ಆಗಿ ಕಾಣಿಸುತ್ತಿದ್ದಾನೆ.

ಥೂ ನಾಚಿಕೆಯಾಗಬೇಕು ಇವರಿಗೆ.

ಸಮಾಜ ಸುಭಿಕ್ಷವಾಗಿವೆ, ಎಲ್ಲವೂ ಸರಿಯಾಗಿದೆಯೆಂಬುದು ಸಿನಿಕರು ಮತ್ತು ಯಥಾಸ್ಥಿತಿವಾದಿಗಳ ಖಾಯಂ ಪ್ರತಿಪಾದನೆ. ಆದರೆ ಅದೇ ಸಮಾಜದಲ್ಲಿ ಕೀಳು ಜಾತಿಯಲ್ಲಿ(?) ಹುಟ್ಟಿದ ಏಕಮಾತ್ರ ತಪ್ಪಿಗೆ ದಮನಿತರು ನಿರಂತರವಾಗಿ ದೌರ್ಜನ್ಯಕ್ಕೀಡಾಗುತ್ತಿದ್ದಾರೆ. ನಾಗರಿಕ ಸಮುದಾಯವೇ ತಲೆತಗ್ಗಿಸುವಂತೆ ಸಾಮಾಜಿಕ ಬಹಿಷ್ಕಾರದಂಥ ಅನಿಷ್ಟಗಳು ದಿನಕ್ಕೊಂದರಂತೆ ನಡೆಯುತ್ತಿವೆ. ಹಾಸನ ಮತ್ತು ಮಂಡ್ಯದಲ್ಲಿ ನಡೆದ ಅಮಾನವೀಯ ಘಟನೆಗಳ ವಿವರ ಇಲ್ಲಿದೆ...

ಹಾಸನ ಚಪ್ಪರ ಹಾಕದ ದಲಿತರಿಗೆ ಬಹಿಷ್ಕಾರ

ಅಸ್ಪೃಶ್ಯತೆಯೆಂಬ ಅನಾಗರಿಕ ಪದ್ಧತಿ ಆಧುನೀಕರಣ, ವೈಜ್ಞಾನಿಕ ಚಿಂತನೆಗಳಿಗೇ ಸೆಡ್ಡು ಹೊಡೆಯುವಂತೆ ಬೆಳೆಯುತ್ತಿದೆ. ಜಾತಿ ಪದ್ಧತಿಯನ್ನೂ ಸಂಸ್ಕೃತಿಯ ಭಾಗವೆಂದೇ ಪರಿಗಣಿಸುವ ಘಟಂಗರ ಸಂಖ್ಯೆಯೂ ವೃದ್ಧಿಸುತ್ತಿದೆ. ಆದುದರಿಂದಲೇ ಸಾಮಾಜಿಕ ಬಹಿಷ್ಕಾರದಂತಹ ಅನಿಷ್ಟಗಳು ಎಗ್ಗಿಲ್ಲದೆ ವಿಜೃಂಭಿಸುತ್ತಿವೆ. ಎರಡು ತಿಂಗಳ ಹಿಂದೆ ಅರಕಲಗೂಡು ಸಿದ್ಧಾಪುರದ ದಲಿತರ ಮೇಲೆ ಇಂತಹುದೇ ದೌರ್ಜನ್ಯ ನಡೆದಿತ್ತು. ಅದೀಗ ಹತ್ತು ಹಲವು ಅವತಾರಗಳನ್ನೆತ್ತಿ ಇವತ್ತಿಗೂ ದಲಿತರು ತತ್ತರಿಸುವಂತೆ ಮಾಡಿದೆ.

ನಾನೂರೈವತ್ತರಷ್ಟು ಮೇಲ್ವರ್ಗದ ಕುಟುಂಬಗಳಿರುವ ಸಿದ್ಧಾಪುರದಲ್ಲಿ ಹದಿನಾಲ್ಕು ದಲಿತ ಕುಟುಂಬಗಳು ಬಡಿಗಾಸಿಗೆ ದುಡಿದು, ಚಪ್ಪರ ಹಾಕುವುದು, ಶುಚಿಗೊಳಿಸುವುದು, ಮನುಷ್ಯ-ದನ-ನಾಯಿಗಳು ಸತ್ತರೆ ಗುಂಡಿ ತೆಗೆದು ಹೂಳುವಂಥ ಕೆಲಸಗಳನ್ನು ಮಾಡುತ್ತಾ ಬಂದಿವೆ. ಇಂಥವಕ್ಕೆಲ್ಲ ಕುಲವಾಡಿಕೆ ಅಂತೊಂದು ಹೆಸರಿಟ್ಟು ಅದೂ ಕೂಡ ದೈವಸಂಕಲ್ಪವೆಂಬಂತೆ ಮೇಲ್ವರ್ಗದ ಜನ ಬಿಂಬಿಸಿಬಿಟ್ಟಿದ್ದಾರೆ.. ಆದರೀಗ ಆ ಕಸುಬು ಮಾಡುತ್ತಿದ್ದವರಿಗೆಲ್ಲಾ ವಯಸ್ಸಾಗಿದೆ. ಶಾಲಾ ಕಾಲೇಜು ಮೆಟ್ಟಲು ಹತ್ತಿದ ಯುವಕರು ಅಂಥವುಗಳತ್ತ ತಿರುಗಿಯೂ ನೋಡುತ್ತಿಲ್ಲ.

ಕಳೆದ ಗಣೇಶನ ಹಬ್ಬದ ಸಂದರ್ಭದಲ್ಲಿ ಈ ರೀತಿಯದ್ದೊಂದು ಸಹಜ ಸಾಮಾಜಿಕ ಪಲ್ಲಟವೇ ದಲಿತರನ್ನು ಬಾಣಲೆಯಿಂದ ಬೆಂಕಿಗೆ ಬೀಳಿಸಿದೆ. ಗಣೇಶನ ಹಬ್ಬದ ನಿಮಿತ್ತ ಮೇಲ್ವರ್ಗದ ಮಂದಿ ದಲಿತನೊಬ್ಬನ ಮನೆಗೆ ಬಂದು ಚಪ್ಪರ ಹಾಕಲು ಕರೆದಿದ್ದಾರೆ. ಆದಾಗಲೇ ವಯೋಸಹಜ ಬಾಧೆಗಳಿಗೆ ತುತ್ತಾಗಿದ್ದ ಆತ ತನಗೆ ಕೆಲಸ ಮಾಡಲಾಗುವುದಿಲ್ಲವೆಂದೂ, ತನ್ನ ಮಗನನ್ನು ಕರೆದುಕೊಂಡು ಹೋಗಿ ಅಂತ ಹೇಳಿದ್ದಾನೆ. ಆದರೆ ಯುವಕರ್‍ಯಾರೂ ಕೈಗೆ ಸಿಗಲಿಲ್ಲ. ಈ ಸಣ್ಣ ವಿಚಾರಕ್ಕೇ ಗಲಾಟೆ ನಡೆಸಿದ ಮತಿಗೇಡಿಗಳು ಶಾಮಿಯಾನ ಹಾಕಿ ಗಣೇಶನನ್ನು ಪ್ರತಿಷ್ಠಾಪಿಸಿದ್ದಾರೆ.

ಆದಾದ ಮಾರನೇ ದಿನ ಪೂಜೆ ಪುನಸ್ಕಾರಗಳಿದ್ದವಲ್ಲ? ದಲಿತರು ಅಲ್ಲಿಗೆ ಹೋದಾಗ ಮೇಲ್ವರ್ಗದ ಪುಂಡರು ಪೂಜೆಗೂ ಅವಕಾಶ ಕೊಡದೆ ಹೊರಗಟ್ಟಿದ್ದರು. ಇದರ ಮರುದಿನವೇ ಗಣೇಶ ವಿಸರ್ಜನೆ ಸಮಾರಂಭದಲ್ಲಿ ಗೊಂಬೆಯಾಟ ಅದ್ದೂರಿಯಾಗಿತ್ತು. ದಲಿತರು ಸಹಜ ಆಸೆಯಿಂದ ನೋಡಲು ಹೋದರೆ ಮೇಲ್ವರ್ಗದ ದುಷ್ಟರ ಕಡೆಯಿಂದ ಸಿಕ್ಕದ್ದು ಅಸಹ್ಯ ಬೈಗುಳ, ನಿಂದನೆಗಳ ಅರ್ಚನೆ! ಇದರಿಂದೆಲ್ಲ ನೊಂದಿದ್ದ ದಲಿತರಿಗೆ ಮರುದಿನವೇ ಆಘಾತವೊಂದು ಕಾದಿತ್ತು. ಮೇಲ್ವರ್ಗದ ದುಷ್ಕರೊಂದಷ್ಟು ಮಂದಿ ಸೇರಿಕೊಂಡು ಸಿದ್ಧಾಪುರದ ಹದಿನಾಲ್ಕು ಮಾದಿಗ ಕುಟುಂಬಗಳಿಗೂ ಬಹಿಷ್ಕಾರ ಹಾಕಿದ್ದರು. ಜೊತೆಗೆ ಊರಲ್ಲಿ ಯಾರೂ ದಲಿತರನ್ನು ಕೆಲಸಕ್ಕೆ ಕರೆಯಬಾರದು, ಅಂಗಡಿ, ಹೋಟೆಲ್‌ಗಳಿಗೆ ಬಿಡಬಾರದೆಂಬ ಫರ್ಮಾನು ಹೊರಡಿಸಿದರು. ಇದನ್ನು ಮೀರಿದವರಿಗೆ ಸಾವಿರದ ಒಂದು ರೂಪಾಯಿಗಳ ದಂಡವನ್ನೂ ನಿಗದಿಪಡಿಸಿದರು.

ಇನ್ನೊಂದು ಆಘಾತಕಾರಿ ಅಂಶವೆಂದರೆ ಮಾದಿಗ ಸಮುದಾಯಕ್ಕೆ ಸೇರಿದ ಸರಗೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ ಚೆಲುವಯ್ಯನಿಗೂ ಈ ಬಹಿಷ್ಕಾರದ ಶಿಕ್ಷೆ ವಿಧಿಸಲಾಗಿತ್ತು! ಇದಾಗಿ ಎರಡ್ಮೂರು ದಿನ ಕಳೆಯುತ್ತಲೇ ಇಲ್ಲಿನ ಸವಿತಾ ಸಮಾಜದ ಹಿರೀಕರೊಬ್ಬರು ನಿಧನರಾದರು. ಈ ಸಂದರ್ಭದಲ್ಲಿ ಬಹಿಷ್ಕಾರ ಶಿಕ್ಷೆಯನ್ನು ಸಡಿಲಿಸಿಕೊಂಡ ಆ ಸಮುದಾಯದ ಕೆಲ ಮಂದಿ ದಲಿತರ ಮನೆಬಾಗಿಲಿಗೆ ತೆರಳಿ ಶವ ಹೂಳಲು ಗುಂಡಿ ತೆಗೆಯುವಂತೆ ಕೇಳಿಕೊಂಡರು. ಆದಾಗಲೇ ಬಹಿಷ್ಕಾರದಂಥ ಅಮಾನವೀಯ ಶಿಕ್ಷೆಗೆ ಗುರಿಯಾಗಿ ಆಕ್ರೋಶಗೊಂಡಿದ್ದ ದಲಿತರು ಇದಕ್ಕೊಪ್ಪಲಿಲ್ಲ. ಈ ಸಂದರ್ಭದಲ್ಲಿ ಹುಂಬರ ಹಿಂಡು ದಲಿತರ ಮೇಲೆ ಹಲ್ಲೆ ನಡೆಸಿ ವಾಪಸಾಗಿತ್ತು.

ಅದುವರೆಗೆ ಮೇಲ್ವರ್ಗದ ಜನರ ಅಟಾಟೋಪಗಳನ್ನೆಲ್ಲ ಸಹಿಸಿಕೊಂಡಿದ್ದ ಮಾದಿಗ ಸಮುದಾಯದವರು ಸೀದಾ ಕೋಣನೂರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದರು. ಆದರೆ ಪಿಎಸ್‌ಐ ಪ್ರವೀಣ್ ಕುಮಾರ್ ಹಾಗೂ ಎಎಸ್‌ಐ ಕುಮಾರ ಸ್ವಾಮಿ ಮಾತಲ್ಲೆ ತಿಪ್ಪೆ ಸಾರಿಸಿ ಸಾಗಹಾಕಲೆತ್ನಿಸಿದರು. ಅದಾಗಲೇ ಈ ಪ್ರಕರಣ ತಿಳಿದು ಕೆಲ ಪ್ರಗತಿಪರ ಸಂಘಟನೆಗಳವರು ಬಂದಿದ್ದರಿಂದ ಅನಿವಾರ್ಯವಾಗಿ ಹದಿನೇಳು ಮಂದಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡರು. ಆದರೆ ಯಾರನ್ನೂ ಅರೆಸ್ಟ್ ಮಾಡುವುದಿರಲಿ, ವಿಚಾರಿಸುವ ಗೋಜಿಗೂ ಹೋಗಲಿಲ್ಲ.

ಇದರ ವಿರುದ್ಧ ಪ್ರತಿಭಟನೆ ನಡೆಸುವುದು ಖಾತ್ರಿಯಾದದ್ದನ್ನು ಕಂಡು ಹೆದರಿದ ಪೊಲೀಸರು ಕೊನೆಗೂ ಮೂವರನ್ನು ಬಂಧಿಸಿದ ನಾಟಕವಾಡಿದರು. ಅವರ್‍ಯಾರೂ ದಲಿತರ ಮೇಲೆ ದೌರ್ಜನ್ಯ ನಡೆಸಿದವರಾಗಲಿ, ಬಹಿಷ್ಕಾರ ಹಾಕಿದ ಹಲಾಲುಕೋರರಾಗಲಿ ಅಲ್ಲ. ಬದಲಾಗಿ ಮೇಲ್ವರ್ಗದ ಮಂದಿ ಆಜ್ಞೆಯನ್ನು ಅನಿವಾರ್ಯವಾಗಿ ಪಾಲಿಸಿದ ಬಡಪಾಯಿ ಅಂಗಡಿ ಮಾಲೀಕರು! ಇದೀಗ 17 ಮಂದಿ ಆರೋಪಿಗಳಿಗೂ ಬೇಲು ಸಿಕ್ಕಿದೆ. ಆದರೆ ದಲಿತರ ಬದುಕು ಭಯದ ವಾತಾವರಣದಲ್ಲೇ ಉಸಿರುಗಟ್ಟಿದೆ. ❖


ದುಷ್ಟತನದ ವಿರುದ್ಧ ಅರ್ಥಪೂರ್ಣ ಜಾಥಾ

ಬಿಎಸ್ಪಿ ಅರ್ಥಪೂರ್ಣ ಕೆಲಸಕ್ಕೆ ಚಾಲನೆ ನೀಡಿದೆ. ಬಿಎಸ್ಪಿಯ ರಾಜ್ಯ ಸಂಚಾಲಕ ಎನ್. ಮಹೇಶ್ ಪಕ್ಷದ ಮುಖಂಡರು, ಕಾರ್ಯಕರ್ತರ ಜೊತೆಗೂಡಿ ಸಿದ್ಧಾಪುರದಿಂದ ಹಾಸನದವರೆಗೆ ಕಾಲ್ನಡಿಗೆ ಜಾಥಾ ಆರಂಭಿಸಿದ್ದಾರೆ.


'ಹಾಸನ ಜಿಲ್ಲೆಯ ಶಾಸಕರೆ, ಸಂಸದರೆ, ಉಸ್ತುವಾರಿ ಸಚಿವರೆ, ಸವರ್ಣೀಯ ಸಮುದಾಯದ ಬುದ್ಧಿಜೀವಿ' ಪ್ರಗತಿಪರ ಚಿಂತಕರೇ ದಲಿತರ ಮೇಲಿನ ದೌರ್ಜನ್ಯ ಸಾಮಾಜಿಕ ಬಹಿಷ್ಕಾರಗಳು ನಿಮಗೆ ಅವಮಾನ ಅನ್ನಿಸುತ್ತಿಲ್ಲವೇ? ಅನ್ನಿಸಿದರೆ ನಮ್ಮ ಜೊತೆಗೂಡಿ ಇಲ್ಲವೇ ನಿಮ್ಮ ಸಮುದಾಯಗಳ ಬಳಿ ತೆರಳಿ ಬುದ್ಧಿ ಹೇಳಿ. ದಲಿತರ ಮೇಲಿನ ಅನುಕಂಪದ ಮಾತುಗಳಿನ್ನು ಸಾಕು'' ಇದು ಜಾಥಾದ ಕರಪತ್ರದಲ್ಲಿರುವ ಪ್ರಮುಖಾಂಶ ಮತ್ತು ಇದೀ ಜಾಥಾದ ಅರ್ಥಪೂರ್ಣ ಧ್ವನಿ.

ಈ ಸಂದರ್ಭಕ್ಕೆ ಅವಶ್ಯಕವಾಗಿರುವುದು ಇಂಥಾ ಕೆಲಸಗಳೇ ಹೊರತು ಪೇಜಾವರ ಸ್ವಾಮಿಯ ಗಿಮಿಕ್ಕುಗಳಲ್ಲ. ಈ ಆಸಾಮಿ ಕೆಲ ತಿಂಗಳ ಹಿಂದೆ ಸಾಮಾಜಿಕ ಬಹಿಷ್ಕಾರಕ್ಕೆ ತುತ್ತಾಗಿ ಕಂಗೆಟ್ಟಿರುವ ಹುಬ್ಬಳ್ಳಿಯ ಚಿಕ್ಕನಾಯಕನೂರಿಗೆ ಹೋಗಿ ನಾಟಕ ಪ್ರದರ್ಶನ ನೀಡಿ ವಾಪಸ್ಸಾಗಿದ್ದಾರೆ. ದಲಿತರನ್ನು ಮಾರುದೂರ ಕೂರಿಸಿಕೊಂಡೇ ಸಾಂತ್ವನ ಹೇಳಿ ಪೋಸು ಕೊಟ್ಟಿದ್ದಾರೆ. ಇದು ದೌರ್ಜನ್ಯದ ವಿರುದ್ಧ ಬಂಡೇಳುವಂಥ ದಮನಿತರ ಮನಸ್ಥಿತಿಯನ್ನು ಥಂಡಾ ಹೊಡೆಸುವ ಷಡ್ಯಂತ್ರವಲ್ಲದೆ ಬೇರೇನೂ ಅಲ್ಲ.

ಪೇಜಾವರರ ಹಿನ್ನೆಲೆ ಗೊತ್ತಿರುವವರಿಗೆ ಇದು ಹೊಸ ವಿಚಾರವೂ ಅಲ್ಲ!


ಎನ್.ಮಹೇಶ್

ಮಂಡ್ಯ ದಲಿತರ ಮೇಲೆ ನಿರಂತರ ದೌರ್ಜನ್ಯ



ಮೈಸೂರು ಮತ್ತು ಮಂಡ್ಯ ಭಾಗದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಹಾಗೂ ಬಹಿಷ್ಕಾರಗಳು ಒಂದಾದ ಮೇಲೊಂದರಂತೆ ಜರುಗುತ್ತಲೇ ಇವೆ. ಈ ಎಲ್ಲಾ ಪ್ರಕರಣಗಳೂ ರಾಜಕೀಯ ಒತ್ತಡಗಳ ಸುಳಿಗೆ ಸಿಕ್ಕಿ ಮುಚ್ಚಿ ಹೋಗುತ್ತಿವೆ. ಮೇಲ್ವರ್ಗದ ಮಂದಿ ಕೂದಲು ಕೊಂಕದಂತೆ ಮೆರೆದಾಡುತ್ತಿದ್ದಾರೆ.

ಕಸುವನಹಳ್ಳಿ ಶಾಸಕ ಸುರೇಶ್ ಗೌಡರ ಊರು. ಆ ಊರಿನಲ್ಲಿರುವ ದಲಿತರ ಮನೆಗಳು ಎಂಟು ಮಾತ್ರ. ಅವರಲ್ಲಿ ಮೂವರು ಯಾವಾಗಲೂ ಊರ ಹಬ್ಬಗಳಿಗೆ ತಮಟೆ ಬಡಿಯಬೇಕು. ಈ ಸಾರಿಯೂ ಗಣಪತಿ ಬಡುವ ದಿನ ಅವರನ್ನು ತಮಟೆ ಬಡಿಯಲು ಕರೆದಿದ್ದಾರೆ. ಆಗ ದಲಿತರು ಅದಕ್ಕೆ 150 ರೂ. ಕೊಡಬೇಕೆಂದು, ಇಲ್ಲದಿದ್ದರೆ 100 ರೂ. ಕೊಟ್ಟು ಅರ್ಧ ಕ್ವಾಟ್ರ್ರ್ ಡ್ರಿಂಕ್ಸ್ ಕೊಡಿಸಬೇಕೆಂದು ಕೇಳಿದ್ದಾರೆ. ಇದನ್ನು ಊರ ಒಕ್ಕಲಿಗ ಮುಖಂಡರು ನಿರಾಕರಿಸಿದ್ದಾರೆ. ಕೊಡದಿದ್ದರೆ ತಾವು ತಮಟೆ ಬಡಿಯುವುದಿಲ್ಲವೆಂದು ದಲಿತರು ಹೇಳಿದ್ದಾರೆ.



ಊರಲ್ಲಿ ದಲಿತರು ತಮ್ಮ ಚಾಕರಿ ಮಾಡದಿದ್ದರೆ ಹಂಗೇ ಸುಮ್ಮನೇ ಬಿಟ್ಟುಬಿಡಲಾಗುತ್ತದೆಯೇ? ಇನ್ನೊಂದು ಗುಂಪು ಹೋಗಿ ಧಮಕಿ ಹಾಕಿದೆ. ದಲಿತರು ಅದಕ್ಕೆ ಬಗ್ಗದಿದ್ದಾಗ 'ಬರಲ್ಲಾ ಅನ್ನುವಷ್ಟು ಕೊಬ್ಬಾ, ಹಂಗಾದ್ರೆ ಊರು ಬಿಟ್ಟು ಆಚೆಗೆ ಹೋಗಿ' ಅಂತ ಆ ಗುಂಪು ಹೇಳಿದೆ. ಅಲ್ಲಿಗೆ ಸುಮ್ಮನಾಗಬಹುದು ಅಂದುಕೊಂಡು ದಲಿತರೂ ಸುಮ್ಮನಾಗಿದ್ದಾರೆ.

ಆದರೆ ಯಜಮಾನರ ಗುಂಪು ಸೆಪ್ಟೆಂಬರ್ 12ನೇ ತಾರೀಕು ಪಂಚಾಯತಿ ಸೇರಿಸಿದ್ದಾರೆ. 'ತಮಟೆ ಬಡೀಲಿಲ್ಲ ಅಂದರೆ ಊರಲ್ಲಿ ಯಾಕೆ ಇರ್ತೀರಿ?' ಅಂತ ಕೇಳಿ ದಲಿತರು ಮಾಡಿದ 'ತಪ್ಪಿಗೆ' ಬಹಿಷ್ಕಾರ ಹಾಕುವ ತೀರ್ಮಾನ ಘೋಷಿತವಾಗಿದೆ. ಅವತ್ತಿನಿಂದ ವಿಜಯದಶಮಿವರೆಗೆ ನಿರಂತರವಾಗಿ ದಲಿತರಿಗೆ ಕಿರುಕುಳ ನೀಡಲಾಗಿದೆ. ಈ ಊರಿನಲ್ಲಿ ದಲಿತರಿಗೇ ಪ್ರತ್ಯೇಕ ಬೋರ್‌ವೆಲ್ ಅಂತ ಮುಂಚಿನಿಂದಲೂ ನಿಗದಿಯಾಗಿದೆ. ಈ ಘಟನೆ ನಡೆದ ಮೇಲೆ ಒಕ್ಕಲಿಗರಲ್ಲಿ ಕೆಲವರು ಅದೇ ಬೋರ್‌ವೆಲ್ ಹತ್ತಿರ ದನಗಳ ಮೈ ತೊಳೆಯುವುದನ್ನು ಶುರು ಮಾಡಿಕೊಂಡಿದ್ದಾರೆ. ಅದು ಅಲ್ಲಿಗೇ ನಿಲ್ಲದೇ ಏನೇನೋ ತೊಳೆದುಕೊಳ್ಳುವಷ್ಟಕ್ಕೆ ಮುಂದುವರೆದಿದೆ. ಹೆಣ್ಣು ಮಕ್ಕಳು ಬಿಂದಿಗೆ ತೆಗೆದುಕೊಂಡು ಹೋದರೆ, ಚಡ್ಡಿ ಬಿಚ್ಚಿ ನಿಲ್ಲುವುದನ್ನೂ ಒಂದಿಬ್ಬರು ಪುಂಡರು ಮಾಡಿದ್ದಾರೆ. ರಾತ್ರಿ ಹೊತ್ತು ಬೋರ್‌ವೆಲ್ ಹತ್ತಿರವೇ ಬಹಿರ್ದೆಸೆ ಮುಗಿಸಿ, ಉಚ್ಚೆ ಹೊಯ್ಯುತ್ತಿದ್ದುದಲ್ಲದೇ ಮಧ್ಯೆ ಒಂದೆರಡು ದಿನ ಕರೆಂಟ್ ಇಲ್ಲದಾಗ, ಬೋರ್‌ವೆಲ್ ಅನ್ನೇ ಮುರಿದು ಹಾಕಿದ್ದಾರೆ.


...ಕುಮಾರ್

ಇದರಿಂದ ಸವರ್ಣೀಯರು ನೀರು ಹಿಡಿಯುತ್ತಿದ್ದ ಬೋರ್‌ವೆಲ್‌ಗೇ ನೀರು ಹಿಡಿಯಲು ಹೋಗುವುದು ದಲಿತರಿಗೆ ಅನಿವಾರ್ಯವಾಗಿದೆ. ಒಂದು ದಿನ ಪಿಯುಸಿ ಓದಿರುವ ಹೆಣ್ಣು ಮಗಳೊಬ್ಬಳು ಅಲ್ಲಿಗೆ ನೀರು ಹಿಡಿಯಲು ಹೋಗಿದ್ದಾಳೆ. ಅಲ್ಲಿದ್ದ ಪುಂಡನೊಬ್ಬ 'ಇನ್ನೊಂದು ಸಾರಿ ಬಂದರೆ ಬಟ್ಟೆ ಬಿಚ್ಚಿ ಬೋರ್‌ವೆಲ್‌ಗೆ ಕಟ್ಟಿ ಹಾಕ್ತೀನಿ' ಅಂದಿದ್ದಾನೆ. ಇವೆಲ್ಲವನ್ನು ಸಹಿಸಿಕೊಂಡೂ ಊರಿನಲ್ಲಿ ದಲಿತರು ಸುಮ್ಮನೆ ಇದ್ದಾರೆ. ಶಾಸಕ ಸುರೇಶ್‌ಗೌಡ ತನ್ನೂರಿಗೆ ತಲೆಯನ್ನೇ ಹಾಕಿಲ್ಲ.

ಈ ಮಧ್ಯೆ ಒಕ್ಕಲಿಗರ ಮಹಾಲಕ್ಷ್ಮಿ ಎಂಬಾಕೆಯ ಐದು ಎಕರೆ ಜಮೀನನ್ನು ಪಾಲಿಗೆ ಮಾಡುತ್ತಿದ್ದ ಸೀತಾರಾಮ, ಮಾಯಣ್ಣ ಎಂಬ ಇಬ್ಬರು ದಲಿತ ಅಣ್ಣತಮ್ಮಂದಿರು 1.5 ಎಕರೆಯಲ್ಲಿ ಬದನೇಕಾಯಿ, 1.5 ಎಕರೆಯಲ್ಲಿ ಭತ್ತ, ... ಎಕರೆಯಲ್ಲಿ ರಾಗಿ, ಉಳಿದಿದ್ದುದರಲ್ಲಿ ಬೆಂಡೆಕಾಯಿ ಬೆಳೆದಿ... ಈ ಸಂದರ್ಭವನ್ನು ಬಳಸಿಕೊಂಡು ಕೆಲವರು ಈ ಫಸ... ಉತ್ತುಬಿಟ್ಟಿದ್ದಾರೆ. ಈ ಬಗ್ಗೆಯೂ ಪೊಲೀಸ್ ಕಂಪ್ಲೇ... ಆಗಿಲ್ಲ.

ಇದೆಲ್ಲಾ ಮುಂದುವರೆಯುತ್ತಿರುವಾಗಲೇ ಆಯ... ಪೂಜೆ ಹಿಂದಿನ ದಿನ ಕೆಲವರು ದಲಿತರ ಮನೆಗಳ ... ಕಲ್ಲು ಹೊಡೆದಿದ್ದಾರೆ. ಇದರಿಂದ ಭಯಗೊಂಡ ದಲಿ... ಅಂತಿಮವಾಗಿ ಪೊಲೀಸ್ ಸ್ಟೇಷನ್ ಮೆಟ್ಟಲು ಹತ್ತಿ... ಆದರೆ ಠಾಣೆಯಲ್ಲಿದ್ದ ವೆಂಕಟೇಗೌಡ ... ಎಸ್‌ಐ ದೂರು ತೆಗೆದುಕೊಂಡಿಲ್ಲ. "... ಏನೂ ಮಾಡಲು ಸಾಧ್ಯವಿಲ್ಲ. ಎಂಎ... ಬಂದು ರಾಜಿ ಮಾಡ್ತಾರೆ ಹೋಗಿ" ... ದ್ದಾನೆ. ಎಂಎಲ್‌ಎ ಊರಿನಲ್ಲಿ, ... ಸಂಬಂಧಿಕರ ಮೇಲೆ ಕೇಸು ಮಾಡಬಾ... ಎಂದು ಎಸ್‌ಪಿಯವರೇನಾದರೂ ... ದ್ದಾರೋ ಗೊತ್ತಿಲ್ಲ.

ಕಡೆಗೆ 9ನೇ ತಾರೀಕು ಎಂಎ... ಸುರೇಶ್ ಗೌಡ ಊರಿಗೆ ಹೋಗಿದ್ದಾರೆ. ... ಸಮುದಾಯ ಭವನದಲ್ಲಿ ತನ್ನ ಜಾತಿಯ... ನ್ನೆಲ್ಲ ಸೇರಿಸಿ ಬುದ್ಧಿ ಹೇಳಿ ತಿಪ್ಪೆ ಸಾರಿಸಲೆತ್ನಿಸಿದ್ದಾರೆ. ... ಇಷ್ಟೆಲ್ಲಾ ಆದ ಮೇಲೆ ಮಾರನೆಯ ದಿನ ದಲಿತ ... ಮಕ್ಕಳು ಡೈರಿಗೆ ಹಾಲು ಹಾಕಲು ಹೋದಾಗ ಒ... ಹೆಂಗುಸರಲ್ಲ ನಿಂದಿಸಿದ್ದಾರೆ. ಇದಲ್ಲದೆ ದಲಿತ ಮಹಿಳೆಯ... ಸ್ವಸಹಾಯ ಸಂಘಗಳಿಂದ ತೆಗೆದು ಹಾಕಿ ದುಷ... ಮೆರೆದಿದ್ದಾರೆ. ಇದೆಲ್ಲಾ ಗೊತ್ತಾಗಿ, ಬಿಎಸ್‌ಪಿಯ ... ಸಂಯೋಜಕ ಕೃಷ್ಣಮೂರ್ತಿ ಅಲ್ಲಿಗೆ ಹೋಗಿ ಕಂಪ್ಲೇ... ಕೊಡಿಸಿಯಾದ ಮೇಲೆ ಎಸ್‌ಪಿ, ಡಿವೈಎಸ್‌ಪಿಯವ... ಹೋಗಿದ್ದಾರೆ.

ಮಳವಳ್ಳಿ ತಾಲೂಕಿನ ಕಿರುಗಾವಲಿನಲ್ಲಿ ಮೂರು ದಿ... ಹಿಂದೆ ನಡೆದ ಘಟನೆ ಮತ್ತೂ ಅಮಾನವೀಯ. ಆ ಊ... 'ಸಾರ್ವಜನಿಕರಿಗೆ' ಒಂದು ಸೆಲೂನ್ ... 'ಸಾರ್ವಜನಿಕರಲ್ಲದ'ವರಿಗೆ ಎಸ್‌ಸಿ ಸೆ... ಇದೆ. ಮೊನ್ನೆ ಎಸ್‌ಸಿ ಸೆಲೂನ್ ಕ... ಮಾಡಿದ್ದರಿಂದ ದಲಿತ ಚಿಕ್ಕಮಂಚಯ್ಯ ಸ... ಸಮಾಜದವರು ನಡೆಸುವ ಸೆಲೂ... ಹೋಗಿದ್ದಾರೆ. ನೇರವಾಗಿ ಮಾಡಲ್ಲ ... ಹೇಳಲಾಗದೇ ಆ ಸೆಲೂನ್‌ನ ಮಹ... ಒಂದು ಗಂಟೆ ಬಿಟ್ಟು ಬಾ ಎಂದಿದ್ದಾನೆ. ... ಹೋಗುವಾಗ ಚಿಕ್ಕಮಂಚ... ಕುಡಿದುಕೊಂಡು ಹೋಗಿದ್ದಾರೆ. ಮಹದೇವು ಕ್ಷೌರ ಮಾಡಲು ನಿರಾಕರಿಸಿದ್ದಾರೆ. ಸ್ವಲ್ಪ ಕು... ಚಿಕ್ಕಮಂಚಯ್ಯ ಸೀದಾ ಹೋಗಿ ಚೇರ್ ಮೇಲೆ ಕ... ಮಾಡು ಎಂದಿದ್ದಾರೆ. ಅದಕ್ಕೆ ಸೆಲೂನ್‌ನ ಮಾಲೀಕರಾದ ... ಮಕ್ಕಳು ಕೈಯಲ್ಲಿ ರೇಜರ್ ಹಿಡಿದು ಕುಯ್ಯುವ... ತಿರುಗಿಸಿ ಹೆದರಿಸಿದ್ದಾರೆ. ಕೈ ತಿರುಗಿಸುವಾಗ ಮ... ಕೊಯ್ದು ಹೋಗಿದೆ. ಹಣೆಗೂ ತಗುಲಿ ಗಾಯವಾಗಿ...

ಇದು ದೊಡ್ಡದಾಗಬಹುದೆಂದು ಹೆದರಿ ಸ... ಸಮಾಜದವರೇ ಆತನನ್ನು ಜಿಲ್ಲಾಸ್ಪತ್ರೆಗೆ ಕರೆದುಕೊ... ಹೋಗಿದ್ದಾರೆ. ಅಲ್ಲೇ ಮನವೊಲಿಸಲು ಪ್ರಯತ್ನ ಪಟ್ಟಿ... ಮಾರನೆಯ ದಿನ ಕಂಪ್ಲೇಂಟ್ ಕೊಡಲಾಗಿದೆ. ಈ ... ಮಾಧ್ಯಮಗಳಲ್ಲೂ ದೊಡ್ಡದಾಗಿ ಸುದ್ದಿಯಾಗಿದೆ. ... ಊರಿಗೆ ಹೋದ ಸ್ಥಳೀಯ ಎಂಎಲ್‌ಎ ನರೇಂದ್ರ... "ಹೋಗ್ಲಿ ತಗೋ" ಅಂತ ದುಡ್ಡು ಕೊಡಲು ಹೋಗಿ... ಚಿಕ್ಕಮಂಚಯ್ಯರ ಮಗ ತೆಗೆದುಕೊಂಡಿಲ್ಲ. ಆದರೆ ... ಸಮಾಜ ಕಲ್ಯಾಣಾಧಿಕಾರಿ ಶಾಸಕನ ದುಡ್ಡು ತೆಗೆದುಕೊ... ಆತನ ಜೇಬಿಗೆ ಹಾಕಿದ್ದಾನೆ. ಇದು ಸ್ಥಳೀಯ ಮ... ಕ್ಷೇತ್ರದ ಶಾಸಕ ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾ... ಜಾತಿವಿನಾಶ ಕೆಲಸದ ವೈಖರಿ.



ಚಿತ್ರದುರ್ಗದ ಸಂಸದ

ಜನಾರ್ದನ ಸ್ವಾಮಿ ಕಳ್ಳ, ಮಳ್ಳ, ಸುಳ್ಳ

ದರ್ನಾದರ್ನ ಸ್ವಾಮಿ ಎಂಬ ಟೆಕ್ಕಿ ಸಂಸದ ತಾನು ಇತರ ರಾಜಕಾರಣಿಗಳಿಗಿಂತ ಇನಲ್ಲ ಎಂಬುದನ್ನು ತನ್ನ ನಡೆನುಡಿಗಳಲ್ಲಿ ಸಾಬೀತು ಪಡಿಸುತ್ತಿದ್ದಾನೆ. ಈತ ಸದನಾಗಿ ಎರಡು ವರ್ಷ ಕಳೆದರೂ ಚಿತ್ರದುರ್ಗ ಜಿಲ್ಲೆಯ ಜನತೆಗೆ ನಯಾಪೈಸೆ ಪಯೋಗವಾಗುವಂತ ಒಂದೇ ಒಂದು ಕೆಲಸವನ್ನೂ ಮಾಡಿಲ್ಲ, ಈತ ಶುದ್ಧ ಆಸಾಮಿ. ಒಂದಿಲ್ಲೊಂದು ಸುಳ್ಳುಗಳನ್ನು ಪೇರಿಸುತ್ತಾ ಮತದಾರರ ಮುಂದೆ ಸೌಧವನ್ನೇ ಕಟ್ಟುತ್ತಿದ್ದಾನೆ. ಇತ್ತೀಚೆಗೆ ತಾನೆ ತನ್ನ ಎರಡು ವರ್ಷಗಳ ಯ ಕುರಿತು ವಿಶೇಷ ಪ್ರಾಯೋಜಿತ ಪುರವಣಿಗಳನ್ನು ಪ್ರಕಟಿಸಿ ಡಂಗೂರ ಕೊಂಡಿದ್ದ ಜನಾರ್ದನ ಸ್ವಾಮಿ ಜನರ ಕಿವಿಯಲ್ಲಿ ದೊಡ್ಡದಾದ ಹೂವನ್ನೇ ದ್ದಾನೆ.

ಈತ ಚಿತ್ರದುರ್ಗ ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸುವ ವಿಷಯ ಪವಾಗುತ್ತಿದ್ದಂತೆ ಬೆಂಗಳೂರಿನಲ್ಲಿ ಐಟಿ ಭ್ರಮೆಯಲ್ಲಿ ವಿಹರಿಸುವ ಕೆಲ ಚೆಡ್ಡಿ ಗಳು ಜಗತ್ತಿನ ಸಾಫ್ಟ್‌ವೇರ್ ಸಾಮ್ರಾಟ ಸಾಕ್ಷಾತ್ ಬಿಲ್ ಗೇಟ್ಸ್ ಬಂದು ಸಿದ್ದಾನೆಂಬಂತೆ ಈತನ ಕುರಿತು ಪುಂಖಾನುಪುಂಖವಾಗಿ ಕತೆಗಳನ್ನು ದರು. ಕಲುಷಿತಗೊಂಡಿರುವ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ರ್ದನ ಸ್ವಾಮಿಯಂತ ವಿದ್ಯಾವಂತ ಯುವಕರು ಸಂಸತ್ತಿಗೆ ಆಯ್ಕೆಯಾದರೆ ಪರ್ವಸೆಯ ಗಾಳಿ ಬೀಸುತ್ತದೆ. ಜನರ ಸೇವೆ ಮಾಡಲಿಕ್ಕಾಗಿಯೇ ಅಮೆರಿಕದ ಸನ್ ಮೈಕ್ರೋಸಿಸ್ಟಮ್ಸ್ ಕಂಪನಿಯ ಕ್ಯೋಗ ತೊರೆದು ಬಂದವನನ್ನು ಸುವುದು ಚಿತ್ರದುರ್ಗದ ಜನರ ರುವ ಏಕೈಕ ಜವಾಬ್ದಾರಿಯೆಂಬಂತೆ ಮು ದನಿಯಲ್ಲೇ ಫರ್ವಾನು ಪಿಸಿದರು.

ಸ್ತವ ಏನೆಂದರೆ ಯಾವ ಪಕ್ಷದ ನೇತಾ ತಾ ಜನಾರ್ದನ ಸ್ವಾಮಿಯನ್ನು "ನೀನು ಪಕ್ಷಕ್ಕೆ ಬಂದು ಉದ್ಧರಿಸಪ್ಪಾ" ಎಂದು ನೀಡಿರಲಿಲ್ಲ. ಇದು ಜನಾರ್ದನ ಯೇ ಖುದ್ದಾಗಿ ತನ್ನ ಸ್ನೇಹಿತರ ಬಳಗವನ್ನು ನ್ನಾಗಿಸಿ, ದಾಳವಾಗಿ ಬಳಸಿಕೊಂಡು ರಾಜಕೀಯ ಅವಕಾಶವಾಗಿತ್ತು, ಅಂದು ನ ಸ್ವಾಮಿಯ ಪರವಾಗಿ ಸಂಘಪರಿವಾರ ದಲ್ಲಿ ಲಾಬಿ ಮಾಡಿದವರು ಪಶ್ಚಾತ್ತಾಪ ಪಡುತ್ತಿದ್ದಾರೆ. ಇಂದಲ್ಲ ನಾಳೆ ಅವರು ಬಹಿರಂಗವಾಗಿ ಈ ಮಾತನಾಡುತ್ತಾರೆ. ಅಂತಹ ಪರಿಸ್ಥಿತಿಯನ್ನು ಸ್ವತಃ ಜನಾರ್ದನ ಸ್ವಾಮಿಯೇ ಕೊಳ್ಳುತ್ತಿದ್ದಾನೆ. ಅವರು ಈಗಾಗಲೇ ಈತನ ನೈತಿಕ ಬದ್ಧತೆಯ ಬಗ್ಗೆ ರೆ ಉತ್ತರಿಸಲೂ ಕೂಡ ಆಗದೇ ಜಾಣತನದಿಂದ ನುಣುಚಿಕೊಳ್ಳುತ್ತಿದ್ದಾನೆ. ಕೊಂದು ವಿಪರ್ಯಾಸಕರ ಬೆಳವಣಿಗೆ. ಚುನಾವಣೆಗೆ ನಯಾಪೈಸೆಯನ್ನು ದ ಖರ್ಚುಮಾಡದೇ ಬಿಜೆಪಿ ನಾಯಕರಿಗೆ ಅತ್ಯಂತ ಮುಜುಗರದ ಶವನ್ನು ಸೃಷ್ಟಿಸಿ ಎಲ್ಲವೂ ಪಾರ್ಟಿ ಫಂಡಿನಿಂದಲೇ ನಡೆಯುವಂತೆ ಕೊಂಡ ಆಸಾಮಿಯೀತ. ಈತನ ಸ್ಪರ್ಧೆಗೆ ವಿರೋಧ ಸೂಚಿಸಿದ ಬೋವಿ ದರೆಲ್ಲಾ ನೋಡು ನೋಡುತ್ತಿದ್ದಂತೆ ಮೌನ ವಹಿಸುವಂತೆ ಮಾಡಿದ. ಮೂ ಈ ನೆಲದ ಸಮಸ್ಯೆಗಳ ಬಗ್ಗೆ ಮಾತನಾಡದ, ಅವುಗಳ ಅರಿವೂ ಜನಾರ್ದನ ಸ್ವಾಮಿ ತನ್ನ ಟೆಕ್ಕಿ ಪ್ರಭಾವಳಿಯನ್ನು ಸುಲಭವಾಗಿ ಎನ್‌ಕ್ಯಾಶ್ ಕೊಂಡು ಸಂಸದನಾಗಿ ಆಯ್ಕೆಯಾದ.

ಜಿ ಕೆಟಗರಿ ಸೈಟು ಲಪಾಟಾಯಿಸಿದ

ತ ಸಂಸದನಾಗಿ ಆಯ್ಕೆ ಆದ ತಕ್ಷಣ ಮಾಡಿದ ಮೊದಲ ಸಾಧನೆಯೇನೆಂದರೆ ಮಂತ್ರಿಗಳ ವಿವೇಚನಾ ಕೋಟಾದಡಿಯಲ್ಲಿ ನಿರ್ಲಜ್ಜವಾಗಿ ಸುಳ್ಳು ಟ್ ಸಲ್ಲಿಸಿ ನಿವೇಶನ ಪಡೆದದ್ದು. ಹಾಗೆ ನಿವೇಶನ ಪಡೆಯುವಾಗ ತನಗೆ ರಿನಲ್ಲಿ ಒಂದೇ ಒಂದು ನಿವೇಶನ ಇಲ್ಲ ಎಂದು ಅಫಿಡವಿಟ್ ಸಲ್ಲಿಸಿದ್ದಾನೆ. ರಿನ ಪ್ರತಿಷ್ಠಿತ ರಾಜಮಹಲ್ ವಿಲಾಸ್ ಬಡಾವಣೆಯಲ್ಲಿರುವ 4,000 ಡಿಯ ಈ ನಿವೇಶನ ಅತ್ಯಂತ ಅಗ್ಗದ ದರದಲ್ಲಿ ಅಂದರೆ 7. 56 ಲಕ್ಷಕ್ಕೆ ಯಿಂದ ಪಡೆಯಲಾಗಿದೆ. ಇದರ ಮಾರುಕಟ್ಟೆ ಮೌಲ್ಯ ನಾಲ್ಕು ಕೋಟಿ.

ಆಸ್ತಿ ವಿವರ ಏನು ಹೇಳುತ್ತದೆ?

ಸು ಹಸಿ ಸುಳ್ಳು ಎಂಬುದು ಜನಾರ್ದನ ಸ್ವಾಮಿ ಚುನಾವಣಾ ಆಯೋಗಕ್ಕೆ ವ ಆಸ್ತಿವಿವರದ ದಾಖಲೆಗಳೇ ಹೇಳುತ್ತವೆ. ಸಿಟಿ ಬ್ಯಾಂಕಿನಲ್ಲಿ ಹತ್ತು ಲಕ್ಷ, ್ಯಾಂಕ್‌ನಲ್ಲಿ ಒಂದು ಲಕ್ಷ, ಶೇರುಗಳಲ್ಲಿ 10 ಲಕ್ಷ, ನಾಲ್ಕು ಲಕ್ಷ ರೂಪಾಯಿ ಬಂಗಾರ, ಹದಿನಾರು ಸಾವಿರ ರೂಪಾಯಿ ಬೆಳ್ಳಿ ಸಾಮಾನು, ಚಿತ್ರದುರ್ಗದ ಯಲ್ಲಿ 30 ಗುಂಟೆ ಜಮೀನು, ಬೆಂಗಳೂರಿನ ಅನಂತಪುರಂನ ಎರಡನೇ ಲ್ಲಿ 50 x 80 ಅಳತೆಯ ಸೈಟು, ಮಾರೇನಹಳ್ಳಿಯ ಗ್ರೀನ್ ರಿಚ್ ಕೌಂಟಿ ಪ್‌ನಲ್ಲಿ 60 x 60 ಅಳತೆಯ ಸೈಟು, ಬ್ಯಾಟರಾಯನಪುರದಲ್ಲಿ ಪತ್ನಿಯ 60 x 40 ಸೈಟು, ಟೊಯೋಟಾ ಕರೊಲಾ ಕಾರು ಮತ್ತು ಮಾರುತಿ ರುವುದನ್ನು ದಾಖಲೆಗಳು ಹೇಳುತ್ತವೆ. ನಿವೇಶನಗಳ ಒಟ್ಟು ಮೌಲ್ಯ ಕ್ಷ ಎಂದು ಹೇಳಿದ್ದರೂ ವಾಸ್ತವವಾಗಿ ಮಾರುಕಟ್ಟೆ ಮೌಲ್ಯ ಎರಡು ಪಟ್ಟು ಹೆಚ್ಚಾಗಿದೆ. ಇಷ್ಟೆಲ್ಲಾ ಅಧಿಕೃತ ದಾಖಲೆಗಳಿದ್ದರೂ 2008-09 ರಲ್ಲಿ ಚಿತ್ರದುರ್ಗದ ತಹಸೀಲ್ದಾರರಿಂದ ಪಡೆದುಕೊಂಡ ಆದಾಯ ದೃಢೀಕರಣ ಪತ್ರದಲ್ಲಿ ಕೇವಲ ತನ್ನ ವಾರ್ಷಿಕ ಆದಾಯ ಕೇವ 3000 ಸಾವಿರ ರೂಪಾಯಿಗಳು ಎಂದು ನಮೂದಿಸಲಾಗಿದೆ.

ಜನಾರ್ದನ ಸ್ವಾಮಿ ರಾಜಕೀಯ ವಾತಾವರಣವನ್ನೇನು ಬದಲಾಯಿಸದಿದ್ದರೂ ರಾಜಕೀಯ ಆತನನ್ನು ಭ್ರಷ್ಟನನ್ನಾಗಿ ಬದಲಾಯಿಸಿದೆ. ಆತ ಹೇಳುವ ಆದರ್ಶಗಳು ಬರೀ ಬದನೆಕಾಯಿ ಎಂಬುದು ಬಯಲಾಗಿದೆ. ಜನಾರ್ದನ ಸ್ವಾಮಿಯನ್ನು ಆದರ್ಶಗಳೇ ಮೈವೆತ್ತ ಯುವನಾಯಕ, ಮಾಹಿತಿ ತಂತ್ರಜ್ಞಾನದ ಏಕಮೇವಾದ್ವಿತೀಯ ತಜ್ಞ ಎಂದು ಭ್ರಮಿಸಿರುವ ಪತ್ರಕರ್ತರಿಗೆ ಇದು ಮನವರಿಕೆಯಾಗಬೇಕಿದೆ. ಅದು ಮನವರಿಕೆಯಾದ ಮರುಗಳಿಗೆಯಿಂದ ಈ ನೆಲದ ಸಮಸ್ಯೆಗಳಿಗೂ, ಜನರಿಗೂ-ಜನಾರ್ದನ ಸ್ವಾಮಿಗೂ ಇರುವ ಸಂಬಂಧಗಳ ಬಗ್ಗೆ ಪ್ರಾಮಾಣಿಕ ಸಂಗತಿಗಳು ಹೊರಬರುತ್ತವೆ.

ನಿರ್ಲಜ್ಜ ಸಮರ್ಥನೆ

ಪತ್ರಕರ್ತರೋರ್ವರು ಸುಳ್ಳು ಅಫಿಡವಿಟ್ ಸಲ್ಲಿಸಿ ಅಕ್ರಮವಾಗಿ ನಿವೇಶನ ಪಡೆದಿರುವ ಬಗ್ಗೆ ಜನಾರ್ದನ ಸ್ವಾಮಿಯನ್ನು ಪ್ರಶ್ನಿಸಿದಾಗ "ಬೆಂಗಳೂರಿನಲ್ಲಿ ಮನೆ ಕಟ್ಟಲಿಕ್ಕೆ ಯೋಗ್ಯ ನಿವೇಶನ ನನ್ನ ಬಳಿ ಇರಲಿಲ್ಲ, ನನಗೆ ನಿವೇಶನ ಇರುವ ವಿಷಯ ತಿಳಿಸಿದ್ದರೆ ಬಿಡಿಎಯಿಂದ ಈ ನಿವೇಶನವೇ ನನಗೆ ಸಿಗುತ್ತಿರಲಿಲ್ಲ. ಹಾಗಾಗಿ ಸುಳ್ಳು ಹೇಳಬೇಕಾಯಿತು" ಎಂದು ನಿರ್ಲಜ್ಜವಾಗಿ ಸಮರ್ಥಿಸಿಕೊಂಡಿದ್ದಾನೆ. ಹಾಗೆಂದು ತಾನು ವೇಸ್ಟ್ ಎಂದು ಹೇಳುವ ನಿವೇಶನಗಳನ್ನೇನೂ ಸಾರ್ವಜನಿಕ ಉದ್ದೇಶಕ್ಕೆ ಈತ ದಾನ ಮಾಡಿಲ್ಲ.

ಎಂಪಿಗಿರಿಗೇ ಉರುಳು?

ಜನಾರ್ದನ ಸ್ವಾಮಿಯ ಜಾತಕದ ವಿವರಗಳನ್ನು ಮಾಹಿತಿ ಹಕ್ಕಿನಡಿ ಪಡೆದುಕೊಂಡಿರುವ ಸಿರಿಗೆ ತಿಪ್ಪೇಶ್ ಈ ಕುರಿತು ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ಪ್ರಕರಣ ತನಿಖೆಯ ಜಾಡು ಹಿಡಿದ ಕೂಡಲೇ ಜನಾರ್ದನ ಸ್ವಾಮಿ ಎಂಪಿ ಗಿರಿಯಿಂದ ದೂರ ಸರಿಯಬೇಕಾಗುತ್ತದೆ. ಲೋಕಸಭಾ ಚುನಾವಣಾ ಸಮಯದಲ್ಲಿ ಕುಂಬಯ್ಯ ಎಂಬುವವರು ಈತನ ವಿರುದ್ಧ ಸಲ್ಲಿಸಿದ್ದ ತಕರಾರು ಅರ್ಜಿ ಬೇರೆ ಬಾಕಿಯಿದೆ.

ಬಂಡಲ್ ಸ್ವಾಮಿ

ಚಿತ್ರದುರ್ಗ ಜಿಲ್ಲೆಯಲ್ಲಿ ನೆಲೆಗೊಳ್ಳಲಿರುವ ಬಾಹ್ಯಾಕಾಶ ಸಂಸ್ಥೆ ಇಸ್ರೋ, ಡಿಆರ್‌ಡಿಓ ಪ್ರಾಜೆಕ್ಟ್, ಬಾಬಾ ಅಣು ವಿಜ್ಞಾನ ಸಂಶೋಧನಾ ಸಂಸ್ಥೆ ಭಾರತೀಯ ವಿಜ್ಞಾನ ಸಂಸ್ಥೆ ಎಲ್ಲವನ್ನೂ ತಾನೇ ಮಂಜೂರು ಮಾಡಿಸಿರುವುದಾಗಿ ರೈಲು ಬಿಡುತ್ತಿದ್ದಾನೆ. ಇವೆಲ್ಲಾ ಸಂಬಂಧಪಟ್ಟ ಸಂಸ್ಥೆಗಳು ತಜ್ಞರ ಅಭಿಪ್ರಾಯ ಪಡೆದು ದೂರಾಲೋಚನೆ ಮಾಡಿ ಜಾರಿಗೊಳಿಸುತ್ತವೆಯೇ ವಿನಃ ಯಕಶ್ಚಿತ್ ಸಂಸದನೊಬ್ಬನ ಶಿಫಾರಸಿನಿಂದ ಜಾರಿ ಮಾಡಲು ಮುಂದಾಗುವುದಿಲ್ಲ, ಜನಾರ್ದನ ಸ್ವಾಮಿ ಸಂಸದರಾಗುವುದಕ್ಕೂ ಮೊದಲೇ ಈ ಎಲ್ಲಾ ಯೋಜನೆಗಳು ಚಿತ್ರದುರ್ಗಕ್ಕೆ ಬರುವ ನೀಲ ನಕಾಶೆ ತಯಾರಾಗಿತ್ತು, ಮಾಜಿ ಸಂಸದ ಎನ್.ವೈ. ಹನುಮಂತಪ್ಪ ತಮ್ಮ ಸಾಧನೆಗಳ ಪಟ್ಟಿ ಮಾಡುವಾಗಲೆಲ್ಲಾ ಈ ಯೋಜನೆಗಳ ಪ್ರಸ್ತಾಪ ಮಾಡುತ್ತಿದ್ದರು. ಆದರೆ ಜನಾರ್ದನ ಸ್ವಾಮಿ ಇವೆಲ್ಲವನ್ನೂ ತಾನೇ ಮಾಡಿದ್ದು ಎಂದು ಡಂಗೂರ ಬಾರಿಸುತ್ತಾನೆ. ಇದಕ್ಕೆ ಆತನ ಬಳಿ ಇರುವ ದಾಖಲೆಗಳೆಂದರೆ ಡಿಆರ್‌ಡಿಓ ಅಧಿಕಾರಿಗಳ ಜೊತೆ ಕ್ಲಿಕ್ಕಿಸಿಕೊಂಡಿರುವ ಫೋಟೋಗಳು ಮಾತ್ರ. ಇನ್ನು ಈ ಯೋಜನೆಗಳಿಂದ ಜಿಲ್ಲೆಯ ಜನರಿಗೆ ಆಗುವ ಪ್ರಯೋಜನವೇನು? ಅವುಗಳಿಂದಾಗುವ ಅನಾಹುತಗಳೇನು? ಎಂಬುದನ್ನು ಜಿಲ್ಲೆಯ ಬಗ್ಗೆ ಕಾಳಜಿಯಿರುವ ಪ್ರಜ್ಞಾವಂತರು ಜನತೆಗೆ ತಿಳಿಸಬೇಕಿದೆ.

ಇನ್ನು ಈತ ದೇಶದಲ್ಲೇ ಮೊದಲನೆಯದೆಂದು ಹೇಳಿಕೊಳ್ಳುವ ಮಾಹಿತಿ ಕೇಂದ್ರದಿಂದಲೂ ಜನರಿಗೆ ನಯಾಪೈಸದ ಅನುಕೂಲವಾಗಿಲ್ಲ, ಕೇಂದ್ರ ಸರ್ಕಾರದ ಮಹತ್ವ ಉದ್ಯೋಗ ಖಾತರಿ ಯೋಜನೆ ಜಿಲ್ಲೆಯಲ್ಲಿ ಹಳ್ಳ ಹಿಡಿದಿದೆ. ಕನಿಷ್ಠ ಜನತೆಗೆ ತಲುಪಬೇಕಿರುವ ಯೋಜನೆಗಳ ಬಗ್ಗೆ ಕೂಡಾ ಈತ ಯೋಚನೆ ಮಾಡುವುದಿಲ್ಲ. ಸದಾ ಐಟಿಯ ಮಂಕುಬೂದಿಯಲ್ಲೇ ಜನರನ್ನು ಮರುಳು ಮಾಡುತ್ತಿದ್ದಾನೆ.

ಭದ್ರಾ ಮೇಲ್ದಂಡೆಗಾಗಿ ಕಳೆದೆರಡು ದಶಕಗಳಿಂದ ಹೋರಾಟ ಮಾಡಿದವರನ್ನೆಲ್ಲಾ ಬದಿಗೆ ಸರಿಸಿ ಹೋರಾಟಗಾರರ ನಿಯೋಗ ಕರೆದುಕೊಂಡು ಹೋಗಿದ್ದರ ಫೋಟೋಗಳನ್ನಿಟ್ಟುಕೊಂಡು ತಾನೇ ಭದ್ರಾ ಮೇಲ್ದಂಡೆ ಯೋಜನೆ ಜಾರಿ ಮಾಡಿಸಿದೆ ಎಂದು ರೈಲು ಬಿಡುತ್ತಾನೆ. ಜಿಲ್ಲೆಯ ಬೆನ್ನು ಮೂಳೆಯಿಲ್ಲದ ನಾಯಕರು, ಹೋರಾಟಗಾರರು ಇದನ್ನೆಲ್ಲಾ ಕೇಳಿಕೊಂಡು ಸುಮ್ಮನಿರುತ್ತಾರೆ. ಅವರಿಗೆ ತಾವು ಮಾಡಿದ ಹೋರಾಟ - ಪ್ರಯತ್ನಗಳ ಬಗ್ಗೆ ಹೇಳಿಕೊಳ್ಳುವಷ್ಟೂ ಸ್ವಾಭಿಮಾನದ ಕೊರತೆ. ಇದು ಜನಾರ್ದನ ಸ್ವಾಮಿಯಂತ ಬಂಡಲ್‌ಗಳಿಗೆ ಬಂಡವಾಳ.

ಶಾಸಕ ಚಂದ್ರಪ್ಪನ ಟಾಂಗ್

ಈತನ ಐಟಿ-ಬಿಟಿ ಭ್ರಮೆಗೆ, ಹುಂಬತನಕ್ಕೆ ನಿಜವಾದ ಟಾಂಗ್ ಕೊಟ್ಟವರು ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ, ಜನಾರ್ದನ ಸ್ವಾಮಿಯ ಎರಡನೇ ವರ್ಷದ ಸಾಧನಾ ಸಮಾವೇಶದಲ್ಲಿ ತನ್ನ ಅಮೆರಿಕನ್ ಹಿನ್ನೆಲೆ, ಹುದ್ದೆಯ ಘನತೆ, ತಾನು ಜನಸೇವೆಗಾಗಿ ಬಂದದ್ದರ ಬಗ್ಗೆ ಪ್ರಸೆಂಟೇಶನ್ ಒಂದನ್ನು ವ್ಯವಸ್ಥೆ ಮಾಡಲಾಗಿತ್ತು, ಸಮಾರಂಭದಲ್ಲಿ ಭಾಗವಹಿಸಿದವರೆಲ್ಲರಿಗೂ ಇದು ಸ್ವಲ್ಪ ಜಾಸ್ತಿಯಾಯ್ತು ಅನ್ನಿಸಿತು. ಇದನ್ನು ಗಮನಿಸಿದ ಶಾಸಕ ಚಂದ್ರಪ್ಪ "ನಿಮ್ಮ ಆಲೋಚನೆಗಳು ಒಂದು ಶತಮಾನದಷ್ಟು ಅಡ್ವಾನ್ಸ್ ಆಗಿವೆ. ಆದರೆ ನಮ್ಮ ದೇಶದ ಪರಿಸ್ಥಿತಿ ಹಾಗಿಲ್ಲ, ತುಂಬ ಹಿಂದುಳಿದಿರುವ ದೇಶ ನಮ್ಮದು. ನಿಮ್ಮಂಥಾ ವಿದ್ಯಾವಂತರು ಸಂಸತ್ತಿನಲ್ಲಿ ಮೊದಲು ಜನ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ರೂಪಿಸುವಂಥಾ ಚರ್ಚೆಗಳನ್ನು ಕೈಗೆತ್ತಿಕೊಳ್ಳಿ" ಎಂದು ಮೆಚ್ಚುಗೆಯ ಸ್ವರೂಪದ ವ್ಯಂಗದ ದನಿಯಲ್ಲಿ ಹೇಳಿದ್ದರು.

ಒಟ್ಟಿನಲ್ಲಿ ಜನಾರ್ದನ ಸ್ವಾಮಿ ರಾಜಕೀಯ ವಾತಾವರಣವನ್ನೇನು ಬದಲಾಯಿಸದಿದ್ದರೂ ರಾಜಕೀಯ ಆತನನ್ನು ಭ್ರಷ್ಟನನ್ನಾಗಿ ಬದಲಾಯಿಸಿದೆ. ಆತ ಹೇಳುವ ಆದರ್ಶಗಳು ಬರೀ ಬದನೆಕಾಯಿ ಎಂಬುದು ಬಯಲಾಗಿದೆ. ಇದು ಜನಾರ್ದನ ಸ್ವಾಮಿಯನ್ನು ಆದರ್ಶಗಳೇ ಮೈವೆತ್ತ ಯುವನಾಯಕ, ಮಾಹಿತಿ ತಂತ್ರಜ್ಞಾನದ ಏಕಮೇವಾದ್ವಿತೀಯ ತಜ್ಞ ಎಂದು ಭ್ರಮಿಸಿರುವ ಪತ್ರಕರ್ತರಿಗೆ ಮನವರಿಕೆಯಾಗಬೇಕಿದೆ. ಅದು ಮನವರಿಕೆಯಾದ ಮರುಗಳಿಗೆಯಿಂದ ಈ ನೆಲದ ಸಮಸ್ಯೆಗಳಿಗೂ, ಜನರಿಗೂ-ಜನಾರ್ದನ ಸ್ವಾಮಿಗೂ ಇರುವ ಸಂಬಂಧಗಳ ಬಗ್ಗೆ ಪ್ರಾಮಾಣಿಕ ಸಂಗತಿಗಳು ಹೊರಬರುತ್ತವೆ.

• ವರದಿಗಾರ

ಮೈಸೂರಿನ 'ಮಹಾನಂದಿ' ಪತ್ರಿಕೆಗೆ ಸಿದ್ಲಿಂಗ ಸ್ವಾಮಿಯ ಮೇವು!

ಮುಡ್ಡಿಯ ಚೇಲಾ ಸಿದ್ಧಲಿಂಗ ಸ್ವಾಮಿ ರ್ತನಾಗುತ್ತಿದ್ದಾನೆ.....!

ಮೈಸೂರಿನ ಪುರಾತನ ದಿನ ಪತ್ರಿಕೆ ಹಾಲಿ ಅಪ್ರಕಟಿತ ನಂದಿ' ದಿನಪತ್ರಿಕೆಯನ್ನು ಸಿದ್ಲಿಂಗ ಖರೀದಿಸಲು ಟಿದ್ದಾನೆ.


ಮುಂಬರುವ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ವರುಣಾ ಕ್ಷೇತ್ರದಿಂದ ಸಿದ್ಧರಾಮಯ್ಯನವರನ್ನು ಸೋಲಿಸಿ ನಾಗಬೇಕೆಂದು ಸಿದ್ಧಲಿಂಗು ಪ್ಲಾನ್ ಮಾಡಿದೆ. ಗಿ ಈಗಿನಿಂದಲೇ ರೆಡಿಯಾಗುತ್ತಲೂ ಇದೆ. ಅಂತಹ ತಯಾರಿಯ ಭಾಗವಾಗಿ ನಂದಿ ಪತ್ರಿಕೆ ಪುನರಾರಂಭಿಸಲು ಸಿದ್ಧಲಿಂಗು ಬಯಸಿದೆ.

Media ಮಾತು

ಮೈಸೂರಿನ ಸುತ್ತೂರು ಸ್ವಾಮಿಯ ಬಂಟನಂತಿದ್ದ ಬಸವಣ್ಣ ಎಂಬುವವರು ಎರಡು ದಶಕಗಳ ಕಾಲ ಮಹಾನಂದಿ ಪತ್ರಿಕೆ ನಡೆಸಿದ್ದರು. ಬಸವಣ್ಣನವರಿಗೆ ರಾಜಕೀಯ ಆಕಾಂಕ್ಷೆಗಳಿರಲಿಲ್ಲ, ಹಾಗಾಗಿ ಪತ್ರಿಕೆಗೂ ಕೆಟ್ಟ ಹೆಸರು ಇರಲಿಲ್ಲ, ತಕ್ಕಮಟ್ಟಿಗೆ ಚೆನ್ನಾಗಿಯೇ, ಜನಪ್ರಿಯ ಆಗಿತ್ತು ಮಹಾನಂದಿ.

ಬಸವಣ್ಣನವರು ತೀರಿಕೊಂಡ ನಂತರ ಮಹಾನಂದಿ ನಿಂತು ಹೋಗಿ ಈಗ ಸಿದ್ದಲಿಂಗುವಿನ ಕಣ್ಣಿಗೆ ಬಿದ್ದಿದೆ. ಯಡ್ಡಿ ಲೂಟಿ ಮಾಡಿದ ಹಣದಲ್ಲಿ ನರಿಪಾಲು ಗಿಟ್ಟಿಸಿರುವ ಕಳ್ಳ ಸಿದ್ದಲಿಂಗುಗೆ ಸುತ್ತೂರು ಮಠದ ಸ್ವಾಮಿಗಳ ಸಂಪೂರ್ಣ ಬೆಂಬಲವಂತೂ ಇರುತ್ತದೆ ಬಿಡಿ.

ಆದರೆ ಜನ ಓದುತ್ತಾರಾ? ಕಾದು ನೋಡೋಣ.



ಅಡಿಗರ ಕೋಮುವಾದಿ ಕವನ 3

• ಡಾ. ಎಂ.ಡಿ. ಒಕ್ಕುಂದ

ಅಭಿವ್ಯಕ್ತಿ ವಿಧಾನ ಸ್ಮೃತಿಕೋಶದ ಬಳಕೆ

ಕಾವ್ಯ ಪರಂಪರೆಯ ಸ್ಮೃತಿಕೋಶಗಳಿಗೆ ಹೋಗಿ ಅಲ್ಲಿಯ ನುಡಿ, ನುಡಿಗಟ್ಟು ಮತ್ತು ಅಲಂಕಾರಗಳನ್ನು ಕವಿಗಳು ತಮ್ಮ ಕವಿತೆಗಳಲ್ಲಿ ಬಳಸಿಕೊಳ್ಳುತ್ತಾರೆ. ತನ್ನ ಚಿಂತನೆ, ಸಂವೇದನೆಗಳಿಗೆ ಪರಂಪರೆಯಿಂದ ನ್ಯಾಯಬದ್ಧತೆಯನ್ನು ಪಡೆಯುವ ಒತ್ತಡದಲ್ಲಿ ಈ ಬಗೆಯ ಅಭಿವ್ಯಕ್ತಿಯ ದಾರಿಗಳು ತೆರೆದುಕೊಂಡಂತಿವೆ. ಅಡಿಗರ ಕವಿತೆಯ 'ಮತ್ತೆ ಮೊಳಗಲಿ ಪಾಂಚಜನ್ಯ' ಎಂಬ ತಲೆಬರಹವೇ ಕನ್ನಡ ಕಾವ್ಯಪರಂಪರೆಯ ಸ್ಮೃತಿಕೋಶವನ್ನು ಕೆದಕುತ್ತದೆ. ಭಾರತದ ಎಲ್ಲ 'ಹಿಂದೂ'ಗಳು



ಒಟ್ಟಾಗಿ ವೀರಾವೇಶದಿಂದ ಮುಸ್ಲಿಮರನ್ನು ಸರ್ವನಾಶಮಾಡುವ, ಮೂಲೋತ್ಪಾಟನೆ ಮಾಡುವ, ಬರ್ಬರ ಹಿಂಸೆಯನ್ನು ಪ್ರಚೋದಿಸುವ ಕೋಮುವಾದಿ ಚಿಂತನೆಯ ಪ್ರತಿಪಾದನೆಗೆ ಪರಂಪರೆಯಿಂದ ನ್ಯಾಯಬದ್ಧತೆಯನ್ನು ಪಡೆಯುವ ಹುನ್ನಾರದ ಭಾಗವಾಗಿ ಅಡಿಗರು ಈ ದಾರಿಯನ್ನು ಅನುಸರಿಸಿದಂತಿದೆ. ಕೌರವ, ಪಾಂಡವರ ನಡುವೆ ನಡೆದ ಭೀಕರ ಕುರುಕ್ಷೇತ್ರ ಯುದ್ಧಕ್ಕೆ ಕೃಷ್ಣ ಪಾಂಚಜನ್ಯವನ್ನು ಊದಿ ಯುದ್ಧ ಘೋಷಣೆ ಮಾಡಿದ್ದ. ಈ ಸ್ಮೃತಿಯನ್ನು ಕಾವ್ಯದಲ್ಲಿ ಬಳಸುವ ಮೂಲಕ ಅಡಿಗರು ಹಿಂದೂ-ಮುಸ್ಲಿಂ ಧಾರ್ಮಿಕ ಸಮುದಾಯಗಳನ್ನು ಪಾಂಡವರು ಮತ್ತು ಕೌರವರು ಎಂದು ವರ್ಗೀಕರಿಸುವಲ್ಲಿ ಯಶಸ್ವಿಯಾಗುತ್ತಾರೆ. ಇದು ಧರ್ಮಯುದ್ಧ. ಈ ಯುದ್ಧದಲ್ಲಿ ಮುಸ್ಲಿಮರ ನಾಶ ಶತಃಸಿದ್ಧವೆಂಬ ದನಿಯನ್ನೂ ಹೊರಡಿಸುತ್ತಾರೆ. ದಾಯಾದಿ ಅರಸುಗಳ ಅರಸೊತ್ತಿಗೆಯ ಕಾಳಗದ ರೂಪಕವನ್ನು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸಾಮರಸ್ಯದಿಂದ ಬದುಕುತ್ತಿರುವ ಎರಡು ಧಾರ್ಮಿಕ ಸಮುದಾಯಗಳ ಮಧ್ಯದಲ್ಲಿ ಹಿಂಸೆಗೆ ಪ್ರಚೋದನೆ ನೀಡಲು ಬಳಸಿಕೊಳ್ಳುತ್ತಾರೆ. ಕುವೆಂಪು ಕೂಡ 'ಪಾಂಚಜನ್ಯ' ಕವಿತೆ ಬರೆದಿದ್ದರು. ವಸಾಹತುಶಾಹಿ ರಕ್ಕಸರ ನಿರ್ನಾಮಕ್ಕಾಗಿ ಅವರಿಂದ ಬಿಡುಗಡೆ ಪಡೆಯಲು ಭಾರತದ ಎಲ್ಲ ಜಾತಿಮತ ಪಂಥಗಳ ಸಮುದಾಯಗಳು ಸಾಮರಸ್ಯದಿಂದ ಒಗ್ಗೂಡಿ ಹೋರಾಡುವ ಕರೆಯನ್ನು ಕೊಟ್ಟಿದ್ದರು. ಅಲ್ಲಿಯ ಆವೇಶ, ಪ್ರಚೋದನೆಗಳಿಗೆ ಸ್ವಾತಂತ್ರ್ಯ ಹೋರಾಟ ಮತ್ತು ದೇಶ ಭಕ್ತಿಗಳ ರಾಷ್ಟ್ರೀಯವಾದಿ ನೈತಿಕತೆಯ ಚೌಕಟ್ಟಿತ್ತು. ಅಡಿಗರು ಆ 'ಪಾಂಚಜನ್ಯ'ವನ್ನು ಮತ್ತೆ ಮೊಳಗಿಸಿದ್ದು ವಸಾಹತೋತ್ತರ ಭಾರತದಲ್ಲಿ ಜಾತ್ಯತೀತ ಸಂವಿಧಾನದಡಿಯಲ್ಲಿ ಕೂಡಿಬಾಳುತ್ತಿರುವ ಬಹುಸಂಖ್ಯಾತ ಧಾರ್ಮಿಕ ಸಮುದಾಯವು ಅಲ್ಪಸಂಖ್ಯಾತ ಧಾರ್ಮಿಕ ಸಮುದಾಯದ ಮೇಲೆ ಆಕ್ರಮಣ ಮಾಡುವ ಕರೆಯನ್ನು ನೀಡಲು. 'ಹಿಂದೂಗಳು ಮಾತ್ರ ಭಾರತೀಯರು, ಉಳಿದ ಧರ್ಮದವರು ಪರಕೀಯರು ಅವರನ್ನು ದೇಶಬಿಟ್ಟು ಓಡಿಸಬೇಕು'[5] ಎಂಬ ಸಂಘಪರಿವಾರದ ತಾತ್ವಿಕತೆಯನ್ನು ಪ್ರತಿಪಾದಿಸಿದರು. ಬ್ರಿಟಿಷರಂತೆ ಮುಸ್ಲಿಮರೂ ಹೊರಗಿನವರು ಎಂಬುದು ಇಲ್ಲಿಯ ಚಿಂತನೆ. ಮುಸ್ಲಿಂ ಧರ್ಮದ ಅರಸರು ಭಾರತದಲ್ಲಿ ಅರಸೊತ್ತಿಗೆಗಳನ್ನು ಸ್ಥಾಪಿಸಿ ಭಾರತೀಯರೇ ಆಗಿ ಹೋದ ಚಾರಿತ್ರಿಕ ವಾಸ್ತವವನ್ನು ಉದ್ದೇಶಪೂರ್ವಕವಾಗಿ ಮರೆಮಾಚುವ ವಿಧಾನವಿದು. ವಸಾಹಾತುಶಾಹಿ ದೌರ್ಜನ್ಯ ಹಾಗೂ ಲೂಟಿಗಳಿಗೆ ಅನ್ಯಧರ್ಮದವರೆಂಬ ಕಾರಣಕ್ಕೆ ದೇಶೀ ಅರಸೊತ್ತಿಗೆಗಳನ್ನು ಸಮೀಕರಿಸುವ ಉದ್ದೇಶಪೂರ್ವಕ ಯತ್ನ ಇಲ್ಲಿದೆ. ಸಮಕಾಲೀನ ಸಮಾಜದ ಬಹುಸಂಖ್ಯಾತ ಧರ್ಮದ ಸಮುದಾಯಗಳನ್ನು ಕೋಮುವಾದೀಕರಿಸುವ ಪ್ರಕ್ರಿಯೆಯ ಭಾಗವಾಗಿ ಅಡಿಗರು 'ಪಾಂಚಜನ್ಯ'ದ ರೂಪಕವನ್ನು ಪರಂಪರೆಯ ಸ್ಮೃತಿಯಿಂದ ಬಳಸಿಕೊಳ್ಳುತ್ತಾರೆ. ಮೂಲದಲ್ಲಿ ಬಳಕೆಯಾದ ಅರ್ಥಕ್ಕಿಂತ ಭಿನ್ನವಾದ, ಮಾತ್ರವಲ್ಲ ವಿರುದ್ಧವಾದ ಆಶಯಗಳಿಗೆ 'ಪಾಂಚಜನ್ಯ' ಬಳಕೆಯಾಗಿದೆ. ಪರಂಪರೆಯ ನುಡಿಗಟ್ಟು ರೂಪಕಗಳು ಕವಿಯೊಬ್ಬನ ತಾತ್ವಿಕ ನಿಲುವುಗಳ ಕಾರಣಕ್ಕೆ ಕಾಲದಿಂದ ಕಾಲಕ್ಕೆ ಬೇರೆ ಬೇರೆ ಅರ್ಥಗಳನ್ನು ಪಡೆಯುತ್ತವೆ. ಕುವೆಂಪು ಕಾವ್ಯದಲ್ಲಿ ಹಿಂದೂ ಮುಸ್ಲಿಂ ಸೌಹಾರ್ದತೆಯ ಪರವಾಗಿದ್ದ 'ಪಾಂಚಜನ್ಯ'ದ ರೂಪಕ ಇಲ್ಲಿ ಧಾರ್ಮಿಕ ಹಿಂಸೆಯ ಪ್ರಚೋದನಾತ್ಮಕ ರೂಪಕವಾಗಿ ಪರಿವರ್ತನೆಯಾಗಿದೆ. 'ಪಾಂಚಜನ್ಯ' ಎಂಬುದು ಸಂಘ ಪರಿವಾರದ ಮುಖವಾಣಿ ಪತ್ರಿಕೆಯ ಹೆಸರಾಗಿರುವುದು ಕೂಡ ಆಕಸ್ಮಿಕವಿರಲಾರದು.

> ಕೌರವ, ಪಾಂಡವರ ನಡುವೆ ನಡೆದ ಭೀಕರ ಕುರುಕ್ಷೇತ್ರ ಯುದ್ಧಕ್ಕೆ ಕೃಷ್ಣ ಪಾಂಚಜನ್ಯವನ್ನು ಊದಿ ಯುದ್ಧ ಘೋಷಣೆ ಮಾಡಿದ್ದ. ಈ ಸ್ಮೃತಿಯನ್ನು ಕಾವ್ಯದಲ್ಲಿ ಬಳಸುವ ಮೂಲಕ ಅಡಿಗರು ಹಿಂದೂ-ಮುಸ್ಲಿಂ ಧಾರ್ಮಿಕ ಸಮುದಾಯಗಳನ್ನು ಪಾಂಡವರು ಮತ್ತು ಕೌರವರು ಎಂದು ವರ್ಗೀಕರಿಸುವಲ್ಲಿ ಯಶಸ್ವಿಯಾಗುತ್ತಾರೆ. ಇದು ಧರ್ಮಯುದ್ಧ. ಈ ಯುದ್ಧದಲ್ಲಿ ಮುಸ್ಲಿಮರ ನಾಶ ಶತಃಸಿದ್ಧವೆಂಬ ದನಿಯನ್ನೂ ಹೊರಡಿಸುತ್ತಾರೆ.

ಸಿದ್ಧಾಂತ ಪ್ರತಿಪಾದನೆ ಮತ್ತು ಸರಳೀಕರಣ

ಒಂದು ನಿರ್ದಿಷ್ಟವಾದ ಸಿದ್ಧಾಂತವನ್ನು ಪ್ರತಿಪಾದಿಸುವ ಏಕೈಕ ಕಾರಣಕ್ಕೆ ಕವಿತೆಯನ್ನು ಬರೆಯಲು ಹೊರಟರೆ ಕವಿತೆ ಸಹಜವಾಗಿ ರೂಪದ ದೃಷ್ಟಿಯಿಂದ ಸರಳೀಕರಣಕ್ಕೆ ಒಳಗಾಗುತ್ತದೆ. ಸಮಕಾಲೀನ ಬದುಕನ್ನು ಅರ್ಥೈಸಿಕೊಳ್ಳಲು, ವ್ಯಾಖ್ಯಾನಿಸಲು, ಸಂವೇದಿಸಲು ಸಿದ್ಧಾಂತ ಒಂದು ದೃಷ್ಟಿಕೋನವಾಗುವುದು ಬೇರೆ. ಸಿದ್ಧಾಂತದ ಪ್ರತಿಪಾದನೆಗಾಗಿಯೇ ಕಾವ್ಯದ ರೂಪವನ್ನು ಬಳಸಿಕೊಳ್ಳುವುದು ಬೇರೆ. ಹೀಗಾಗಿ ಅಡಿಗರ ಈ ಕವಿತೆ ಬಲಪಂಥೀಯ ಸಿದ್ಧಾಂತ ಪ್ರತಿಪಾದನೆಯ ಕಾರಣದಿಂದ ಬಲಪಂಥೀಯ ರಾಜಕೀಯ ಪಕ್ಷದ ಪಾಂಪ್ಲೆಟ್ಟಿನಂತೆ ಭಾಸವಾಗುತ್ತದೆ. ಕಾವ್ಯದ ಸಹಜ ಬಂಧ, ಬಿಗುವು ರೂಪಕಾತ್ಮಕತೆಗಳೆಲ್ಲ ಕಳೆದು ಹೋಗುತ್ತವೆ. ಅಡಿಗರು ಸಂಘಪರಿವಾರದ ತಾತ್ವಿಕತೆಯ ಹಲವಾರು ವಿಧಾನಗಳನ್ನು ಉದ್ದೇಶಪೂರ್ವಕವಾಗಿಯೇ ಕ್ರೋಢೀಕರಿಸುವ ಯತ್ನ ಮಾಡಿರುವುದರಿಂದ ಕವಿತೆಯು ಹೆಚ್ಚು ಮಾಹಿತಿ ಹಾಗೂ ಚಿಂತನೆಗಳನ್ನು ಒಳಗೊಳ್ಳುವ ಹಂಬಲವನ್ನು ಪ್ರಕಟಿಸುತ್ತದೆ. ಇಲ್ಲಿ ಚಿಂತನೆ ಮುಖ್ಯವೇ ಹೊರತು ಕಾವ್ಯವಲ್ಲ. ರಾಜಕೀಯ ಪಕ್ಷಗಳು ಹಾಗೂ ಸಾಂಸ್ಕೃತಿಕ ಸಂಘಟನೆಗಳಿಗಿರುವಂತೆ ಕಾವ್ಯದ ರೂಪಕ್ಕೂ ತನ್ನದೇ ಪ್ರಣಾಳಿಕೆ ಇರಬಹುದೆಂಬ ಸೂಕ್ಷ್ಮವನ್ನು ಮರೆತಾಗ ಕಾವ್ಯ ಕಣ್ಮರೆಯಾಗಿ ತತ್ತ್ವವೇ ವಿಜೃಂಭಿಸಿಬಿಡುವ ಅಪಾಯವನ್ನು ಈ ಕವಿತೆಯಲ್ಲಿ ಗಮನಿಸಬಹುದಾಗಿದೆ. ಯಾವುದೇ ಸಾಹಿತ್ಯ ಪ್ರಕಾರದ ಪ್ರಣಾಳಿಕೆಯೆಂದರೆ, ಮಾನವೀಯತೆಯ ಪ್ರತಿಪಾದನೆ. ಜೀವಪರಚಿಂತನೆಗಳ ಪ್ರತಿಪಾದನೆ. ಬದುಕನ್ನು ಸುಂದರಗೊಳಿಸುವ ಹಂಬಲ. ಆದರೆ ಇದಕ್ಕೆ ವಿರುದ್ಧವಾಗಿ ಹಿಂಸೆಯನ್ನು ಕೊಲೆಗಡುಕತನವನ್ನು ಪ್ರತಿಪಾದಿಸುವ ಸಿದ್ಧಾಂತದ ಪ್ರಣಾಳಿಕೆ ಕಾವ್ಯದಲ್ಲಿ ಪ್ರತಿಪಾದನೆಗೊಂಡಾಗ ಅದು ಕಾವ್ಯವಾಗಿರುವುದೇ ಇಲ್ಲ. ಆ ದೃಷ್ಟಿಯಿಂದ ಅಡಿಗರ ಈ ಬರಹವನ್ನು ಸಾಹಿತ್ಯ ಅಥವಾ ಕವಿತೆ ಎಂದು ಒಪ್ಪಿಕೊಳ್ಳುವುದೇ ಕಷ್ಟ. 'ಮನುಷ್ಯನನ್ನು ಮನುಷ್ಯನನ್ನಾಗಿ ಜೀವಂತ ಇಡುವ ಕೆಲಸವನ್ನು ಕಾವ್ಯ ಮಾಡುತ್ತದೆ' ಎಂಬ ಎಲಿಯಟ್‌ನ ಮಾತನ್ನು ನೆನಪಿಸಿಕೊಂಡರೆ ಮನುಷ್ಯರನ್ನು ರಾಕ್ಷಸರನ್ನಾಗಿ ಪರಿವರ್ತಿಸುವ ಬರವಣಿಗೆಗಳು ಸಾಹಿತ್ಯವೆಂಬ ಪ್ರಕಾರದಾಚೆಗೆ ಇಡಲು ಯೋಗ್ಯವಾದವುಗಳಾಗಿರುತ್ತವೆ.

ಯಾವ ಸಿದ್ಧಾಂತವನ್ನು ಕವಿತೆಯಲ್ಲಿ ಪ್ರತಿಪಾದಿಸುತ್ತೇವೆ ಎಂಬುದರ ಆಧಾರದ ಮೇಲೆ ಕೂಡ ಕಾವ್ಯದ ರೂಪ ಮೈದಾಳುತ್ತದೆ. ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ, ಗಾಂಧಿ, ಬುದ್ಧ ಬಸವ ಮುಂತಾದ ಜೀವಪರಚಿಂತಕರ ಚಿಂತನೆಗಳನ್ನು ಪ್ರತಿಪಾದಿಸುವಾಗ ಕೂಡ ಕಾವ್ಯದ ರೂಪ ಸರಳೀಕರಣಕ್ಕೊಳಗಾಗಬಹುದು. ಆದರೆ ಅಲ್ಲಿಯ ಆಶಯದ ನೈತಿಕತೆಯ ಕಾರಣಕ್ಕೆ ಅಂತಹ ಬರಹಗಳಿಗೆ ಸಾಹಿತ್ಯದಾಚೆಗೆ ನಿಲ್ಲುವ ಅಗತ್ಯ ಕಂಡು ಬರುವುದಿಲ್ಲ. ಶೋಷಿತ ಜನತೆಯ ಪರವಾದ ಸೈದ್ಧಾಂತಿಕತೆ ಒಂದು ದೃಷ್ಟಿಕೋನ ಮಾತ್ರವಾಗಿ ಬದುಕಿನ ವಾಸ್ತವಗಳನ್ನು ಮನುಷ್ಯನ ಅಂತರಂಗ ಬಹಿರಂಗಗಳನ್ನು ಶೋಧಿಸುವ ದಾರಿಯಾದಾಗ ಉತ್ತಮ ಕಾವ್ಯ ಹುಟ್ಟಬಹುದು. ಜನಪರ ಸಿದ್ಧಾಂತವು ಕಾವ್ಯಕ್ಕೆ ಶತ್ರುವೂ ಅಲ್ಲ, ಮಿತ್ರನೂ ಅಲ್ಲ. ಆದರೆ ಕವಿಯೊಬ್ಬ ಬದುಕಿನ ಸಂದರ್ಭದಲ್ಲಿ ಅದನ್ನು ಶೋಧನೆಗೆ ಒಡ್ಡುವುದರ ಮೇಲೆ ಅವಲಂಭಿಸಿರುತ್ತದೆ. ಮಾರ್ಕ್ಸ್‌ವಾದಿ ಸೈದ್ಧಾಂತಿಕತೆ ಕೂಡ ಕಳಪೆ ಸಾಹಿತ್ಯ ಸೃಷ್ಟಿಗೆ ಕಾರಣವಾಗಿರಬಹುದು. ಆದರೆ ಅಲ್ಲಿ ಶ್ರೇಷ್ಠ ಸಾಹಿತ್ಯವೂ ಹುಟ್ಟಬಲ್ಲದು. ಆದರೆ ಶೋಷಕಪರ ಸಿದ್ಧಾಂತ ಮೂಲದಲ್ಲಿಯೇ ಅಮಾನವೀಯವಾಗಿರು ವುದರಿಂದ ಯಾವುದೇ ಅತ್ಯುತ್ತಮ ಬರಹವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಅಡಿಗರ ಈ ಕವಿತೆಯ ಅಭಿವ್ಯಕ್ತಿಕ್ರಮ ಕೂಡ ಧಾರ್ಮಿಕ ಹಿಂಸೆಯ ಪ್ರತಿಪಾದನೆಯ ಕಾರಣಕ್ಕೆ 'ಕಾವ್ಯ'ವೆಂಬ ರೂಪದಾಚೆಯ ಬರಹವಾಗಿದೆ.

ಸೈನಿಕ ಭಾಷೆ

ಈ ಕವಿತೆಯ ಭಾಷೆಯನ್ನು ಗಮನಿಸಬೇಕು. ಅದು ಸೈನಿಕ ಭಾಷೆಯಲ್ಲಿದೆ. ವೈರಿ ಸಂಹಾರಕ್ಕೆ ಸೈನಿಕಮುಖ್ಯಸ್ಥ ಆಜ್ಞೆ ನೀಡುವ ರೀತಿಯಲ್ಲಿದೆ. ಆವೇಶ ಉನ್ಮಾದಗಳು ತುಂಬಿ ತುಳುಕುತ್ತವೆ. ದ್ವೇಷವೇ ಮೈವೆತ್ತಂತಿದೆ. ಈ ಕವಿತೆಯ ಶಬ್ದಶಬ್ದ ಅಕ್ಷರಕ್ಷರದಲ್ಲೂ ಮತಾಂಧತೆ ಮತ್ತು ಧಾರ್ಮಿಕ ಹಿಂಸೆಯ ಉನ್ಮಾದ ತುಂಬಿ ತುಳುಕುತ್ತದೆ. ಇದೊಂದು ಬಗೆಯ ಸರ್ವಾಧಿಕಾರಿ ಭಾಷೆಯಾಗಿದೆ. ಸಂಘ ಪರಿವಾರದ ನಾಯಕರು ತಮ್ಮ ಭಾಷಣಗಳಲ್ಲಿ ಹಿಂದೂ ಸಮುದಾಯವನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲು ಬಳಸುವ ಉದ್ರೇಕಕಾರಿ ಪ್ರಚೋದನಾತ್ಮಕ ಭಾಷೆಗಿಂತಲೂ ಕೆಟ್ಟ ಭಾಷೆ ಇಲ್ಲಿದೆ. ಸಂಸ್ಕೃತದ ಪಾರಮ್ಯದಲ್ಲಿ ಅದರ ಕೊಲೆಗಡುಕತನ ಸಂವಹನವಾಗುವುದಿಲ್ಲ. ರುಂಡ ತೆಗೆಯುವ, ಕೈಕತ್ತರಿಸುವ, ಕಣ್ಣುಕೀಳುವ ಚಿತ್ರ ಹಿಂಸೆಯ ಭಾಷೆಗಿಂತಲೂ ಆಮೂಲಾಗ್ರ ಮೂಲೋತ್ಪಾಟನೆಯ ಉದ್ದೇಶದ ಈ ಭಾಷೆ ಹೆಚ್ಚು ಕ್ರೌರ್ಯವನ್ನು ಒಳಗೊಂಡಿದೆ. ಪ್ರಾಚೀನ ಕನ್ನಡ ಕವಿಗಳು ಎರಡು ರಾಜಮನೆತನಗಳ ನಡುವಿನ ಭಯಂಕರ ಯುದ್ಧವನ್ನು ವರ್ಣಿಸುವಾಗಲೂ ಎಲ್ಲೋ ಆಳದಲ್ಲಿ ಯುದ್ಧದ ಹಿಂಸೆಗೆ ಬೇಸತ್ತು ಯುದ್ಧ ವಿರೋಧಿ ನಿಲುವನ್ನು ಸೂಕ್ಷ್ಮವಾಗಿ ಪ್ರತಿಪಾದಿಸುತ್ತಿದ್ದರು. ರಾಜಪ್ರಭುತ್ವದ ಕಾಲದಲ್ಲಿ ಯುದ್ಧಗಳ ಹೆಸರಿನಲ್ಲಿ ನಡೆಯುವ ಸಾಮಾನ್ಯ ಜನತೆಯ ಮಾರಣ ಹೋಮಕ್ಕೆ ಕವಿಗಳ ಅಂತಃಕರಣ ಸ್ಪಂದಿಸುತ್ತಿತ್ತು. ಆದರೆ ಪ್ರಜಾಪ್ರಭುತ್ವ ಯುಗದಲ್ಲಿ ಜನತೆಯ ನಡುವಿನ ಭಯಂಕರ ಹಿಂಸೆಗೆ ಪ್ರಚೋದಿಸುವ ಅಡಿಗರಂಥವರ ಅಂತಃಕರಣ ಸಿದ್ಧಾಂತದ ಕಣ್ಣುಪಟ್ಟಿಯ ಕಾರಣದಿಂದ ಜಾಗೃತವಾಗದೇ ಹೋಗಿದೆ.

ಲಂಕೇಶ್, ಅಡಿಗರ ಕಾವ್ಯವನ್ನು ಕುರಿತು ಬರೆಯುತ್ತ ಅವರ ಭಾಷೆಯ ಬಗ್ಗೆ ಸೂಕ್ಷ್ಮ ಒಳನೋಟಗಳನ್ನು ನೀಡಿದ್ದಾರೆ. "ಅಡಿಗರ ಪದ್ಯಗಳನ್ನು ಓದುವಾಗ ನನಗೆ ವಿಚಿತ್ರ ಅನ್ನಿಸುವುದು ಅವರ ಭಾಷೆ ಮತ್ತು ಪ್ರತಿಮೆಗಳು. ಶಂಕರಾಚಾರ್ಯರಂತೆ ತಮ್ಮ ಧರ್ಮವನ್ನು ಚೇತರಿಸುವ ಗೀಳು... ಮತ್ತೆ ಮತ್ತೆ ಬರುವ ಅಶ್ವತ್ಥ ವಿವರ್ತ, ಪುತ್ರಕಾಮೇಷ್ಠಿ, ಪಿತೃಪಿತಾಮಹರು ಇತ್ಯಾದಿ."[6] "ಅಡಿಗರು ಕವಿಯಾಗಿ ಬೆಳೆದಂತೆ ಸಮಾಜದ ಪರಿಸರದ ಬಗೆಗಿನ ಧೋರಣೆಗಳನ್ನು ಪ್ರಜಾತಂತ್ರ, ಜಾತಿವ್ಯವಸ್ಥೆ, ರಾಜಕೀಯ ಇತ್ಯಾದಿಗಳನ್ನು ಕುರಿತಾದ ಅವರು ಗ್ರಹಿಸಿರುವ ರೀತಿಯನ್ನು ಅವರ ಒಟ್ಟಾರೆ ಸಂಸ್ಕೃತ-ವೈದಿಕ ವಾಙ್ಮಯದ ಜೊತೆ ಅಭ್ಯಸಿಸಿದರೆ ಅವರ ಮನಃಸ್ಥಿತಿ ಮತ್ತು ಅವರ ಕಾವ್ಯದ ಮೌಲ್ಯಮಾಪನ ಸಾಧ್ಯವಾಗುತ್ತದೆ."[7] ಅಡಿಗರ ಕಾವ್ಯವನ್ನಾವರಿಸಿರುವ ಅವರ ಕಾವ್ಯದ ರೂಪವನ್ನು ವ್ಯಾಪಿಸಿರುವ ಸಂಸ್ಕೃತ ಭಾಷಾ ಕೋಶ, ಪ್ರತಿಮಾ ರೂಪಕಗಳು ಅವರ ಸಂವೇದನಾಕ್ರಮವನ್ನು ವಿವರಿಸುತ್ತವೆ.


'ಮತ್ತೆ ಮೊಳಗಲಿ ಪಾಂಚಜನ್ಯ' ಕವಿತೆಯಲ್ಲಿ ಸುಮಾರು ಶೇಕಡಾ ತೊಂಬತ್ತು ಸಂಸ್ಕೃತ ಪದಗಳೇ ಇವೆ. ಪಾಂಚಜನ್ಯ ದಧೀಚಿ ಕಶೇರು, ರಾಮಬಾಣ, ಅಸಂದಿಗ್ಧ ಹಿಂದುತ್ವ, ಮಹಾಸಿಂಧುತ್ವ, ಭೋರ್ಗರೆ, ಪರಿಶುದ್ಧ ಆಕಾಶ, ಶ್ಯಾಮಲ, ಶತಕೋಟಿ ತಾರೆ, ಭರತವರ್ಷ, ಸ್ವರ್ಗಂಗೆಧಾರೆ, ಶುದ್ಧ ನಿರ್ಮಲ ಮಾನಸ ಸರೋವರ, ಅಷ್ಟದಳ ಕಮಲ, ಪರಮ ಪುರುಷಾರ್ಥ, ಪರಾತ್ಪರ ಇತ್ಯಾದಿ. ಅಡಿಗರಿಗೆ ಯಾಕಿಷ್ಟು ಸಂಸ್ಕೃತ ಪ್ರೇಮ? ಮಾರ್ಗಕವಿಗಳಿಗೆ ಸಂಸ್ಕೃತದೊಂದಿಗೆ ಸೆಣಸಿ ಗೆಲ್ಲುವ ಒತ್ತಡವಿತ್ತು. ಕುವೆಂಪು ಆಧುನಿಕ ಕಾಲದಲ್ಲೂ ಅಂಥ ಒತ್ತಡಕ್ಕೀಡಾಗಿದ್ದರು. ಆದರೆ ಅಡಿಗರು ಸಂಸ್ಕೃತದಲ್ಲಿಯೇ ಉಸಿರಾಡುವಂತೆ ಭಾಸವಾಗುತ್ತದೆ. ಅಡಿಗರ ಸಂಸ್ಕೃತ ಭಾಷಾ ಲೋಕ ಕೇವಲ ಕಾವ್ಯಸಂಬಂಧಿಯಾದದ್ದಲ್ಲ. ಅದು ವೈದಿಕ ಪುರಾಣ ಮತ್ತು ಧಾರ್ಮಿಕ ಆವರಣಕ್ಕೆ ಸಂಬಂಧಿಸಿದ್ದು ವೈದಿಕ ಸಂಸ್ಕೃತಿ ನಶಿಸಿ ಹೋಗುತ್ತಿರುವುದರ ಬಗೆಗಿನ ಅಡಿಗರ ಗಾಢವಾದ ವಿಷಾದಕ್ಕೂ ಅವರು ಕಾವ್ಯದಲ್ಲಿ ಸಂಸ್ಕೃತವನ್ನು ಅತಿಯಾಗಿ ಬಳಸುವುದಕ್ಕೂ ಆಂತರಿಕ ಸಂಬಂಧವಿದೆ. ಅದು ವೈದಿಕ ಸಂಸ್ಕೃತಿಯ ಪುನರುತ್ಥಾನದ ಭಾಗವೇ ಆಗಿದೆ. ಹಿಂದುತ್ವದ ಪ್ರತಿಪಾದನೆಯನ್ನು ಸಂಸ್ಕೃತ ಭೂಯಿಷ್ಠವಾದ ಭಾಷೆಯಲ್ಲಿ ಮಾತ್ರ ಸಮರ್ಥವಾಗಿ ಅಭಿವ್ಯಕ್ತಿಸಲು ಸಾ… ಬಹುದು. ಸಂಘಪರಿವಾರದ ಚಿಂತನೆ ಬರವಣಿಗೆಗಳಲ್ಲಿ ಕೂಡ ಈ ಸಂ… ಬಳಕೆಯನ್ನು ಗಮನಿಸಬಹುದು. ಸಂಸ್ಕೃತಭೂಯಿಷ್ಠವಾದ ಪದಗಳ ಬಳಕೆ, … ಪುರಾಣ ಪ್ರತಿಮೆಗಳ ಬಳಕೆ ಹಾಗೂ ಹಿಂದುತ್ವ ಪ್ರತಿಪಾದನೆಯ ನಡುವೆ … ಅವಿನಾಭಾವ ಸಂಬಂಧವಿದೆ. ಸನಾತನವಾದಿ ಚಿಂತನಾಕ್ರಮ ಹಾಗೂ ಕೋ… ವಾದಿ ಆಶಯಗಳು ಸಂಸ್ಕೃತ ಭಾಷೆಯ ಸಹಜ ಸಂವೇದನೆಗಳಾಗಿರುವುದ… ನವ ಬ್ರಾಹ್ಮಣ್ಯದ ಪ್ರತಿಪಾದನೆಗೆ ಪ್ರಾಚೀನ ಬ್ರಾಹ್ಮಣ ಭಾಷೆಯನ್ನು ಬಳಸು… ಅಡಿಗರಂಥವರಿಗೆ ಅನುಕೂ… ವಾಗಿರಬಹುದು. ಧಾರ್ಮಿಕ ಹಿಂ… ಪ್ರತಿಪಾದನೆಗೆ ಅಡಿಗರು ಸಂ… ಸನಾತನವಾದಿ, ಮೂಲಭೂತ… ಭಾಷಾಕೋಶವನ್ನು ಈ ಕವಿತೆ… ಉಪಯೋಗಿಸಿದ್ದಾರೆ.

ವೈದಿಕ ಮೂಲದ ಪ್ರತಿಮೆಗಳು

ಅಡಿಗರು ಉಪಮೆ ರೂಪಕ ಪ್ರತಿಮೆಗಳನ್ನು ವೈದಿಕ ಮೂಲದಿ… ಎತ್ತಿಕೊಳ್ಳುತ್ತಾರೆ. 'ದಧೀಚಿ ಕಶೇರುವಿನಂತೆ, ದೃಢ ರಾಮಬಾಣದಂತೆ, ಅಸ… 'ಮತ್ತೆ ಮೊಳಗಲಿ ಪಾಂಚಜನ್ಯ'. 'ಭರತವರ್ಷದ ಮೇಲೆ ಸ್ವರ್ಗಂಗೆ ಧಾರೆ… ನಿರ್ಮಲ ಮಾನಸ ಸರೋವರದ ಮೇಲೆ', 'ಅಷ್ಟದಳ ಕಮಲದ ನಿರಾಳ', '… ಕೋಟೆಗಳೆಲ್ಲ ಮತ್ತೆ ವಶವಾಗಿ ಶಿಖರ ಶಿಖರಗಳೆಲ್ಲ ಆಗಿ ಸ್ವಾಧೀನ', 'ಪ್ರತಿ… ಪೀಠಕ್ಕೂ ಅಷ್ಟಬಂಧ'. ಮುಸ್ಲಿಮರನ್ನು ಸಂಹಾರ ಮಾಡಿ, ಅವರ ಮೂ… ತ್ಪಾಟನೆಯ ನಂತರ ಹಿಂದುತ್ವವನ್ನು ಸ್ಥಾಪಿಸುವ ಆಶಯವನ್ನು ಪ್ರತಿಪಾ… ಅಡಿಗರು 'ದಧೀಚಿಕಶೇರು' 'ರಾಮಬಾಣ' 'ಪಾಣಿಪೀಠ' 'ಅಷ್ಟಬಂಧ'ದಂತ… ವೈದಿಕ-ಧಾರ್ಮಿಕ ಪ್ರತಿಮೆಗಳನ್ನು ಸಂಯೋಜಿಸುವುದು ಆ ಭಾಷೆ… ಸಹಜವಾಗಿಯೇ ಮಡುಗಟ್ಟಿರುವ 'ಹಿಂಸೆ'ಯ ನೆಲೆಯನ್ನು ಸೂಚಿಸುತ್ತದೆ. … ಸಂಸ್ಕೃತಿಯ ದೇವರುಗಳೆಲ್ಲ 'ಶಸ್ತ್ರಾಸ್ತ್ರ ಪಾಣಿಗಳು' 'ಸಂಹಾರ ಪ್ರಿ… ಕೊಲೆಪಾತಕತನದಲ್ಲಿ ಪ್ರವೀಣರು. ವರ್ಣಧರ್ಮವನ್ನು ಮೀರುವವರ … ಆ ಶಸ್ತ್ರಾಸ್ತ್ರಗಳು ಪ್ರಯೋಗವಾಗುತ್ತಿದ್ದವು. ಅಡಿಗರು ಈಗ ಮುಸ್ಲಿಮರ … ಅವುಗಳ ಪ್ರಯೋಗಕ್ಕೆ ಕರೆ ನೀಡುತ್ತಾರೆ. ದಲಿತ ಮತ್ತು ಕೆಳವರ್ಗಗಳನ್ನು ಹಿಂ… ರೂಪಕಗಳೇ ಅಲ್ಪಸಂಖ್ಯಾತರನ್ನು ಹಿಂಸಿಸಲು ಕಾವ್ಯದಲ್ಲಿ ಬಳಕೆಗೊಳ್ಳುತ್ತ…

ಕವಿಯ ಗೆಲ್ಲುವ ಕಾವ್ಯ

ಅತ್ಯಂತ ಕುತೂಹಲದ ಸಂಗತಿಯೆಂದರೆ ಅಡಿಗರು ಹಿಂದೂ



ಮುಸ್ಲಿಮರನ್ನು ಶತ್ರುಗಳಾಗಿ ಎದುರು ಬದರು ನಿಲ್ಲಿಸಿ ಹಿಂದೂಗಳನ್ನೂ ಹಿ… ಸಂಸ್ಕೃತಿಯನ್ನೂ ವರ್ಣಿಸುವಾಗ ಸಂಪೂರ್ಣ ಸಂಸ್ಕೃತ ಭಾಷೆಯನ್ನು ಬ… ಮುಸ್ಲಿಮರನ್ನು ಅವರ ಸಂಸ್ಕೃತಿಯನ್ನು ಅವಮಾನಿಸಲು ಹೆಚ್ಚು ಕನ್ನಡ ಪದ… ಬಳಸುತ್ತಾರೆ. ಉದಾ: ಅವರ ಕಲ್ಪನೆಯ ಹಿಂದೂ ಸಾಮ್ರಾಜ್ಯದ ವಿವರಣೆ ಹಿ…

ಇಕ್ಕಟ್ಟು ಬಿಕ್ಕಟ್ಟುಗಳ ಕೆಟ್ಟ ಪಟ್ಟಣಗಳ ಜನಾರಣ್ಯ
ದಲ್ಲಿಯೂ ಪ್ರತಿ ಮನೆ ಕೂಡ ಋಷ್ಯಾಶ್ರಮ
ಮುಂದಕ್ಕೆ ಬಹುಭಾಷಾ ಸರಸ್ವತಿಯ ಸದ್ಗ್ರಂಥ ರಾಶಿ
ಹಿಂದೆ ಕೈಚಾಚಿದರೆ ಬಾರುಮಾಡಿಟ್ಟು ಬಂದೂಕು ಲಾಠಿ ಕಠಾರಿ
ವಜ್ರಕಾಯದೊಳಕ್ಕೆ ಆದಿಶೇಷ ಸ್ನಾಯುಗಳ ಮಣಿತ
ಆಕಾಶ ಶಾಮಲನೆಲ ಶತಕೋಟಿ ತಾರೆ
ಭರತ ವರ್ಷದ ಮೇಲೆ ಸ್ವರ್ಗಂಗೆ ಧಾರೆ
ಶುದ್ಧ ನಿರ್ಮಲ ಮಾನಸ ಸರೋವರದ ಮೇಲೆ
ಅಷ್ಟದಳ ಕಮಲದ ನಿರಾಳ್
ಮುಸ್ಲಿಂರನ್ನು ಕುರಿತು
ದುರ್ಮತದ ಮತಾಂಧತೆಯ ಮರಳದಿನ್ನೆ, ದಿಬ್ಬ ಚಾಕು, ಚೈನು, ಕೈ…
ನಡುಗಡ್ಡೆಗಳು ನೆಗೆದು ಬೀಳಲಿ ಸಮೂಲ
ತಾತ್ಕಾಲಿಕದ ಕೋಟೆ ಬುರುಜುಗಳಲ್ಲಿ ನೊರಜು ಬುರುಜುಗಳಲ್ಲಿ
ತೊಳೆದು ಹೋಗಲಿ ಒಂದೇ ಸಲ
ಜಿಗಣೆ, ಚೇಳು, ಹೆಡೆಎತ್ತಿ ಬಿಡಿದ ಘಟಸರ್ಪ
ಮಕ್ಕಳನ್ನೆತ್ತಿಕೊಂಡು ಹೋಗಿ ತಿನ್ನುವ ತೋಳ ಮನೆಗೆ ಬೆಂಕಿ
ಹಚ್ಚಿ ಗಹಗಹಿಸಬಲ್ಲ ಮಾನವ ಪಿಶಾಚಿ ಸೈಕಲ್ ಚೈನು
ಅಲಗು ತಾಗಿಸಿ ತಿವಿದ ಸಾಯಿಸುವ ನಿಶಾಚರ ನಿಕರ

ಅಡಿಗರ ಆಶಯಗಳಿಗೆ ವಿರುದ್ಧವಾಗಿ ಅವರ ಭಾಷಾಕೋಶ ಹಾಗೂ … ಆಕೃತಿ ಬೇರೆಯದೇ ಸತ್ಯವನ್ನು ಹೇಳುತ್ತದೆ. ಸಂಸ್ಕೃತದ ದಟ್ಟ ವಿವರಗಳ ಹಿ… ಭಾಷಿಕವಾಗಿ ಅನ್ಯವೆನ್ನಿಸಿದರೆ, ಕನ್ನಡದಲ್ಲಿ ನಿರೂಪಿತವಾಗುವ 'ಮುಸ್ಲಿಂ … ದೇಶೀ ಎನ್ನಿಸಿಕೊಳ್ಳುತ್ತದೆ. ಅದು ಆರ್ಯ-ದ್ರಾವಿಡ ದೇವ-ದಾನವ ಸಂಘ… ಪೌರಾಣಿಕತೆ ಮತ್ತು ಚಾರಿತ್ರಿಕತೆಗಳೊಂದಿಗೆ ಸಂಬಂಧ ಪಡೆಯುತ್ತದೆ. … ಮೇಲ್ಜಾತಿ ಮೇಲ್ವರ್ಗ ಮತ್ತು ಕೆಳಜಾತಿ ಕೆಳವರ್ಗಗಳ ಸಂಬಂಧವನ್ನು … ರಾಜಕಾರಣದ ಕೇಂದ್ರ ಸ್ಥಾನದಲ್ಲಿರುವ ಪುರೋಹಿತರೂ ಪ್ರಭು… ನಿರೂಪಿಸಿದಂತೆ ಕಂಡು ಬರುತ್ತದೆ. ಇದು ಕಾವ್ಯದ ಶಕ್ತಿ, ಕವಿಯ ಪ್ರಣಾಳಿಕೆ… ಕಾವ್ಯ ತಮ್ಮ ಪ್ರಣಾಳಿಕೆಯನ್ನು ಸ್ಥಾಪಿಸುವ ಕ್ರಮವೂ ಆಗಿದೆ.

(ಮುಗಿ…

ಕೋಮುವಾದಿಗಳ ವಿರೋಧ

3 ಕೋಮುವಾದ ಮತ್ತು ನಿರ್ದಿಷ್ಟ ಗುರಿಯ ಹಿಂಸೆಯ ನಿಯಂತ್ರಣ ಮಸೂದೆ

ಬಿಜೆಪಿ, ಸಂಘ ಪರಿವಾರ ಈ ಮಸೂದೆಯ ಜಾರಿಯ ವಿರುದ್ಧ ಈಗಾಗಲೇ ವ್ಯವಸ್ಥಿತವಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಎನ್.ಡಿ.ಎ.ಯಲ್ಲಿ ಮುಖ್ಯವಾಗಿ ಬಜೆಪಿ 'ಈ ಮಸೂದೆ ಹಿಂದೂ ಬಹುಸಂಖ್ಯಾತರ ಮೇಲೆ ತನ್ನ ನೇರ ಗುರಿಯನ್ನಿಟ್ಟುಕೊಂಡಿದೆ. ಬಹುಸಂಖ್ಯಾತರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ, ರಾಜ್ಯ ಸರಕಾರಗಳ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ' ಎಂದಿದೆ.

ಈ ಮಸೂದೆಯನ್ನು ಬಹುಸಂಖ್ಯಾತರ ಮೇಲೆ ಗುರಿಯಿಟ್ಟುಕೊಂಡು ತಯಾರಿಸಲಾಗಿದೆ ಮತ್ತು ಬಹುಸಂಖ್ಯಾತರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ ಎನ್ನುವ ವಾದದಲ್ಲಿ ಹುರುಳಿಲ್ಲ, ರಾಷ್ಟ್ರೀಯ ಮಟ್ಟದಲ್ಲಿರುವ ಅಲ್ಪಸಂಖ್ಯಾತರು ಬಹುಸಂಖ್ಯಾತರಾಗಿರುವ ಪ್ರದೇಶದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಬಹುಸಂಖ್ಯಾತರಾಗಿರುವವರ ಮೇಲೆ ಹಲ್ಲೆ ಮಾಡಿದಲ್ಲಿ ರಕ್ಷಿಸುವುದಕ್ಕೆ ಈ ಮಸೂದೆಯಲ್ಲಿ ಅವಕಾಶವಿಲ್ಲವೆನ್ನುವುದು ಅರ್ಥಹೀನ. ಯಾಕೆಂದರೆ ನಮ್ಮ ದೇಶದ ಏಳು ರಾಜ್ಯಗಳಲ್ಲಿ ಹಿಂದೂ ಸಮುದಾಯದವರು ಅಲ್ಪಸಂಖ್ಯಾತರಾಗುತ್ತಾರೆ. ಹಲವು ಜಿಲ್ಲಾ ಮಟ್ಟದಲ್ಲೂ, ತಾಲೂಕು ಮಟ್ಟದಲ್ಲೂ ಈ ಪರಿಸ್ಥಿತಿಯಿದೆ. ಬಹುಪಾಲು ಭಾಷಾ ಅಲ್ಪಸಂಖ್ಯಾತರು ಹಿಂದೂಗಳೇ ಆಗಿದ್ದಾರೆ. ಇಲ್ಲಿ ರಂಗನಾಥ್ ಮಿಶ್ರ ಆಯೋಗದ ವರದಿಯಲ್ಲಿ 'ಎಲ್ಲಾ ಕೋಮುಗಳೂ ಭಾರತದಲ್ಲಿ ಒಂದಲ್ಲ ಒಂದುಕಡೆ ಭಾಷಾ ಅಲ್ಪಸಂಖ್ಯಾತರಾಗಿಯೋ, ಧಾರ್ಮಿಕ ಅಲ್ಪಸಂಖ್ಯಾತರಾಗಿಯೋ ಆಗಿರುತ್ತಾರೆ (ಪುಟ32)ಎಂದಿದೆ. ದೆಹಲಿಯಲ್ಲಿ ಗುಜರಾತಿಗಳು, ಮುಂಬಯಿಯಲ್ಲಿ ಕನ್ನಡಿಗರು ಮತ್ತು ಬಿಹಾರಿಗಳು, ಕರ್ನಾಟಕದಲ್ಲಿ ತಮಿಳರು ಇತ್ಯಾದಿ. ಈ ಮಸೂದೆಯಲ್ಲಿ ಅಲ್ಪಸಂಖ್ಯಾತರು ಎಂದು ಹೇಳುತ್ತದೆಯೇ ಹೊರತು ಇಂತಹ ಸಮುದಾಯವೆಂದು ಹೇಳುತ್ತಿಲ್ಲ. ಆದುದರಿಂದ ಈ ಮಸೂದೆ ಅಲ್ಪಸಂಖ್ಯಾತರನ್ನು ಮಾತ್ರ ರಕ್ಷಿಸುತ್ತದೆ ಎನ್ನುವುದು ಶುದ್ಧ ಸುಳ್ಳು.

ಇನ್ನೊಂದು ಮುಖ್ಯವಿಚಾರವೆಂದರೆ ಈ ಹಿಂದುತ್ವವಾದಿಗಳಿಗೆ ಅಲ್ಪಸಂಖ್ಯಾತರು ಎಂದಾಕ್ಷಣ ಅವರ ಕಣ್ಣೆದುರು ನಿಲ್ಲುವುದು ಮುಸ್ಲಿಮರು ಮತ್ತು ಕ್ರೈಸ್ತರು. ಈ ದೇಶದ ಬಹುಸಂಖ್ಯಾತರಾಗಿರುವ ಹಿಂದೂಗಳ ಸಮಬಲಕ್ಕೆ ಯಾವರೀತಿಯಲ್ಲೂ ಈ ಎರಡು ಸಮುದಾಯಗಳು ಬರುವುದು ಸಾಧ್ಯವಿಲ್ಲ, ಇವರು ಶಕ್ತಿಹೀನರು ಮತ್ತು ಕೋಮು ಗಲಭೆಗಳಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಬಲಿಪಶುಗಳಾದವರು. ಅತ್ಯಂತ ಹೆಚ್ಚು ಆರ್ಥಿಕ ನಷ್ಟಕ್ಕೆ ಗುರಿಯಾದವರು ಎಂಬ ಸತ್ಯ ಇವರನ್ನು ಕಾಡುವುದಿಲ್ಲ. ಕೋಮು ಗಲಭೆಗಳು ನಡೆದ ಒಂದೆರಡು ಸಂದರ್ಭದಲ್ಲಿ ಹಿಂದೂಗಳ ಮೇಲೆ ದಾಳಿ ನಡೆದದ್ದಿದೆ, ಆದರೆ, ಕೋಮು ಗಲಭೆಗಳ ಇತಿಹಾಸದಲ್ಲಿ ಪ್ರಾಂತೀಯ ಸೇನಾ ಪಡೆಗಳಾಗಲಿ, ಪೊಲೀಸ್ ಪಡೆಗಳಾಗಲಿ ಆಕ್ರಮಣಕ್ಕೊಳಗಾದ ಹಿಂದೂಗಳ ಮೇಲೆ ಗೋಲಿಬಾರು ಮಾಡಿದ ಸಂದರ್ಭಗಳು ಇಲ್ಲವೇ ಇಲ್ಲವೆನ್ನಬಹುದು. ಆದರೆ ಅಲ್ಪಸಂಖ್ಯಾತರು ಆಕ್ರಮಣಕ್ಕೊಳಗಾದದ್ದು ಮಾತ್ರವಲ್ಲ ಆರಕ್ಷಕರ ಗೋಲಿಬಾರಿಗೆ ಈಡಾಗಿ ನೂರಾರು ಜನ ಸತ್ತಿದ್ದಾರೆ, ರಕ್ಷಕರೆನಿಸಿಕೊಂಡವರಿಂದ ಅತ್ಯಾಚಾರಕ್ಕೊಳಗಾಗಿದ್ದಾರೆ, ಆಸ್ತಿಪಾಸ್ತಿ ನಾಶವಾಗಿದೆ.

ಬಿಜೆಪಿ ಮತ್ತು ಅದರ ನೇತೃತ್ವದ ಎನ್.ಡಿ.ಎ.ಯಾಗಲಿ, ಹಿಂದೂತ್ವವಾದಿ ಸಂಘಟನೆಗಳು ಈ ಮಸೂದೆಯನ್ನು ವಿರೋಧಿಸುವುದು ಸಹಜ. ಸ್ವತಂತ್ರ ಭಾರತದಲ್ಲಿ ಇಷ್ಟರ ತನಕ ನಡೆದ ಕೋಮು ಗಲಭೆಗಳು ಮತ್ತು ಸಹಸ್ರಾರು ಸಂಖ್ಯೆಯ ಸಾವುನೋವುಗಳ ಕಗ್ಗೊಲೆಯಲ್ಲಿ ಒಂದಲ್ಲ ಒಂದು ವಿಧದಲ್ಲಿ ಹಿಂದೂತ್ವವಾದಿ ಸಂಘಟನೆಗಳ ಪಾತ್ರ ಇಲ್ಲದಿಲ್ಲ. ಹಿಂದೂತ್ವವಾದಿ ಸಂಘಟನೆಗಳು ಈ ಮಸೂದೆಯನ್ನು ರಾಕ್ಷಸೀ ಕಾನೂನು ಎಂದು ಕರೆದು ಈ ಮಸೂದೆಯ ವಿರುದ್ಧ ಹೋರಾಡುವ ಸಂಕಲ್ಪವನ್ನು ಆಗಲೇ ತಾಳಿದೆ. ಈ ಮಸೂದೆಯನ್ನು ವಿರೋಧಿಸುವ ದೇಶದಾದ್ಯಂತ 'ಹಿಂದೂ ಜನಜಾಗೃತಿ ಸಮಿತಿ'ಯ ಮೂಲಕ ಚಳವಳಿಯನ್ನು ಸಂಘಟಿಸುವ ಯೋಜನೆಯನ್ನು ಹಾಕಿಕೊಂಡಿದೆ. ಇವರು ಮಸೂದೆಗೆ ವ್ಯಕ್ತಪಡಿಸುವ ಇತರ ಕಾರಣಗಳು ಹೀಗಿವೆ:

1. ಈ ಮಸೂದೆ ಧಾರ್ಮಿಕ ಮತ್ತು ಭಾಷಾ ಅಲ ಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ದಾಳಿಯಿಂದ ರಕ್ಷಿಸುವ ಕೆಲಸ ಮಾಡುತ್ತದೆಯೇ ಹೊರತು ಇನ್ನಾರನ್ನೂ ರಕ್ಷಿಸುವ ಹೊಣೆ ಹೊರುವುದಿಲ್ಲ. ಅಲ್ಪಸಂಖ್ಯಾತರು ಬಹುಸಂಖ್ಯಾತರ ಮೇಲೆ ದಾಳಿ ಮಾಡಿದಲ್ಲಿ ಈ ಮಸೂದೆ ಸಹಾಯಕ್ಕೆ ಬರುವುದಿಲ್ಲ.

(ಈ ಆರೋಪಗಳಿಗೆ ಹುರುಳಿಲ್ಲವೆನ್ನುವುದನ್ನು ನಾವು ಈಗಾಗಲೇ ಚರ್ಚಿಸಿದ್ದೇವೆ. ಅಲ್ಪಸಂಖ್ಯಾತರು ಒಂದುವೇಳೆ ಬಹುಸಂಖ್ಯಾತರ ಮೇಲೆ ದಾಳಿನಡೆಸಿದರೆ ಕ್ರಿಮಿನಲ್ ಕಾನೂನಿನನ್ವಯ ಕ್ರಮಕೈಗೊಳ್ಳುವ ಅವಕಾಶ ಇದ್ದೇಇದೆ.)

2. 'ದ್ವೇಷದ ಪ್ರಚಾರ'ಎಂಬ ಹೆಸರಿನಲ್ಲಿ ವಾಕ್ ಸ್ವಾತಂತ್ರ್ಯವನ್ನು ಈ ಮಸೂದೆಯಲ್ಲಿ ಹತ್ತಿಕ್ಕಲಾಗುತ್ತದೆ. ಹಿಂದೂ ದ್ವೇಷದ ಪ್ರಚಾರವನ್ನು ಈ ಮಸೂದೆ ಹತ್ತಿಕ್ಕುವುದಿಲ್ಲ, ಅಲ್ಪಸಂಖ್ಯಾತರನ್ನು ಟೀಕಿಸುವುದು ಕೂಡ ಅಪರಾಧ ವೆನಿಸಲ್ಪಡುತ್ತದೆ.

(ಮಸೂದೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೂ ಕೂಡ ಈ ಆರೋಪವನ್ನು ಪುಷ್ಟೀಕರಿಸುವ ಯಾವ ಅಂಶವೂ ಕಂಡುಬರುವುದಿಲ್ಲ, ಸಂಘ ಪರಿವಾರದ ನಾಯಕರಾದ ಪ್ರಮೋದ್ ಮುತಾಲಿಕ್, ಅಶೋಕ್ ಸಿಂಘಾಲ್ ಮುಂತಾದವರ ದ್ವೇಷಪೂರಿತ ಭಾಷಣಗಳನ್ನು ಇಲ್ಲಿ ಉಲ್ಲೇಖಿಸಿ ನೋಡಬಹುದು. ಅಲ್ಪಸಂಖ್ಯಾತರ ನಾಯಕರು ಒಂದುವೇಳೆ ಇಂತಹ ವಿಷಪೂರಿತ ಶಬ್ಧಗಳನ್ನು ಉಪಯೋಗಿಸಿ ಸಾರ್ವಜನಿಕವಾಗಿ ಭಾಷಣಗಳನ್ನು ಮಾಡಿದ್ದರೆ ಪರಿಣಾಮ ಏನಾಗುತ್ತಿತ್ತು? ಇಷ್ಟಕ್ಕೂ ಈ ಸಂಘಪರಿವಾರಿಗಳು ಮಾಡಿದ ಎಲ್ಲ ಕ್ರಿಮಿನಲ್ ಆರೋಪಗಳಿಂದ ಕರ್ನಾಟಕದ ಬಿಜೆಪಿ ಸರಕಾರ ಮುಕ್ತಗೊಳಿಸಿದ್ದು, ಕೇಸ್‌ಗಳನ್ನು ವಾಪಾಸುಪಡೆದದ್ದು ಇಲ್ಲಿ ಉಲ್ಲೇಖನೀಯ.)





ಕೋಮುವಾದ ಮತ್ತು ಹಿಂಸೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ರಚನೆಗೊಂಡಿರುವ ಮಸೂದೇಯ ಬಗ್ಗೆ ಫಕೀರ್ ಮೊಹಮ್ಮದ್ ಕಟ್ಪಾಡಿ ಅವರ ಲೇಖನದ ಕೊನೆಯ ಭಾಗ ಇಲ್ಲಿದೆ.

3. ಕೋಮು ಗಲಭೆಗಳಲ್ಲಿನ ಆರೋಪಿಗಳಿಗೆ ಈ ಮಸೂದೆಯಲ್ಲಿ ಜಾಮೀನು ನಿರಾಕರಿಸಲಾಗುತ್ತದೆ(Non-bailable) ಮತ್ತು ವಿಚಾರಣೆಗೆ ಒಳಪಡುವ (cognizable) ಆರೋಪಿಗಳಾಗಿ ಪರಿಗಣಿಸಲ್ಪಡುತ್ತಾರೆ. ದೇಶದ 'ಇಂಡಿಯನ್ ಪೀನಲ್ ಕೋಡ್' ಮುಂತಾದ ಕಾನೂನುಗಳಲ್ಲಿ ಇಂತಹ ನಿಯಮಗಳಿಲ್ಲ.

(ಮಸೂದೆಯ ಈ ನಿಯಮಗಳನ್ನು ವಿಚಾರವಂತರು ಬಹಳ ತೀವ್ರವಾಗಿ ಟೀಕಿಸುತ್ತಿದ್ದಾರೆನ್ನುವುದು, ಬದಲಾವಣೆಯ ಅಗತ್ಯವನ್ನು ಪರಿಗಣಿಸಿರುವುದು ನಿಜ. ಈ ನಿಯಮಗಳನ್ನು ಪೋಟಾ ಮತ್ತು ಟಾಡಾ ಕಾಯಿದೆಗಳಿಂದ ಎರವಲು ಪಡೆಯಲಾಗಿದೆಯೆನ್ನುವುದು ಇದಕ್ಕೆ ಒಂದು ಕಾರಣ. ಹಿಂದುತ್ವವಾದಿಗಳು ಪೋಟಾ ಮತ್ತು ಟಾಡಾ ಕಾಯಿದೆಗಳಲ್ಲಿರುವ ಇಂತಹ ರಾಕ್ಷಸೀ ನಿಯಮಗಳಿಗೆ ಎಂದೂ ವಿರೋಧ ವ್ಯಕ್ತಪಡಿಸಿಲ್ಲವಾದರೂ ಈ ಮಸೂದೆಯಲ್ಲಿ ಮಾತ್ರ ವಿರೋಧಿಸುತ್ತಿರುವುದು ತೀವ್ರವಾದ ಗುಮಾನಿಗೆ ಕಾರಣವಾಗುತ್ತದೆ.)

4. ಈ ಮಸೂದೆಯ ನಿಯಮದಂತೆ ಕಾನೂನಿನ ರಕ್ಷಕರು ಅಲ್ಪಸಂಖ್ಯಾತರ ಗುಲಾಮಗಿರಿ ಮಾಡಬೇಕಾಗುತ್ತದೆ. ಸಾರ್ವಜನಿಕ ಸೇವಕರು, ಜನರ ರಕ್ಷಣೆಯ ಜವಾಬ್ದಾರಿ ಹೊತ್ತ ಆರಕ್ಷಕರು, ಅರೆ ಸೇನಾ ತುಕಡಿಗಳು ಮತ್ತು ಅಧಿಕಾರಿಗಳಿಗೆ ಗಲಭೆಯ ಸಂದರ್ಭದಲ್ಲಿ ಜವಾಬ್ದಾರಿ ಹೆಚ್ಚಿ, ಸತತವಾಗಿ ನಿರಂತರವಾಗಿ ಕೆಲಸ ಮಾಡಬೇಕಾಗುತ್ತದೆ ಮತ್ತು ಮಾನಸಿಕವಾಗಿ ಹೆಚ್ಚು ಒತ್ತಡಕ್ಕೊಳಗಾಗುತ್ತಾರೆ. ಈ ಸಂದರ್ಭದಲ್ಲಿ ಸ್ವಲ್ಪವೇ ತಪ್ಪಾದರೂ ರಾಜ್ಯ ಮತ್ತು ರಾಷ್ಟ್ರೀಯ ಪ್ರಾಧಿಕಾರ ಅವರ ಮೇಲೆ ತೀವ್ರವಾದ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ಕೆಳಗಿನ ನೌಕರರು ಮೇಲಾಧಿಕಾರಿಗಳ ಆಜ್ಞೆಯನ್ನು ಪಾಲಿಸಿದರೂ ಅಪರಾಧದಲ್ಲಿ ಪಾಲುದಾರನಾಗುತ್ತಾನೆ.


(ಕರ್ತವ್ಯಚ್ಯುತಿಯ ಸಂದರ್ಭದಲ್ಲಿ ಈ ಮಸೂದೆಯನ್ನು ಹೊರತುಪಡಿಸಿಯೂ ಇತರ ಕಾನೂನುಗಳಲ್ಲಿ ಶಿಕ್ಷೆ ಇರುವುದಾದರೂ, ಅಧಿಕಾರಿಗಳು ಗಲಭೆಯನ್ನು ನಿಯಂತ್ರಿಸುವಾಗ ಉದ್ದೇಶಪೂರ್ವಕವಾಗಿ ಕರ್ತವ್ಯ ಚ್ಯುತಿಮಾಡಿದ ಬಗ್ಗೆ ಸಾಬೀತಾದಲ್ಲಿ ಈ ಮಸೂದೆ ತಕ್ಕ ಕ್ರಮವನ್ನು ಕೈಗೊಳ್ಳುವುದಕ್ಕೆ ಅವಕಾಶಮಾಡಿಕೊಟ್ಟಿದೆ. ಇಷ್ಟಕ್ಕೂ ಕೋಮು ಗಲಭೆಯ ಇತಿಹಾಸದಲ್ಲಿ ಸಾಕಷ್ಟು ಕಡೆಗಳಲ್ಲಿ ಮುಖ್ಯವಾಗಿ ಗುಜರಾತ್, ಕರ್ನಾಟಕ ರಾಜ್ಯಗಳಲ್ಲಿ ಕಾನೂನಿನ ಪಾಲಕರ ಸಹಕಾರದಿಂದ ಹಿಂದುತ್ವವಾದಿಗಳು ನಡೆಸಿದ ಹಿಂಸಾಚಾರವನ್ನು ಇಲ್ಲಿ ಉದಾಹರಣೆಯಾಗಿಟ್ಟುಕೊಂಡು ನೋಡಿದರೆ ಈ ಅಧಿಕಾರಿಗಳ ಬಗ್ಗೆ ಮೊಸಳೆಕಣ್ಣೀರು ಹಾಕುವ ಕಾರಣ ಸ್ಪಷ್ಟವಾಗುತ್ತದೆ.)

ಸಾರಾಂಶದಲ್ಲಿ ಹೇಳುವುದಿದ್ದರೆ 'ಯಾವುದೇ ರಾಜ್ಯದಲ್ಲಿ ಪ್ರಬಲವಾಗಿರದ ಕೋಮಿನ ಮೇಲೆ ಅವರ ಅನನ್ಯತೆಯನ್ನು ಗುರಿಯಾಗಿಟ್ಟುಕೊಂಡು ನಡೆಯುವ ದಾಳಿ, ಹಿಂಸೆ ನಡೆದಾಗ ಅಲ್ಲಿನ ರಾಜ್ಯದ ಕಾನೂನು ಕಾಪಾಡುವ ಸಂಸ್ಥೆಗಳಿಂದ, ಆಡಳಿತ ಯಂತ್ರದಿಂದ ಪಕ್ಷಪಾತ ನಡೆದಿದೆ ಎಂಬ ಬಲವಾದ ಸಾಕ್ಷಿ ಇದ್ದಲ್ಲಿ ಈ ಮಸೂದೆಯು ಯಥಾರ್ಥ ಪರಿಸ್ಥಿತಿಯ ಮೇಲೆ ನಿಂತು ಕ್ರಮಕೈಗೊಳ್ಳಲು ಅವಕಾಶವನ್ನು ಕಲ್ಪಿಸಿಕೊಡುತ್ತದೆ' ಎನ್ನುವ ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯೆಯಾಗಿರುವ ಫಾರಾ ನಖ್ವಿಯವರ ಮಾತು ಉಲ್ಲೇಖನೀಯ. ಈ ಮಸೂದೆಯ ವಿರೋಧಿಗಳು ಶಬ್ಧಗಳ ಸರ್ಕಸ್ಸಿನಲ್ಲಿ ಹೆಚ್ಚು ತಲ್ಲೀನರಾಗಿದ್ದಾರೆಯೇ ಹೊರತು ಯಥಾರ್ಥ ಪರಿಸ್ಥಿತಿಯ ಮೇಲಲ್ಲವೆನ್ನುವುದು ತುಂಬ ವಿಷಾಧಕರ ಸಂಗತಿಯಾಗಿದೆ. ಈ ಮಸೂದೆಯೂ ಕೂಡ ಕೆಲವೊಂದು ನ್ಯೂನತೆಗಳಿಂದ ಹೊರತಾಗಿಲ್ಲವಾದರೂ, ಭಾರತದಲ್ಲಿ ಹಿಂದೆ ನಡೆದ ಕೋಮುಗಲಭೆಗಳು ಜನಮಾನಸದ ಮೇಲೆ ಮಾಡಿದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಗಂಭೀರ ಪರಿಣಾಮಗಳನ್ನು ನೋಡುವಾಗ ಹಿಂಸೆಯನ್ನು ನಿಗ್ರಹಿಸಲು ಒಂದು ಬಲಿಷ್ಠ ಕಾನೂನಿನ ಅಗತ್ಯವಂತೂ ತೀವ್ರವಾಗಿ ಕಂಡುಬರುತ್ತಿದೆ.

• ಫಕೀರ್ ಮುಹಮ್ಮದ್ ಕಟ್ಪಾಡಿ

ಆಧ್ಯಾತ್ಮದ ಮಾರುಕಟ್ಟೆಯಲ್ಲಿ ಬುದ್ಧಧ್ಯಾನ

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

'ಬುದ್ಧ ಬೆಳದಿಂಗಳು' ಕವಿ ಮೂಡ್ನಾಕೂಡು ಚಿನ್ನಸ್ವಾಮಿಯವರ ಆರನೇ ಕವನ ಸಂಕಲನ. ಮತ್ತೆ ಬರುವ ಮುನ್ನ, ನಾನೊಂದು ಮರವಾಗಿದ್ದರೆ, ಚಪ್ಪಲಿ ಮತ್ತು ನಾನು, ಚಂದಿರನ ನುಂಗಲಾರದ ಹುಣ್ಣು, ಕನಕಾಂಬರಿ ಈ ಹಿಂದೆ ಪ್ರಕಟಗೊಂಡ ಮೂಡ್ನಾಕೂಡು ಅವರ ಪ್ರಮುಖ ಕವಿತಾ ಸಂಕಲನಗಳು.



43 ಪದ್ಯಗಳಿರುವ ಈ ಸಂಕಲನದ 'ಮೌನ್ಯಾತು'ವಿನಲ್ಲಿ 'ರಕ್ತಪಾತವಷ್ಟೇ ಅಲ್ಲ, ಹಿಂಸೆಗೆ ಹಲವು ಮುಖಗಳಿವೆ. ಸೂಕ್ಷ್ಮವಾಗಿ ಹಿಂಸೆಯನ್ನು ಪ್ರತಿರೂಪಿಸುವ ನಮ್ಮ ಸಮಾಜದ ಕೆಲ ನಡವಳಿಕೆಯನ್ನು ಕಂಡು ನೊಂದವರಲ್ಲಿ ನಾನೂ ಒಬ್ಬ. ಆ ಕೆಲವು ಸಂಕಥನಗಳು ಇಲ್ಲಿ ಕಾವ್ಯವಾಗಿರುವುದನ್ನು ಓದುಗರು ಮನಗಾಣಬಹುದು' ಎಂದು ಕವಿ ಇಲ್ಲಿನ ಪದ್ಯಗಳು ದಲಿತ ಸಂವೇದನೆಯಿಂದ ಕೂಡಿವೆ ಎಂಬ ಪರೋಕ್ಷ ಸೂಚನೆಗಳನ್ನು ಓದುಗರಿಗೆ ಆರಂಭದಲ್ಲೇ ನೀಡುತ್ತಾರೆ. ಅದಕ್ಕೆ ಪೂರಕವೆನಿಸುವಂತೆ ಬರಿಗೈ, ಬಹುಜನರ ಹಾಡು, ಬೂದಿ ಮಾತ್ರ ಬಲ್ಲದು ಬೇಯುವ ಬೇಗೆಯನ್ನು, ಆತ್ಮಸಾಕ್ಷಿಯ ಕರೆಗೆ, ಮಾಮಾ ಪ್ರಸಾಧ, ವಿವೇಕವೆಂಬ ಆಕಳನ್ನು ಗೂಟಕ್ಕೆ ಕಟ್ಟಿ ಎಂಬಿತ್ಯಾದಿ ಪದ್ಯಗಳಿವೆ. ಇದಲ್ಲದೆ 'ಧರ್ಮಾತೀತವಾದ ಆಧ್ಯಾತ್ಮಿಕ ನೆಲೆಯನ್ನು ಕಂಡುಕೊಳ್ಳುವುದು ಇಂದಿನ ಸಮಾಜಕ್ಕೆ ಮುಖ್ಯವಾಗಿದೆ' ಎಂಬ ತರ್ಕವನ್ನು ಕವಿ ಓದುಗರ ಮುಂದಿಡುತ್ತಾರೆ. ಇವತ್ತು ಧರ್ಮದ ಆಚೆಗಿನ ಆಧ್ಯಾತ್ಮ ಎನ್ನುವುದು ಕಾರ್ಪೋರೆಟ್ ಸ್ವಾಮೀಜಿಗಳ ಮುಷ್ಟಿಯಲ್ಲಿ ಮಾರ್ಕೆಟಿಂಗ್ ಲೇಬಲ್ ಅಂಟಿಸಿಕೊಂಡಿರುವಾಗ ಕವಿ ಹೇಳುವ ಆ ಆಧ್ಯಾತ್ಮಿಕ ನೆಲೆ ಯಾವ ಬಗೆಯದು ಅದನ್ನು ಹುಡುಕುವುದಾದರೂ ಹೇಗೆ? ಇಂಥ ಆಧ್ಯಾತ್ಮದಿಂದ ಶೋಷಿತರ ವಿಮೋಚನೆ ಸಾಧ್ಯವೇ? ಕಣ್ಣೆದುರು ಪ್ರಶ್ನೆಗಳಿವೆ.

ಜೀತಗಾರರಾಗಿದ್ದ ನನ್ನ ಪೂರ್ವಿಕರನ್ನು ಕೊಂದವರು ಈಗ ನನ್ನನ್ನು ಕೊಲ್ಲಲು ಬಂದಿದ್ದಾರೆಂದು ಹೇಳುವಾಗ ಕವಿ ತಮ್ಮ ಅನಾದಿಕಾಲದ ಸಿಟ್ಟನ್ನು ಅದುಮಿಟ್ಟುಕೊಂಡು ಈ ಕಾಲದ ಆಧುನಿಕ ಮನುಷ್ಯನ ರೂಪತೊಟ್ಟು ಅವರೆದುರು ನಿಲ್ಲುತ್ತಾರೆ:

ಈಗ ನನ್ನನ್ನವರು ಸುಡಲಾರರು
ನನ್ನ ಹಿಡಿಯಲು ಬಂದು ತಾವೇ ಸುಟ್ಟುಕೊಳ್ಳುವರು
ಯಾಕೆಂದರೆ ನಾನು
ಅಜ್ಞಾನವನ್ನು ಸುಡುವ ಅಕ್ಷರವಾಗಿದ್ದೇನೆ.
ಸಾವಿಲ್ಲದ ಸತ್ಯಕ್ಕೆ ಸಾಕ್ಷಿಯಾಗಿದ್ದೇನೆ (ಬೂದಿ ಮಾತ್ರ ಬಲ್ಲದು ಬೇಯುವ ಬೇಗೆಯನ್ನು)

ದೇವಸ್ಥಾನಕ್ಕೆ ಹೋದಾಗ
ನಾನು ಚಪ್ಪಲಿಯನ್ನು ಹೊರಗೆ ಬಿಡುವುದಿಲ್ಲ
ನಾನೇ ಹೊರಗಿರುತ್ತೇನೆ (ಚಪ್ಪಲಿ ಮತ್ತು ನಾನು)

ಎಂಬ ಅಪ್ಪಟ ಮನುಷ್ಯ ಸಂವೇದನೆಯ ಸಾಲುಗಳನ್ನು ಕಟ್ಟಿಕೊಟ್ಟಿದ್ದ ಕವಿ ಈ ಸಂಕಲನದುದ್ದಕ್ಕೂ ಆದಿಮ ಸೊಲ್ಲುಗಳನ್ನು ಸರಳ ರೂಪಕಗಳಲ್ಲಿ ಹಿಡಿದಿಟ್ಟಿದ್ದಾರೆ. ಈ ಸಂಕಲನದ ಅನೇಕ ಪದ್ಯಗಳಲ್ಲಿ ಬುದ್ಧ ಧ್ಯಾನ ಮತ್ತು ಜೀವಪರ ನಿಲ್ಲುವ ಹೊಸ ಪ್ರತಿಮೆಗಳು ಹೇರಳವಾಗಿ ಕಾಣಿಸಿಕೊಂಡಿವೆ. ಇದನ್ನು ಬುದ್ಧನ ಜ್ಞಾನೋದಯದ ತಾತ್ವಿಕತೆಯನ್ನು ಹೇಳುವ 'ಬುದ್ಧ ಬೆಳದಿಂಗಳು' ಪದ್ಯದಲ್ಲಿ ಕಾಣಬಹುದು:

ಒಮ್ಮೆ
ಬೆಳದಿಂಗಳ ವೃಕ್ಷವೊಂದನ್ನು ಕಂಡೆ
ಮಾರ್ಗಮಧ್ಯೆ ಮಾಯಾ
ಬುದ್ಧನನ್ನು ಹೆರುವಾಗ ನಾವು ನೆರಳಾದೆವು
ಎಂದವು ಎಲೆಗಳು
ಬುದ್ಧ ಅರಿವನ್ನು ಪಡೆವಾಗ ನಾವು ಸಾಕ್ಷಿಯಾದೆವು
ಎಂದವು ಕೊಂಬೆಗಳು
ಬುದ್ಧ ಅರಿವಿನ ಬೆಳಕನ್ನು ತನ್ನ ಶಿಷ್ಯರಿಗೆ
ಹಂಚಿದ್ದು ನನ್ನ ತೊಡೆಯ ಮೇಲೆ ಕೂತಲ್ಲವೆ
ಎಂದಿತು ಬೇರು

'ನಮ್ಮ ಮನಸ್ಸನ್ನು ಅರಿವಿನ ಸ್ಫೋಟದಲ್ಲಿ ಎಚ್ಚರಿಸಿದ ಸಿದ್ಧಲಿಂಗಯ್ಯನವರ ಕಾವ್ಯ ಚಿನ್ನಸ್ವಾಮಿಯವರ ವಾಚ್ಯಾರ್ಥಕ್ಕೆ ಸಲ್ಲುತ್ತಲೇ ಧ್ವನ್ಯರ್ಥದಲ್ಲೂ ಬೆಳೆಯುವಷ್ಟು ಹಿಗ್ಗಿದೆ ಎಂಬುದನ್ನು ಗಮನಿಸಬೇಕು. ಕನ್ನಡದಲ್ಲಿ ಇದೊಂದು ಸಜೀವ ಪರಂಪರೆ. ವಚನಕಾರರು ಇವರ ಹಿಂದಿದ್ದಾರೆ, ಅಂಬೇಡ್ಕರರನ್ನು ಈಚೆಗೆ ಬುದ್ಧನನ್ನು ಒಳಗೊಳ್ಳುವಂತೆ' ಎಂಬ ಒಳನೋಟವನ್ನು ಯು.ಆರ್.ಅನಂತಮೂರ್ತಿಯವರು 'ಬುದ್ಧ ಬೆಳದಿಂಗಳು'ವಿಗೆ ನೀಡಿದ್ದಾರೆ.

ಬುದ್ಧ ಬೆಳದಿಂಗಳು
ಮೂಡ್ನಾಕೂಡು ಚಿನ್ನಸ್ವಾಮಿ
ಪ್ರಕಾಶಕರು: ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ-577 417
ಪುಟಗಳು: 88, ಬೆಲೆ: ರೂ.65,
ಪ್ರಕಟಣೆ: 2010

ಲಂಕೇಶರ ನಟನೆ ಮತ್ತು ಕೈಕೊಟ್ಟ ಕಾರ್

ಎಂಟು ದಿನ ಆಸ್ಪತ್ರೆಯಲ್ಲಿದ್ದು ಮನೆಗೆ ಬಂದೆ. ನಮ್ಮ ಮೂವರು ಮಕ್ಕಳು ಶಿವಮೊಗ್ಗೆಯ ಮೆಗ್ಗನ್ ಆಸ್ಪತ್ರೆಯಲ್ಲೇ ಹುಟ್ಟಿದ್ದು. ಗೌರಿ ಹುಟ್ಟಿದಾಗ ಒಟ್ಟು 70 ರೂಪಾಯಿ ಖರ್ಚಾಗಿದ್ದರೆ, ಬೇಬಿ ಹುಟ್ಟಿದಾಗ 40 ರೂಪಾಯಿ ಖರ್ಚಾಗಿತ್ತು. ಆದರೆ ಮೂರನೇ ಹೆರಿಗೆ ಆದ ನಂತರ ನಾನು ಆಪರೇಶನ್ ಮಾಡಿಸಿಕೊಂಡಿದ್ದರಿಂದ ಆಸ್ಪತ್ರೆಯವರೇ ನನಗೆ 240 ರೂಪಾಯಿ ಕೊಟ್ಟಿದ್ದರು. ಅಂದರೆ ನಮ್ಮ ಮೂವರ ಮಕ್ಕಳ ಹೆರಿಗೆಗೆ ನಾನು ಆಸ್ಪತ್ರೆಗೆ ಒಟ್ಟು 110 ರೂಪಾಯಿ ಕೊಟ್ಟಿದ್ದರೆ ಅವರೇ ನನಗೆ 130 ರೂಪಾಯಿ ಹೆಚ್ಚಿಗೆ ಕೊಟ್ಟು ಕಳುಹಿಸಿದ್ದರು.

ನಮ್ಮ ಮಗನಿಗೆ ಏನು ಹೆಸರಿಡುವುದು ಅಂತ ಇಬ್ಬರೂ ಯೋಚಿಸಿದೆವು. ಲಂಕೇಶರು "ಸಮರ್‌ಜಿತ್ ಅಥವಾ ಇಂದ್ರಜಿತ್ ಎರಡರಲ್ಲಿ ಯಾವುದಿರಲಿ?" ಎಂದರು. ಲಂಕೇಶರ ಮಗನ ಹೆಸರು ಇಂದ್ರಜಿತ್ ಇರಲಿ ಎಂದು ತೀರ್ಮಾನಿಸಿದೆವು.

ನಮ್ಮ ಎರಗನಾಳಿನ ಚಿಕ್ಕಪ್ಪ ಸಿದ್ದಪ್ಪನವರು "ನಿಮ್ಮ ಮಗ ಮಹಾಲಯ ಅಮವಾಸ್ಯೆ ದಿನ ಹುಟ್ಟಿದ್ದಾನೆ. ಅವನಿಂದ ಆತನ ತಂದೆ ಜೀವಕ್ಕೆ ಅಪಾಯ ಇದೆ. ಪೂಜೆ ಮಾಡಿಸಬೇಕು" ಎಂದರು. ಲಂಕೇಶರಿಗೆ ಪೂಜೆಗೀಜೆ ಏನೂ ಬೇಕಿರಲಿಲ್ಲ, ನನಗೂ ಅಷ್ಟೇ, ಪೂಜೆ ಅಂದರೆ ಬೆಳಗ್ಗೆ ಮನೆಯಲ್ಲಿ ಒಮ್ಮೆ ದೇವರಿಗೆ ದೀಪ ಹಚ್ಚಿ ಕೈಮುಗಿದರೆ ಮುಗಿಯಿತು. ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುವುದು, ಮನೆಯಲ್ಲಿ ವಿಶೇಷ ಪೂಜೆ ಅವೆಲ್ಲವನ್ನು ನಾನು ಮಾಡುತ್ತಿರಲಿಲ್ಲ, ಆದರೆ ನನ್ನ ಚಿಕ್ಕಪ್ಪ ಹಟ ಹಿಡಿದು ಮನೆಯಲ್ಲೇ ಲಂಕೇಶರಿಂದ ಪೂಜೆ ಮಾಡಿಸಿದರು.

ನಮ್ಮ ಮಗನಿಗೆ ಒಂದೂವರೆ ತಿಂಗಳಾಗಿದ್ದಾಗ ಬೆಂಗಳೂರಿಗೆ ವಾಪಸ್ ಬಂದೆ. ಹಿಂದೊಮ್ಮೆ ನನ್ನ ಕ್ಲಾಸ್‌ಮೇಟ್ ಆಗಿದ್ದವಳು ನನಗೆ ಆಕಸ್ಮಿಕವಾಗಿ ಒಂದು ದಿನ ಸಿಕ್ಕಾಗ "ಈಗ ನೀನು ಏನು ಮಾಡುತ್ತಿದ್ದೀಯಾ? ಯಾವ ಡಿಗ್ರಿ ಮಾಡಿದೆ?" ಅಂತ ಕೇಳಿದಳು. ಆಕೆ ಸ್ಕೂಲ್‌ನಲ್ಲಿ ನನಗಿಂತ ಕಮ್ಮಿ ಮಾರ್ಕ್ಸ್ ತೆಗೆಯುತ್ತಿದ್ದಳು. ಆದರೆ ಈಗ ಎಂಎಸ್ಸಿ ಮಾಡಿದ್ದಳು. "ನಾನು ಪಿಎಚ್‌ಡಿ ಮಾಡಿದ್ದೇನೆ" ಎಂದೆ. "ಹೌದ? ಯಾವ ಸಬ್ಜೆಕ್ಟ್ ತೆಗೆದುಕೊಂಡಿದ್ದೆ?" ಎಂದಳು.


"ನನ್ನ ಮೊದಲ ಮಗಳು ಡಿಗ್ರಿ, ಎರಡನೇ ಮಗಳು ಎರಡನೇ ಡಿಗ್ರಿ, ಮಗ ಪಿಎಚ್‌ಡಿ" ಎಂದೆ. ನಾವಿಬ್ಬರೂ ಜೋರಾಗಿ ನಕ್ಕೆವು.

ನನ್ನ ಅಕ್ಕನ ಮನೆ ದೊಡ್ಡದಾಗಿದ್ದರಿಂದ ಅಲ್ಲೇ ನಮ್ಮ ಮಗನ ನಾಮಕರಣ ಮಾಡಲು ತೀರ್ಮಾನಿಸಿದೆವು. ಅಜಿತು ನಾಮಕರಣಕ್ಕೆ ನಮ್ಮ ಇತರೆ ಸ್ನೇಹಿತರಲ್ಲದೆ ಲಂಕೇಶರ ಮೇಷ್ಟ್ರಾಗಿದ್ದ ಜಿ.ಎಸ್. ಶಿವರುದ್ರಪ್ಪನವರು ಮತ್ತು ಅವರ ಮಗಳು ಜಯಂತಿ ಬಂದಿದ್ದರು. ಜಯಂತಿ ತುಂಬಾ ಒಳ್ಳೆಯ ಹುಡುಗಿ. ಆನಂತರವೂ ಆಕೆ ಆಗಾಗ ನಮ್ಮ ಮನೆಗೆ ಬರುತ್ತಿದ್ದಳು. ನನ್ನ ಮಗ ನಂತೂ ಯಾವಾಗಲೂ ಜಯಂತಿಯ ಕೆನ್ನೆಯನ್ನು ಹಿಡಿದುಕೊಂಡು ಕೂತಿರುತ್ತಿದ್ದ, ಜಯಂತಿ ಕೂಡ ತನ್ನ ಕೆನ್ನೆಯನ್ನು ಆತನಿಗೆ ಕೊಟ್ಟು ಕೂತಿರುತ್ತಿದ್ದಳು.

ನನ್ನ ಮಗನ ನಾಮಕರಣವೇ ನನ್ನ ಅಕ್ಕನ ಮನೆಯಲ್ಲಿ ನಡೆದ ಕೊನೆಯ ಫಂಕ್ಷನ್. ಯಾಕೆಂದರೆ ಆನಂತರ ನನ್ನ ಭಾವ ಮತ್ತು ಅವರ ತಮ್ಮ ಇಬ್ಬರೂ ತಮ್ಮ ಪಿತ್ರಾರ್ಜಿತ ಮನೆಯನ್ನು ಮಾರಿ ಬೇರೆಬೇರೆ ಆದರು.

****

ದಿನಗಳು ಕಳೆದಂತೆ ಲಂಕೇಶರು ನಾಟಕ, ಕತೆ, ಕವನ ಇತ್ಯಾದಿಗಳಲ್ಲಿ ಮುಳುಗಿರುತ್ತಿದ್ದರು. ಅವರ ಗೆಳೆಯರ ವಲಯ ದಿನೇದಿನೇ ದೊಡ್ಡದಾಗುತ್ತಿತ್ತು, ಇದ್ದಕ್ಕಿದ್ದಂತೆ ಗೆಳೆಯರೊಂದಿಗೆ ಎಲ್ಲಿಗೋ ಹೊರಟು ಹೋಗುತ್ತಿದ್ದರು. ಅವರಿಗಾಗಲೇ ಯು.ಆರ್. ಅನಂತಮೂರ್ತಿ, ಪಟ್ಟಾಭಿರಾಮ ರೆಡ್ಡಿ, ಗಿರೀಶ್ ಕಾರ್ನಾಡ್ ತರಹದವರ ಪರಿಚಯ ಇತ್ತು, ಆಗ ಇವರೆಲ್ಲ




ಸೇರಿ ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯನ್ನು ಸಿನಿಮಾ ಮಾಡಲು ಹೊರಟರು. ಗಿರೀಶ್ ಕಾರ್ನಾಡ್ ಮತ್ತು ಪಟ್ಟಾಭಿರಾಮ ರೆಡ್ಡಿ ಅವರ ಪತ್ನಿ ಸ್ನೇಹಲತಾ ರೆಡ್ಡಿ ಮುಖ್ಯ ಪಾತ್ರಗಳಲ್ಲಿದ್ದರೆ ಲಂಕೇಶರದ್ದು ನಾರಾಯಣಪ್ಪನ ಪಾತ್ರ. ಒಂದರ್ಥದಲ್ಲಿ ನೆಗೆಟಿವ್ ರೋಲ್. ಸಿನಿಮಾ ಬಿಡುಗಡೆ ಆದಾಗ ಲಂಕೇಶರು ನನಗೆ ಮತ್ತು ನಮ್ಮ ಮಕ್ಕಳಿಗೆ 'ಸಂಸ್ಕಾರ' ತೋರಿಸಲು ಮಿನರ್ವ ಥಿಯೇಟರ್‌ಗೆ ಕರೆದುಕೊಂಡು ಹೋದರು.

ಆ ಸಿನಿಮಾದಲ್ಲಿ ಲಂಕೇಶರನ್ನು ಮೊದಲು ತೋರಿಸುವುದೇ ಶವವಾಗಿ. ಆ ದೃಶ್ಯದಲ್ಲಿ ಅವರು ಕಣ್ಣು ತೆಗೆದುಕೊಂಡು ಮಲಗಿರುತ್ತಾರೆ. ಆ ಸೀನ್ ಸರಿಯಾಗಿಯೇ ಇತ್ತು, ಆದರೆ ಆನಂತರ ಬರುವ ಫ್ಲಾಶ್‌ಬ್ಯಾಕ್ ದೃಶ್ಯಗಳಲ್ಲಿ ಇವರು ಮಾತನಾಡುವಾಗ ಮೈ ಬಿಗಿ ಹಿಡಿದು ನಟಿಸಿದ ರೀತಿ ನನ್ನವರ ಬಗ್ಗೆ ಒಂದು ಅಂಶವನ್ನಂತೂ ಮನದಟ್ಟು ಮಾಡಿತು. ಅದೇನೆಂದರೆ ನನ್ನವರು ಬಹಳ ಒಳ್ಳೆಯ ಬರಹಗಾರರಾದರೂ ಅವರು ಕೆಟ್ಟ ನಟ ಎಂಬುದು!

****

ಗಂಡ, ಹೆಂಡತಿ ಮತ್ತು ಮೂವರು ಮಕ್ಕಳು ಓಡಾಡಲು ಸ್ಕೂಟರ್ ಸಾಕಾಗುವುದಿಲ್ಲವೆಂದು ಒಂದು ದಿನ "ಒಂದು ಕಾರ್ ತೆಗೆದುಕೊಳ್ಳೋಣ" ಅಂದೆ. ಆದರೆ ನಮ್ಮದು ಖಾಲಿ ಕೈ. ಆಗ ಸ್ಕೂಟರ್ ಮಾರಿ ಕಾರು ತೆಗೆದುಕೊಳ್ಳುವ ಯೋಚನೆ



• ಇಂದಿರಾ ಲಂಕೇಶ್

ಮಾಡಿ ಸೆಕೆಂಡ್‌ಹ್ಯಾಂಡ್ ಕಾರ್‌ಗೆ ತಾಲಶ್ ನಡೆಸಿದೆವು. ಈ ಹಿಂದೆ ನಮಗೆ ಸ್ಕೂಟರ್ ಕೊಡಿಸಿದ್ದ ನನ್ನ ಚಿಕ್ಕ ಭಾವ ದಕ್ಷಿಣಾಮೂರ್ತಿ ಅವರನ್ನೇ ಎಲ್ಲಿಂದಾದರೂ ನಮಗೆ ಒಂದು ಕಾರು ಕೊಡಿಸಿ ಎಂದು ಕೇಳಿದೆವು.

ಸ್ಕೂಟರ್ ಮಾರಿದರೂ ಕಾರ್‌ಗೆ ಬೇಕಾದಷ್ಟು ಹಣವಿರಲಿಲ್ಲ, ಯಥಾಪ್ರಕಾರ ಮತ್ತೆ ಮಾಡಿಸಿಕೊಂಡಿದ್ದ ಒಡವೆಗಳನ್ನು ಬ್ಯಾಂಕ್‌ನಲ್ಲಿ ಅಡ ಇಟ್ಟೆವು. ಈ ಸಾರಿ ಒಡವೆಯನ್ನು ಮಾರಲಿಲ್ಲ, ಬ್ಯಾಂಕ್‌ನಿಂದ ಸಾಲ ಪಡೆದು ಒಂದು ಹಳೇ ಆಸ್ಟಿನ್ ಕಾರ್ ಖರೀದಿಸಿದೆವು. ಆ ಕಾರ್ ಚಾರ್ಲಿ ಚಾಪ್ಲಿನ್ ಸಿನಿಮಾಗಳಲ್ಲಿ ಕಂಡುಬರುವ ಕಾರ್ ನಂತಿತ್ತು.

ಲಂಕೇಶರ ಕಾರ್ ಡ್ರೈವಿಂಗ್ ತರಬೇತಿ ಈ ಕಾರ್‌ನಲ್ಲೇ ಪ್ರಾರಂಭವಾಯಿತು. ಡ್ರೈವ್ ಮಾಡುವಾಗ ಅವರು ಎಷ್ಟು ಟೆನ್ಸ್ ಆಗುತ್ತಿದ್ದರೆಂದರೆ ನನಗೆ "ನೀನು ಪಕ್ಕ ಕೂರಬೇಡ. ನನಗೆ ಟೆನ್ಷನ್ ಆಗುತ್ತೆ, ಮಕ್ಕಳೊಂದಿಗೆ ಹಿಂದೆ ಕುಳಿತುಕೊ" ಎನ್ನುತ್ತಿದ್ದರು. ಆದರೆ ನನಗೆ ನನ್ನ ಗಂಡನ ಪಕ್ಕ ಕಾರ್‌ನಲ್ಲಿ ಕೂರುವ ಆಸೆ. ಆದ್ದರಿಂದ ಮುಂದಿನ ಸೀಟಿನಲ್ಲಿ ಕೂರುತ್ತಿದ್ದೆ. ಆಗ ಲಂಕೇಶರು "ಆ ಕಡೆ ಸರಿದು ಕೂರು. ನೀನು ಹತ್ತಿರ ಕೂತರೆ ನನಗೆ ಗೇರು ಚೇಂಜ್ ಮಾಡುವುದಕ್ಕೆ ಆಗೋಲ್ಲ" ಎನ್ನುತ್ತಿದ್ದರು. ನಾನು ಆಗ ಕಡ್ಡಿ ಇದ್ದಂತೆ ಇದ್ದೆ, ಇನ್ನೆಷ್ಟು ಜಾಗ ಬೇಕು ನನಗೆ? ಕೊನೆಗೆ ಇವರ ತಂಟೆನೇ ಬೇಡ ಎಂದು ಮಕ್ಕಳೊಂದಿಗೆ ಹಿಂದಿನ ಸೀಟಿನಲ್ಲಿ ಕುಳಿತುಕೊಳ್ಳಲಾರಂಭಿಸಿದೆ.

ಆ ಕಾರ್ ಸೆಕೆಂಡ್ ಹ್ಯಾಂಡ್ ಆಗಿದ್ದರಿಂದ ತುಂಬಾ ತೊಂದರೆ ಕೊಡುತ್ತಿತ್ತು, ಬೆಳಗ್ಗೆ ಅದು ಶುರುವಾಗದಿದ್ದರೆ ಅದರ ಮುಂದಕ್ಕೆ ಒಂದು ಕಬ್ಬಿಣದ ಹ್ಯಾಂಡಲ್ ಹಾಕಿ ಬಹಳಹೊತ್ತು ತಿರುಗಿಸಿದ ನಂತರ ಸ್ಟಾರ್ಟ್ ಆಗುತ್ತಿತ್ತು.

ಒಮ್ಮೆ ಎಲ್ಲರೂ ಕಂಟೋನ್ಮೆಂಟ್‌ಗೆ ಕಾರಿನಲ್ಲಿ ಹೊರಟೆವು. ಆದರೆ ಕಬ್ಬನ್‌ಪಾರ್ಕ್ ಹತ್ತಿರ ವಿಕ್ಟೋರಿಯಾ ಪ್ರತಿಮೆ ಹತ್ತಿರ ಕಾರ್ ಹಠ ಹಿಡಿದಂತೆ ನಿಂತೇಬಿಟ್ಟಿತು. ಏನು ಮಾಡಿದರೂ ಕಾರ್ ಕದಲುವ ಸೂಚನೆ ತೋರಿಸಲಿಲ್ಲ, ಆಗ ಕಾರ್‌ಅನ್ನು ರೋಡ್ ಮಧ್ಯದಲ್ಲೇ ನಿಲ್ಲಿಸಿ ಮನೆಗೆ ಬಂದೆವು. ಲಂಕೇಶರು ವರ್ಕ್‌ಶಾಪ್‌ಗೆ ಫೋನ್ ಮಾಡಿ ಹೇಳಿದ ನಂತರ ಅವರು ಕಾರ್ ಅನ್ನು ಅಲ್ಲಿಂದ ತೆಗೆದುಕೊಂಡು ಹೋದರು.

ಕಾರ್‌ಗೆ ಮೇಲಿಂದ ಮೇಲೆ ರಿಪೇರಿ ಮಾಡಿಸಬೇಕಿತ್ತು. ನಮ್ಮ ದುಡ್ಡೆಲ್ಲ ಕಾರ್ ರಿಪೇರಿಗೆ ಹೋಗುತ್ತಿತ್ತು, ನನ್ನ ಗೆಳತಿ ಸೀತಾಳ ಮದುವೆ ಫಿಕ್ಸ್ ಆಗಿತ್ತು, ಆಕೆಯ ಮದುವೆಗೆ ನಮ್ಮ ಸ್ನೇಹಿತರನ್ನು ಕರೆಯಲು ನಮ್ಮ ಕಾರಿನಲ್ಲೇ ಹೋಗೋಣ ಎಂದು ನಿರ್ಧರಿಸಿದೆವು. ಚಿಕ್ಕ ಭಾವ ದಕ್ಷಿಣಾಮೂರ್ತಿ, ಶಾಂತ, ಸೀತಾ ಮತ್ತು ನಾನು ಹೊರಟೆವು. ಚಿಕ್ಕ ಭಾವ ಡ್ರೈವ್ ಮಾಡುತ್ತಿದ್ದರು. ನಾನು ನನ್ನ ಮಗನನ್ನು ತೊಡೆಯ ಮೇಲೆ ಕೂರಿಸಿಕೊಂಡು ಮುಂದಿನ ಸೀಟಿನಲ್ಲಿ ಕೂತಿದ್ದೆ. ಒಂದು ಸರ್ಕಲ್ ಸುತ್ತ ಕಾರ್ ಟರ್ನ್ ಮಾಡಿದಾಗ ನಾನು ಮತ್ತು ನನ್ನ ಮಗ ಕಾರಿನಿಂದ ರಸ್ತೆಗೆ ಬಿದ್ದೆವು. ಏನಾಗಿತ್ತೆಂದರೆ ಕಾರಿನ ಡೋರ್‌ಲಾಕ್ ಕಿತ್ತು ಹೋಗಿತ್ತು.

ಇನ್ನೊಮ್ಮೆ ಲಂಕೇಶರು ಕಾರ್‌ಅನ್ನು ಡ್ರೈವ್ ಮಾಡಿಕೊಂಡು ಹೋಗುತ್ತಿದ್ದಾಗ ಯಾರೋ ಚಿಕ್ಕ ಹುಡುಗ ಅಡ್ಡ ಬಂದು ಅವನಿಗೆ ಕಾರು ಡಿಕ್ಕಿ ಹೊಡೆದಿತ್ತು, ಆಗ ಲಂಕೇಶರು ಕಾರ್‌ಅನ್ನು ಅಲ್ಲೇ ಬಿಟ್ಟು ಮನೆಗೆ ಬಂದಿದ್ದರು. ಸದ್ಯ ಆ ಹುಡುಗನಿಗೆ ಏನೂ ಆಗಿರಲಿಲ್ಲ, ಇವರೇ ಹೆದರಿ ಓಡಿ ಬಂದಿದ್ದರು.

ಕೊನೆಗೆ ಈ ಕಾರಿನ ಸಹವಾಸವೇ ಬೇಡ ಎಂದು ಅದನ್ನು ಮಾರಲು ನಿರ್ಧರಿಸಿದೆವು. ಆದರೆ ಬಹಳ ದಿನಗಳಾದರೂ ಯಾರೂ ಅದನ್ನು ಖರೀದಿಸಲು ಮುಂದೆ ಬರಲಿಲ್ಲ, ಕೊನೆಗೂ ಅದನ್ನು ಮಾರಿದಾಗ ನಾವು ಅದರ ರಿಪೇರಿಗೆಂದು ಮಾಡಿದ್ದ ವೆಚ್ಚದಷ್ಟು ಹಣ ಕೂಡ ನಮ್ಮ ಕೈಸೇರಲಿಲ್ಲ, ಬ್ಯಾಂಕ್‌ನಿಂದ ಪಡೆದಿದ್ದ ಸಾಲ ಹಾಗೆಯೇ ಉಳಿದಿತ್ತು.

****

ಅಷ್ಟೇನು ಸರಿಯಾಗಿರದಿದ್ದ ನನ್ನ ಆರೋಗ್ಯ, ಬೇಬಿಯನ್ನು ಇನ್ನೂ ಕಾಡುತ್ತಿದ್ದ ಅಪೌಷ್ಟಿಕತೆ, ಮೂರನೇ ಮಗುವಿನಿಂದಾಗಿ ಹೆಚ್ಚಿದ್ದ ಜವಾಬ್ದಾರಿ... ಇದೆಲ್ಲದರ ನಡುವೆ ಮಗಳು ಬೇ[...] ಯಾವುದೇ ಒಳ್ಳೆಯ ಸ್ಕೂಲ್‌ನಲ್ಲೂ ಸೀಟ್ ಸಿಗದೆ ಅ[...] ವಿದ್ಯಾಭ್ಯಾಸಕ್ಕೆ ತೊಂದರೆ ಆಗಿತ್ತು, ದೊಡ್ಡ ಮಗಳು ಗೌ[...] ಜರ್ನಲಿಸ್ಟ್ ಕಾಲೋನಿಯಿಂದ ಹೋಮ್‌ಸ್ಕೂಲ್‌ಗೆ ಜ[...]ದಲ್ಲಿ ಹೋಗುವುದು ಬೇಡವಾಗಿತ್ತು, "ಜಟಕಾದಲ್ಲಿ [...] ಮೇಲೆ ಒಬ್ಬರನ್ನು ಕೂಡಿಸುತ್ತಾರೆ. ನಾನು ನಡೆದುಕೊ[...] ಸ್ಕೂಲಿಗೆ ಹೋಗುತ್ತೇನೆ" ಎನ್ನಲು ಶುರುಮಾಡಿದಳು[...] ಸ್ಕೂಲ್‌ಗೆ ಹತ್ತಿರ ಇರುವ ಮನೆ ನೋಡೋಣ [...] ಲಂಕೇಶರು ಹುಡುಕಾಡಲು ಶುರುಮಾಡಿದರು.

1969ರ ಏಪ್ರಿಲ್ ತಿಂಗಳಲ್ಲಿ ನಾನು ಮಕ್ಕಳೊ[...] ಶಿವಮೊಗ್ಗೆಗೆ ಹೋಗಿದ್ದೆ. ಎಂದಿನಂತೆ ಹತ್ತನೆ ದಿನಕ್ಕೆ ಬೆ[...] ಜಾವವೇ ಬೆಂಗಳೂರಿಗೆ ವಾಪಸ್ ಬಂದು ಜರ್ನ[...] ಕಾಲೋನಿಯಲ್ಲಿದ್ದ ನಮ್ಮ ಮನೆಗೆ ಹೋದರೆ ಮನೆ[...] ಯಾರೂ ಇರಲಿಲ್ಲ, ಬೀಗ ಬೇರೆ ಹಾಕಲಾಗಿತ್ತು. [...] ಮನೆಯವರನ್ನು ಕೇಳಿದಾಗ ಲಂಕೇಶರು ಮನೆ ಖಾಲಿ [...] ಹೋಗಿದ್ದಾರೆಂದು ಗೊತ್ತಾಯಿತು. ಆದರೆ ಅವರು [...] ಹೋದರು, ಮನೆ ಎಲ್ಲಿದೆ ಎಂದು ಅಲ್ಲಿದ್ದ ಯಾರಿಗೂ ಗೊ[...]ಲಿಲ್ಲ, ಬೆಳಗ್ಗಿನ ಜಾವ ಮಕ್ಕಳನ್ನು ಕಟ್ಟಿಕೊಂಡು [...] ಹೋಗಲಿ ಎಂದು ಯೋಚಿಸಿ ಶಾಂತಾಳ ಮನೆಗೆ ಹೋ[...] ಸದ್ಯ ಆಕೆ ಲಂಕೇಶರು ಬಾಡಿಗೆ ಪಡೆದಿದ್ದ ಮನೆಯನ್ನು ನೋ[...]ದ್ದಳು. ಅವರು ಗಾಂಧಿ ಬಜಾರಿನಲ್ಲಿದ್ದ ಸಿದ್ದೋಜಿ ರಾವ್ [...] ಫ್ಯಾಮಿಲಿಗೆ ಸೇರಿದ್ದ ಮನೆಯನ್ನು ಬಾಡಿಗೆಗೆ ಹಿಡಿದಿದ್[...]

ನಾನು ಮಕ್ಕಳನ್ನು ಕರೆದುಕೊಂಡು ಅಲ್ಲಿಗೆ ಹೋ[...] ಲಂಕೇಶರು ಮನೆ ಸಾಮಾನುಗಳನ್ನೆಲ್ಲ ಒಂದು ರೂಮಿ[...]

ಇಂದಿರಾ, ಅಜಿತ್, ಗೌರಿ, ಲಂಕೇಶ್ ಮತ್ತು ಕವಿತಾ.....



ಬಿಸಾಡಿ ತಮಗೆ ಆಗತ್ಯವಾದ ಮಂಚ, ಟೇಬಲ್ [...] ಕುರ್ಚಿಯನ್ನು ಮಾತ್ರ ಒಂದು ಕಡೆ ಜೋಡಿಸಿಕೊಂಡಿ[...] ಮನೆ ತುಂಬಾ ಗಲೀಜು ಮಾಡಿದ್ದರು, ಸಾಮಾನೆಲ್ಲ ಚೆಲ್[...] ಆಗಿದ್ದವು. ಮೂರು ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು [...] ಹೇಗೆ ಎಲ್ಲವನ್ನು ಸರಿ ಮಾಡಿಕೊಳ್ಳುತ್ತಾಳೆ ಎಂದು [...]ಕ್ಷಣ ಕೂಡ ಯೋಚನೆ ಮಾಡದೆ ಕಾಲೇಜಿಗೆ ಹೊ[...] ಹೋದರು.

ಅದು ಒಂದನೇ ಮಹಡಿಯಲ್ಲಿದ್ದ ಮನೆ. ನ[...] ಮುಂಚಿನ ಮನೆಗಿಂತ ವಿಶಾಲವಾಗಿತ್ತು, ಆದರೆ ಅರ್ಧ [...]ತಾರಸಿ ಇದ್ದರೆ ಇನ್ನರ್ಧ ಮನೆಗೆ ಆಸ್ಬೆಸ್ಟಾಸ್ ಶೀಟು ಹಾಕಿ[...] ಬೇಸಿಗೆಯಲ್ಲಿ ಪ್ರಾಣಹೋಗುವಷ್ಟು ಶೆಕೆ ಆಗುತ್ತಿತ್ತು.

ನಮ್ಮ ಮಗಳು ಬೇಬಿಯನ್ನು ಹತ್ತಿರವೇ ಇದ್ದ ಮ[...] ಸೇವಾ ಸಮಾಜಕ್ಕೆ ಸೇರಿಸಿದೆ. ಒಮ್ಮೆ ಬೇಬಿಯನ್ನು ನೋ[...] ಆಕೆಯ ಸ್ಕೂಲಿಗೆ ಹೋದೆ. ಅಲ್ಲಿ ಮಕ್ಕಳೆಲ್ಲ ಅಳು[...] ಟೀಚರ್‌ಗಳು ಸೀರೆ ಬಗ್ಗೆ ಮಾತನಾಡುತ್ತಾ ಕುಳಿತಿ[...] ಇಂತಹ ಸ್ಕೂಲಿನ ಸಹವಾಸವೇ ಬೇಡವೆಂದು ಬೇಬಿ[...] ಆ ಸ್ಕೂಲಿನಿಂದ ಅವತ್ತೇ ಬಿಡಿಸಿ ಮನೆಗೆ ಕರೆದುಕೊ[...] ಬಂದೆ.

(ಮುಂದುವರೆಯು[...]

ಸುಡುವ ದಾರಿಗೆ ರುಬ್ಬುಗೊಂಡು ಹೊತ್ತು...

• ಬಸವರಾಜ ಹಳ್ಳಿ, ಹಸಮಕಲ್

ಪುರುಸೊತ್ತಿಲ್ಲದ ರಾತ್ರಿ ಹಗಲಿಗೆ
ಸೊಳಕು ದೇಹಗಳು ಏರುಗಚ್ಚಿಯಾಕಿ
ಬಂಡೆ ಸುಲಿದರೆ
ಬೋಗೋಣಿಯಲಿ ಕಾಳು ಕುದಿಯುತ್ತಿಲ್ಲ

ಕಾಲಿ ಇರದ ಕೈಗಳ ತಲೆ
ನೆರಳಿಗೆ ಓಡುತ್ತಿದೆ
ಪ್ರತಿಮೆಯ ಕೆಳಗೆ ಸ್ವಲ್ಪ ಸಿಕ್ಕಷ್ಟು
ಗೋಪುರದ ಕೆಳಗೆ ಸ್ವಲ್ಪ ಜಾಸ್ತಿ

ಬೀದಿ ಬದಿಯ ಮನುಷ್ಯರ ಕಣ್ಣಿನಲಿ
ಉಪ್ಪು ನೀರ ಬಾವಿಗಳ ನಾನು ಶೋಧಿಸಿದೆ
ಒಂದು ಹೆಸರು ಬಂತು
ಕರಪತ್ರಗಳಲಿ ಅಚ್ಚಾಗಿದೆ

ಎದೆಹಾಲು ಬಾಟಲಿಗೆ ಇಳಿದು
ಜೈಲುಗಳು ಅರಮನೆಗಳಾಗಿ
ಸಿಳ್ಳಮುಳ್ಳ ಅಪರಾಧಿಗೆ ಜೀವಾವಧಿ ಶಿಕ್ಷೆ
ಸಿಪಾಯಿಯ ಹೆಣ ಆಸ್ಪತ್ರೆಯ
ಹಾಸಿಗೆಯಲಿ ತೇಲಿದೆ

ಮಠ, ಸೂಳೆಗೇರಿಗಳ ಗೆಣೆತನ
ಸತ್ತ ನಾಲಿಗೆ, ನಕಲಿ ರುಜುವಿನ ದರಬಾರು
ಹಡಪ ತಿದ್ದುವ ಹುಡುಗನ ಮಾಸಿದ ಕೂದಲು
ಅಕ್ಕನಡಿಗಡಿಗೆ ಹೆಟ್ಟ
ಗಿಡದ ತಾಯೆಂದಿರಿಗೆ ವೇಶ್ಯೆ ಪಟ್ಟ

ಬೆಳೆವ ಭೂಮಿಯ ತುಂಬ ಹೊಗೆ ಕಾರಖಾನೆಗಳು,
ಸ್ವಾರಿ ನೀರಿಗೆ ಝುಣ ಝುಣ
ಗಿಡದ ನೆರಳಿಗೆ ಬಾಡಿಗೆ
ನೆರಮನೆಗಳು ಬಕ್ಕಬಾರಲು ಬಿದ್ದರೆ ನಗುಕೂಟ
ಈ ಲೋಕಕೆ ಮುಗಿಯದ ದ್ವೇಷ
ಸುಟ್ಟ ಗುಡಿಸಲಿನ ಬೂದಿ
ವಿಭೂತಿಗಟ್ಟಿ


ಜಗಲಿ ತುಂಬ ಮಸಣದ ದೆವ್ವಗಳ ಕುಣಿತ
ಹುಲುಸು ಪಾಪಾಸುಕಳ್ಳಿ ಬೆಳೆದವರು
ಪೀಠಕ್ಕೆ ಏರಿದರು ಅಣ್ಣಾ
ಗಾಜು ಕಾಯಿಸಿ ಬೆಲ್ಲದ ಪಾನಕದಲಿ ಕುಡಿಸಿದರೆ,

ಹೇಗೆ ಹೇಳಲಿ

ಮಧುವಯ್ಯ, ಮಾದಿಗರ ಹರಳಯ್ಯ
ಎಲ್ಲಿ ಹೋದಿರಿ?
ಕಾಂಕ್ರೀಟು ಕಾಡಿನ ನಟ್ಟ ನಡುಬರುಕ
ತಂಗಿಯ ಮಾನಭಂಗ
ಕೂಡಲಸಂಗಾ

ಸುಡುವ ದಾರಿಗೆ
ರುಬ್ಬುಗುಂಡು ಹೊತ್ತು ನಡೆದಿದ್ದೇನೆ
ಖಾರಪುಡಿ ಬಿದ್ದ ಕಣ್ಣಿಗೆ
ಪಾಚೀವು ಕಾಣುತ್ತಿಲ್ಲ

ಕಾಲಕೆ ಮೆತ್ತಿದ ಹೇಸಿಗೆ ತೊಳೆದು
ಎದೆಗೂಡಲಿ ಜುಳು ಜುಳು
ಅಂತಃಕರಣ ಹರಿಸಲು
ತಿಳಿನೀರ ಚಿಲುಮೆಗಳು
ಬೇಕಾಗಿವೆ.



...ಡೂರಪ್ಪನ್ನೇ ಜೈಲಿಗಾಕಿದ ಜಡಜು ಗಂಡು ಕಂಡ್ರ!

...ಎಡೂರಪ್ಪನನ್ನು ಅರೆಸ್ಟು ಮಾಡಿ ಜೈಲಿಗಾಕಿದರು ...ಬು ವರ್ತಮಾನ ಊರಿಗೆ ತಲುಪಿದಾಗ ...ಣಮಾವನಿಂದ ಬಂದ ಉದ್ಗಾರವೆಂದರೆ,

"ಎಡೂರಪ್ಪನ್ನೇ ಹಿಡದು ಜೈಲಿಗಾಕಿದ ಅಂದ್ರೆ ಆ ...ಜು ಇನ್ನಂಥಾ ಗಂಡಿರಬೇಕು."

"ಅಷ್ಟೆ ಅಲ್ಲ ಕಣಮಾವ, ಎಡೂರಪ್ನೋಗೀ

...ಯ ಲು ಸೀ ಮ ...ಕಟ್ಟೆಪುರಾಣ

■ ಬಿ. ಚಂದ್ರೇಗೌಡ

...ರ್ಟಿನ ಕಟಕಟೆಲಿ ನಿಂತಾಗ 'ಕೊಪ್ಪಳದ ...ವಣೆಗೋಗಿ ಬಾಸಣ ಮಡಕ್ಕಾಯ್ತದೆ. ಕೋರ್ಟಿಗೆ ...ಕ್ಕೆ ಬೆನ್ನನೋವಲ್ಲವ ನಿನಿಗೆ' ಅಂದ್ರಂತೆ" ಎಂದ ...

"ಸರಿಯಾಗೆ ಕೇಳ್ಯವುರೆ ಬುಡು."

"ಅದ್ಯಾಕ್ ಜೈಲಿಗಾಕಿದ್ರೂ?" ಎಂದ ಸೀರ.

"ಈ ಎಡೂರಪ್ಪ ಮುಖ್ಯಮಂತ್ರಿಯಾದೇಟಿಗೆ ...ಕರ್ನಾಟಕ ನಂದು, ನಾನೇನಾದ್ರು ...ಡಬವುದು' ಅನ್ನಕಂಡುಬುಟ್ಟ. ಅದ್ಕೆ ನೋಡು ...ದೇಟಿಗೆ ಗೋಕರ್ಣವ ಅದ್ಯಾವುದೊ ಮಠಕ್ಕೆ ...ದ. ಅಮೃತ್ ಮಹಲ ದನನೂ ಅವುರಿಗೇ ...ಟ್ಟಿದ್ದ. ಜನ ಹೋರಾಡಿ ಕೊಡದಂಗೆ ಮಾಡಿದ್ರು."

"ಅದು ಕಂಡೆ ದ್ಯಾವೇಗೌಡ ಅವುನಿಗೆ ಸಪೋಟು ...ಡಿರಲಿಲ್ಲ ಕಂಡ್ಯ" ಎಂದ ಕಾಳಮಾವ.

"ಅವುನ ಸಪೋರ್ಟ್ರು ಮಾಡಿದ್ರೆ ಇಂತ ...ಹುತನೂ ನ್ಯಡಿತಿರಲಿಲ್ಲ, ಪಾಪ ಜೈಲಿಗೂ ...ಯಿತ್ತಿರಲಿಲ್ಲ."

"ಪಾಪ ಅಂತಿಯಲ್ಲಾ?" ಎಂದಳು ಜುಮ್ಮಿ.

"ಮೂರ್ಖ ಜನ ತೆಪ್ಪು ಮಾಡಿ ಜೈಲಿಗೋದಾಗ ...ಪ ಅನ್ನಲೇಬೇಕು ಕಣೆ. ಆದ್ರು ಎಡೂರಪ್ಪನಿಗೆ ಪಾಪ ...ದು ತೆಪ್ಪು."

"ಅಂಗಂತಿಯಾ?"

"ಊ ಮತ್ತೆ. ಮುಖ್ಯಮಂತ್ರಿಯಾದೇಟಿಗೆ ...ಗಳೂರು ಸುತ್ತಮುತ್ತ ಇರೊ ಖಾಲಿ ಜಮೀನು, ...ಸದುರ್ಗದತ್ರ ಇರೋ ನೂರಾರು ಯಕರೆ, ...ಮೊಗ್ಗದತ್ರ ಇರೊ ಖಾಲಿ ಭೂಮಿನ್ನೆಲ್ಲ ...ಕಂಡೋರಿಗೆ ಬರದು, ಅವುರತ್ರ ಲಂಚ ತಗಂಡು, ...ಲ್ ಕಟ್ಟಡ, ಹೋಟ್ಲು ಕಟ್ಟಡ ಕಟ್ಟಿಸಿಬುಟ್ಟ. ಅದ ...ಡಕ್ಕಾಗದೆ ಇಬ್ರು ಲಾಯರ್‌ಗಳು ಸಾಕ್ಷಿ ಸಮೇತ ...ದು ರಾಜ್ಯಪಾಲನಿಗೆ ಕೊಟ್ರು. ರಾಜ್ಯಪಾಲ ಆಯ್ತು ...ಡೂರಪ್ಪನ ಮ್ಯಾಲೆ ಕೇಸಾಕಿ ಅಂತ ಪರಿಮಿಷನ್ ...ಟ್ರು. ಲೋಕಾಯುಕ್ತ ಜಡಜಗ ಎಡೂರಪ್ಪನ್ನ ಜೈಲಿಗೆ ...ಸಿದ್ರು."

"ಕರ್ನಾಟಕದ ಮರಿಯಾದಿನೆ ತಗದನಲ್ಲ ಇವುನು."

"ಊ ಕಣ ಮಾವ. ನಮ್ಮ ರಾಜ್ಯದಲ್ಲಿ ಯಂತ್ಯಥಾ ಮುಖ್ಯಮಂತ್ರಿಗಳಿದ್ರು. ನಿಜಲಿಂಗಪ್ಪನ ಪ್ರಾಮಾಣಿಕತೆ ಮುಂದೆ ಯಾರೂ ಮಾತಾಡಂಗಿರಲಿಲ್ಲ, ಕಡಿದಾಳು ಮಂಜಪ್ಪ ಲಾಯರ್‌ಗಿರಿಲೆ ಜೀವನ ಮಾಡಿ ತೀರಿಕಂಡ್ರು. ಅರಸು ಭ್ರಷ್ಟ ಅಂತಿದ್ರು. ಇವತ್ತು ಅವನ ಮಕ್ಕಳು ಕಷ್ಟದಲ್ಲವುರಂತೆ. ಇದೇ ಮಾತ ಬಂಗಾರಿ, ಕೃಷ್ಣ ಕುಮಾರಸ್ವಾಮಿ ವಿಷಯದಲ್ಲಿ ಹೇಳಂಗಿಲ್ಲ."

"ಯಗಡೇರು?" ಎಂದಳು ಜುಮ್ಮಿ.

"ಯಗಡೆನೂ ಮಾಡಿಕಂಡು ಸಿಗಾಯ್ಕಂಡಿದ್ದ ಕಣೇ. ರೇವಜೀತು ಬಾಟ್ಲಿಂಗ್ ಅಂತ ಹಗರಣ ಇದ್ದೋ. ಆದ್ರುವೆ ಮಾನ ಮರಿಯಾದಿಗಂಜೋರು. ಈ ಎಡೂರಪ್ಪ ಮಾತ್ರ ಯಾರಿಗೂ ಕೇರ್ ಮಾಡಲಿಲ್ಲ, ಅಂಗೆ ತಿಂದು ಸಿಗಾಯ್ಕಂಡ ಅತ್ತಗೆ."

"ಸರಿಯಪ್ಪ, ಅರೆಸ್ಟಾದೇಟಿಗೆ ಆರೋಗ್ಯ ಕೆಡಿಸಿಗತ್ತರಲ್ಲಾ ಅದ್ಯಂಗೇ?"

"ಅದ್ಯಲ್ಲ ನಾಟಗ ಕಣಮಾವ. ಎಡೂರಪ್ಪನ ಜ್ವತಲೆ ಕಿಷ್ಣಯ್ಯ ಶೆಟ್ಟಿ ಅನ್ನೊ ಪುಕ್ಕಲ ಶೆಟ್ಟಿ ಅರೆಸ್ಟಾದ. ಅವುನ್ಯಂಥಾ ನಾಟಕ ಮಾಡಿದ ಅಂದ್ರೇ, ಕುಸುದು ಬಿದ್ರೆ ಬುಟ್ಟು ಕಳುಸ್ತರೆ ಅಂತ ಜಡಜು ತೀರ್ಪು ಕೊಟ್ಟೆಟಿಗೇ ಬಿದ್ದೊದ ಅತ್ತಗೆ. ಆದ್ರೂ ಅಂಬುಲೆನ್ಸ್ ಬಂದು ಜೈಲಿಗೆ ತಗಂಡೋಯ್ತು, ಆಗ್ಲು ಆ ನನಮಗ ಮುಖ ಮುಚಗಂಡಿದ್ದ. ಕುಸುದು ಬಿದ್ದೊನಿಗೆ ಗ್ಯಾನಿರದಿಲ್ಲ ಅಲವೆ. ಆದ್ರಿವುನ ಮುಖ ಮುಚಗಂಡಿದ್ದ. ಇದಕೇನೇಳ್ತೀ?"

"ಹಂದಿ ವಟ್ಟಿಗೆ ವದ್ದಂಗೆ ವದಿಬೇಕಿತ್ತು ಕಂಡ್ಯ ಅವುನಿಗೆ" ಎಂದು ಸೀರ ಹಲ್ಲು ಕಡಿದ.

"ವದಿಸಿಗಳಕ್ಕೆ ಯೋಗ್ಯ ಕಣೊ ಅವುನು. ಮಂತ್ರಿ ಕ್ಯಲಸ ಅಂದ್ರೆ ಏನಂತ ತಿಳಕಂಡಿದ್ದ ಅಂತೀ. ಅದೆಲ್ಲಿಂದ್ಲೊ ತೀರ್ಥ ತಂದು ಹಂಚೋದು, ತಿರುಪ್ತಿ ಲಾಡು ಅಂತ ಡೂಪ್ಲಿಕೇಟ್ ಬೂಂದಿ ಹಂಚೋ ಕ್ಯಲಸ ಮಾಡತಿದ್ದ. ಮಂತ್ರಿ ಕ್ಯಲಸ ಇರದೇ ಲೂಟಿ ವಡಿಯಕ್ಕೆ ಅನ್ನಕಂಡಿದ್ದ. ಅಂಥೋನಿಗೆ ಈ ಎಡೂರಪ್ಪ ಸಪೋರ್ಟು ಮಾಡಿದ್ಕೆ ಇಬ್ರೂ ಪರಪ್ಪನ ಅಗ್ರಾರದ ಜೈಲು ಸೇರಿಕಂಡ್ರು."

"ಜೈಲು ಸೇರಿಕಂಡ್ರೂ ಮಾಡಿರೊ ತಪ್ಪು ಇನ್ನು ಅಂಡರ್‌ಸ್ಟಾಂಡ್ ಆಗಿಲವಲ್ಲೊ ಉಗ್ರಿ" ಎಂದು ವಾಟಿಸ್ಸೆ ಬಂದ.

"ಎಡೂರಪ್ಪ ಇವತ್ತಿನವರಿಗೂ ಯಾವ ತಪ್ಪ ಒಪ್ಪಿಗಂಡಿದ್ದನೊ? ಅವುನಷ್ಟೇ ಅಲ್ಲ ಬಿಜೆಪಿ ಜನರೇ ಎಡೂರಪ್ಪ ಏನೂ ತಪ್ಪು ಮಾಡಿಲ್ಲ, ಜೈಲಿಂದ ಈಚೆಗೆ ಅರಾಮಾಗಿ ಬತ್ತರೆ ಅಂತವಲ್ಲ ಹೇಳು."

"ಅಂಗಂತರೆ ಸರಿ ಕಣೊ. ಖಾಸಗಿಯಾಗಿ ಮಾತಾಡಿಸಿದ್ರೆ 'ನಮ್ಮ ಪಾರ್ಟಿ ಮಾನ ಹರಾಜಾಕಿದ. ದಕ್ಷಿಣ ಭಾರತದಲ್ಲಿ ಮೊದಲು ಅಧಿಕಾರಕ್ಕೆ ಬಂದಿದ್ದೊ. ಆದ್ರಿವತ್ತು ಯಾಕಾದ್ರು ಬಂದವೊ ಅನ್ನಂಗೆ ಮಾಡಿಬುಟ್ನೊದ. ಇವುನ ಮನಿಯಾಳಾಗ' ಅಂತವೆ. ಅದೇನಾರ ಆಗ್ಲಿ ನಮ್ಮ ಜಿಲ್ಲೆ ಮರಿಯಾದಿನೂ ಹೋಯ್ತಲ್ಲ ಹೇಳು."

"ನಮ್ಮ ಜಿಲ್ಲೆ ಮರಿಯಾದಿ ಯಾಕೋದತ್ಲ?"

"ಇದೇನಕ್ಕ ಹಿಂಗಂತಿ? ಬೂಕುನಕೆರೆ ಸಿದ್ಲಿಂಗಪ್ಪನ ಮಗ ಎಡೂರ ಶಿಕಾರಿಪುರಕೋಗಿ ಮಾಡಬಾರ್ದ ಮಾಡಿದ್ಕೆ ಅಲ್ಲಿ ಲಾಯರ್‌ಗಳು ಕೇಸಾಕಿ ಇವುನ್ನ ಅರೆಸ್ಟು ಮಾಡಿಸಿ ಶಿವಮೊಗ್ಗ ಜಿಲ್ಲೆ ಮಾನ ಉಳಿಸಿಗಂಡ್ರು ಗೊತ್ತೆ."



"ಎಡೂರಪ್ಪ ಅರೆಸ್ಟಾಗಿದ್ಕೆ ಕಾಂಗ್ರೆಸ್ಸಿನವೇನೊ ಕುಣಿದಾಡಿದವಂತೆ ನಿಜವೇನೊ?"

"ಇರುಬವುದು ಬುಡೊ ಉಗ್ರಿ. ಕಾಂಗ್ರೆಸ್ಸಿನೋರು ಯಾರಾದ್ರು ಹಿಂಗೆ ಅರೆಸ್ಟಾಗಿ ಜೈಲಿಗೋಗಿದ್ರೆ, ಇದೇ ಬಿಜೆಪಿ ಜನ ಸರಕಲ್ಲಲಿ ಪಟಾಕಿ ವಡದು, ಭಾರತ ಮಾತಾಕಿ ಜೈ ಅಂತಿದ್ರು. ಅಂತದ್ರಲ್ಲಿ ಕಾಂಗ್ರೆಸಿನವು ಚಪ್ಪಾಳೆ ವಡದಿರಬವುದು. ಯಾಕಂದ್ರೆ ಅವುರೇನು ಮಾಡಿದ್ರೂ ಎಡೂರಪ್ಪನ ಕೂದಲಳ್ಯಾಡಸಕ್ಕಾಗಿರಲಿಲ್ಲ, ಅಂತದ್ರಲ್ಲಿ ಜೈಲಿಗೋದ ಅಂದ್ರೆ ಖುಷಿಯಾಗದಿಲವೇನೊ."

"ಇನ್ನವುನ ಕತೆ ಮುಗಿತುಬುಡು" ಅಂದ ಕಾಳಮಾವ.

"ಕತೆ ಈಗ ಸುರುವಾಗ್ಯದೆ ದ್ವಡಪ್ಪ, ಎಡೂರಪ್ಪ ಜೈಲಿಂದ ಈಚೆಗೆ ಬಂದಮ್ಯಾಲೆ ಈದುಲಿಯಂಗೆ ಅವುರ ಪಾರ್ಟಿಯೋರ ಮ್ಯಾಲೆ ಬೀಳ್ತನೆ. ಬಿಜೆಪಿಯ ನಿರ್ನಾಮ ಮಾಡೋ ಶಕ್ತಿಯಿರದು ಎಡೂರಪ್ಪನಿಗೆ ಮಾತ್ರ ಗೊತ್ತೆ."

"ಅಂಗರೆ ಬಿಜೆಪಿ ಮುಗುಸ್ತನೆ ಅಂತಿಯಾ."

"ಎಸ್. ಪರೆಗ್ ಜಾಂಪಲ್ ದ್ಯಾವೇಗೌಡ ಜನತಾದಳ ಮುಗಿಸಿ ಜೆಡಿಎಸ್ ಮಾಡಿಕಂಡ ನೋಡು ಅಂಗೂ ಎಡೂರಪ್ಪ ಮಾಡಬಹುದು. ಮುಂದೆ ಏನಾಯ್ತದೆ ಅಂತ ಹೇಳಕ್ಕೆ ಬರದಿಲ್ಲ, ಈಗಾಗ್ಲೆ ಕುಮಾರಣ್ಣ ಪಾಪ ಅಂದವುನೆ."

"ಅವುನ್ಯಾಕಂದವುನೆ ಗೊತ್ತೇನೊ? ಅವುನು ಹೆಡತಿ ಜ್ವತೆ ಅದೇ ದಾರಿಲವುನೆ. ಪಾಪ ಏನೂ ತೆಪ್ಪು ಮಾಡದೇಯಿರೋ ಅನಿತಕ್ಕನ್ನ ಕುಮಾರಣ್ಣ ಜೈಲಿಕಾಗುಸ್ತನೆ. ಅದ್ಕೆ ಈಗಾಗ್ಲೆ ಜೈಲಿಗೋದ ಎಡೂರಪ್ಪನ ಬಗ್ಗೆ ಪಾಪ ಅಂದಿರದು."

"ಅಂಗೆ ನೋಡಿದ್ರೆ ದ್ಯಾವೇಗೌಡನ ಫ್ಯಾಮಿಲಿ ರಾಜಕಾರಣದ ಸುಳಿಗೆ ಸಿಕ್ಕಿದೋರು ಯಾರೂ ಉದ್ದಾರಾಗಿಲ್ಲ ಕಣೊ ಉಗ್ರಿ. ಪಾಪ ಎಡೂರಪ್ಪ ನನ್ನಣೆ ಬರನೆ ಇಷ್ಟು ಅನ್ನಂಗೆ ಸುಮ್ಮನಿದ್ದ. ಅವುನ್ನ ಕರುದು ಈ ಕುಮಾರಣ್ಣ 'ನಾನೇ ಮುಖ್ಯಮಂತ್ರಿ, ನೀನೆ ಉಪಮುಖ್ಯಮಂತ್ರಿ" ಅಂದ. ಅಲ್ಲಿಂದ ಶನಿ ಯಗಲೇರಿದಂಗಾಯ್ತು ಎಡೂರಪ್ಪನಿಗೆ. ಅದು ಕೊನೆ ಆದುದ್ದೆಲ್ಲಪ್ಪಾ ಅಂದ್ರೆ, ಪರಪ್ಪನ ಅಗ್ರಾರದ ಜೈಲಲ್ಲಿ **10462** ನೇ ಖೈದಿ ನಂಬರ್ ತಗಳದ್ರಲ್ಲಿ ಎಂಡಾಯ್ತು!

"ಎಡೂರಪ್ಪನ್ನ ಜೈಲಿಗಾಗಿದ ಜಡಜಿ ಹೆಸರೇನ್ಲ?"

"ಯಾಕ್ ದೊಡಪ್ಪ ಅವುರೆಸುರು? ಲಟ್ರು ಬರಿತಿಯೋ? ಫೋನ್ ಮಾಡ್ತಿಯೋ?"

"ಸುಮ್ಮನೆ ಕೇಳಿದೆ ಕಂಡ್ಯ."

"ಕೆ. ಸುಧೀಂದ್ರ ರಾವ್ ಅಂತ ದ್ವಡಪ್ಪ, ಮುಂದೆ ರಾಜಕಾರಣಿಗಳು ಅವುರೆಸುರು ಕೇಳಿದ್ರೆ ಮಾನಮರಿಯಾದಿಯಾಗಿ ಬದುಕಕ್ಕೆ ಟ್ರೈ ಮಾಡ್ತರೆ. ನಾನಂತೂ ಅವರ ಅಭಿಮಾನಿ ದ್ವಡಪ್ಪ!"

" !!"

❖

ಬದುಕಿನ ದಾರಿಯಲ್ಲಿ

ನಾವೆಲ್ಲ ಒಂದು ಗೊತ್ತಾದ ಸಂದರ್ಭದಲ್ಲಿ ಸುಮ್ಮನೇ ಬದುಕುತ್ತಾ ಉಗುರುಬೆಚ್ಚಗಿನ ಜೀವನವನ್ನು ಅನುಭವಿಸುತ್ತಾ ಆ ಬಗ್ಗೆ ಆಗಾಗ ಮಾತನಾಡುತ್ತಾ ನಡೆದಿದ್ದಾಗ ಕೆಲವು ಅಚ್ಚರಿಗಳು ಕಾದಿರುತ್ತವೆ. ಈ ಬದುಕನ್ನು ಸಹ್ಯಗೊಳಿಸುವ ಕೆಲವು ಸಂಗತಿಗಳನ್ನು ನಾವು ಹೇಳಿರುತ್ತೇವೆ, ಅನುಭವಿಸಿರುತ್ತೇವೆ. ನಾನು ಸಾಮಾನ್ಯವಾಗಿ ನನ್ನ ಕೆಲಸ ನಾನೇ ಮಾಡಿಕೊಳ್ಳಲು ಇಷ್ಟಪಡುವವನು. ನಾನು ಸ್ನಾನ ಮಾಡುವ ನೀರನ್ನು ನಾನೇ ಕಾಯಿಸಿಕೊಳ್ಳಬೇಕು. ನನ್ನ ಮಾತ್ರೆ ನಾನೇ ಒಂದು ಕಡೆ ಇಟ್ಟುಕೊಂಡು ತೆಗೆದುಕೊಳ್ಳಬೇಕು. ಕೆಲವು ಸಂಗತಿಗಳಾದರೂ ನನ್ನ ಹತೋಟಿಯಲ್ಲಿರಬೇಕು. ಇದ್ದಕ್ಕಿದ್ದಂತೆ ಹೆಚ್ಚುಕಮ್ಮಿಯಾಗಿ ದುಗುಡ, ನೋವಿನಿಂದ ನನ್ನನ್ನು ಕಾಡುವ ಉದರ, ಕಣ್ಣುನೋವು, ಓದುವುದು, ಬರೆಯುವುದು, ವಾಕ್ ಮಾಡುವುದು, ಸ್ವಲ್ಪ ದೂರ ಡ್ರೈವ್ ಮಾಡಲು ಸಾಧ್ಯವಾಗಿ ನನ್ನ ಸ್ವಾತಂತ್ರ್ಯವನ್ನು ನಾನು ಅರಿಯುವುದು, ಆದಷ್ಟೂ ಸರಳವಾಗಿದ್ದು ಓಡಾಡಲು ಅನುಕೂಲವಾದ ಬಟ್ಟೆಹಾಕಿಕೊಳ್ಳುವುದು, ಸಾಧ್ಯವಾದರೆ ಎಲ್ಲದರಲ್ಲೂ ನನ್ನನ್ನು ಬಲ್ಲವರನ್ನು ಚಕಿತಗೊಳಿಸುವುದು, ಆದರೆ ಬೆಚ್ಚಿಬೀಳಿಸದಿರುವುದು, ಯಾರಿಗೂ ತೊಂದರೆ ಕೊಡದಿರುವುದು, ನನಗೆ ತೀರಾ ತೊಂದರೆಯಾಗದಂತೆ ನಮ್ಮ ರಾಜ್ಯದ ಜನಕ್ಕೆ ಒಳ್ಳೆಯದನ್ನು ಮಾಡಲೆತ್ನಿಸುವುದು, ಯಾರನ್ನೂ ವಂಚಿಸದಿರುವುದು, ನನ್ನನ್ನು ತೀರಾ ಮೆಚ್ಚಿ ಪೂಜಿಸದಂತೆ ಸಾಕಷ್ಟು ನಿಷ್ಠುರನಾಗಿರುವುದು. ಹೀಗೆ ಪಟ್ಟಿ ಮಾಡುತ್ತಾ ಹೋಗಬಹುದು. ಅವುಗಳಲ್ಲಿ ಕೆಲವು ಇಷ್ಟ ಮಾತ್ರ. ಕೆಲವು ನನ್ನಿಂದ ಸಾಧ್ಯವಾಗುತ್ತೆ ಯಾವುದಕ್ಕೂ ಕಟ್ಟುನಿಟ್ಟಾದ ನಿಯಮವಿಲ್ಲದ ಈ ಜಗತ್ತಿನಲ್ಲಿ ನಾವೆಲ್ಲ ನಿಯಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ; improvise ಮಾಡಿಕೊಳ್ಳಬೇಕಾಗುತ್ತೆ ಆದರೆ ನಾನೆಂದೂ ಮಹಾ ದೊಡ್ಡಮನುಷ್ಯನಂತೆ ಪ್ರಯತ್ನಿಸಿ ಮಾಡದೆ ಇದ್ದದ್ದನ್ನು ಯಾರಾದರೂ ನನಗೆ ಹೇಳಿದಾಗ ನಿಬ್ಬೆರಗಾಗಿ ಕೂತು ಯೋಚಿಸುತ್ತೇನೆ. ನನಗೆ ಬರುವ ಅನೇಕ ಕಾಗದಗಳಲ್ಲಿ ಒಂದರಲ್ಲಿ ಒಬ್ಬರು ಹೀಗೆ ಬರೆದಿದ್ದಾರೆ:

ಅಂಕಲ್,

ಈಗ ಸಮಯ **1.30.** ಇಷ್ಟೊತ್ತಿನವರೆಗೂ ಅಪ್ಪನ ಜೊತೆ ಉರಿಬಿಸಿಲಿನಲ್ಲಿ ರಾಗಿ ಮೆದೆ ಹಾಕುತ್ತಿದ್ದೆ. ಮನೆಗೆ ಬಂದು ತಣ್ಣನೆಯ ನೀರಿನಲ್ಲಿ ಮುಖ ತೊಳೆದು ಮಂಚದ ಮೇಲೆ ಆಡಿಕೊಳ್ಳುತ್ತಿದ್ದ ಮಗು ಎತ್ತಿ ತೊಡೆಯ ಮೇಲೆ ಮಲಗಿಸಿಕೊಂಡೆ. ಮುದ್ದಾದ ಮಗು, **Hall**ನ ತಂಪು ವಾತಾವರಣ ಪಕ್ಕದಲ್ಲಿ ಸಣ್ಣಗೆ ಹಾಡುತ್ತಿದ್ದ **Eric Clapton...** ನಿಮ್ಮ ನೆನಪಾಯ್ತು, ಅವ್ವ ಕೋಣೆಯಲ್ಲಿ ಹಿಟ್ಟು ಮಾಡುತ್ತಿದ್ದಳು.

ಮಗು ಆಡಿಕೊಳ್ಳುತ್ತಿದ್ದಂತೆ ಕೆನ್ನೆ ಸವರುತ್ತಿದ್ದುದಕ್ಕೊ ನಿಮ್ಮ ನೆನಪಾದ್ದಕ್ಕೊ ಮನಸ್ಸು ತುಂಬಿಕೊಳ್ಳುತ್ತಿತ್ತು.

ಒಬ್ಬನೇ ಹೊಲ ಉಳುವಾಗಲ್ಲದೆ ಭಾವಗೀತೆ ಕೇಳುವಾಗ, ಗದ್ದೆಗೆ ನೀರು ಹಾಯಿಸುವಾಗ ಹೀಗೆ 'ಅಂಕಲ್‌ತನ' ಕಾಡುತ್ತದೆ. 'ಏಕೆ ಹೀಗೆ?' ಎಂಬ ಪ್ರಶ್ನೆ ಎಷ್ಟೋ ಸಲ ಹುಟ್ಟಿ ಉತ್ತರವಿಲ್ಲದೆ ಹಾಗೆ ಸತ್ತಿದೆ. ಇಂತಹ ಒಂದು ಮಾನಸಿಕ ಸ್ಥಿತಿಗೆ ಏನಾದರೂ ಅನ್ನಿ (**Temperamental?**) ಆದರೆ ನೂರು ಕೆಲಸಗಳ ನಡುವೆ ಲವಲವಿಕೆಯಿಂದ ಇರಲು ಬದಕಲು ಕಲಿಸಿಕೊಟ್ಟಿದ್ದೀರಿ.

ಮಗು ಹಾಲು ವಾಂತಿ ಮಾಡಿಕೊಳ್ಳುವವರೆಗೆ ಹಾಗೇ ಕುಳಿತಿದ್ದೆ, ನಿಮ್ಮದೇ ಗುಂಗಿನಲ್ಲಿ, **Thanks, uncle, for the way you make me feel.**

-ಸಿದ್ಲಿಂಗು



ಡಿಸೆಂಬರ್ 13, 1995

ಕೋರ್ಟು ಕೈಬಿಟ್ಟರೂ ಆಸ್ಪತ್ರೆ ಆತುಕೊಳ್ಳುತ್ತೆ



ಎಚ್.ಎಲ್. ಕೇಶವಮೂರ್ತಿ

ಅಣಕ

ಯಡ್ಯೂರಪ್ಪನವರಿಗೆ ಬಾರಿ ಬೆನ್ನು ನೋವು ಬಂದಿತ್ತಂತೆ. ಎದ್ದು ಕೂರಲೂ ಆಗುತ್ತಿರಲಿಲ್ಲವಂತೆ. ಇನ್ನು ಮೆಟ್ಟಿಲು ಹತ್ತುವುದು, ಓಡಾಡುವುದು ಸಾಧ್ಯವೇ ಆಗದ ಮಾತು. ಹಾಗಂತ ಅದ್ಯಾವುದೋ ಡಾಕ್ಟರು ಹೇಳಿದ್ದರಂತೆ. ಹಿಂಗಾಗಿ ಅವರು ಕೋರ್ಟಿಗೆ ಹಾಜರಾಗಲು ಸಾಧ್ಯವಾಗಲಿಲ್ಲವಂತೆ. ನನ್ನ ಕಕ್ಷಿದಾರ ಗೈರುಹಾಜರಾಗಲು ಇದು ಕಾರಣ ಎಂದು ಅವರ ವಕೀಲರು ಕೋರ್ಟಿನ ಮುಂದೆ ಡಾಕ್ಟರ್ ಸರ್ಟಿಫಿಕೇಟ್ ನೀಡಿದರಂತೆ. ನ್ಯಾಯಾಧೀಶರಿಗೆ ಇಂತ ಸರ್ಟಿಫೀಕೇಟ್‌ಗಳ ಬಗ್ಗೆಯೂ ಅನುಮಾನ ಇತ್ತೋ ಏನೋ. ಅಂತೂ ಒಪ್ಪಲು ಸಿದ್ದರಿರಲಿಲ್ಲವಂತೆ. ಜಾಮೀನುರಹಿತ ವಾರಂಟ್ ಹೊರಡಿಸಿದರಂತೆ. ಇಂತಹ ವಾರಂಟ್ ಬರುತ್ತಿದೆ ಎಂದು ತಿಳಿಯುತ್ತಿದ್ದಂತೆ ನಡೆಯಲಾಗದ ಯಡ್ಯೂರಪ್ಪನವರು ನಡೆಯುವ ಹಾಗಾದರಂತೆ. ಕೋರ್ಟಿಗೆ ಹಾಜರಾದರಂತೆ. ಎಲ್ಲ ಜಾಮೀನುರಹಿತ ವಾರಂಟ್ ಮಹಾತ್ಮೆ! ಸದ್ಯ ಸರ್ಟಿಫಿಕೇಟ್ ನೀಡಿದ ವೈದ್ಯರನ್ನು ಕರೆಸಿ ಆರೋಗ್ಯವಾಗಿರುವ ವ್ಯಕ್ತಿಗೆ ಹೀಗೆಲ್ಲ ಸುಳ್ಳು ಸರ್ಟಿಫಿಕೇಟ್ ನೀಡಿದ್ದೀಯಲ್ಲಾ ನೀನು ಒಳಗೆ ಇರೋಕೆ ಲಾಯಕ್ಕಾದವನು ಎಂದು ಜೈಲಿಗೆ ದಬ್ಬಲಿಲ್ಲವಲ್ಲ ಅದು ಆ ವೈದ್ಯನ ಪುಣ್ಯ!

ಕೋರ್ಟಿಗೆ ಹೋದರಲ್ಲಾ ಅಲ್ಲಿಂದ ನ್ಯಾಯಾಂಗ ಬಂಧನಕ್ಕೆ ಒಳಗಾದರಂತೆ. ಪರಪ್ಪನ ಅಗ್ರಹಾರ ಜೈಲು ಸೇರಿದಂತೆ. ಅದೆಲ್ಲಿದ್ದವೋ ಹಾಳುಬಸ್ತೀವು. ಬೆನ್ನು ನೋವಿನ ಜೊತೆಗೆ ಇನ್ನೂ ಯಾವುಯಾವುದೋ ಸಣ್ಣದೊಡ್ಡರೋಗಗಳು ಒಟ್ಟಿಗೇ ಅಮರಿಕೊಂಡವಂತೆ. ಜೈಲಿನವರಿಗೆ ಹೇಗೆ ತಿಳಿಯಿತು ಅಂದರೆ ಸನ್ಮಾನ್ಯರು ರಾತ್ರಿ ಮೂರುನಾಲ್ಕು ಸಲ ವಾಂತಿ ಮಾಡಿಕೊಂಡರಂತೆ! ಸರಿ ಅವರನ್ನು ಅಲ್ಲಿಂದ ಜಯದೇವ ಹೃದ್ರೋಗ ಆಸ್ಪತ್ರೆಗೆ ರವಾನಿಸಲಾಯಿತಂತೆ.


ಇದನ್ನು ಜನಾರ್ದನ ಪೂಜಾರಿ ಅವರು ವ್ಯಾಖ್ಯಾನಿಸುವುದೇ ಬೇರೆ. ಇದು 'ಗಣ್ಯರ ಜೈಲುರೋಗ' ಅಂತೆ. ಜೈಲಿಗೆ ಹೋಗಬೇಕಾದಾಗಲೆಲ್ಲ ಗಣ್ಯರಿಗೆ ಇಂತಹ ರೋಗ ಬಡಿಯುವುದೇ ರೋಗವಾಗಿದೆಯಂತೆ. ಇದರ ಬಗ್ಗೆ ತನಿಖೆ ನಡೆಯಬೇಕು ಎನ್ನುತ್ತಾರೆ ಅವರು. ಇರಲಾರದು ಯಡ್ಯೂರಪ್ಪನವರು ರಾತ್ರಿ ಮೂರುಸಾರಿ ವಾಂತಿ ಮಾಡಿಕೊಂಡರಂತೆ ಎಂದರೆ ಗಂಟಲಿನ ಆಳಕ್ಕೆ ಬೆರಳನ್ನು ಹಾಕಿದರೆ ಎಂತಹವರಿಗೂ ವಾಂತಿ ಬಂದೇ ಬರುತ್ತದೆ ಎನ್ನುತಾರಲ್ಲ ಎಂತ ಮನುಷ್ಯ ಮಾರಾಯ ಇವರು!

ಕುಮಾರಣ್ಣ ಸರಿ. ಯಡ್ಯೂರಪ್ಪನವರ ಸ್ಥಿತಿ ಕಂಡು ಅವರಿಗೆ ಬಹಳ ನೋವಾಗಿದೆಯಂತೆ. ಅವರು ಜೈಲುಪಾಲಾದರು ಅಂತ ಸಂಭ್ರಮೋತ್ಸವ ಆಚರಿಸಬೇಡ್ರೋ ಮುಂದೇ ಮಕ್ಕಳ್ರ ಅಂತ ಕಾಂಗ್ರೆಸ್‌ನವ್ರಿಗೆ ಬುದ್ಧಿ ಹೇಳವ್ರೆ... ಅದ್ಕೆ ಅವೇನೆನ್ನಬೇಕು. ಇವ್ರೂ ಜೈಲಿಗೋಗೋದು ಹತ್ತಿರಕ್ಕೆ ಬಂದದೆ. ನಾನು ಹೋದಾಗ್ಲೂ ಹಿಂಗೇ ಸಂಭ್ರಮಿಸಬಹುದು ಅನ್ನೋ ಹುಷಾರೀಲಿ ಇಂತ ಮಾತ ಹೇಳ್ತಾ ಅವ್ರೆ ಅಂದು ಬುಡದಾ...

ಇತ್ತ ಆಸ್ಪತ್ರೆ ಸೇರಿದ ಯಡ್ಯೂರಪ್ಪನೋರ್‍ನ ನೋಡೋಕೆ ಸಂಪುಟದ ದಂಡೇ ಬಂದಿತ್ತಂತೆ. ಶಾಸಕರು, ಬಂಧುಗಳೂ ಬಂದಿದ್ರಂತೆ. ಕಾವಿಧಾರಿಗಳೂ ಇದ್ದರಂತೆ. ಆಸ್ಪತ್ರೆ ಮುಖ್ಯಸ್ಥರು ಮಾತ್ರ ಹಾಗೆಲ್ಲ ಬರೋಕೆ ಸಾಧ್ಯನೇ ಇಲ್ಲ, ಬಂದರೂ ನಾವು ಬಿಡೋದಿಲ್ಲ ಅಂದವ್ರೆ! ತುರ್ತು ನಿಗಾ ಘಟಕದಲ್ಲಿ ಹೀಗಿರೋದು ನ್ಯಾಯವೇಯ. ಆದರೆ ಹೀಗೆ ಹೋಗಿಬಂದವರೆಲ್ಲ 'ಹೆಚ್ಚಿಗೆ ಮಾತನಾಡಲಿಲ್ಲ, ಒಂದೆರಡು ಮಾತನಾಡಿದರು ಅಷ್ಟೆ' ಅಂತ ಟಿವಿ ಕ್ಯಾಮೆರಾ ಮುಂದೆ ಹೇಳುತ್ತಿದ್ದರಲ್ಲಾ ಅದೆಲ್ಲ ಸುಳ್ಳೋ ಅಥ್ವಾ ಮುಖ್ಯಸ್ಥರೇ ಸುಳ್ಳು ಹೇಳಿಕೆ ನೀಡಿದ್ದಾರೋ ಆ ಮೇಲಿರೋ ಶಿವನೇ ಬಲ್ಲ!

ರಾಜ್ಯಾನೇ ಅಳ್ಳಾಡಿಸೋವಂತಹವರು ಬಂದಾಗ ಸಮಯ ಸಂದರ್ಭಕ್ಕೆ ತಕ್ಕಂತೆ ಕಾನೂನನ್ನು ಹೆಚ್ಚು ಕಡಿಮೆ ಮಾಡಬೇಕಾಗಿ ಬರಬಹುದು. ಇರಲಿ. ಯಡ್ಯೂರಪ್ಪನವರ ವೈದ್ಯಕೀಯ ತಪಾಸಣೆಗೂ ಹೈಕೋರ್ಟಿನ ಜಾಮೀನು ಅರ್ಜಿಗೂ ಕೆಲವು ತಾಳೆ ಹಾಕ್ತಾ ಕುಂತವಲ್ಲ... ಅಲ್ಲಿ 48 ಗಂಟೆ ಒಳಗೆ ತೀರ್ಪು ಬಂದರೆ ಇಲ್ಲಿ ತಪಾಸಣೆಯೂ ಅಷ್ಟರಲ್ಲೇ ಮುಗಿಯುತ್ತೆ, ಅಲ್ಲಿ ಅದು ಮುಂದು ಹೋದರೆ ಇಲ್ಲಿ ತಪಾಸಣೆ ಅವಧಿಯೂ ಮುಂದುವರೆಯುತ್ತೆ. ಅಂತೂ ಇಂತೂ ಕೋರ್ಟು ಕೈ ಬಿಟ್ಟರೂ ಆಸ್ಪತ್ರೆ ಆತುಕೊಳ್ಳುತ್ತೆ ಅಂತಾವಲ್ಲ ತಲೆಹರಟೆ ಮುಂಡೇವು....

ಈಗ ಶಾನೇ ಬೇಸರ ಆಗಿರೋದು ಕೃಷ್ಣಯ್ಯ ಶೆಟ್ಟರಿಗೆ. ಮಂತ್ರಿಯಾಗಿದ್ದೋರು, ತಿರುಪತಿ ಲಡ್ಡು ಹಂಚಿದೋರು, ಗಂಗಾಜಲ ಕುಡಿಸಿದೋರು. ಅಂತೋರು ಜೈಲಿಗೋಗಿದ್ದು ಸುದ್ದೀನೇ ಆಗಬಾರದೆ! ಯಡ್ಯೂರಪ್ಪನೋರ ಜೈಲು ಸುದ್ದಿ ಮುಂದೆ ಶೆಟ್ಟರು ಜೈಲಿಗೆ ಸೇರಿದ್ದು ಎಲ್ಲ ಮರೆತೇಬಿಟ್ಟಂಗವ್ರೆ! ಜೈಲು ಸೇರಿದ್ರೂ ಇಂತೋರ ಜೊತೆ ಸೇರಬಾರದು ಅನ್ನಿಸಿರಬೇಕು ಶೆಟ್ಟರಿಗೆ!



ಲಂಚ ನಿರ್ಮೂಲನಕ್ಕೆ ಲಂಚ!

ಅಡ್ವಾಣಿ ಅವರ ಪಾದ ಪರೀಕ್ಷಿಸಬೇಕು. ಅಲ್ಲಿ ಚಕ್ರ ಇರಬಹುದು ಎನ್ನುವ ಅನುಮಾನ ಇದೆ. ಹೀಗೆ ಇದ್ದವರು ಕುಳಿತ ಕಡೆ ಕೂರಲ್ಲ, ನಿಂತಕಡೆ ನಿಂತಿರಲ್ಲ, ಸದಾ ಸುತ್ತುತ್ತಲೇ ಇರುತ್ತಾರಂತೆ. ಈ ಲೋಹಪುರುಷ ಈಗಾಗಲೇ ಆ ಯಾತ್ರೆ, ಈ ಯಾತ್ರೆ ಎಂದು ಆರು ಸಲ ದೇಶ ಪರ್ಯಟನೆ ಮಾಡಿದ್ದರು. ವಯಸ್ಸು ಆಯಿತು. ಇನ್ನಾದರೂ ನೆಮ್ಮದಿಯಿಂದ ಇರಬೇಕು ಎಂದರೂ ಹಾಳಾದ ಚಕ್ರ ತನ್ನ ಬುದ್ಧಿ ಬಿಟ್ಟಿಲ್ಲ. ವಿದೇಶದಲ್ಲಿರೋ ಭಾರತೀಯರ ಕಪ್ಪು ಹಣ ನೆನಪು ಮಾಡಿದೆ; ದೇಶದಲ್ಲಿನ ಭ್ರಷ್ಟಾಚಾರದ ತಾಂಡವ ನೃತ್ಯ ತೋರಿಸಿದೆ. ಇದರ ಅರಿವನ್ನು ಜನರಿಗೆ ಮಾಡಿಸು ಎಂದು ಚುಚ್ಚಿದೆ. 'ಜನ ಚೇತನ ಯಾತ್ರೆ'ಗೆ ಹೊರಡಿಸಿದೆ.

ಈ ಲೋಹಪುರುಷ ಪ್ರಾರಂಭಿಸಿದ ಏಳನೇ ಯಾತ್ರೆಯ ಗಳಿಗೆಯೇ ಸರಿ ಇರಲಿಲ್ಲ ಎಂದು ಕಾಣಿಸುತ್ತಿದೆ. ಪ್ರಾರಂಭದಲ್ಲೇ ಯಾತ್ರಾರಥ ಕೈಕೊಟ್ಟಿತು. ಕರ್ನಾಟಕದಿಂದ ರಥ ತರಿಸಿದರಂತೆ. ಇಂತಹ ಯಾತ್ರೆಗೆ ಕರ್ನಾಟಕದ ರಥವೇ ಸೂಕ್ತ ಎನಿಸಿರಬಹುದು. ಬಳ್ಳಾರಿ ರೆಡ್ಡಿಯವರ ರಥವನ್ನೇ ಭ್ರಷ್ಟಾಚಾರ ನಿರ್ಮೂಲನಾ ರಥವನ್ನಾಗಿ ಬಳಸಬಹುದಾಗಿತ್ತು, ಏಕೆಂದರೆ ಅದರಲ್ಲಿ ಯಾತ್ರೆಗೆ ಅನುಕೂಲಕರವಾದ ಎಲ್ಲ ಸೌಲಭ್ಯಗಳೂ ಇದ್ದವು. ಆದರೆ ಅದನ್ನು ಸಿಬಿಐನವರು ಮುಟ್ಟಗೋಲು ಹಾಕಿಕೊಂಡಿದ್ದಾರಂತೆ. ಹೇಗೋ ಹೊರಟು ಆಯಿತು. ದಾರಿಯಲ್ಲಿ ರೈಲ್ವೇ ಮೇಲು ಸೇತುವೆ ಅಡ್ಡಬಂತಂತೆ. ರಥದ ಎತ್ತರ ಸೇತುವೆಯ ಎತ್ತರಕ್ಕಿಂತ ಹೆಚ್ಚು ಇತ್ತಂತೆ. ಹೇಗೋ ನಿಭಾಯಿಸಿಕೊಂಡು ಭೂಪಾಲಿಗೆ ಬಂದರಾ. ಅಲ್ಲಿ ಇನ್ನೊಂದು ರಾಮಾಯಣವೇ ನಡೆದಿತ್ತು.

ಮಧ್ಯಪ್ರದೇಶ ಹೇಗಿದ್ದರೂ ಭಾಜಪ ಆಡಳಿತ ಇ[...] ರಾಜ್ಯ. ಯಾತ್ರೆ ಅದ್ದೂರಿತನಕ್ಕೆ ಏನೇನು ಮಾಡಬೇ[...] ಎಲ್ಲವನ್ನೂ ಮಾಡಿದ್ದರಂತೆ ಅಲ್ಲಿಯವರು. ಭೂಪಾಲ ಸ[...] ಗಣೇಶ್ ಸಿಂಗ್ ಇಂತಹದ್ದರಲ್ಲಿ ಪಳಗಿದ್ದವರಂತೆ. ಪ್ರಚಾ[...] ಯಶಸ್ಸಿನ ಗುಟ್ಟು ಎಂದು ತಿಳಿದಿದ್ದೋರು. ಅಡ್ವಾಣಿ ಬ[...] ಹಿಂದಿನ ದಿವಸವೇ ಮಾಧ್ಯಮಗೋಷ್ಠಿ ಕರೆದಿದ್[...] ಮಾಧ್ಯಮದವರನ್ನು ಸರಿಯಾಗಿ ನೋಡಿಕೊಂಡರೆ [...] ತೃಪ್ತಿಕರವಾಗಿರುತ್ತೆ ಅನ್ನುವುದನ್ನು ತಿಳಿದಿದ್ದವ[...] ಬೆಲೆಬಾಳುವ ಗಿಫ್ಟ್ ಕೊಡಬೇಕು ಎಂದಿದ್ದರಂತೆ. ಅ[...] ಕೆಲವು ಇರುತ್ತವೆ. ಅವಕ್ಕೆ ಗಿಫ್ಟು ಅಂತ ಕೊಟ್ಟರೆ ಹಿತ[...] ಹೋಗಿ ಮೊಳ ಹಾಕುವ ಜಾತಿಯವು. ಇದು ಹೀ[...] ಅದು ಹಾಗಿದೆ ಎಂದೆಲ್ಲ ಹುಳುಕುಗಳನ್ನೇ ಹು[...] ಕೊಂಕು ನುಡಿಯುತ್ತವೆ. ಇದರಿಂದ ಆಗ[...] ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿ ಎ[...] ಯೋಚಿಸಿದರಂತೆ. ಈ ತರಲೆ ತಾಪತ್ರಯಗಳೇ [...] ಎಂದು 500, 1000 ರೂ.ಗಳ ನೋಟುಗಳನ್ನ ಕವ[...] ಹಾಕಿ ಗೌರವದಿಂದ ನೀಡಿದರಂತೆ. ಇದೇನು ಕೆಲವ[...] ಐದುನೂರು, ಕೆಲವರಿಗೆ ಒಂದು ಸಾವಿರ ಅಂದರೆ [...] ಅವರವರ ವಜನ್ನಿನ ಮೇಲೆ ಕೊಟ್ಟಿರುತ್ತಾರೆ! ಅಲ್ಲಿದ್ದ [...] 35 ಜನ ಗೌರವಾನ್ವಿತ ವರದಿಗಾರರೂ ಸಂತೋ[...] ದಿಂದಲೇ ಸ್ವೀಕರಿಸಿದರಂತೆ! ಇಲ್ಲಿಗೆ ಸುದ್ದಿಗೋ[...] ಯಶಸ್ಸುಗೊಂಡಿತು ಎನ್ನಬಹುದಾಗಿತ್ತೇನೆ[...] ಆದರೇನು ಮಾಡುತ್ತೀರಿ. ಆ ಹಿಂದಿನಲ್ಲಿ ಒಂದೆ[...] 'ಕರಿಕುರಿ' ಇದ್ದವಂತೆ. ಅವು 'ನಯಿದುನಿ[...] ಪತ್ರಿಕೆಯವಂತೆ. ಎಲ್ಲರೂ ಮಾಡಿದ ಹಾಗೆ [...] ಮಾಡಬಾರದಾ. ಏನೋ ದೇಶಾನೆ ಉದ್ಧಾರ ಮಾ[...] ಹಾಗೆ ಪ್ರಾಮಾಣಿಕತೆ ಮೆರೆದಿವೆ. ಕವರ್‍ರ ತಿರಸ್ಕರಿ[...] ತೆಗೆದುಕೊಳ್ಳದಿದ್ದರೆ ಬೇಡ. ಸುದ್ದಿಯನ್ನಾದ[...] ನ್ಯಾಯವಾಗಿ ಹಾಕಬಾರದಾ. ಪಾಪ ಸಂಸದ ಸಾಹೇ[...] ಹೇಳಿದ್ದನ ಬಿಟ್ಟು 'ಸುದ್ದಿಗಾಗಿ ಕಾಸು' ಎಂ[...] ಬರೆದವಂತಲ್ಲ, ಇದು ಇವತ್ತಿನ ಸುದ್ದಿ ಮಾಧ್ಯಮ ಹ[...] ರಾಜಕೀಯ ಅಂತಾನೂ ಸೇರಿಸಿದ್ದಾರಂತಲ್ಲಾ....

ಭ್ರಷ್ಟಾಚಾರ ನಿಗ್ರಹ ಯಾತ್ರೆಯಲ್ಲಿ[...] ಅಡ್ವಾಣೀಜಿಯವರನ್ನ ಇಂತಹ ಬರಹದ ಪ[...] ಆಹ್ವಾನಿಸಿದರೆ ಹೇಗಾಗಬೇಡ? ಕೆಂಡಮಂಡಲ ಆ[...] ತಕ್ಷಣವೇ ಇದನ್ನು ಕುರಿತು ತನಿಖಿಸಲು ಆದೇಶಿಸಿದರ[...]

ಅಲ್ಲಾ ತನಿಖಿಸುವವರು ಯಾರು ಅಂ[...] ಮಧ್ಯಪ್ರದೇಶದ ಭಾಜಪ ಅಧ್ಯಕ್ಷರಂತೆ! ಅಂದವ[...] ವರದಿಯಲ್ಲಿ ಏನಿರುತ್ತೆ ಎನ್ನುವುದನ್ನು ಈಗ[...] ಹೇಳಬಹುದಲ್ಲಾ!

ಭ್ರಷ್ಟ ರಾಜಕಾರಣಿಗಳ ಜೈಲುಯಾತ್ರೆ

ದಕ್ಷಿಣ ಭಾರತದ ಪ್ರಪ್ರಥಮ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರದ ಪ್ರಪ್ರಥಮ ಉಪಮುಖ್ಯಮಂತ್ರಿ, ಬಿಜೆಪಿ ಸರ್ಕಾರದ ಪ್ರಪ್ರಥಮ ಮುಖ್ಯಮಂತ್ರಿ ಭ್ರಷ್ಟಾಚಾರದ ಆರೋಪ ಹೊತ್ತು ಜೈಲು ಸೇರಿದ ಬಿ.ಎಸ್. ಯಡಿಯೂರಪ್ಪನವರಿಗೆ ಈಗ ಜೈಲಿನಲ್ಲಿರುವ ಪ್ರಪ್ರಥಮ ಮಾಜಿ ಮುಖ್ಯಮಂತ್ರಿ ಎಂಬ ಪಟ್ಟ ದೊರಕಿದೆ.


ಭಾರತ ಮಾತೆ ಹಾಗೂ ಶುದ್ಧ ಚಾರಿತ್ರ್ಯದ ಮೇಲೆ ಸ್ವಯಂಘೋಷಿತ ಸಮುಟೋ ಅಧಿಕಾರವನ್ನು ಹೊಂದಿರತಕ್ಕಂತಹ ಕೇಸರಿ ಪಡೆಯ 84 ರ ಹರೆಯದ ಪ್ರಧಾನಿ ಹುದ್ದೆಯ ಆಕಾಂಕ್ಷಿ ಬಾಬರಿ ಮಸೀದಿ ಧ್ವಂಸ ಪ್ರಕರಣದ ಪ್ರಮುಖ ಆರೋಪಿ, ಜನಚೇತನ ಯಾತ್ರೆಯ ರೂವಾರಿಯಾದ ಲಾಲ್‌ಕೃಷ್ಣ ಅಡ್ವಾಣಿಗೆ ಯಡಿಯೂರಪ್ಪನವರ ಜೈಲುಯಾತ್ರೆ ನೀರಿಳಿಯದ ಗಂಟಲಿಗೆ ಕಡುಬು ತುರುಕಿದಂತಾಗಿದೆ!

ನ್ಯಾಯಾಂಗ ಬಂಧನವಾದ ಕೆಲವೇ ಗಂಟೆಗಳಲ್ಲಿ, ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು, ಮಠಾಧೀಶರು ಹಾಗೂ ಆಪ್ತರು ಕಾಯ, ವಾಚ, ಮನಸಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ ಋಣಸಂದಾಯ ಮಾಡುತ್ತಿರುವುದು ನೋಡಿದರೆ ಜೈಲಿನಿಂದಲೇ ರಾಜಕಾರಣವನ್ನು ಮಾಡುತ್ತೇನೆ ಎಂದಿದ್ದ ಯಡಿಯೂರಪ್ಪನವರ ಹೇಳಿಕೆ ನಿಜವೆನಿಸುತ್ತದೆ.

ಯಡ್ಡಿ ಹಾಗೂ ರೆಡ್ಡಿಗಳ ಬಂಧನದಿಂದಾಗಿ ಉಭಯಫಲಾನುಭವಿಯಾದ ಬಿಜೆಪಿ ಈಗ ಉಭಯ ಸಂಕಟದಲ್ಲಿದೆ. ಒಂದು ಕಡೆಯಿಂದ ಯಡ್ಡಿ ಪಡೆ, ಮತ್ತೊಂದು ಕಡೆಯಿಂದ ರೆಡ್ಡಿ ಪಡೆಯ ದಾಳಿಗೆ ತುತ್ತಾಗಿರುವ ಬಿಜೆಪಿಗೆ ರಾಷ್ಟ್ರಮಟ್ಟದಲ್ಲಿ ಅನುಭವಿಸುತ್ತಿರುವ ಮುಜುಗರಕ್ಕೆ ಕೊನೆಯಿಲ್ಲದಂತಾಗಿದೆ. ಯಡ್ಡಿ ಹಾಗೂ ರೆಡ್ಡಿಯವರನ್ನು ರಕ್ಷಿಸಿದರೆ ಬಿಜೆಪಿ ನಾಶ. ರಕ್ಷಿಸದಿದ್ದರೆ ಸರ್ಕಾರ ನಾಶ.

-ಸಂಡೂರು ಕುಮಾರಸ್ವಾಮಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಅಡಿಗರು, ಹಿಂದೂತ್ವ ಮತ್ತು ಅಂಬೇಡ್ಕರ್

ಅಮೆರಿಕ ದೇಶ ವಿಶ್ವಕ್ಕೆ ಮಾರಕವೆನ್ನುವುದು ಈಗಾಗಲೇ ಸಾಬೀತಾಗಿದೆ. ಸ್ವಹಿತಾಸಕ್ತಿಗೆ ಯಾರಿಗಾದರೂ ಮುಳುಗು ನೀರು ತರಲು ಅಮೆರಿಕ ಸದಾ ಹವಣಿಸುತ್ತದೆ ಎನ್ನುವುದಕ್ಕೆ ಲೆಕ್ಕವಿಲ್ಲದಷ್ಟು ಉದಾಹರಣೆಗಳು ಸಿಗುತ್ತವೆ. ವಿಕಿಲೀಕ್ಸ್‌ನಲ್ಲಿ ಬಹುಗಡೆ ಮಾಡಿರುವ ಮಾಹಿತಿಗಳನ್ನು ನೋಡುತ್ತಾ ಹೋದರೆ ಎಷ್ಟು ದೇಶಗಳ ನೆತ್ತಿಯ ಮೇಲೆ ಅಮೆರಿಕ ಪ್ರಭುತ್ವ ಕುಕ್ಕಿದೆ ಎನ್ನುವುದು ಗೊತ್ತಾಗುತ್ತದೆ. ತನಗೆ ಆಗದ ದೇಶಗಳ ಮೇಲೆ ಅಮೆರಿಕ ಪ್ರತ್ಯಕ್ಷವಾಗಿ ಹೇರಿಕೊಂಡರೆ, ಇನ್ನು ಕೆಲ ರಾಷ್ಟ್ರಗಳನ್ನು ಪರೋಕ್ಷವಾಗಿ ಹಣಿಯುತ್ತದೆ. ಊಸರವಳ್ಳಿ ಮುಖದ ಅಮೆರಿಕ ಭಾರತದೊಂದಿಗೆ ಶಾಂತಿಯ ಮಾತನಾಡಿ ಪಾಕಿಸ್ತಾನದಲ್ಲಿ ವಿಷಬೀಜ ಬಿತ್ತಿ ಅಶಾಂತಿಗೆ ಯತ್ನಿಸಿರುವುದು ಈಗ ಗುಟ್ಟಾಗಿಯೇನು ಉಳಿದಿಲ್ಲ.

ಮುಸ್ಲಿಂ ರಾಷ್ಟ್ರಗಳಲ್ಲಿ ಒಳ ಜಗಳಗಳಿಗೆ ಕುಮ್ಮಕ್ಕು ಕೊಟ್ಟು ಶಾಂತಿ ಸ್ಥಾಪಿಸು[...] ಮುಖವಾಡ ಹೊತ್ತು ಲಕ್ಷಾಂತರ ಹೆಣಗಳನ್ನು ಬೀಳಿಸಿದೆ. ಭಯೋತ್ಪಾದಕ[...] ಅಲ್ಲಿದ್ದಾರೆ, ಇಲ್ಲಿದ್ದಾರೆಂದು ಆಟವಾಡುವ ಅಮೆರಿಕವೇ 'ದೊಡ್ಡ ಭಯೋತ್ಪಾದ[...] ದೇಶವಾಗಿದೆ.


ಜಗತ್ತಿನ ಶ್ರೀಮಂತ ರಾಷ್ಟ್ರಗಳ ಸಾಲಿನಲ್ಲಿ ಎ[...] ತಟ್ಟಿಕೊಂಡು ನಿಲ್ಲುತ್ತಿದ್ದ ಅಮೆರಿಕಾಕ್ಕೆ ಕೆಲ ವರ್ಷಗಳಿ[...] ಆರ್ಥಿಕ ಹಿಂಜರಿತ, ಪ್ರಕೃತಿ ವಿಕೋಪ ಮಾಯ[...] ಗಾಯಗಳನ್ನು ಮಾಡಿರುವುದಂತೂ ನಿಜ. ಅಲ್ಲಿನ ಪ್ರಭು[...] ಶ್ರೀಮಂತರಿಗೆ ಬೆಣ್ಣೆಯಂತೆ, ಜನಸಾಮಾನ್ಯರಿ[...] ಸುಣ್ಣದಂತೆ ವರ್ತಿಸಿದ್ದರಿಂದ ಸಾಮಾಜಿಕ ಕಾರ್ಯಕರ್ತ[...] ಹಾಗೂ ಪ್ರಗತಿಪರರ ಮುಂದಾಳತ್ವದಲ್ಲಿ ಈಚೆ[...] ಹೋರಾಟಗಳು ಶುರುವಾಗಿರುವುದು. ಕೊಂಬ[...] ಮೂಡಿಸಿಕೊಂಡು ಮೆರೆಯುತ್ತಿದ್ದ ಅಮೆರಿಕಕ್ಕೆ ಅಂಕು[...] ಹಾಕಲು ಅಮೆರಿಕದ ಜನತೆ ಸಜ್ಜಾಗುತ್ತಿರುವುದು ಆಶಾದಾಯಕ ಬೆಳವಣಿ[...] 'ಕಂಡಹಾಗೆ' ಅಂಕಣದಲ್ಲಿ ಗೌರಿ ಮೇಡಂ ಅವರ ಲೇಖನ ಅಮೆರಿಕದ ವಾಸ್ತ[...] ಪರಿಸ್ಥಿತಿಗೆ ಕನ್ನಡಿಯಂತಿದೆ.

- ಹಳ್ಳಿ ಬಸವರಾಜ, ಹಸಮಕ[...]

"70ರ ದಶಕದ ನಂತರ ಕುವೆಂಪು ಅಪ್ರಸ್ತುತರಾಗುತ್ತಲೇ ಪ್ರಸ್ತುತರಾ[...] ತೊಡಗಿದರು" ಎನ್ನುವ ತೇಜಸ್ವಿಯವರ ಮಾರ್ಮಿಕ ಮಾತುಗಳು ಇವತ್ತಿ[...] ನಮ್ಮ ಕಿವಿಗಳಲ್ಲಿ ಗುಯಿಗುಡುತ್ತಿವೆ. ಆದರೆ ಈ ಮಾತಿನ ಒಟ್ಟಾರೆ ಸಾರಾ[...] ವನ್ನಾಗಲಿ, ಅದನ್ನು ಮತ್ತೆ ಮತ್ತೆ ಒಡೆದು ಮತ್ತೆ ಮತ್ತೆ ಒಂದು ಭಂದದ[...] ಜೋಡಿಸುವಂತಹ ಪ್ರಜ್ಞೆಯಾಗಲಿ ನಮ್ಮಲ್ಲಿ ಎಲ್ಲಿದೆ ಹೇಳಿ???

ಭಟ್ಟರ ಶಿಷ್ಯನ ಸೆನ್ಸಾರ್ ಪುರಾಣ




ಪವನ್

ಕನ್ನಡ ಚಿತ್ರರಂಗದಲ್ಲಿ ಈಗ ದಿನಕ್ಕೊಂದು ಹುಚ್ಚಾಟ, ...ಲುತನ ಮತ್ತು ನಗೆಪಾಟಲಿನ ಘಟನೆಗಳು ನಡೆಯುತ್ತಿವೆ.

ಈಗ ಕೆಲವು ನಿರ್ದೇಶಕರು ಸೆನ್ಸಾರ್ ಮಂಡಳಿ ಜೊತೆ ...ದ್ದಾಟಕ್ಕೆ ಹೊರಟರೆ, ಕೆಲವರು ಪ್ರೇಕ್ಷಕರನ್ನೇ ಯಾಮಾರಿಸಲು ...ಹೊರಟಿದ್ದಾರೆ.


ಯೋಗರಾಜ್ ಭಟ್ಟರ ಶಿಷ್ಯ ಪವನ್ ಎಂಬ ತರುಣ ...ರ್ದೇಶಿಸಿದ 'ಲೈಫು ಇಷ್ಟೇನೆ' ಚಿತ್ರದ ವಿರುದ್ಧ ಮೊನ್ನೆ ಸೆನ್ಸಾರ್ ...ಮಂಡಳಿಯವರು ಪೊಲೀಸರಿಗೆ ದೂರು ನೀಡಿದ್ದಾರೆ. ಸೆನ್ಸಾರ್ ಮಂಡಳಿ, ...ಚಿತ್ರವೊಂದರ ನಿರ್ಮಾಪಕ ಮತ್ತು ನಿರ್ದೇಶಕರ ವಿರುದ್ಧ ದೂರು ನೀಡುತ್ತಿರುವುದು ...ದೇ ಮೊದಲ ಬಾರಿ. ಈ ಚಿತ್ರದ ನಿರ್ದೇಶಕ ಪವನ್ ಮಾಡಿದ ಘೋರ ...ಅಪರಾಧವೇನೆಂದರೆ ಸೆನ್ಸಾರ್ ಮಂಡಳಿಯವರು ಸರ್ಟಿಫಿಕೇಟ್ ನೀಡಿದ ನಂತರ ...ಐವೊಂದು ಭಾಗಗಳನ್ನು ಪುನಃ ಸೇರಿಸಿ ಆ ಚಿತ್ರವನ್ನು ಥಿಯೇಟರ್‌ಗಳಲ್ಲಿ ...ಪ್ರದರ್ಶಿಸಿರುವುದು.

ಆದರೆ ಈ ಬಗ್ಗೆ ನಿರ್ದೇಶಕ ಪವನ್ ಹೇಳುತ್ತಿರುವುದೇ ಬೇರೆ. "ನಮ್ಮ ಚಿತ್ರ ...ಥಿಯೇಟರ್‌ನಲ್ಲಿ ಚೆನ್ನಾಗಿಯೇ ಹೋಗುತ್ತಿತ್ತು. ಈ ಸಂದರ್ಭದಲ್ಲಿ ಈ ಚಿತ್ರದ ...ನಕಲಿ ಕ್ಯಾಸೆಟ್‌ಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿವೆ ಎಂಬ ಸುದ್ದಿ ಕೇಳಿಬಂತು. ...ಅದನ್ನು ತಪ್ಪಿಸುವ ಕಾರಣಕ್ಕಾಗಿ ನಾವು ಚಿತ್ರದ ಕ್ಲೈಮ್ಯಾಕ್ಸನ್ನು ಬದಲಾಯಿಸಿದೆವು" ...ಎಂದು ಆತ ಮುಗ್ಧರಂತೆ ಉತ್ತರಿಸುತ್ತಾನೆ.

ಆದರೆ ಯಾವುದೇ ಚಿತ್ರಕ್ಕೆ ಸೆನ್ಸಾರ್ ಸರ್ಟಿಫಿಕೇಟ್ ದೊರೆತ ನಂತರ ಕೆಲವು ...ಭಾಗಗಳನ್ನು ಸೇರಿಸಿದರೆ ಅದನ್ನು ಪುನಃ ಸೆನ್ಸಾರ್‌ಗೆ ತೋರಿಸಬೇಕು ಎಂಬ ಕನಿಷ್ಠ ...ಜ್ಞಾನ ಈ ನಿರ್ದೇಶಕನಿಗೆ ಇಲ್ಲವೆಂದರೆ ನಿಜಕ್ಕೂ ಆಶ್ಚರ್ಯವಾಗುತ್ತದೆ. "ನಾವು ...ಹಿಂದೆ ಸೆನ್ಸಾರ್ ಮಾಡಿದ ಭಾಗವನ್ನೇ ಪುನಃ ಸೇರಿಸಿದ್ದೇವೆ" ಎಂದು ಮೊಂಡು ...ವಾದವನ್ನು ಮಾಡುತ್ತಿರುವ ಪವನ್ ಬಗ್ಗೆ ಏನು ಹೇಳಬೇಕೆಂದು ಗೊತ್ತಾಗುತ್ತಿಲ್ಲ.

'ಲೈಫು ಇಷ್ಟೇನೆ' ಚಿತ್ರದ ಕಥೆ ಈ ರೀತಿಯಾದರೆ ರವೀಂದ್ರ ಎಂಬ ತರುಣ ...ನಿರ್ದೇಶಕನ ಮೊದಲ ಚಿತ್ರ 'ಐ ಆ್ಯಂ ಸಾರಿ, ಬನ್ನಿ ಮತ್ತೆ ಪ್ರೀತ್ಸೋಣ' ಚಿತ್ರದ ಕತೆ ...ಇನ್ನೂ ಹಾಸ್ಯಾಸ್ಪದವಾಗಿದೆ. ಈ ಚಿತ್ರ ಬಿಡುಗಡೆಯಾದಾಗ ಮೂರೇ ದಿನಕ್ಕೆ ಥಿಯೇಟರ್ ಬಿಕೋ ಎನ್ನಲಾರಂಭಿಸಿತ್ತು. ಆಗ ರವೀಂದ್ರ ಥಿಯೇಟರ್‌ಗಳ ವಿರುದ್ಧ ಸಮರ ಸಾರಿ ಚಿತ್ರವನ್ನು ಚಿತ್ರಮಂದಿರಗಳಿಂದ ತೆಗೆದ. ಈಗ ಸುಮಾರು ಮೂರ್‍ನಾಲ್ಕು ತಿಂಗಳ ನಂತರ ಮತ್ತೆ ಈ ಚಿತ್ರವನ್ನು ಬಿಡುಗಡೆ ಮಾಡಲು ರವೀಂದ್ರ ಹೊರಟಿದ್ದಾರೆ.

ರವೀಂದ್ರ ಹೇಳುವ ಪ್ರಕಾರ ಈ ಚಿತ್ರವನ್ನು ವೀಕ್ಷಿಸಿದ ಲೀಲಾಶಂಕರ್ ಎಂಬ ಪ್ರೇಕ್ಷಕ ಅತ್ಯುತ್ಸಾಹದಲ್ಲಿ ಇದನ್ನು ಬಿಡುಗಡೆ ಮಾಡಲು ಹೊರಟಿದ್ದಾರಂತೆ. ಅವರು ಅಂಬರೀಷ್ ಗೆಳೆಯ. ಈ ಕಾರಣಕ್ಕಾಗಿ ಅಂಬಿ ಕೂಡ ಇದನ್ನು ರೀ-ರಿಲೀಜ್ ಮಾಡಬೇಕೆಂದು ಛೇಂಬರ್ ಮೇಲೆ ಒತ್ತಡ ಹೇರಿದ್ದಾರಂತೆ.




ಈ ಹಿಂದೆ ರೀ-ರಿಲೀಸ್ ಆದ ಚಿತ್ರಗಳೆಲ್ಲ ಗೋತಾ ಹೊಡೆದಿದ್ದರೂ ಇದು ಮತ್ತೆ ಚೆನ್ನಾಗಿ ಓಡುತ್ತದೆ ಎಂಬ ಆತ್ಮವಿಶ್ವಾಸದಲ್ಲಿದ್ದಾರೆ ರವೀಂದ್ರ. ತಮಾಷೆಯೆಂದರೆ ಈ ಚಿತ್ರದ ಆಡಿಯೋ ಬಿಡುಗಡೆ ಸಮಾರಂಭವನ್ನು ಕೂಡ ಮೊನ್ನೆ ಚೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ರವೀಂದ್ರ ಏರ್ಪಡಿಸಿದ್ದರು. ಒಂದೇ ಒಂದು ಹೊಸ ಹಾಡನ್ನು ಸೇರಿಸಿದ ಕಾರಣಕ್ಕೋಸ್ಕರ ಕ್ಯಾಸೆಟ್ ಬಿಡುಗಡೆ ಸಮಾರಂಭ ಹಮ್ಮಿಕೊಂಡ ಈ ರವೀಂದ್ರರ ಹುಚ್ಚಾಟವನ್ನು ನೋಡಿ ಗಾಂಧಿನಗರ ನಗುತ್ತಿದೆ. ಇಂತಹ ಕ್ಯಾಸೆಟ್ ಬಿಡುಗಡೆ ಸಮಾರಂಭವನ್ನು ವರದಿ ಮಾಡಲು ಹೋಗಿದ್ದ ಪತ್ರಕರ್ತರ ಬಗ್ಗೆಯೂ ಗಾಂಧಿನಗರದಲ್ಲಿ ಗೇಲಿಯ ಮಾತು ಕೇಳಿಬರುತ್ತಿದೆ.

ಹೀಗೆ ಕ್ಯಾಸೆಟ್ ಬಿಡುಗಡೆ ಸಮಾರಂಭವನ್ನು ಮತ್ತು ಚಿತ್ರವನ್ನು ಮರು ಬಿಡುಗಡೆ ಮಾಡಲು ಹೊರಟಿರುವ ರವೀಂದ್ರ ನಾಳೆ ಮತ್ತೊಮ್ಮೆ ತಮ್ಮ ಚಿತ್ರದ ವಿಮರ್ಶೆ ಬರೆಯಿರಿ ಎಂದು ಪತ್ರಕರ್ತರನ್ನು ಕೇಳದೇ ಇರುತ್ತಾನೆಯೇ? ಎಂಬ ಪ್ರಶ್ನೆಯೂ ಗಾಂಧಿನಗರದಲ್ಲಿ ಚರ್ಚೆಯಾಗುತ್ತಿದೆ.

ಆರಂಭದಲ್ಲಿ ಈ ಚಿತ್ರಕ್ಕೆ 'ಐ ಆ್ಯಂ ಸಾರಿ, ಬನ್ನಿ ಮತ್ತೆ ಪ್ರೀತ್ಸೋಣ' ಎಂಬ ಹೆಸರೇ ಅತ್ಯಂತ ಸೂಕ್ತ ಎಂದು ಬೀಗುತ್ತಿದ್ದ ರವೀಂದ್ರ ಈಗ ಚಿತ್ರದ ಹೆಸರನ್ನೂ ಬದಲಾಯಿಸಿಬಿಟ್ಟಿದ್ದಾರೆ. 'ಐ ಆ್ಯಂ ಸಾರಿ' ಎಂಬ ವಾಕ್ಯ ನಕಾರಾತ್ಮಕವಾಗಿ ಕಾಣಿಸುತ್ತಿದೆ ಎಂಬ ಕಾರಣಕ್ಕಾಗಿ ಈಗ ಅದನ್ನು ಕಿತ್ತೆಸೆದು ಬರೀ 'ಮತ್ತೆ ಪ್ರೀತ್ಸೋಣ ಬನ್ನಿ' ಎಂದು ಉಳಿಸಿಕೊಳ್ಳಲಾಗಿದೆ.

ನಿರ್ದೇಶಕರುಗಳ ಪಾಡು ಈ ರೀತಿಯಾದರೆ, ಈಗ ಕನ್ನಡ ಚಿತ್ರರಂಗದಲ್ಲಿ ನಾಯಕರುಗಳಿಗೆ ಮತ್ತೊಂದು ರೀತಿಯ ಹುಚ್ಚು ಹಿಡಿದಿದೆ. ಹಿಂದಿಯ ನಾಯಕ ನಟರಾದ ಶಾರುಖ್ ಖಾನ್ ಮತ್ತು ಸಲ್ಮಾನ್ ಖಾನ್ ಕನ್ನಡ ನಾಯಕ ನಟರಲ್ಲಿ ಪರಕಾಯ ಪ್ರವೇಶ ಮಾಡಿದಂತಿದೆ. ಉದಾ: ಕೆಲವು ತಿಂಗಳ ಹಿಂದೆ ದುನಿಯಾ ವಿಜಿ ಆರು ತಿಂಗಳುಗಳ ಕಾಲ ಕಠಿಣ ವ್ಯಾಯಾಮ ಮಾಡಿ ಸಿಕ್ಸ್ ಪ್ಯಾಕ್ ಪಡೆದು ಭಾರೀ ಪ್ರಚಾರವನ್ನು ಪಡೆದಿದ್ದರು. ಹಾಗೆ ಆ ಸಿಕ್ಸ್ ಪ್ಯಾಕ್‌ನಿಂದಾಗಿ ಅವರ ಚಿತ್ರವೇನೂ ಸೂಪರ್ ಹಿಟ್ ಆಗಿಲ್ಲವೆಂಬುದು ಬೇರೆ ವಿಷಯ. ಹಿಂದಿಯವರು ಮಾತ್ರ ಸಿಕ್ಸ್ ಪ್ಯಾಕ್ ಪಡೆಯಬಹುದಾ? ನಮಗೂ ಪಡೆಯಲು ಬರುವುದಿಲ್ಲವೇ? ಎಂದು ತೋರಿಸಿಕೊಟ್ಟಿದ್ದೇವೆ ಎಂದಿದ್ದರು ದುನಿಯಾ ವಿಜಿ.

ಈಗ ಅದೇ ರೀತಿ ನಾಯಕ ನಟ ಪ್ರೇಮ್ ಮತ್ತು ಪುನೀತ್ ರಾಜ್‌ಕುಮಾರ್ ಕೂಡ ಸಿಕ್ಸ್ ಪ್ಯಾಕ್ ಪಡೆದಿದ್ದಾರೆ. ಒಬ್ಬ ನಾಯಕ ನಟ ಅತ್ಯುತ್ತಮವಾದ ದೇಹ ಹೊಂದುವುದು ಖಂಡಿತವಾಗಿಯೂ ಒಳ್ಳೆಯದೆ. ಆದರೆ ಅದೊಂದೇ ಕಾರಣಕ್ಕೆ ಅವರು ಬೀಗುವುದು ಮಾತ್ರ ಸರಿಯಲ್ಲ.




ಮೊನ್ನೆಯಷ್ಟೇ ಸಿಕ್ಸ್ ಪ್ಯಾಕ್ ಲುಕ್‌ನಲ್ಲಿ ಕಾಣಿಸಿಕೊಂಡ ಪ್ರೇಮ್ ಹೇಳಿದ್ದೇನು ಗೊತ್ತೇ? "ನನಗೇನೋ ಇಡೀ ಸಿನಿಮಾದಲ್ಲಿ ಶರ್ಟ್ ಹಾಕದೆ ನನ್ನ ದೇಹ ಸೌಂದರ್ಯವನ್ನು ಪ್ರದರ್ಶಿಸುವ ಆಸೆಯಿದೆ. ಆದರೆ ನಾನು ನಟಿಸಲಿರುವ 'ಶತ್ರು' ಎಂಬ ಚಿತ್ರದಲ್ಲಿ ಕ್ಲೈಮ್ಯಾಕ್ಸ್‌ನ ಸಂದರ್ಭದಲ್ಲಿ ಮಾತ್ರ ಕೆಲವು ನಿಮಿಷಗಳ ಕಾಲ ಶರ್ಟ್ ಇಲ್ಲದೇ ಕಾಣಿಸಿಕೊಳ್ಳುತ್ತೇನೆ" ಎಂದಿದ್ದಾನೆ.

ಅಂದರೆ ತಾನು ಸಿಕ್ಸ್ ಪ್ಯಾಕ್ ಪಡೆದದ್ದೇ ಜಗತ್ತಿನ ಎಂಟನೇ ಅದ್ಭುತ ಮತ್ತು ತನ್ನ ದೇಹದಾರ್ಢ್ಯತೆಯನ್ನು ನೋಡಲು ಪ್ರೇಕ್ಷಕರು ಕಾಯುತ್ತ ಕುಳಿತಿದ್ದಾರೆ ಎಂಬ ಅರ್ಥ ಬರುವ ರೀತಿಯಲ್ಲಿ ನಾಯಕ ನಟರು ವರ್ತಿಸುತ್ತಿರುವುದನ್ನು ನೋಡಿದರೆ ನಿಜಕ್ಕೂ ನಗು ಬರುತ್ತದೆ.

ಇಂತಹ ಹುಚ್ಚಾಟ, ತಿಕ್ಕಲುತನಗಳಿಂದಲೇ ಕನ್ನಡ ಚಿತ್ರರಂಗ ಸುದ್ದಿಯಲ್ಲಿರುವುದು ನಿಜಕ್ಕೂ ಬೇಸರದ ವಿಷಯ.

• ಶೆಣೈ

ಮತ್ತೆ ನಾಣಿ ನಟನೆ



ಕನ್ನಡ ಪ್ರೇಕ್ಷಕರ ಮೇಲೆ ಕನಿಕರ ತೋರಿಸಿ ಕಳೆದ ಮೂರು ವರ್ಷಗಳಿಂದ ...ಯಾವುದೇ ಚಿತ್ರದಲ್ಲಿ ನಟಿಸದಿದ್ದ ನಿರ್ದೇಶಕ ಎಸ್.ನಾರಾಯಣ್ ಈಗ ಅದೇ ಪ್ರೇಕ್ಷಕರ ...ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ. ಈಗ ನಾರಾಯಣ್ ನಿರ್ದೇಶಿಸು...ತ್ತಿರುವ 'ಮುಂಜಾನೆ' ಎಂಬ ಚಿತ್ರದಲ್ಲಿ ನಾಯಕ ನಟ ಗೋಲ್ಡನ್ ಸ್ಟಾರ್ ಗಣೇಶ್ ...ಜೊತೆ ಒಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲು ನಾರಾಯಣ್ ನಿರ್ಧರಿಸಿದ್ದಾರೆ.

ನಾರಾಯಣ್ ಕಳೆದ ಬಾರಿ ನಟನಾಗಿ ಕಾಣಿಸಿಕೊಂಡಿದ್ದು ಮೂರು ವರ್ಷಗಳ ...ಹಿಂದೆ ಬಿಡುಗಡೆಯಾಗಿದ್ದ 'ಚಿಕ್ಕಪೇಟೆ ಸಾಚಾ' ಎಂಬ ಚಿತ್ರದಲ್ಲಿ. ಆದರೆ ಆನಂತರದ ...ವರ್ಷಗಳಲ್ಲಿ ನಾರಾಯಣ್ ನಟನಾಗಿ ಕಾಣಿಸಿಕೊಳ್ಳದೆ ತನ್ನ ಮಗ ಪಂಕಜ್‌ನನ್ನು ...ನಾಯಕ ನಟನಾಗಿ ಮೂರ್‍ನಾಲ್ಕು ಚಿತ್ರಗಳಲ್ಲಿ ತೋರಿಸಿದ್ದರು. ಆದರೆ ಪಂಕಜ್‌ನನ್ನು ...ಕನ್ನಡದ ಪ್ರೇಕ್ಷಕ ಮಹಾಪ್ರಭು ಸಂಪೂರ್ಣವಾಗಿ ತಿರಸ್ಕರಿಸಿದರು.

ಅದೇನೇ ಇರಲಿ, ನಾರಾಯಣ್ ಹಾಸ್ಯನಟನಾಗಿ ಕಾಣಿಸಿಕೊಂಡಾಗಲೆಲ್ಲ ಅವರು ...ಥಿಯೇಟರ್‌ನಲ್ಲಿ ಬೇಕಾದಷ್ಟು ಚಪ್ಪಾಳೆ ಗಿಟ್ಟಿಸಿಕೊಂಡಿದ್ದರು. ಆದರೆ ನಾಯಕ ನಟನಾಗಿ ಕಾಣಿಸಿಕೊಂಡಾಗ ಮಾತ್ರ ಅವರು ...ಮುಗ್ಗರಿಸಿದ್ದರು. ಈಗ 'ಮುಂಜಾನೆ' ಚಿತ್ರದಲ್ಲಿ ಗಣೇಶ್ ನಾಯಕನಟನಾಗಿರುವುದರಿಂದ ನಾರಾಯಣ್ ಖಂಡಿತವಾಗಿಯೂ ...ಒಂದು ಸಣ್ಣ ಪುಟ್ಟ ಪಾತ್ರದಲ್ಲಿ ಕಾಣಿಸಿಕೊಳ್ಳುವ ಮೂಲಕ ಪ್ರೇಕ್ಷರಕ ಮೇಲೆ ಕರುಣೆ ತೋರುತ್ತಾರೆಂದು ಆಶಿಸೋಣವೇ?


ಕೋ ಕೊಟ್ಟವರೊಂದಿಗೆ ಗುರುವಿನ ಗಾನ!


ಚಂದ್ರು



ಕನ್ನಡ ಚಿತ್ರರಂಗದ ಸಂಗೀತ ಕ್ಷೇತ್ರದಲ್ಲಿ ಸಂಗೀತ ನಿರ್ದೇಶಕರುಗಳ ನಡುವೆ ಒಂದು ರೀತಿಯ ಮಧುರ ಬಾಂಧವ್ಯ ಮೊದಲಿನಿಂದಲೂ ಇದೆ. ಒಬ್ಬ ಸಂಗೀತ ನಿರ್ದೇಶಕನ ಚಿತ್ರದಲ್ಲಿ ಮತ್ತೊಬ್ಬ ಸಂಗೀತ ನಿರ್ದೇಶಕನನ್ನು ಗಾಯಕನಾಗಿ ಬಳಸಿಕೊಂಡ ಉದಾಹರಣೆ ಬೇಕಾದಷ್ಟಿದೆ. ಸಿ.ಅಶ್ವಥ್, ರಾಜೇಶ್ ರಾಮನಾಥನ್, ಮನೋಹರ್, ಗುರುಕಿರಣ್, ಹರಿಕೃಷ್ಣ ಮೊದಲಾದ ಹಾಡುವ ಸಂಗೀತ ನಿರ್ದೇಶಕರು ಗಾಯಕರಾಗಿಯೂ ಮಿಂಚಿದ್ದುಂಟು.

ಇದೀಗ ಆರ್.ಚಂದ್ರು ನಿರ್ದೇಶನದ 'ಕೋ...ಕೋ...' ಚಿತ್ರದ ಸಂಗೀತ ನಿರ್ದೇಶನವನ್ನು ತೆಲುಗಿನ ರಮಣಗೋಕುಲ ಮಾಡುತ್ತಿರುವುದು ಬಹುತೇಕ ಎಲ್ಲರಿಗೂ ಗೊತ್ತಿರುವ ವಿಷಯ. ಈಗ ಈ ಚಿತ್ರದಲ್ಲಿ ಗುರುಕಿರಣ್ ಹಾಡಲಿರುವುದು ಲೇಟೆಸ್ಟ್ ಸುದ್ದಿ. ರಮಣಗೋಕುಲ ಸಂಗೀತ ನಿರ್ದೇಶನದಲ್ಲಿ ಗುರುಕಿರಣ್ ಹಾಡುತ್ತಿರುವುದು ಇದೇ ಮೊದಲ ಬಾರಿ. ಅದಕ್ಕೆ ಇನ್ನೊಂದು ಕಾರಣವೂ ಇದೆ. ಆರ್.ಚಂದ್ರು ನಿರ್ದೇಶನದ 'ಮೈಲಾರಿ' ಚಿತ್ರಕ್ಕೆ ಗುರುಕಿರಣ್ ಅದ್ಭುತವಾದ ಸಂಗೀತವನ್ನು ನೀಡಿದ್ದರು. ಅಂತಹ ಅದ್ಭುತ ಸಂಗೀತ ನೀಡಿದ ಗುರು ಅವರನ್ನು ಬದಲಾಯಿಸಿದಕ್ಕೆ ಆರ್.ಚಂದ್ರುಗೆ ಎಲ್ಲೋ ಮನಸ್ಸಿಗೆ ಬೇಸರವೂ ಉಂಟಾಗಿತ್ತು. ಈಗ ಅವರಿಗೆ ಹಾಡುವ ಅವಕಾಶವನ್ನು ಕೊಡುವ ಮುಖಾಂತರ ಚಂದ್ರು ತಮಗೆ ತಾವೇ ತೃಪ್ತಿ ಪಟ್ಟುಕೊಂಡಿದ್ದಾರೆ.



70ರ ತಮ್ಮ ಇಳಿ ವಯಸ್ಸಿನಲ್ಲಿ ಕುವೆಂಪುರವರು ಸೈದ್ಧಾಂತಿಕವಾಗಿ, ಒಬ್ಬ ...ಜೀವಪರ ಲೇಖಕನಾಗಿ, ವಿಚಾರವಾದಿಯಾಗಿ, ಜನಪರವಾಗಿ ಚಿಂತಿಸುವ ಮೂಲಕ ...ಒಂದು ಹೊಸ ತಲೆಮಾರಿಗೆ ಅಮೂಲ್ಯ ಬೆಳಕನ್ನು ನೀಡುವಂತಹ ಚಿಂತನಶೀಲ ...ಕಾರ್ಯಕ್ಕೆ ಕೈ ಹಾಕಿದ್ದರು. ಅವರ ಸಾಹಿತ್ಯದ ಎಲ್ಲಾ ಪ್ರಯೋಗಗಳು 'ಮಲೆಗಳಲ್ಲಿ ...ಮದುಮಗಳು' ಕಾದಂಬರಿಯ ಮೂಲಕ ಒಂದು ಘಟ್ಟಕ್ಕೆ



...ಬಂದು ತಲಪಿದ್ದವು. ಪುರೋಹಿತಶಾಹಿ ವಿರೋಧಿಯ ಅತ್ಯಂತ ...ವೈಚಾರಿಕ ಚಿಂತನೆಯನ್ನು ಘೋಷಣೆಗಳ ಮಟ್ಟಕ್ಕೆ ಇಳಿಸದೆ ಅದು ...ಸರ್ವಕಾಲಕ್ಕೂ ಜೀವಂತವಾಗಿರುವ ಒಂದು ...ಜೀವನದಿಯನ್ನಾಗಿಯೂ, ಚಲನಶೀಲತೆಯನ್ನುಳ್ಳ ಜೀವಪರವಾದ ...ಒಂದು ಬದುಕುವ ಕ್ರಿಯೆಯನ್ನಾಗಿಯೇ ರೂಪಿಸಿಬಿಟ್ಟರು. ಅವರ ...ವಿಶ್ವಮಾನವ ಸಂದೇಶ ಕೇವಲ ನೀತಿಬೋಧನೆಗಳಿರುವ ಒಂದು ...ಕರಪತ್ರವಲ್ಲ. ಅದು ಒಬ್ಬ ಕ್ರಿಯಾಶೀಲ ಲೇಖಕ ಸಾಂಪ್ರದಾಯಿಕ ...ಮೌಢ್ಯಗಳನ್ನು ಸಂಪೂರ್ಣವಾಗಿ ಅಲ್ಲಗೆಳೆಯುತ್ತ, ವರ್ಣಾಶ್ರಮದ ...ಅಮಾನವೀಯತೆಯನ್ನು ಯಾವ ದ್ವಂದಗಳಿಲ್ಲದೆ ತಿರಸ್ಕರಿಸುತ್ತ ...ಮೂಲಕ ಸರ್ವ ಜನಾಂಗದ ಶಾಂತಿಯನ್ನು ಬಯಸಿದ ಒಬ್ಬ ...ಮಾನವತಾವಾದಿಯ ಅದ್ಭುತ ಜೀವಸೂತ್ರಗಳಾಗಿಯೇ ಕಂಡುಬರುತ್ತವೆ. ಕುವೆಂಪು ...ರವರಿಗೆ ಶೂದ್ರರನ್ನು ಮೌಢ್ಯದೊಳಗಿಟ್ಟು ಶೋಷಿಸುತ್ತಿದ್ದ ಪುರೋಹಿತಶಾಹಿಯ ...ಬಗ್ಗೆ ಎಷ್ಟು ತಿರಸ್ಕಾರವಿತ್ತೋ ಅಷ್ಟೇ ಸಿಟ್ಟು ಈ ಪುರೋಹಿತ ವರ್ಗಗಳಿಗೆ ...ಬಲಿಯಾಗುತ್ತಿದ್ದ ಶೂದ್ರ ವರ್ಗಗಳ ಹುಂಬತನದ ಬಗೆಗೆ ಇತ್ತು.

...ಇಷ್ಟೆಲ್ಲ ಏಕೆ ಹೇಳಬೇಕೆನಿಸಿದೆಯೆಂದರೆ ತಮ್ಮ ಜೀವಿತ ಕಾಲಾವಧಿಯಲ್ಲಿ ...ಎದುರಾಗುವ, ವ್ಯವಸ್ಥೆಯೊಳಗೆ ಘಟಿಸುವ ಅನೇಕ ಸಾಮಾಜಿಕ ಸ್ಥಿತ್ಯಂತರಗಳು, ...ಶೋಷಣೆಗಳು, ರಾಜಕೀಯ ಘಟನೆಗಳು, ತೀರ್ಮಾನಗಳು, ಅಸಮಾನತೆ, ...ಅನ್ಯಾಯದ ವಿರುದ್ಧದ ಹೋರಾಟಗಳು ಇವನ್ನೆಲ್ಲ ಪ್ರಮುಖ ಲೇಖಕರಾದವರು ದಿಟ್ಟತನದಿಂದ, ಆತ್ಮಸಾಕ್ಷಿಯಿಂದ ನೇರವಾಗಿ ಪಾಲ್ಗೊಳ್ಳುವಿಕೆಯನ್ನು ಅಥವಾ ಇವಕ್ಕೆಲ್ಲ ತಮ್ಮ ವಿಚಾರಗಳ, ಚಿಂತನೆಗಳ ಮೂಲಕ ಸಕ್ರಿಯವಾಗಿ ಒಳಗೊಳ್ಳುವಿಕೆಯನ್ನು ನಿರಂತರವಾಗಿ ನಡೆಸಲೇಬೇಕಾಗುತ್ತದೆ. ಎಂತಹ ಕಾಲಘಟ್ಟದಲ್ಲೂ ಕೂಡ.

ಕುವೆಂಪು 30 ರ ದಶಕದ ನಿರಂಕುಶಮತಿಗಳಾಗಿ, ವಿಚಾರಕ್ರಾಂತಿಗೆ ಆಹ್ವಾನಗಳಿಂದ ಹಿಡಿದು 70 ರ ದಶಕದ ಬರಹಗಾರರ ಒಕ್ಕೂಟ, ಜಾತಿವಿನಾಶ ಸಮ್ಮೇಳನ, ಬೂಸ ಚಳವಳಿ, 80ರ ದಶಕದ ಗೋಕಾಕ್ ಚಳವಳಿಗಳವರೆಗೂ ತಮ್ಮ ವೈಚಾರಿಕತೆಯ ಪ್ರಖರತೆಯನ್ನು, ಜೀವಪರ ನಿಲುವುಗಳನ್ನು ನಿರಂತರವಾಗಿ ಜೀವಂತವಾಗಿರಿಸಿಕೊಂಡಿದ್ದರು. ಆ ಮೂಲಕ ಮೂರು ಪ್ರಗತಿಪರ ತಲೆಮಾರನ್ನು ರೂಪಿಸಿದ್ದರು.

ಅಗಲೇ ಅಲ್ಲವೆ 70ರ ದಶಕದ ನಂತರ ಕನ್ನಡ ಸಾಹಿತ್ಯದ, ಸಾಂಸ್ಕೃತಿಕ ವಲಯಗಳಲ್ಲಿ ಅದ್ಭುತವೆನ್ನಿಸುವಷ್ಟರ ಮಟ್ಟಿಗೆ ಬದಲಾವಣೆಗಳಾದದ್ದು. ಕನ್ನಡದ ಪ್ರಮುಖ ಲೇಖಕರು ತಮ್ಮ ನವ್ಯದ ಅತೀಯಾದ ವ್ಯಕ್ತಿಗತ, ವೈಯಕ್ತಿಕ ಹಳಹಳಿಕೆಗಳನ್ನು ತ್ಯಜಿಸಿ ಸಾಮಾಜಿಕತೆಯ ಕಡೆಗೆ ವಾಲತೊಡಗಿದ್ದು. ಈ ರೀತಿ ರೂಪಾಂತರಗೊಂಡ ತಲೆಮಾರು ನಂತರ 80 ರ ದಶಕದಲ್ಲಿ ಮತ್ತೊಂದು ತಲೆಮಾರನ್ನು ರೂಪಿಸತೊಡಗಿತು. ಈ ರೀತಿಯಾಗಿಯೇ ಕುವೆಂಪು "70ರ ದಶಕದ ನಂತರ ಕುವೆಂಪು ಅಪ್ರಸ್ತುತರಾಗುತ್ತಲೇ ಪ್ರಸ್ತುತರಾಗತೊಡಗಿದರು".

ಇದೂ ಕೂಡ ಏಕೆ ಮತ್ತೆ ಮತ್ತೆ ಕಾಡುತ್ತಿದೆಯೆಂದರೆ ಕನ್ನಡದ ಶ್ರೇಷ್ಠ ಕವಿ, ನಾಟಕಕಾರರಾದ, ಅವೈದಿಕತೆಯನ್ನೇ ಪ್ರಮುಖ ಹೂರಣವಾಗಿರುವ ದೇಸಿ ಚಿಂತನೆಯನ್ನು ಆ ಮೂಲಕ ತಳ ಸಮುದಾಯಗಳ ಮತ್ತೊಂದು ಲೋಕವನ್ನೇ ತಮ್ಮ ಜಾನಪದ ಕಥಾನಕದ ಮೂಲಕ ತೆರೆದಿಟ್ಟ, ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಚಂದ್ರಶೇಖರ ಕಂಬಾರರು ಪುರೋಹಿತಶಾಹಿ, ಮನುವಾದಿ ಪರಂಪರೆಯ ಪೇಜಾವರ ಕಾಲಿಗೆ ಬಿದ್ದದ್ದನ್ನು ನೋಡಿದಾಗ ಬಹಳ ಸಂಕಟವಾಯಿತು. ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಕನ್ನಡದ ಇಡೀ ಕ್ರಿಯಾಶೀಲ, ಪ್ರಜ್ಞಾವಂತ ಸಾಹಿತಿಗಳು, ಚಿಂತಕರು, ಸಾಹಿತ್ಯಾಸಕ್ತರು ಅತ್ಯಂತ ಪ್ರೀತಿಯಿಂದ, ತೀವ್ರವಾಗಿ ಸಂಭ್ರಮಿಸಿದ್ದರು. ಆದರೆ ಪೇಜಾವರ ಸ್ವಾಮಿಗಳ ಕಾಲಿಗೆ ಬೀಳುವುದರ ಮೂಲಕ ನಮ್ಮ ಪ್ರೀತಿಯ ಕಂಬಾರರು ಒಂದು ರೀತಿಯಲ್ಲಿ ನಮ್ಮೆಲ್ಲರನ್ನು ತೀವ್ರವಾಗಿ ಅವಮಾನಿಸಿದರೆನಿಸುತ್ತದೆ.

ನಮಗಿನ್ನೂ ನೆನಪಿದೆ. 1983ರಲ್ಲಿ ಅಂದಿನ ರಾಮಕೃಷ್ಣ ಹೆಗಡೆಯವರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಸಮಾಜವಾದಿ ಜೆ.ಹೆಚ್.ಪಟೇಲರು ಅಂದಿನ ಮಠಾದೀಶರ ಕಾಲಿಗೆ ಬೀಳುತ್ತಿರುವ ದೃಷ್ಯವನ್ನು ನೋಡಿ ತೇಜಸ್ವಿಯವರು ಅಂದಿನ 'ಲಂಕೇಶ್ ಪತ್ರಿಕೆ'ಯಲ್ಲಿ ಕೆಂಡಾಮಂಡಲವಾಗಿ ಟೀಕಿಸುತ್ತ ಈ ಚಿತ್ರವೇನಾದರು ಕುವೆಂಪುರವರ ಕಣ್ಣಿಗೆ ಬಿದ್ದರೆ ಅವರು ತೀವ್ರವಾಗಿ ನೊಂದುಕೊಳ್ಳುತ್ತಾರೆಂದು ಮಮ್ಮಲ ಮರುಗಿದ್ದರು. ಅದಕ್ಕೆ ಪಟೇಲರು ತಮ್ಮ ಎಂದಿನ ಉಡಾಫೆಯ ಶೈಲಿಯಲ್ಲಿ ಪ್ರತಿಕ್ರಯಿಸುತ್ತ ತಾವು ಸಮಾಜವಾದಿಗಳೆಂದೂ, ತಮಗೆ ದೇಹದ ಎಲ್ಲಾ ಭಾಗಗಳು ಸಮಾನವಾದುದೆಂದೂ, ಆದ್ದರಿಂದ ಕಾಲಿಗೆ ಬೀಳುವುದೂ ಕೂಡ ಒಂದು ರೀತಿಯ ಗೌರವ ಸೂಚಿಸುವ ಕ್ರಿಯೆಯೆಂದು ಬರೆದಿದ್ದರು. ಆದಕ್ಕೆ ತೇಜಸ್ವಿಯವರು "ಹಾಗಾದರೆ ಯಾರಾದರು ಕಾಲಿನಿಂದ ಒದ್ದರೆ ಸಮಾಜವಾದಿಗಳೆಲ್ಲ ಅದನ್ನು ಗೌರವರೂಪಕವಾಗಿ ಸ್ವೀಕರಿಸಬೇಕೆ?" ಎಂದು ಸವಾಲು ಹಾಕಿದ್ದರು.

ಈಗ ಸಾಕ್ಷೀ ಪ್ರಜ್ಞೆಗಳಾಗಿದ್ದ ನಿಜದ ಲೋಹಿಯಾವಾದಿಗಳಾದ ಎಂ.ಡಿ.ಎನ್., ಲಂಕೇಶ್, ತೇಜಸ್ವಿ, ರಾಮದಾಸ್‌ರಂತಹ ವಿಗ್ರಹ ಭಂಜಕರು ಇಲ್ಲದಂತಹ ಇಂದಿನ ಚಿಂತನಶೂನ್ಯ ಸ್ಥಿತಿಯಲ್ಲಿ ಈ ತರಹದ ಘಟನೆಗಳು ಇನ್ನು ನಿರಂತರವೇನೋ.

- ಬಿ.ಶ್ರೀಪಾದ ಭಟ್, ಬೆಂಗಳೂರು

ದರ್ಶನ್ ಫ್ಯಾಮಿಲಿಯ ಬುರುಡೆ ಪುರಾಣ



ದರ್ಶನ್‌ನ ಕೇಡುಗಾಲಕ್ಕೆ ಕಾರಣವೇನು? ಆತನ ದುರಹಂಕಾರಿ ನಡವಳಿಕೆ, ದುಡ್ಡಿನ ದೌಲತ್ತು, ಹುಡುಗೀರ ಶೋಕಿ, ಹೀರೋಗಿರಿ ಮುಂತಾದ ತೆವಲುಗಳೇ ಆತನ ಅಳಿವಿಗೆ ಕಾರಣ ಅನ್ನೋದು ಎಂಥ ಶತಮೂರ್ಖರಿಗೂ ಗೊತ್ತಿರೋ ವಿಚಾರ. ತಿಮಿರು ಹೆಚ್ಚಾಗಿ, ಕುಡಿದ ಅಮಲಿನಲ್ಲಿ ಹೆಂಡತಿಗೆ ಬಡಿದು ಜೈಲು ಸೇರಿದ್ದಕ್ಕೆ ಈತನ ಮನೆಯವರು ಎಂತೆಂಥ ಕಾರಣಗಳ ಕಥೆ ಕಟ್ಟಿ ಪುಕಾರೆಬ್ಬಿಸುತ್ತಿದ್ದಾರೆ ಗೊತ್ತೆ?



ಎರಡು ವರ್ಷಗಳ ಹಿಂದೆ ದರ್ಶನ್ ನಟಿಸಿದ್ದ, ಆತನ ತಮ್ಮ ದಿನಕರ್ ನಿರ್ದೇಶಿಸಿದ್ದ 'ನವಗ್ರಹ' ಎಂಬ ಚಿತ್ರ ಬಂದಿತ್ತು. ಮೈಸೂರಿನಲ್ಲಿ ನಡೆಯುವ ದಸರಾ ಉತ್ಸವದ ಸಂದರ್ಭದಲ್ಲಿ ಚಾಮುಂಡೇಶ್ವರಿ ವಿಗ್ರಹ ಮತ್ತು ಒಡವೆಗಳನ್ನು ದೋಚುವುದರ ಸುತ್ತ ಈ ಚಿತ್ರದ ಕತೆ ಹರಡಿಕೊಂಡಿತ್ತು. ಈ ಸಿನಿಮಾದಲ್ಲಿ ಮೊದಲ ಬಾರಿಗೆ ದರ್ಶನ್ ವಿಗ್ರಹ ಕದಿಯುವ ನೆಗೆಟೀವ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದ.

ದರ್ಶನ್ ಈ ಚಿತ್ರದಲ್ಲಿ ನಟಿಸಿದ್ದರಿಂದ ತಾಯಿ ಚಾಮುಂಡೇಶ್ವರಿ ಶಾಪ ಈಗ ಈತನಿಗೆ ಅಮರಿಕೊಂಡಿದೆಯಂತೆ. ಕಳ್ಳರ ಕುರಿತಾದ ಸಿನಿಮಾಕ್ಕೆ 'ನವಗ್ರಹ' ಎಂದು ಹೆಸರಿಟ್ಟಿದ್ದರಿಂದ ಒಂಭತ್ತೂ ಗ್ರಹಗಳು ಮುನಿದು ದರ್ಶನ್‌ನ ಭವಿಷ್ಯವನ್ನು ಅಲ್ಲಾಡಿಸುತ್ತಿವೆಯಂತೆ. ಈ ಕಾರಣಕ್ಕೇ ಮೊನ್ನೆ ದಸರಾ ಆರಂಭವಾಗುವ ಸಮಯದಲ್ಲೇ ದರ್ಶನ್ ಬಂಧನಗೊಂಡು ವಿಜಯದಶಮಿಯನ್ನು ಜೈಲಿನಲ್ಲೇ ಕಳೆಯಬೇಕಾಯಿತಂತೆ. ದರ್ಶನ್‌ನಿಂದಾದ ದೈವ ಪ್ರಮಾದವನ್ನು ಮತ್ತು ಅದರ ಸೈಡ್ ಎಫೆಕ್ಟ್‌ಗಳನ್ನು ಯಾರೋ ಜ್ಯೋತಿಷಿಗಳು ದರ್ಶನ್ ಕುಟುಂಬಕ್ಕೆ ತಿಳಿಸಿ ಅವರ ಕಣ್ಣು ತೆರೆಸಿದ್ದಾರಂತೆ: ಹೀಗಾಗಿ ದರ್ಶನ್ ಜೈಲಿನಿಂದ ಬಿಡುಗಡೆಗೊಳ್ಳುತ್ತಲೇ ಮೊದಲು ಚಾಮುಂಡೇಶ್ವರಿಯ ದರ್ಶನ ಮಾಡಿ ಅಪಾಲಜಿ ಕೇಳಿಬಂದಿದ್ದಂತೆ...

ಅಬ್ಬಬ್ಬ... ದರ್ಶನ್ ಮತ್ತು ಆತನ ಮನೆಯವರು ಕಳೆದುಕೊಂಡಿರುವ ಮಾನ ಮರ್ಯಾದೆಯನ್ನು ಮತ್ತೆ ಪಡೆಯಲು ಜನತೆಯ ಕಿವಿ ಮೇಲೆ ಇಂಥಾ ಹೂವನ್ನಾ ಇಡೋದು? ತಮ್ಮ ಕುಟುಂಬ ಯಾವ ಸುದ್ದಿ ಹಬ್ಬಿಸಿದರೂ ಅದು ಮಾಧ್ಯಮದ ಮೂಲಕ ಜನರ ಕಿವಿ ತಲುಪೇ ತಲುಪುತ್ತದೆ ಎಂಬ ಸಂಗತಿಯನ್ನು ಅರಿತಿರುವ ದರ್ಶನ್ ಫ್ಯಾಮಿಲಿ ಈಗ ಹೋದ ಮಾನವನ್ನು ಮೀಡಿಯಾದ ಮೂಲಕ ಪಡೆಯಲು ಇಂಥ ಬುರುಡೆ ವಿಚಾರಗಳನ್ನು ತೇಲಿಬಿಡುತ್ತಿದೆ.

ದರ್ಶನ್ ಮಾಡಿದ ಅನಾಚಾರಗಳು, ಸ್ವಯಂಕೃತ ಅಪರಾಧಗಳಿಗೆ ದೇವರು, ಶಾಪ ಎಂದೆಲ್ಲಾ ಮೌಢ್ಯದ ಲೇಪನ ಹಚ್ಚುತ್ತಿರುವ ದರ್ಶನ್ ಅಂಡ್ ಫ್ಯಾಮಿಲಿ ಈಗ ಪಾಪ ಪ್ರಾಯಶ್ಚಿತ್ತದ ಹೆಸರಿನಲ್ಲಿ ಮತ್ತಷ್ಟು ಪ್ರಚಾರ, ಜನಪ್ರಿಯತೆ ಪಡೆಯುವ ಥರ್ಡ್‌ಕ್ಲಾಸ್ ಕೆಲಸಕ್ಕಿಳಿದಿದೆ.

ಪ್ರಚಾರದ ಗಿಮಿಕ್!

ಕಟ್ಟಿಕೊಂಡ ಹೆಂಡತಿ ವಿಜಯಲಕ್ಷ್ಮಿ ಮೇಲೆ ಮಾರಾಮಾರಿ ಹಲ್ಲೆಮಾಡಿ, ಕಂಬಿ ಎಣಿಸಿಬಂದ ದರ್ಶನ್ ಈಗ ತನ್ನ 'ಸಾರಥಿ' ಚಿತ್ರದ ನೆಪದಲ್ಲಿ ರಾಜ್ಯವ್ಯಾಪಿ ದಂಡಯಾತ್ರೆಗೆ ಹೊರಟಿದ್ದಾನೆ. ಮೊನ್ನೆ ಅಕ್ಟೋಬರ್ 19ರಿಂದ ನೂರಾರು ಆಟೋಗಳ ಸಾರೋಟಿನೊಂದಿಗೆ ಆರಂಭವಾದ ಈ ಲಾಂಗ್ ಜರ್ನಿಗೆ 'ವಿಜಯ ಯಾತ್ರೆ' ಅಂಥ ಹೆಸರಿಡಲಾಗಿದೆ. ಇದು ಏಟು ತಿಂದ ಹೆಂಡತಿಯ ಹೆಸರಾ? 'ಸಾರಥಿ' ಚಿತ್ರದ ಗೆಲುವಿನ ಸಂಕೇತವಾ? ಗೊತ್ತಿಲ್ಲ.

ವೋಲ್ವೋ ಬಸ್ಸೊಂದನ್ನು ಏರಿ ದರ್ಶನ್ ಜೊತೆ ಊರೂರು ಸುತ್ತಲು ಆತನಿಂದ ಹಲ್ಲೆಗೊಳಗಾದ ಪತ್ನಿ ವಿಜಯಲಕ್ಷ್ಮಿಯೂ ತೆರಳಿದ್ದಾಳೆ. 'ಸಾರಥಿ' ಸಿನಿಮಾದ ನಿರ್ದೇಶಕ ದಿನಕರ ತೂಗುದೀಪ್, ನಿರ್ಮಾಪಕ ಕೆ.ವಿ. ಸತ್ಯಪ್ರಕಾಶ್, ಸಹ ನಿರ್ದೇಶಕ ಲಿಂಗರಾಜು, ಚಿಂತನ್, ಕ್ಯಾಮರಾಮ್ಯಾನ್ ಕೃಷ್ಣ ಕುಮಾರ್, ಸಂಗೀತ ನಿರ್ದೇಶಕ ಹರಿಕೃಷ್ಣ, ನಾಯಕಿ ದೀಪಾ ಸನ್ನಿಧಿ ಸೇರಿದಂತೆ 'ಸಾರಥಿ'ಯ ಇಡೀ ತಂಡ ಈ ಯಾತ್ರೆಯಲ್ಲಿ ಪಾಲ್ಗೊಂಡಿದೆ.



ನರ್ತಕಿ ಚಿತ್ರಮಂದಿರದಲ್ಲಿ ಕೃತಕವಾಗಿ ನಿರ್ಮಿಸಿರುವ ಚಾಮುಂಡೇಶ್ವರಿಯ ಬೃಹತ್ ಪ್ರತಿಮೆಗೆ ಪೂಜೆ ಮತ್ತು ಅಭಿಷೇಕ ನಡೆಸುವುದರೊಂದಿಗೆ ಯಾತ್ರೆಗೆ ಚಾಲನೆ ಕೊಡಲಾಯಿತು. ಅಲ್ಲಿಂದ ತುಮಕೂರಿಗೆ ಹೋಗಿ ಸಿದ್ದಗಂಗಾಸ್ವಾಮಿಗಳ ಕಾಲಿಗೆ ಉದ್ದಂಡವಾಗಿ ಬಿದ್ದು ದರ್ಶನ್ ತನ್ನ ಹಿಂದಿನ ಸಮೇತ ಆಶೀರ್ವಾದ ಪಡೆದಿದ್ದಾನೆ. ಕಳ್ಳಕಾಕರು, ದಗಲ್ಬಾಜಿಗಳು ಇರುವಲ್ಲಿಗೇ ಹೋಗಿ ತಮ್ಮ ದಿವ್ಯಾಶೀರ್ವಾದವನ್ನು ಕರುಣಿಸಿ ಬರುವ ಈ ಸ್ವಾಮಿಗಳು ಒರ್ವ ಸಾಮಾನ್ಯ ಪತ್ನಿಪೀಡಕನಿಗೆ ಆಶೀರ್ವಚನ ನೀಡದಿರುತ್ತಾರೆಯೇ? ಸ್ವಾಮಿಗಳು ಬಗ್ಗಿದ ತಲೆ ಬಗ್ಗಿಸಿಕೊಂಡೇ ದರ್ಶನ್ ತಲೆಮೇಲೆ ಕೈಮುಗಿದು ಕಳಿಸಿದ್ದಾರೆ.

ಬರುವ ದಿನಗಳಲ್ಲಿ ಶಿರಾ, ಹಿರಿಯೂರು, ಚಿತ್ರದುರ್ಗ, ಹರಿಹರ, ದಾವಣಗೆರೆ, ಕೋಲಾರ, ಹುಬ್ಬಳ್ಳಿ, ಕೊಪ್ಪಳ, ಗದಗ, ಬಿಜಾಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಹಾಸನ, ಕೋಲಾರ, ರಾಮನಗರ, ಮಂಡ್ಯ ಸೇರಿದಂತೆ 40ಕ್ಕೂ ಹೆಚ್ಚು ನಗರಗಳಿಗೆ ದರ್ಶನ್ ಪ್ರವಾಸ ಮಾಡಲಿದ್ದಾನೆ. ಆ ಊರುಗಳಲ್ಲಿ ದರ್ಶನ್ ಅಭಿಮಾನಿಗಳು ರಸ್ತೆಯುದ್ದಕ್ಕೂ ಪಟಾಕಿ ಸಿಡಿಸಿ ಗದ್ದಲವೆಬ್ಬಿಸಲಿದ್ದಾರೆ. ಅಕ್ಟೋಬರ್ 26ರಂದು ಮೈಸೂರಿನಲ್ಲಿ ಈ ಯಾತ್ರೆ ಅಂತ್ಯಗೊಳ್ಳುವ ವೇಳೆಗೆ ಇನ್ನೂ ಏನೇನು ಅನಾಹುತಗಳು ಸಂಭವಿಸುತ್ತವೋ ಗೊತ್ತಿಲ್ಲ.

ಈ ಕಾರಣಕ್ಕೇ ಅದ್ಯಾರೋ ಮೂರ್ತಿ ಎಂಬ ಮಹಾನುಭಾವ ಎಲ್ಲ ಹಿರಿಯ ಪೋಲೀಸ್ ಅಧಿಕಾರಿಗಳಿಗೂ ಪತ್ರ ಬರೆದು 'ದರ್ಶನ್ ಬಂಧನದ ಸಂದರ್ಭದಲ್ಲೇ ಪುಂಡ ಅಭಿಮಾನಿಗಳು ರಸ್ತೆಗಿಳಿದು ಗಲಭೆಯೆಬ್ಬಿಸಿದ್ದರು. ಈಗ ಇಂತಹ ಯಾತ್ರೆಗೆ ಅವಕಾಶ ಕೊಟ್ಟರೆ ಮತ್ತೆ ಟ್ರಾಫಿಕ್ ಸಮಸ್ಯೆಗಳುಂಟಾಗುತ್ತವೆ. ಉದ್ರಿಕ್ತ ಅಭಿಮಾನಿಗಳಿಂದ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ನಷ್ಟವುಂಟಾಗುತ್ತದೆ. ದಯಮಾಡಿ ಈ ಯಾತ್ರೆಗೆ ಅನುಮತಿ ನೀಡಬೇಡಿ' ಎಂದು ಮನವಿ ಮಾಡಿದ್ದರು. ಆದರೆ ಮಂತ್ರಿ ಅಶೋಕ್‌ರ ಸಂಪೂರ್ಣ ಸಹಕಾರವೇ ದರ್ಶನ್ ಬೆನ್ನಿಗಿರುವುದರಿಂದ ದರ್ಶನ್‌ಗೆ ಬೇರೆ ಯಾವ ಅಡೆತಡೆಗಳೂ ಉದ್ಭವಿಸುವ ಮಾತೇ ಇಲ್ಲದಂತಾಗಿದೆ.

ಹಿಂದೆ ಕನ್ನಡ ಮತ್ತು ಕರ್ನಾಟಕಕ್ಕೆ ಕಂಟಕ ಬಂದಾಗ, ಸುನಾಮಿಯಾದಾಗ, ನೆರೆ, ಬರ ಬಂದಾಗ ಚಿತ್ರರಂಗದ ಗಣ್ಯರೆಲ್ಲಾ ಸೇರಿ ನಿಧಿ ಸಂಗ್ರಹಕ್ಕಾಗಿ ಇಡೀ ರಾಜ್ಯದಲ್ಲಿ ಯಾತ್ರೆಗಳನ್ನು ಮಾಡಿದ್ದಾರೆ. ಆದರೆ ಹೆಂಡತಿಯನ್ನು ಬಡಿದ ದರ್ಶನ್ ಈಗ ಕ್ಷಮಾಪಣೆ, ಕೃತಜ್ಞತೆ ಹೆಸರಿನಲ್ಲಿ ಪ್ರಚಾರ ಯಾತ್ರೆ ಮಾಡುತ್ತಿರುವುದನ್ನು ನೋಡಿದರೆ ಎಲ್ಲಿಂದ ನಗಬೇಕೋ? ಎಲ್ಲಿಗೆ ಉಗಿಯಬೇಕೋ ಗೊತ್ತಾಗುತ್ತಿಲ್ಲ...

• ಅರುಣ್ ಕುಮಾರ್.ಜಿ



ದರ್ಶನ್ 'ನವಗ್ರಹ'ದಲ್ಲಿ ನಟಿಸಿದ್ದರಿಂದ ತಾಯಿ ಚಾಮುಂಡೇಶ್ವರಿ ಶಾಪ ಈಗ ಈತನಿಗೆ ಅಮರಿಕೊಂಡಿದೆಯಂತೆ. ಕಳ್ಳರ ಕುರಿತಾದ ಸಿನಿಮಾಕ್ಕೆ 'ನವಗ್ರಹ' ಎಂದು ಹೆಸರಿಟ್ಟಿದ್ದರಿಂದ ಒಂಭತ್ತೂ ಗ್ರಹಗಳು ಮುನಿದು ದರ್ಶನ್‌ನ ಭವಿಷ್ಯವನ್ನು ಅಲ್ಲಾಡಿಸುತ್ತಿವೆಯಂತೆ. ಈ ಕಾರಣಕ್ಕೇ ಮೊನ್ನೆ ದಸರಾ ಆರಂಭವಾಗುವ ಸಮಯದಲ್ಲೇ ದರ್ಶನ್ ಬಂಧನಗೊಂಡು ವಿಜಯದಶಮಿಯನ್ನು ಜೈಲಿನಲ್ಲೇ ಕಳೆಯಬೇಕಾಯಿತಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises